ಸೋಮವಾರ, ಡಿಸೆಂಬರ್ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 337 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಶಿಕ್ಷಣ**

ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಲು ಪೋಷಕರು ಒತ್ತಡ ಹೇರುವ ಬದಲು ಪೂರಕ ವಾತಾವರಣ ನಿರ್ಮಾಣ ಮಾಡುವುದು ಅಗತ್ಯ.



ಆಳ-ಅಗಲ
ಬೆಟ್ಟ ಕುಸಿತ ಸ್ವಯಂಕೃತ ಅನಾಹುತ

ಭದ್ರತಾಪಡೆಗಳಿಗೆ ಡ್ರೋನ್ ಪ್ರತಿರೋಧ ವ್ಯವಸ್ಥೆ 7

ಬಿಜೆಪಿಗೆ ಶಕ್ತಿ ಹೆಚ್ಚಿಸಿಕೊಳ್ಳುವ ಗುರಿ 6

ತುಮಕೂರು: ವಿಧಾನ ಪರಿಷತ್ ಚುನಾವಣೆ

ಮೂರೂ ಪಕ್ಷಗಳಿಗೆ ಒಳ ಏಟಿನ ಚಿಂತೆ 6



ನಾಗಾಲ್ಯಾಂಡ್: ಕಾರ್ಮಿಕರ ಮೇಲೆ ಗುಂಡು ಹಾರಿಸಿದ ಅಸ್ಸಾಂ ರೈಫಲ್ಸ್ ಯೋಧರು – ಆರೋಪ

# ಸೈನಿಕರ ಗುಂಡಿಗೆ 14 ಮಂದಿ ಬಲಿ

**ಕೊಹಿಮಾ/ಗುವಾಹಟಿ (ಪಿಟಿಐ/ ರಾಯಿಟರ್ಸ್/ ಎಎಫ್‌ಪಿ):** ನಾಗಾಲ್ಯಾಂಡ್‌ನ ಮೊನ್ ಜಿಲ್ಲೆಯ ಟಿರು ಮತ್ತು ಒಟಿಂಗ್ ಗ್ರಾಮಗಳಲ್ಲಿ 14 ನಾಗರಿಕರನ್ನು ಭದ್ರತಾ ಪಡೆಗಳ ಸಿಬ್ಬಂದಿ ಗುಂಡಿಟ್ಟು ಕೊಂದಿದ್ದಾರೆ. ದಾಳಿಯಲ್ಲಿ 11 ನಾಗರಿಕರು ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಇದು ಶನಿವಾರ ಸಂಜೆಯ ಹೊತ್ತು ನಡೆದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಟಿರು ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ, ನಾಗರಿಕರನ್ನು ಉಗ್ರರು ಎಂದು ತಪ್ಪಾಗಿ ಗುರುತಿಸಿ ಸೈನಿಕರು ನಡೆಸಿದ ದಾಳಿಯಲ್ಲಿ ಎಂಟು ನಾಗರಿಕರು ಮೃತಪಟ್ಟಿದ್ದಾರೆ. ಕತ್ತಲಾದರೂ ಮನೆಗೆ ಬಾರದೇ ಇದ್ದವರನ್ನು ಹುಡುಕಿಕೊಂಡು ಗ್ರಾಮಸ್ಥರು ಸ್ಥಳಕ್ಕೆ ಬಂದಿದ್ದಾರೆ. ಆಗ ನಡೆದ ಘರ್ಷಣೆಯಲ್ಲಿ ಮತ್ತೆ ಐವರು ನಾಗರಿಕರು ಸೈನಿಕರ ಗುಂಡಿಗೆ ಬಲಿಯಾಗಿದ್ದಾರೆ. ನಾಗರಿಕರ ಹತ್ಯೆಯ ನಂತರ ಸುತ್ತಮುತ್ತಲಿನ ಗ್ರಾಮಸ್ಥರು ಅಸ್ಸಾಂ ರೈಫಲ್ಸ್‌ನ ಸೇನಾ ಶಿಬಿರದ ಮೇಲೆ ದಾಳಿ ನಡೆಸಿದ್ದಾರೆ. ಆಗ ಸೈನಿಕರು ಹಾರಿಸಿದ ಗುಂಡಿಗೆ ಮತ್ತೊಬ್ಬ ನಾಗರಿಕ ಬಲಿಯಾಗಿದ್ದಾರೆ.

'ನಾಗರಿಕರು ನಡೆಸಿದ ದಾಳಿಯಲ್ಲಿ ಒಬ್ಬ ಸೈನಿಕ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ. ಆದರೆ ಕಾರ್ಯಾಚರಣೆ ಮತ್ತು ಕಾರ್ಯಾಚರಣೆ ನಂತರದ ಅವಘಡದ ಬಗ್ಗೆ ಪಶ್ಚಾತ್ತಾಪವಿದೆ' ಎಂದು ಸೇನೆಯ 3 ಕೋರ್ ಘಟಕವು ಪ್ರಕಟಣೆ ಹೊರಡಿಸಿದೆ.



ನಾಗರಿಕರ ಹತ್ಯೆ ಬಳಿಕ ಆಕ್ರೋಶಗೊಂಡ ಜನರು ಸೇನೆಯ ವಾಹನಗಳಿಗೆ ಶನಿವಾರ ರಾತ್ರಿ ಬೆಂಕಿ ಹಚ್ಚಿದರು –ಪಿಟಿಐ ಚಿತ್ರ

## 'ನಿರಾಯುಧರ ಮೇಲೆ ಗುಂಡು ಹಾರಿಸಿದ್ದೇಕೆ?'

'ಇದೊಂದು ಯದ್ಧಾಪರಾಧ, ಸಾವಿನ ಸಂಖ್ಯೆಗಳನ್ನು ಪರಿಗಣಿಸಿದರೆ ಇದು ಹತ್ಯಾಕಾಂಡವೇ ಸರಿ. ಇದನ್ನು ಯಾವ ಕಾರಣಕ್ಕೂ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಗುಪ್ತಚರ ಮಾಹಿತಿಯ ವೈಫಲ್ಯ ಎಂದು ಹೇಳಿ ಸೇನೆ ತನ್ನ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ನಾಗಾಲ್ಯಾಂಡ್ ಬಿಜೆಪಿ ಘಟಕದ ಅಧ್ಯಕ್ಷ ಮತ್ತು ರಾಜ್ಯದ ಬುಡಕಟ್ಟು ವ್ಯವಹಾರಗಳ ಸಚಿವ ತೆಮ್‌ಜೆನ್ ಇಮ್ನಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಪಿಕ್‌ಅಪ್ ಟ್ರಕ್‌ನಲ್ಲಿದ್ದ ನಾಗರಿಕರ ಬಳಿ ಯಾವುದೇ ಶಸ್ತ್ರಾಸ್ತ್ರ ಇರಲಿಲ್ಲ. ನಿರಾಯುಧರಾಗಿದ್ದವರ ಮೇಲೆ ಗುಂಡು ಹಾರಿಸಿದ್ದು ಏಕೆ? ಗುಂಡು ಹಾರಿಸಲು ಆದೇಶ ನೀಡಿದವರು ಯಾರು' ಎಂದು ಅವರು ಪ್ರಶ್ನಿಸಿದ್ದಾರೆ.

'ಮೃತರ ಕುಟುಂಬಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವು ಪರಿಹಾರ ನೀಡಬೇಕು. ತಪ್ಪಿತಸ್ಥರನ್ನು ಶಿಕ್ಷಿಸುವ ಮೂಲಕ, ಸಂತ್ರಸ್ತರಿಗೆ ನ್ಯಾಯ ಒದಗಿಸಿಕೊಡಬೇಕು' ಎಂದು ಅವರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 7

'ಎನ್‌ಎಸ್‌ಸಿಎನ್ ನಿಷೇಧಿತ ಸಂಘಟನೆಯ ಯಾಂಗ್ ಅಂಗ್ ಬಣದ ಉಗ್ರರು ಮ್ಯಾನ್ಮಾರ್‌ನಿಂದ ನುಸುಳುತ್ತಿದ್ದಾರೆ ಎಂದು ಗುಪ್ತಚರ ಮಾಹಿತಿ ಇತ್ತು. ಅದನ್ನು ಆಧರಿಸಿ ಟಿರು ಮತ್ತು ಒಟಿಂಗ್ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಆಗ ಈ ಅವಘಡ ಸಂಭವಿಸಿದೆ' ಎಂದು ಸೇನೆಯು ಹೇಳಿದೆ. ಜತೆಗೆ ಘಟನೆ ಕುರಿತು ಆಂತರಿಕ ತನಿಖೆಗೆ ಆದೇಶಿಸಿದೆ. ನಾಗಾಲ್ಯಾಂಡ್ ಸರ್ಕಾರ ಸಹ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ.

### 'ಆಫ್‌ಸ್ಪ ರದ್ದುಮಾಡಿ'

ಸೇನೆಗೆ ವಿಶೇಷಾಧಿಕಾರ ನೀಡುವ 'ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ (ಆಫ್‌ಸ್ಪ)–1958'ಯನ್ನು ತಕ್ಷಣವೇ ರದ್ದು ಮಾಡಬೇಕು ಎಂದು ಇಲ್ಲಿನ ಮಾನವ ಹಕ್ಕುಗಳ ಸಂಘಟನೆಗಳು, ನಾಗರಿಕರು ಆಗ್ರಹಿಸಿದ್ದಾರೆ.

**ನಡೆದದ್ದೇನು:** 'ಟಿರು ಮತ್ತು ಒಟಿಂಗ್ ಗ್ರಾಮದ ಯುವಕರು ಸಮೀಪದಲ್ಲೇ ಇರುವ ಕಲ್ಲಿದ್ದಲು ಗಣಿಯಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದರು. ಸಂಜೆ ಕೆಲಸ ಮುಗಿಸಿಕೊಂಡು ಪಿಕ್‌ಅಪ್ ಟ್ರಕ್‌ನಲ್ಲಿ ತಮ್ಮ ಗ್ರಾಮಗಳಿಗೆ ವಾಪಸಾಗುತ್ತಿದ್ದರು. ಸೈನಿಕರು ಕಾರ್ಯಾಚರಣೆ ನಡೆಸುತ್ತಿದ್ದ ಪ್ರದೇಶವನ್ನು ಪಿಕ್‌ಅಪ್ ಹಾದು ಬಂದಿದೆ. ಆಗ ಸೈನಿಕರು ಪಿಕ್‌ಅಪ್ ಮೇಲೆ ಗುಂಡು ಹಾರಿಸಿದ್ದಾರೆ. ನಿರಾಯುಧರಾಗಿದ್ದ ನಾಗರಿಕರ ಮೇಲೆ ಮನಸೋ ಇಚ್ಛೆ ಗುಂಡು ಹಾರಿಸಲಾಗಿದೆ' ಎಂದು ಕೊನ್ಯಾಕ್ ಮುರಾಂಗ್ ಸಂಘಟನೆ ಹೇಳಿದೆ. ಮೃತಪಟ್ಟವರು ಕೊನ್ಯಾಕ್ ಬುಡಕಟ್ಟಿಗೆ ಸೇರಿದವರಾಗಿದ್ದಾರೆ.

ನಂತರ ಗ್ರಾಮಸ್ಥರು ಅಲ್ಲೇ ಇದ್ದ ಸೈನಿಕರ ಮೇಲೆ ದಾಳಿ ನಡೆಸಿದ್ದಾರೆ. ಸಮೀಪದಲ್ಲಿ ಇದ್ದ ಸೇನಾ ಶಿಬಿರದ ಮೇಲೆ ದಾಳಿ ನಡೆಸಿ, ಸೇನೆಯ ಮೂರು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಭಾನುವಾರವೂ ಹಲವು ಗ್ರಾಮಸ್ಥರು ಸೇನಾ ಶಿಬಿರಗಳ ಮೇಲೆ ದಾಳಿ ನಡೆಸಿದ್ದಾರೆ. ಮೊನ್ ಜಿಲ್ಲೆಯಲ್ಲಿ ನಿಷೇಧಾಜ್ಞೆ ಹೇರಲಾಗಿದೆ.

# ರಕ್ಷಣಾ ಮೂಲಸೌಕರ್ಯ ಭಾರತ–ರಷ್ಯಾ ಒಪ್ಪಂದ?

ಪ್ರಜಾವಾಣಿ ವಾರ್ತೆ

**ನವದೆಹಲಿ:** ಭಾರತವು ರಷ್ಯಾ ಜತೆಗೆ ರಕ್ಷಣಾ ಮೂಲಸೌಕರ್ಯ ಹಂಚಿಕೆಯ ಒಪ್ಪಂದವನ್ನು ಮಾಡಿಕೊಳ್ಳಲಿದೆ. ಅಮೆರಿಕ ಜತೆಗೆ ಐದು ವರ್ಷಗಳ ಹಿಂದೆಯೇ ಇಂತಹ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವೆ ಸೋಮವಾರ ಶೃಂಗಸಭೆ ನಡೆಯಲಿದೆ. ಈ ಸಭೆಯಲ್ಲಿ ಸುಮಾರು 10 ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆ ಇದೆ. ರಕ್ಷಣಾ ಮೂಲಸೌಕರ್ಯ ಹಂಚಿಕೆ ಒಪ್ಪಂದವೂ ಅದರಲ್ಲಿ ಒಂದು.

ಈ ಒಪ್ಪಂದಕ್ಕೆ ಸಹಿ ಮಾಡಿದರೆ, ಭಾರತ ಮತ್ತು ರಷ್ಯಾದ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಪರಸ್ಪರರ ರಕ್ಷಣಾ ಮೂಲಸೌಕರ್ಯಗಳನ್ನು ಬಳಸಿಕೊಳ್ಳಲು ಅವಕಾಶ ಇದೆ.

ರಷ್ಯಾದ ಕೆಎ–226 ಟಿ ಹೆಲಿಕಾಪ್ಟರ್‌ಗಳನ್ನು ಹಿಂದುಸ್ಥಾನ್ ಏರೊನಾಟಿಕ್ಸ್ ಲಿ.ನ (ಎಚ್‌ಎಎಲ್) ತುಮಕೂರು ಘಟಕದಲ್ಲಿ ತಯಾರಿಸುವ ಯೋಜನೆಯ ಕುರಿತು ಈಗಲೂ ಅನಿಶ್ಚಿತ ಸ್ಥಿತಿ ಇದೆ. ಹಾಗಾಗಿ, ರಷ್ಯಾದಿಂದ ಕೆಲವು ಹೆಲಿಕಾಪ್ಟರ್‌ಗಳನ್ನು ಖರೀದಿಸುವ ಸಾಧ್ಯತೆ ಇದೆ. ರಷ್ಯಾದಿಂದ 60 ಹೆಲಿಕಾಪ್ಟರ್ ಖರೀದಿ ಮತ್ತು 200 ಹೆಲಿಕಾಪ್ಟರ್‌ಗಳನ್ನು ಎಚ್‌ಎಎಲ್‌ನಲ್ಲಿ ತಯಾರಿಸುವುದಕ್ಕಾಗಿ ಭಾರತ ಮತ್ತು ರಷ್ಯಾ ಸರ್ಕಾರದ ನಡುವೆ 2015ರಲ್ಲಿ ಒಪ್ಪಂದ ಆಗಿತ್ತು. ಆದರೆ, ದರ ಮತ್ತು ಭಾರತದಲ್ಲಿ ತಯಾರಾಗುವ ಹೆಲಿಕಾಪ್ಟರ್‌ಗಳಲ್ಲಿ ದೇಶೀಯವಾಗಿ ತಯಾರಾದ ಬಿಡಿಭಾಗಗಳನ್ನು ಯಾವ ಪ್ರಮಾಣದಲ್ಲಿ ಬಳಸಬೇಕು ಎಂಬ ಬಗೆಗಿನ ಭಿನ್ನಮತವನ್ನು ಬಗೆಹರಿಸಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ.

ಶೃಂಗಸಭೆಯ ಬಳಿಕ, ಭಾರತ ಮತ್ತು ರಷ್ಯಾ ನಡುವೆ 2 + 2 ಮಾತುಕತೆಯೂ ನಡೆಯಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ರಷ್ಯಾದ ರಕ್ಷಣಾ ಸಚಿವ ಸೆರ್ಗಿ ಶೊಯ್ಗು, ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರ ಜತೆಗೆ ದೆಹಲಿಯಲ್ಲಿ ಮಾತುಕತೆ ನಡೆಸಲಿದ್ದಾರೆ.

ರಕ್ಷಣಾ ಮೂಲಸೌಕರ್ಯ ಹಂಚಿಕೆ ಒಪ್ಪಂದದಿಂದಾಗಿ, ಆರ್ಕ್‌ಟಿಕ್ ಸಾಗರದಲ್ಲಿ ರಷ್ಯಾ ಹೊಂದಿರುವ ಬಂದರು ಸೌಲಭ್ಯವು ಭಾರತದ ಬಳಕೆಗೆ ದೊರೆಯಲಿದೆ. ಈ ಪ್ರದೇಶದಲ್ಲಿ ಚೀನಾದ ಪ್ರಾಬಲ್ಯ ಹೆಚ್ಚುತ್ತಿದೆ. ಹಾಗಾಗಿ, ರಷ್ಯಾದ ಜತೆಗಿನ ಒಪ್ಪಂದದಿಂದ ಭಾರತಕ್ಕೆ ಅನುಕೂಲ ಆಗಲಿದೆ.

### ಹಲವು ದೇಶಗಳ ಜತೆ ಒಪ್ಪಂದ

ರಕ್ಷಣಾ ಮೂಲಸೌಕರ್ಯ ಹಂಚಿಕೆಗಾಗಿ ಹಲವು ದೇಶಗಳ ಜತೆಗೆ ಭಾರತವು ಒಪ್ಪಂದ ಮಾಡಿಕೊಂಡಿದೆ. 2016ರಲ್ಲಿ ಅಮೆರಿಕ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಆಸ್ಟ್ರೇಲಿಯಾ, ಜಪಾನ್, ಫ್ರಾನ್ಸ್, ಸಿಂಗಪುರ, ದಕ್ಷಿಣ ಕೊರಿಯಾ ಜತೆಗೂ ಒಪ್ಪಂದ ಇದೆ. ವಿಯೆಟ್ನಾಂ ಮತ್ತು ಬ್ರಿಟನ್ ಜತೆಗೆ ಇಂತಹ ಒಪ್ಪಂದ ಮಾಡಿಕೊಳ್ಳಲು ಮಾತುಕತೆ ನಡೆಯುತ್ತಿದೆ.

## ಸೆಯಂಗ್‌ಗೆ ಚಿನ್ನ; ಸಿಂಧುಗೆ ಬೆಳ್ಳಿ



ಪಿ.ವಿ. ಸಿಂಧು

**ಬಾಲಿ (ಪಿಟಿಐ):** ಕೊರಿಯಾದ ಆ್ಯನ್ ಸೆಯಂಗ್ ಮತ್ತು ಭಾರತದ ಪಿ.ವಿ. ಸಿಂಧು ಭಾನುವಾರ ಇಲ್ಲಿ ನಡೆದ ಬಿಡಬ್ಲ್ಯುಎಫ್ ವಿಶ್ವ ಟೂರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕ ಜಯಿಸಿದರು.

ವಿಶ್ವ ಚಾಂಪಿಯನ್ ಸಿಂಧು, ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ 16-21, 12-21ರಿಂದ ಆರನೇ ಶ್ರೇಯಾಂಕದ ಸೆಯಂಗ್ ಎದುರು ಸೋತರು. 12

ಒಳ ಪುಟ

'ಮತಾಂತರ ಆರೋಪಕ್ಕೆ ಸಾಕ್ಷ್ಯ ಕೊಡಿ' 4

**ಚಿನಕುರಳಿ**

ಪ್ರಕಾಶ್ ಶೆಟ್ಟಿ




# ಎರಡೇ ಸಮುದಾಯದ ಪ್ರಾಬಲ್ಯ!

## ಪರಿಷತ್: ಒಕ್ಕಲಿಗ, ಲಿಂಗಾಯತರ ಸಂಖ್ಯೆ ಇನ್ನಷ್ಟು ಹೆಚ್ಚಳ?

• ವಿ.ಎಸ್. ಸುಬ್ರಹ್ಮಣ್ಯ

**ಬೆಂಗಳೂರು:** ವಿಧಾನ ಪರಿಷತ್‌ನಲ್ಲಿ ಹಾಲಿ ಇರುವ 74 ಸದಸ್ಯ ಬಲದಲ್ಲಿ ಶೇಕಡ 54 ರಷ್ಟು (40 ಮಂದಿ) ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳಿಗೆ ಸೇರಿದವರು. ಈಗ 25 ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಮೂರು ಪ್ರಮುಖ ಪಕ್ಷಗಳ ಅಭ್ಯರ್ಥಿಗಳಲ್ಲಿ ಶೇ 60.86 ರಷ್ಟು ಪಾಲು ಈ ಎರಡು ಸಮುದಾಯಗಳಿಗೇ ಸಿಕ್ಕಿದೆ.

ವಿಧಾನ ಪರಿಷತ್‌ನಲ್ಲಿ ಇತ್ತೀಚಿನ ಕೆಲವು ವರ್ಷಗಳಿಂದ ಒಕ್ಕಲಿಗರು ಮತ್ತು ಲಿಂಗಾಯತರೇ ಪ್ರಾಬಲ್ಯ ಹೊಂದಿದ್ದಾರೆ. ಈಗ ತೆರವಾಗುತ್ತಿರುವ 25 ಸ್ಥಾನಗಳಲ್ಲಿ ಈ ಎರಡು ಸಮುದಾಯಗಳ ತಲಾ ಏಳು ಸದಸ್ಯರಿದ್ದಾರೆ. ಆದರೆ, ಹೆಚ್ಚು ಕ್ಷೇತ್ರಗಳಲ್ಲಿ ಈ ಸಮುದಾಯಗಳ ಅಭ್ಯರ್ಥಿಗಳೇ ಕಣದಲ್ಲಿದ್ದಾರೆ. ಚುನಾವಣೆಯ ಬಳಿಕ ಈ ಪ್ರಾತಿನಿಧ್ಯ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಗೋಚರಿಸುತ್ತಿದೆ.

ವಿಧಾನ ಪರಿಷತ್‌ನಲ್ಲಿ ಮೀಸಲಾತಿ ಇಲ್ಲದಿರುವುದು ಎರಡೇ ವರ್ಗಗಳ ಪ್ರಾಬಲ್ಯಕ್ಕೆ ಕಾರಣವಾಗುತ್ತಿದೆ ಎಂಬ ಮಾತು ಈ ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ವಲಯದಲ್ಲಿ ಚರ್ಚೆಯ ಮುನ್ನೆಲೆಗೆ ಬಂದಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಬೇಕೆಂಬ ಬೇಡಿಕೆಯೂ ವ್ಯಕ್ತವಾಗುತ್ತಿದೆ.

25 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ 20 ಕ್ಷೇತ್ರಗಳಿಗೆ ಹಾಗೂ ಜೆಡಿಎಸ್ ಆರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

7ನೇ ಪುಟ ನೋಡಿ

**ಪ್ರಮುಖ ಪಕ್ಷಗಳಿಂದ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳು**

| ಜಾತಿ | ಸಂಖ್ಯೆ |
|---|---|
| ಒಕ್ಕಲಿಗರು | 15 |
| ಲಿಂಗಾಯತ | 13 |
| ಹಿಂದುಳಿದ ವರ್ಗ | 09 |
| ಪರಿಶಿಷ್ಟ ಪಂಗಡ | 02 |
| ಮುಸ್ಲಿಂ | 02 |
| ರೆಡ್ಡಿ | 01 |
| ಬಂಟ | 01 |
| ವೈಶ್ಯ | 01 |
| ಪರಿಶಿಷ್ಟ ಜಾತಿ | 01 |
| ಕೊಡವ | 01 |

ಪಿಡಬ್ಲ್ಯುಡಿ ಎಂಜಿನಿಯರ್‌ಗಳ ಭರ್ತಿ • ಅಭ್ಯರ್ಥಿಗಳಿಂದ ಕೆಪಿಎಸ್‌ಸಿಗೆ ದೂರು

# 'ಬ್ಲೂ ಟೂತ್' ಬಳಸಿ ಪರೀಕ್ಷಾ ಅಕ್ರಮ ಸಾಧ್ಯತೆ!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ (ಎಇ) 660 ಮತ್ತು ಕಿರಿಯ ಎಂಜಿನಿಯರ್ (ಜೆಇ) 330 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಇದೇ 13 ಮತ್ತು 14ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ. ಪರೀಕ್ಷೆಗೆ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೆ, 'ಅತ್ಯಾಧುನಿಕ ಬ್ಲೂ ಟೂತ್' ಸಾಧನದ ಮೂಲಕ ಪರೀಕ್ಷಾ ಅಕ್ರಮ ನಡೆಸುವ ಸಾಧ್ಯತೆಗಳ ಬಗ್ಗೆ ಅಭ್ಯರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ನೂರಾರು ಅಭ್ಯರ್ಥಿಗಳು ಕೆಪಿಎಸ್‌ಸಿ ಕಾರ್ಯದರ್ಶಿ ಜಿ.ಸತ್ಯವತಿ ಅವರಿಗೆ ಪತ್ರ ಬರೆದಿದ್ದಾರೆ. ಹೀಗಾಗಿ, ಈ ವಿಷಯ ಆಯೋಗದ ಸಭೆಯಲ್ಲೂ ಗಂಭೀರವಾಗಿ ಚರ್ಚೆಯಾಗಿದ್ದು, ಅಕ್ರಮ ತಡೆಗೆ ಕಠಿಣ ಕ್ರಮಗಳನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದೆ.

7ನೇ ಪುಟ ನೋಡಿ

### ಸಂದೇಹಾಸ್ಪದ ಪರೀಕ್ಷಾ ಕೇಂದ್ರ ರದ್ದು

'ಹೇಗೆಲ್ಲಾ ಪರೀಕ್ಷಾ ಅಕ್ರಮ ನಡೆಯುವ ಸಾಧ್ಯತೆಗಳಿವೆ ಎಂಬ ಬಗ್ಗೆ ಮಾಹಿತಿ ಸಿಕ್ಕಿದೆ. ಹೀಗಾಗಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪರೀಕ್ಷಾ ಕೇಂದ್ರದ ಪ್ರವೇಶಪತ್ರವನ್ನು (ಹಾಲ್ ಟಿಕೆಟ್) ಈ ಬಾರಿ ಒಂದು ವಾರ ಮೊದಲು ಬಿಡುಗಡೆ ಮಾಡಲಾಗುವುದು. ಯಾವ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು ಎಂಬ ವಿಚಾರ ಅಭ್ಯರ್ಥಿಗಳಿಗೆ ವಾರದ ಮೊದಲಷ್ಟೆ ಗೊತ್ತಾಗಲಿದೆ.

ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳ ರವಾನಿಸುವುದು, ಅಭ್ಯರ್ಥಿಗಳ ಪರಿಶೋಧನೆ ಸೇರಿದಂತೆ ಇಡೀ ಪರೀಕ್ಷಾ ವ್ಯವಸ್ಥೆಯ ಮೇಲೆ ನಿಗಾವಹಿಸಲಾಗುವುದು. ಅಕ್ರಮಕ್ಕೆ ಕೈಜೋಡಿಸಿರುವ ಅನುಮಾನದ ಮೇಲೆ ಕೆಲವು ಪರೀಕ್ಷಾ ಕೇಂದ್ರಗಳನ್ನೇ ರದ್ದುಪಡಿಸಲಾಗಿದೆ.

ಅಭ್ಯರ್ಥಿಗಳು ತಮ್ಮ ಊರಿನಲ್ಲೇ ಪರೀಕ್ಷೆ ಬರೆಯಲು ಅವಕಾಶ ಇರುವುದಿಲ್ಲ. ಇನ್ನೂ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದೇವೆ. ಅವುಗಳನ್ನು ಬಹಿರಂಗಪಡಿಸುವುದಿಲ್ಲ' ಎಂದು ಕೆಪಿಎಸ್‌ಸಿ ಸದಸ್ಯರೊಬ್ಬರು ತಿಳಿಸಿದರು.



ಪರೀಕ್ಷಾ ಅಕ್ರಮಕ್ಕೆ ಅವಕಾಶ ನೀಡಬಾರದೆಂದು ನೂರಾರು ಮನವಿಗಳು ಬಂದಿವೆ. ಹೀಗಾಗಿ, ಹಿಂದೆಂಗಿಂತಲೂ ಕಟ್ಟುನಿಟ್ಟಿನ ಕ್ರಮಗಳನ್ನು ಈ ಬಾರಿ ತೆಗೆದುಕೊಳ್ಳುತ್ತೇವೆ

**ಜಿ. ಸತ್ಯವತಿ,** ಕೆಪಿಎಸ್‌ಸಿ ಕಾರ್ಯದರ್ಶಿ



# ಕರ್ನಾಟಕದಲ್ಲಿ ಶೇ 66ರಷ್ಟು ವಯಸ್ಕರಿಗೆ 2 ಡೋಸ್ ಲಸಿಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಅರ್ಹ ವಯಸ್ಕರಿಗೆ ಕೋವಿಡ್‌ನ ಎರಡೂ ಡೋಸ್ ಲಸಿಕೆ ನೀಡಿರುವುದರಲ್ಲಿ ಕರ್ನಾಟಕ ತನ್ನ ನೆರೆಯ ರಾಜ್ಯಗಳಿಗಿಂತ ಮುಂಚೂಣಿಯಲ್ಲಿದೆ. ರಾಜ್ಯದ 4.72 ಕೋಟಿ ವಯಸ್ಕರಲ್ಲಿ ಶೇ 66ರಷ್ಟು ಜನರಿಗೆ ಎರಡೂ ಡೋಸ್ ಲಸಿಕೆಯನ್ನು ನೀಡಲಾಗಿದೆ.



ಕೇರಳದಲ್ಲಿ ಶೇ 63ರಷ್ಟು ಹಾಗೂ ತೆಲಂಗಾಣದಲ್ಲಿ ಶೇ 60ರಷ್ಟು ವಯಸ್ಕರಿಗೆ ಲಸಿಕೆ ನೀಡಲಾಗಿದೆ. ಆದರೆ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಶೇ 50ಕ್ಕಿಂತಲೂ ಕಡಿಮೆ ವಯಸ್ಕರಿಗೆ ಲಸಿಕೆ ನೀಡಲಾಗಿದೆ.

ಒಟ್ಟಾರೆ 25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶೇ 50ಕ್ಕೂ ಅಧಿಕ ವಯಸ್ಕರಿಗೆ ಲಸಿಕೆ ನೀಡಿದ್ದರೆ, 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಶೇ 75ಕ್ಕೂ ಅಧಿಕ ವಯಸ್ಕರಿಗೆ ಎರಡೂ ಡೋಸ್ ಲಸಿಕೆ ನೀಡುವಲ್ಲಿ ಯಶಸ್ಸು ಸಾಧಿಸಿವೆ.

ಗೋವಾದಲ್ಲಿ ಶೇ 66ರಷ್ಟು ವಯಸ್ಕರಿಗೆ ಲಸಿಕೆಯನ್ನು ನೀಡಿದ್ದು, ಗಮನಾರ್ಹ ಸಾಧನೆ ಮಾಡಿದೆ.

7ನೇ ಪುಟ ನೋಡಿ

# 71 ವಿದ್ಯಾರ್ಥಿಗಳಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಭಾನುವಾರ 71 ವಿದ್ಯಾರ್ಥಿಗಳಲ್ಲಿ ಕೋವಿಡ್–19 ದೃಢಪಟ್ಟಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಸೀಗೋಡಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ 59 ವಿದ್ಯಾರ್ಥಿಗಳು ಮತ್ತು 10 ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ. ಸೋಂಕಿತರಲ್ಲಿ ಪ್ರಾಂಶುಪಾಲರೂ ಸೇರಿದ್ದಾರೆ.

ಆನೇಕಲ್ ಸಮೀಪದ ದೊಮ್ಮಸಂದ್ರ ಬಳಿ ಇರುವ ದಿ ಇಂಟರ್‌ನ್ಯಾಷನಲ್ ಬೆಂಗಳೂರು ವಸತಿ ಶಾಲೆಯ ಐವರು ಮತ್ತು ಸ್ಫೂರ್ತಿ ಕಾಲೇಜಿನ ಏಳು ವಿದ್ಯಾರ್ಥಿಗಳು ಸೇರಿದಂತೆ ತಾಲ್ಲೂಕಿನಲ್ಲಿ ಒಟ್ಟು 29 ಮಂದಿಗೆ ಕೋವಿಡ್ ದೃಢಪಟ್ಟಿದ್ದು, ಸೋಂಕಿತರ ಸಂಖ್ಯೆ 165ಕ್ಕೇರಿದಂತಾಗಿದೆ.

ಸೀಗೋಡಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ತಾತ್ಕಾಲಿಕ ಕ್ಲಿನಿಕ್ ತೆರೆಯಲಾಗಿದೆ. ವಿದ್ಯಾಲಯವನ್ನು ಸೀಲ್ ಡೌನ್ ಮಾಡಲಾಗಿದೆ. ತರಗತಿ, ಇತರ ಚಟುವಟಿಕೆಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್.ಎನ್. ಉಮೇಶ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಂಜುನಾಥ್ ಪರಿಶೀಲನೆ ನಡೆಸಿದ್ದಾರೆ.

'ಶಾಲೆಯ ಸಿಬ್ಬಂದಿ, ವಿದ್ಯಾರ್ಥಿಗಳು ಸಹಿತ ಒಟ್ಟು 457 ಮಂದಿಯ ಗಂಟಲು, ಮೂಗಿನ ದ್ರವ ಮಾದರಿ ಸಂಗ್ರಹಿಸಲಾಗಿತ್ತು. ಎಲ್ಲರ ಪರೀಕ್ಷಾ ವರದಿ ಕೈಸೇರಿದ್ದು, 69 ಮಂದಿಗೆ ಸೋಂಕು ಪತ್ತೆಯಾಗಿದೆ. ಶೇ 5ರಷ್ಟು ಮಾದರಿಗಳನ್ನು ವಂಶವಾಹಿ ಸಂರಚನೆ ವಿಶ್ಲೇಷಣೆಗಾಗಿ (ಜಿನೋಮ್ ಸೀಕ್ವೆನ್ಸ್ ಪರೀಕ್ಷೆ) ಬೆಂಗಳೂರಿನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ' ಎಂದು ಡಾ.ಎಸ್.ಎನ್.ಉಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

### ದೇಶದಲ್ಲಿ ಒಂದೇ ದಿನ 17 ಪ್ರಕರಣ

**ಪುಣೆ (ಪಿಟಿಐ):** ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್‌ನ 17 ಪ್ರಕರಣಗಳು ಭಾರತದಲ್ಲಿ ಭಾನುವಾರ ಒಂದೇ ದಿನ ಪತ್ತೆ ಆಗಿವೆ. 7

## ಸಂಕ್ಷಿಪ್ತ ಸುದ್ದಿ

### ಪ್ರವೇಶ ಪ್ರಕ್ರಿಯೆ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಅರ್ಜಿಗಳನ್ನು ವಿತರಿಸುವ, ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆ ದಿನಾಂಕಗಳನ್ನು ಮುಂದೂಡಲಾಗಿದೆ. ದಂಡ ಶುಲ್ಕ ಇಲ್ಲದೆಯೇ ಅರ್ಜಿಗಳನ್ನು ಸಲ್ಲಿಸಲು ಡಿ.13 ಕೊನೆಯ ದಿನ. ₹200 ದಂಡ ಶುಲ್ಕದೊಂದಿಗೆ ಡಿ.18ರವರೆಗೆ ಅರ್ಜಿ ಸಲ್ಲಿಸಬಹುದು. ಡಿ.24ರಂದು ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಮತ್ತು ಡಿ.31ರಂದು ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಆರಂಭವಾಗಿರುವ ನಾಲ್ಕು ವರ್ಷಗಳ ಬಿ.ಎ. ಆನರ್ಸ್ (ಯು.ಜಿ) ಕೋರ್ಸ್‌ನ ವಿಷಯಗಳಾದ ರಸಾಯನ ವಿಜ್ಞಾನ, ಭೌತವಿಜ್ಞಾನ, ಗಣಿತ, ಕಂಪ್ಯೂಟರ್ ವಿಜ್ಞಾನ ಕೋರ್ಸ್‌ಗಳಿಗೆ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು www.bangaloreuniversity.ac.in ವೆಬ್‌ಸೈಟ್‌ನಲ್ಲಿ ಪಡೆದು ದಾಖಲೆಗಳ ಸಮೇತ ಡಿ.8ರ ಒಳಗೆ ಸಲ್ಲಿಸಬೇಕು ಎಂದು ಕುಲಸಚಿವರು ತಿಳಿಸಿದ್ದಾರೆ.





ಪಾರಂಪರಿಕ ಕಟ್ಟಡದ ಸ್ವರೂಪ ಬದಲಿಸದೆ, ಆವರಣದಲ್ಲಿನ ಮರ ಕಡಿಯದೆ ಶಾಸಕರಿಗೆ 'ಕ್ಲಬ್'

# ಬಾಲಬ್ರೂಯಿಯಲ್ಲೇ 'ಸಾಂವಿಧಾನಿಕ ಕ್ಲಬ್'

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಾರ್ವಜನಿಕರ ತೀವ್ರ ವಿರೋಧದ ನಡುವೆಯೂ 'ಬಾಲಬ್ರೂಯಿ ಅತಿಥಿಗೃಹ'ವನ್ನು 'ಕರ್ನಾಟಕ ವಿಧಾನಮಂಡಲದ ಸಾಂವಿಧಾನಿಕ ಕ್ಲಬ್' (ಕಾನ್ಸ್ಟಿಟ್ಯೂಷನ್ ಕ್ಲಬ್) ಆಗಿ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಆ ಮೂಲಕ, ಈ ಪಾರಂಪರಿಕ ಕಟ್ಟಡ ಶಾಸಕರ ಮನೋರಂಜನಾ ಕ್ಲಬ್ ಆಗಿ ಪರಿವರ್ತನೆ ಆಗಲಿದೆ.

'ಸದ್ಯ ಇರುವ ಅತಿಥಿಗೃಹ ಕಟ್ಟಡದ ಮಾರ್ಪಾಡಿಗೆ ಕಾರಣವಾಗುವ ಯಾವುದೇ ಹೊಸ ನಿರ್ಮಾಣಕ್ಕೆ ಅವಕಾಶ ನೀಡದೆ ಮತ್ತು ಆವರಣದಲ್ಲಿರುವ ಮರಗಳನ್ನು ಕಡಿಯದೆಯೇ ಕ್ಲಬ್ ಆಗಿ ಬಳಸಲು ಅವಕಾಶ ನೀಡಬಹುದು. ಕ್ಲಬ್ ಆಗಿ ಮಾಡಲು ಅಗತ್ಯವಿರುವ ಸೌಲಭ್ಯಗಳು ಮತ್ತು ವಾಸ್ತುಶಿಲ್ಪ ವಿನ್ಯಾಸದ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ವಿಧಾನಮಂಡಲ ಸಚಿವಾಲಯಕ್ಕೆ ಸೂಚಿಸಬಹುದು' ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರು ಬರೆದ ಟಿಪ್ಪಣಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಆರ್‌ಟಿಐ ಕಾರ್ಯಕರ್ತರೊಬ್ಬರು ಪಡೆದ ಮಾಹಿತಿಯಿಂದ ಈ ವಿಷಯ ಗೊತ್ತಾಗಿದೆ.

ಲೋಕಸಭಾ ಸದಸ್ಯರ ಅನುಕೂಲಕ್ಕಾಗಿ ನವದೆಹಲಿಯಲ್ಲಿರುವ 'ಸಾಂವಿಧಾನಿಕ ಕ್ಲಬ್' ಮಾದರಿಯಂತೆ ರಾಜ್ಯದಲ್ಲಿಯೂ ಕರ್ನಾಟಕ ವಿಧಾನಮಂಡಲದ ಸದಸ್ಯರಿಗೆ ಕ್ಲಬ್ ಆರಂಭಿಸುವ ಉದ್ದೇಶದಿಂದ ಬಾಲಬ್ರೂಯಿ ಅತಿಥಿಗೃಹವನ್ನು ವಿಧಾನಸಭೆ ಸಚಿವಾಲಯಕ್ಕೆ ಹಸ್ತಾಂತರಿಸಲು ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ 2009ರಲ್ಲಿಯೇ ಆದೇಶಿಸಿದ್ದರು. ಆದರೆ, ಈ ಪ್ರಸ್ತಾವ ನಾನಾ ಕಾರಣಗಳಿಂದಾಗಿ ನನೆಗುದಿಗೆ ಬಿದ್ದಿತ್ತು.

ಸಾಂವಿಧಾನಿಕ ಕ್ಲಬ್ ಸ್ಥಾಪಿಸಲು ಸೂಕ್ತ ಜಾಗ ಇಲ್ಲದೇ ಇರುವುದರಿಂದ ಈ ಮೊದಲೇ ಗುರುತಿಸಿದ್ದ ಬಾಲಬ್ರೂಯಿ ಅತಿಥಿಗೃಹವನ್ನು ಈ ಉದ್ದೇಶಕ್ಕೆ ಮಂಜೂರು ಮಾಡುವಂತೆ ವಿಧಾನಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಪರಿಶೀಲಿಸಿ, ತಕ್ಷಣ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದರು.

'ಸದ್ಯ ಇಲ್ಲಿ ನ್ಯಾಯಮೂರ್ತಿ ಕೆಂಪಣ್ಣ ಆಯೋಗದ ಕಚೇರಿ (ಡಿ.ಜೆ ಹಳ್ಳಿ ಮತ್ತು ಕೆ.ಜೆ ಹಳ್ಳಿ ಗಲಭೆಯ ಹಾನಿ ವಸೂಲಿಗೆ ಸರ್ಕಾರ ರಚಿಸಿದ ಕ್ಲೈಮ್ ಕಮಿಷನ್) ಕಾರ್ಯನಿರ್ವಹಿಸುತ್ತಿದೆ. ಐತಿಹಾಸಿಕ ಮಹತ್ವ ಪಡೆದಿರುವ ಈ ಅತಿಥಿಗೃಹಕ್ಕೆ ಹಿಂದೆ ಮಹಾತ್ಮ ಗಾಂಧಿ, ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ, ನೊಬೆಲ್ ಪ್ರಶಸ್ತಿ ಪುರಸ್ಕೃತ ರವೀಂದ್ರನಾಥ ಟ್ಯಾಗೋರ್ ಭೇಟಿ ನೀಡಿದ್ದಾರೆ. ಹೀಗಾಗಿ, ಈ ಕಟ್ಟಡವನ್ನು 'ಬಾಲಬ್ರೂಯಿ ಅತಿಥಿಗೃಹ'ವೆಂದು ಯಥಾಸ್ಥಿತಿಯಲ್ಲಿ ಮುಂದುವರಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಮುಖ್ಯಮಂತ್ರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕಾರ್ಯದರ್ಶಿ ಕಡತ ಮಂಡಿಸಿದ್ದರು. ಆದರೆ, ಈ ಬಗ್ಗೆ ಮರು ಚರ್ಚಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಸಭಾಧ್ಯಕ್ಷರು ನಡೆಸಿದ ಪರಿಶೀಲನಾ ಸಭೆಗೆ ಕಡತ ಮಂಡಿಸಲಾಗಿತ್ತು.

'ಬಾಲಬ್ರೂಯಿ ಅತಿಥಿಗೃಹವನ್ನು ಸಾಂವಿಧಾನಿಕ ಕ್ಲಬ್ ಆಗಿ ಪರಿವರ್ತಿಸುವ ವಿಷಯದಲ್ಲಿ ಸಾರ್ವಜನಿಕರ ವಿರೋಧ ಇರುವುದರಿಂದ ಮತ್ತು ಈಗಾಗಲೇ ಈ ವಿಚಾರದಲ್ಲಿ ಕೋರ್ಟ್‌ಗೆ ಸಾರ್ವನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಕೆ ಆಗಿರುವುದರಿಂದ ಕ್ಲಬ್ ಆಗಿ ಪರಿವರ್ತಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯುವುದು ಸೂಕ್ತ' ಎಂದೂ ಮುಖ್ಯ ಕಾರ್ಯದರ್ಶಿ ಅಭಿಪ್ರಾಯಪಟ್ಟಿದ್ದಾರೆ.



ಬಾಲಬ್ರೂಯಿ ಅತಿಥಿ ಗೃಹ

### 'ಬಾಲಬ್ರೂಯಿ' ಇತಿಹಾಸ

ಬಾಲಬ್ರೂಯಿ ಅತಿಥಿಗೃಹ ಕಟ್ಟಡ ಸದ್ಯ ಡಿಪಿಎಆರ್ ಅಧೀನದಲ್ಲಿದೆ. 1850ರಲ್ಲಿ ನಿರ್ಮಾಣವಾಗಿರುವ ಈ ಕಟ್ಟಡ, ಆರಂಭದಲ್ಲಿ ಮೈಸೂರು ಸಂಸ್ಥಾನದ ಮುಖ್ಯ ಆಯುಕ್ತರಾಗಿದ್ದ ಬ್ರಿಟಿಷ್ ಸೇನಾಧಿಕಾರಿ ಸರ್. ಮಾರ್ಕ್ ಕಬ್ಬನ್ ಅವರ ನಿವಾಸವಾಗಿತ್ತು. ಬ್ರಿಟಿಷರು ಬಾಲಬ್ರೂಯಿಯನ್ನು ಮೈಸೂರು ದೊರೆ ಚಾಮರಾಜ ಒಡೆಯರ್ ಅವರಿಗೆ ನೀಡಿದ್ದು, 14 ಎಕರೆಯಲ್ಲಿ ಈ ಜಾಗ ಹರಡಿದೆ. ಈ ಕಟ್ಟಡ 1947ರವರೆಗೆ ವಿವಿಧ ಆಯುಕ್ತರ ಅಧಿಕೃತ ನಿವಾಸ ಆಗಿತ್ತು. ಬಳಿಕ ಸರ್. ಎಂ ವಿಶ್ವೇಶ್ವರಯ್ಯನವರ ಕಚೇರಿಯೂ ಇಲ್ಲಿತ್ತು. ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿದ್ದ ಕೆ.ಸಿ. ರೆಡ್ಡಿ, ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಬಿ.ಡಿ. ಜತ್ತಿ, ಎಸ್. ನಿಜಲಿಂಗಪ್ಪ ಮತ್ತು ದೇವರಾಜ ಅರಸು ಅವರು ಇದನ್ನು ಅಧಿಕೃತ ನಿವಾಸವಾಗಿ ಮಾಡಿಕೊಂಡಿದ್ದರು. ಎಸ್. ಆರ್. ಬೊಮ್ಮಾಯಿ ಕೂಡಾ ತಮ್ಮ ಅಧಿಕಾರ ಅವಧಿಯಲ್ಲಿ ಸ್ವಲ್ಪ ಅವಧಿ ಇಲ್ಲಿ ವಾಸವಾಗಿದ್ದರು.

## ಆರ್‌ಆರ್‌ಎಂಸಿಎಚ್: ಯುಜಿಸಿಗೆ ನಿರ್ದೇಶನ

ಬೆಂಗಳೂರು: 'ನಗರದ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು (ಆರ್‌ಆರ್‌ಎಂಸಿಎಚ್) ಚೆನ್ನೈನ ಡೀಮ್ಡ್ ವಿಶ್ವವಿದ್ಯಾಲಯದ ಎಂಜಿಆರ್ ಶೈಕ್ಷಣಿಕ ಮತ್ತು ಸಂಶೋಧನಾ ಕೇಂದ್ರಕ್ಕೆ ವರ್ಗಾಯಿಸುವ ಕುರಿತು ಎರಡು ತಿಂಗಳಲ್ಲಿ ಹೊಸ ನಿರ್ಧಾರ ಕೈಗೊಳ್ಳಿ' ಎಂದು ವಿಶ್ವವಿದ್ಯಾಲಯಗಳ ಅನುದಾನ ಆಯೋಗಕ್ಕೆ (ಯುಜಿಸಿ) ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ಮತ್ತು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ಆರ್‌ಆರ್‌ಎಂಸಿಎಚ್ ಅನ್ನು ನಡೆಸುತ್ತಿರುವ ಮೂಗಾಂಬಿಗೈ ಚಾರಿಟಬಲ್ ಮತ್ತು ಎಜುಕೇಷನಲ್ ಟ್ರಸ್ಟ್ ಸಲ್ಲಿಸಿದ್ದ ಮೇಲ್ಮನವಿಯನ್ನು ವಿಲೇವಾರಿ ಮಾಡಿದೆ.

'ನಿಯಮದ ಅನುಸಾರ ಯುಜಿಸಿ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಪಡೆದ ನಂತರ ತೀರ್ಮಾನ ಕೈಗೊಳ್ಳಬೇಕಿತ್ತು. ಆದರೆ, ಆ ರೀತಿ ನಡೆದುಕೊಳ್ಳದೆ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಆದ್ದರಿಂದ, ಕೇಂದ್ರ ಸರ್ಕಾರ ಮತ್ತು ಯುಜಿಸಿ, ಈ ವಿಚಾರದಲ್ಲಿ ರಾಜ್ಯ ಸರ್ಕಾರದ ಅಭಿಪ್ರಾಯಗಳನ್ನು ಪರಿಗಣಿಸಿದ ನಂತರ ಎರಡು ತಿಂಗಳ ಒಳಗಾಗಿ ಹೊಸ ನಿರ್ಧಾರ ಕೈಗೊಳ್ಳಬೇಕು' ಎಂದು ನಿರ್ದೇಶಿಸಿದೆ.

## ಕುಮಾರವ್ಯಾಸರ ಜಯಂತಿ ಆಚರಿಸಲು ಒತ್ತಾಯ

ಬೆಂಗಳೂರು: 'ಸರ್ಕಾರವು ಮಹಾಕವಿ ಕುಮಾರವ್ಯಾಸರ ಜಯಂತಿಯನ್ನು ರಾಜ್ಯಮಟ್ಟದಲ್ಲಿ ಆಚರಿಸಬೇಕು. ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ಘೋಷಿಸಬೇಕು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅವರನ್ನು ಗಮಕ ಕಲಾವಿದರು ಒತ್ತಾಯಿಸಿದ್ದಾರೆ.

ಕರ್ನಾಟಕ ಗಮಕ ಕಲಾ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಂ.ಆರ್. ಸತ್ಯನಾರಾಯಣ, 'ವ್ಯಾಸ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿದ ಕುಮಾರವ್ಯಾಸರ ಜಯಂತಿಯನ್ನು ಕೋಳಿವಾಡದಲ್ಲಿ ಮತ್ತು ಕೆಲವು ಗಮಕ ಸಾಹಿತ್ಯ ಸಂಸ್ಥೆಗಳಲ್ಲಿ ಮಾತ್ರ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮವನ್ನು ರಾಜ್ಯಮಟ್ಟದಲ್ಲಿ ಆಚರಿಸುವ ಮೂಲಕ ಕುಮಾರವ್ಯಾಸರ ಕೃತಿಯ ಮಹತ್ವವನ್ನು ಜನರಿಗೆ ತಿಳಿಸಬೇಕು' ಎಂದರು.

ಗಮಕ ಕಲಾವಿದರುಗಳಾದ ಹೆಚ್.ಎಸ್. ಸತ್ಯನಾರಾಯಣ, ಹೆಚ್.ಆರ್. ಕೇಶವಮೂರ್ತಿ, ಹೆಚ್.ಎಸ್. ಗೋಪಾಲ, ರಾಜಾರಾಮಮೂರ್ತಿ, ಎಂ.ಆರ್. ರಾಮಮೂರ್ತಿ ಅವರು ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದರು.



ಕಾರ್ಯಕ್ರಮದಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ನಟ ಶಿವರಾಜ್ ಕುಮಾರ್, ದಿವಂಗತ ರಾಜ್‌ಕುಮಾರ್ ಅವರ ಹಿರಿಯ ಪುತ್ರಿ ಲಕ್ಷ್ಮಿ ಮತ್ತು ನಿರ್ಮಾಪಕ ಗೋವಿಂದರಾಜು ದಂಪತಿ, ವಿಖ್ಯಾತಾನಂದ ಸ್ವಾಮೀಜಿ, ನಟಿ ಜಯಮಾಲಾ, ಈಡಿಗರ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ, ನಿರ್ಮಾಪಕ ಎಸ್.ಎ.ಚಿನ್ನೇಗೌಡ, ವಾಸಣ್ಣ ಹಾಗೂ ಸಮುದಾಯದ ಮುಖಂಡರು ಇದ್ದಾರೆ –ಪ್ರಜಾವಾಣಿ ಚಿತ್ರ

ಆರ್ಯ ಈಡಿಗರ ಸಂಘದಿಂದ 'ಪುನೀತ್ ಸ್ಮರಣಾಂಜಲಿ'

# 'ಸಾಮಾಜಿಕ ಕಳಕಳಿಗೆ ಮೇಲ್ಪಂಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಸಮಾಜದಿಂದ ನಮಗೆ ಏನು ಸಿಕ್ಕಿದೆ ಎಂದು ಎಲ್ಲರೂ ಕೇಳುತ್ತಾರೆ. ಆದರೆ, ಸಮಾಜಕ್ಕೆ ನಾವೇನು ಮಾಡಿದ್ದೇವೆ ಎನ್ನುವುದು ಬಹಳ ಮುಖ್ಯ. ಅದಕ್ಕೆ ಪುನೀತ್ ಉತ್ತಮ ಉದಾಹರಣೆಯಾಗಿದ್ದ. ಅಂತಹ ತಮ್ಮನನ್ನು ಕಳೆದುಕೊಂಡ ನೋವು ನನ್ನನ್ನು ಸದಾ ಕಾಡುತ್ತದೆ' ಎಂದು ನಟ ಶಿವರಾಜ್ ಕುಮಾರ್ ಹೇಳಿದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘವು ಶೇಷಾದ್ರಿಪುರದಲ್ಲಿರುವ ಸಂಘದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಪುನೀತ್ ಸ್ಮರಣಾಂಜಲಿ' ಕಾರ್ಯಕ್ರಮದಲ್ಲಿ ಅವರು ಭಾವುಕರಾಗಿ ಮಾತನಾಡಿದರು.

'ಪುನೀತ್ ನನ್ನನ್ನು ಪ್ರೀತಿಯಿಂದ ಶಿವಣ್ಣ ಎಂದೇ ಕರೆಯುತ್ತಿದ್ದ. ಚಿಕ್ಕಂದಿನಿಂದಲೂ ಕೆಲಸದವರನ್ನು ತನ್ನ ಸಮಾನವಾಗಿ ಕಾಣುವ ಮನೋಭಾವ ಬೆಳೆಸಿಕೊಂಡಿದ್ದ. ಪುನೀತ್ ಮತ್ತು ನಾನು ಎಂದೂ ಜಗಳ ಆಡಿಲ್ಲವೇ ಎಂದು ಹಲವರು ಕೇಳುತ್ತಲೇ ಇದ್ದರು. ಪುನೀತ್ ಜೊತೆಗೆ ಜಗಳವಾಡುವ ಪರಿಸ್ಥಿತಿಯೇ ಬರಲಿಲ್ಲ. ಜಗಳವಾಡಿದ ನೆನಪೂ ಇಲ್ಲ. ಪುನೀತ್ ಅಂತಹ ವ್ಯಕ್ತಿಯಾಗಿದ್ದ' ಎಂದು ಸ್ಮರಿಸಿದರು.

ನಟಿ ಜಯಮಾಲಾ, 'ಜಗತ್ತು ಮೆಚ್ಚುವಂತಹ ಕೆಲಸಗಳನ್ನು ಮಾಡಿರುವ ಪುನೀತ್‌ಗೆ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ' ನೀಡಬೇಕು. ಇದರಿಂದ ಫಾಲ್ಕೆ ಪ್ರಶಸ್ತಿಯ ಗೌರವ ಹೆಚ್ಚಲಿದೆ' ಎಂದು ಒತ್ತಾಯಿಸಿದರು.

ನಟರಾದ ಶ್ರೀಮುರಳಿ ಹಾಗೂ ವಿಜಯ ರಾಘವೇಂದ್ರ ಅವರು ರಾಜಕುಮಾರ ಚಿತ್ರದ 'ಬೊಂಬೆ ಹೇಳುತೈತೆ' ಗೀತೆಯನ್ನು ಹಾಡುವ ಮೂಲಕ ಗೀತನಮನ ಸಲ್ಲಿಸಿದರು. ವಿಖ್ಯಾತಾನಂದ ಸ್ವಾಮೀಜಿ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ, ನಿರ್ಮಾಪಕ ಎಸ್.ಎ.ಚಿನ್ನೇಗೌಡ ಮಾತನಾಡಿದರು.

**ನೇತ್ರದಾನಕ್ಕೆ ನೋಂದಣಿ:** ಕಾರ್ಯಕ್ರಮದ ಅಂಗವಾಗಿ ಬಿಡದಿಯ ಡಾ.ರಾಜ್‌ಕುಮಾರ್ ನೇತ್ರ ಸಂಗ್ರಹಣಾ ಕೇಂದ್ರ ಹಾಗೂ ವೈಟ್‌ಫೀಲ್ಡ್‌ನ ಶಂಕರ ಕಣ್ಣಿನ ಆಸ್ಪತ್ರೆಗಳ ಸಹಯೋಗದಲ್ಲಿ ನೇತ್ರದಾನ ನೋಂದಣಿ ಹಾಗೂ ಲಯನ್ಸ್ ಕ್ಲಬ್ ವತಿಯಿಂದ ರಕ್ತದಾನ ಶಿಬಿರ ನಡೆಯಿತು. 121 ಮಂದಿ ಸ್ವಯಂಪ್ರೇರಿತವಾಗಿ ನೇತ್ರದಾನಕ್ಕೆ ನೋಂದಣಿ ಮಾಡಿದರು. 'ರಕ್ತದಾನ ಶಿಬಿರದಲ್ಲಿ 40 ಯೂನಿಟ್‌ಗಳಷ್ಟು ರಕ್ತ ಸಂಗ್ರಹವಾಗಿದ್ದು, ಇದು 120 ಜನರಿಗೆ ನೆರವಾಗಲಿದೆ' ಎಂದು ಶಿಬಿರದ ಆಯೋಜಕರು ಹೇಳಿದರು.

### ಕಣ್ಣೀರಿಟ್ಟ ಶಿವರಾಜ್‌ಕುಮಾರ್

ಪುನೀತ್ ಸ್ಮರಣಾಂಜಲಿ ವೇಳೆ ನಟ ಶಿವರಾಜ್ ಕುಮಾರ್ ತಮ್ಮ ಪುನೀತ್‌ರನ್ನು ನೆನೆದು ಕೆಲಕಾಲ ಬಿಕ್ಕಿ ಬಿಕ್ಕಿ ಅತ್ತರು. ವೇದಿಕೆಯಲ್ಲಿದ್ದವರು ಹಾಗೂ ಕುಟುಂಬಸ್ಥರು ಶಿವರಾಜ್ ಕುಮಾರ್ ಅವರನ್ನು ಸಮಾಧಾನಪಡಿಸಿದರು. ನಟ ಶ್ರೀಮುರಳಿ ಅವರೂ ವೇದಿಕೆ ಮೇಲೆ ಭಾವುಕರಾದರು.

'ಆಗಸ್ಟ್ ಮಾಸದ ರಾಜಕೀಯ ಕಥನ' ಪುಸ್ತಕ ಬಿಡುಗಡೆ

# 'ದೇಶದ್ರೋಹ ಕಾಯ್ದೆ ರದ್ದತಿಗೆ ಜನಾಂದೋಲನ ನಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ್ರೋಹ ಕಾಯ್ದೆಯನ್ನು ಕಾನೂನಿನ ಪುಸ್ತಕದಿಂದಲೇ ತೆಗೆದುಹಾಕಲು ಜನಾಂದೋಲನ ರೂಪುಗೊಳ್ಳಬೇಕಿದೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಪ್ರತಿಪಾದಿಸಿದರು.

ಕಾನ್ಕೇವ್ ಮಾಧ್ಯಮ ಮತ್ತು ಪ್ರಕಾಶನದ ಆಶ್ರಯದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಲ್ಲವಿ ಇಡೂರು ಅವರ 'ಆಗಸ್ಟ್ ಮಾಸದ ರಾಜಕೀಯ ಕಥನ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಹೋರಾಟ ದಮನಿಸಲು ಬ್ರಿಟಿಷರು ಜಾರಿಗೆ ತಂದಿದ್ದ ದೇಶದ್ರೋಹ ಕಾಯ್ದೆ ಇಂದಿಗೂ ಜಾರಿಯಲ್ಲಿದೆ. ಅಧಿಕಾರಸ್ಥರನ್ನು ಪ್ರಶ್ನಿಸಿದವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗುತ್ತಿದೆ. ಸಂವಿಧಾನದಲ್ಲಿ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆಯೇ ಇಲ್ಲದಂತಾಗಿದೆ. ಮಾನವಹಕ್ಕು, ಮೂಲಭೂತಹಕ್ಕು, ಪ್ರಜಾಪ್ರಭುತ್ವ ಮತ್ತು ವಾಕ್ ಸ್ವಾತಂತ್ರ್ಯಕ್ಕೆ ವಿರುದ್ಧವಾದ ದೇಶದ್ರೋಹ ಕಾಯ್ದೆಯನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲ' ಎಂದರು.

'ಸಾಹಿತಿ, ಕಲಾವಿದರು, ವಿದ್ಯಾರ್ಥಿಗಳು, ಉಪನ್ಯಾಸಕರು, ಸಮಾಜ ಸೇವಕರು, ಹೋರಾಟಗಾರರನ್ನು ಜೈಲಿಗೆ ಕಳುಹಿಸಲು ಈ ಕಾಯ್ದೆಯ ದುರ್ಬಳಕೆಯಾಗುತ್ತಿದೆ. ಈ ಕಾಯ್ದೆಯಡಿ ಪ್ರಕರಣ ದಾಖಲಿಸಲು ಸುಪ್ರೀಂ ಕೋರ್ಟ್ 1967ರಲ್ಲೇ ಕೆಲ ಮಾನದಂಡಗಳನ್ನು ರೂಪಿಸಿದೆ. ಅವುಗಳನ್ನೂ ಉಲ್ಲಂಘನೆ ಮಾಡಲಾಗುತ್ತಿದೆ' ಎಂದರು.

'ದೇಶದ್ರೋಹ ಕಾಯ್ದೆ ವಿರುದ್ಧ ಜನಾಂದೋಲನ ಗಟ್ಟಿಯಾಗಬೇಕಿದೆ. ಜನಪರ ಚಳವಳಿಗಳಿಗೆ ಉತ್ತರ ಸಿಗಲಿದೆ ಎಂಬುದನ್ನು ರೈತ ಚಳವಳಿ ಸಾಬೀತು ಮಾಡಿದೆ' ಎಂದು ಹೇಳಿದರು.

'ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ ಮತ್ತು ನ್ಯಾಯಾಂಗ ನಿಂದನೆ ಕಾಯ್ದೆಗಳಿಗೂ ತಿದ್ದುಪಡಿ ತರುವ ಅಗತ್ಯವಿದೆ. ಒಂದು ಚೌಕಟ್ಟಿನೊಳಗೆ ನ್ಯಾಯಾಂಗವನ್ನೂ ವಿಮರ್ಶೆ ಮಾಡುವ ಅಗತ್ಯವಿದೆ' ಎಂದು ಅವರು ಪ್ರತಿಪಾದಿಸಿದರು.

'ಪ್ರಜಾವಾಣಿ' ಸಹ ಸಂಪಾದಕ ಬಿ.ಎಂ. ಹನೀಫ್ ಪುಸ್ತಕದ ಕುರಿತು ಮಾತನಾಡಿದರು.



ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು 'ಆಗಸ್ಟ್ ಮಾಸದ ರಾಜಕೀಯ ಕಥನ' ಪುಸ್ತಕ ಬಿಡುಗಡೆ ಮಾಡಿದರು. ಪ್ರಕಾಶಕ ನಂದೀಶ್ ದೇವ್, ಬಿ.ಎಂ.ಹನೀಫ್, ಕೃತಿಯ ಲೇಖಕಿ ಪಲ್ಲವಿ ಇಡೂರು ಇದ್ದಾರೆ –ಪ್ರಜಾವಾಣಿ ಚಿತ್ರ

# ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

## ಬಿಎಂಟಿಸಿ ಬಸ್ ಸೇವೆ ಕಲ್ಪಿಸಿ


ನಗರದಿಂದ ಚಿಕ್ಕಬಾಣಾವರಕ್ಕೆ ಬರುವ ಬಿಎಂಟಿಸಿ ಬಸ್‌ಗಳು ಸಾಕಷ್ಟಿವೆ. ಆದರೆ, ಇದೇ ಮಾರ್ಗದಲ್ಲಿರುವ ಗಣಪತಿ ನಗರ, ಶಾಂತಿ ನಗರ, ಆಚಾರ್ಯ ಕಾಲೇಜಿಗೆ ಬರುವವರಿಗೆ ಯಾವುದೇ ಬಸ್ ಸೌಕರ್ಯವಿಲ್ಲ. ಇಲ್ಲಿನ ಕಾಲೇಜುಗಳಿಗೆ ಬರುವ ಸಾವಿರಾರು ವಿದ್ಯಾರ್ಥಿಗಳಿಗೂ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದೇ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಪ್ರದೇಶದ ನಿವಾಸಿಗಳು ನಗರದ ಬೇರೆ ಸ್ಥಳಗಳಿಗೆ ತೆರಳಲು ಆಟೊಗಳನ್ನೇ ಅವಲಂಬಿಸುವುದು ಅನಿವಾರ್ಯವಾಗಿದೆ. ಈ ಸ್ಥಳಗಳಿಗೆ ಬಿಎಂಟಿಸಿ ಬಸ್‌ಗಳನ್ನು ನಿಯೋಜಿಸುವುದು ಅಥವಾ ಇರುವ ಬಸ್‌ಗಳನ್ನೇ ಈ ಮಾರ್ಗಗಳಿಗೂ ವಿಸ್ತರಿಸಿದರೆ, ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಈ ಬಗ್ಗೆ ಬಿಎಂಟಿಸಿ ಅಧಿಕಾರಿಗಳು ಗಮನಹರಿಸಬೇಕು.

**ಮಂಜುಳಾ ಚೆನ್ನಿಗಪ್ಪ,** ಗಣಪತಿನಗರ ನಿವಾಸಿ

## ಸೊಳ್ಳೆಗಳ ತಾಣವಾದ ವಾಯುವಿಹಾರ ಪಥ

ಮರಿಯಪ್ಪನಪಾಳ್ಯದ ಗಾಯತ್ರಿದೇವಿ ಉದ್ಯಾನದ ಬಳಿ ಇರುವ ವಾಯುವಿಹಾರ ಪಥದ ಕೆಳಭಾಗದಲ್ಲಿ ಚರಂಡಿ ಸಂಪರ್ಕ ಇದೆ. ಆದರೆ, ವಾಯುವಿಹಾರ ಪಥ ಇತ್ತೀಚೆಗೆ ಹಾಳಾಗಿ, ಚರಂಡಿ ನೀರು ಪಥದ ಅಕ್ಕಪಕ್ಕ ಸಂಗ್ರಹಗೊಳ್ಳುತ್ತಿದೆ. ಚರಂಡಿಯಲ್ಲಿ ಹೂಳು ತುಂಬಿಕೊಂಡಿರುವುದರಿಂದ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ. ಕೊಳಚೆ ನೀರು ನಿಂತಿರುವುದರಿಂದ ಈ ಜಾಗ ಸೊಳ್ಳೆಗಳ ಆಶ್ರಯತಾಣವಾಗಿ ಬದಲಾಗಿದೆ. ಇದರಿಂದ ವಾಯುವಿಹಾರಕ್ಕೆ ಬರುವವರಿಗೆ ಬಹಳ ಸಮಸ್ಯೆಯಾಗುತ್ತಿದೆ. ಈ ಬಗ್ಗೆ ಉದ್ಯಾನದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸಮಸ್ಯೆ ಪರಿಹರಿಸಲು ಮುಂದಾಗಿಲ್ಲ. ಸೊಳ್ಳೆಗಳ ಕಾಟಕ್ಕೆ ಹೆದರಿ ವಾಯುವಿಹಾರಕ್ಕೆ ಬರಲು ಜನ ಹಿಂದೇಟು ಹಾಕುತ್ತಿದ್ದಾರೆ. ಚರಂಡಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಂಡರೆ, ಜನ ನಿರ್ಭೀತಿಯಿಂದ ವಾಯುವಿಹಾರಕ್ಕೆ ಬರುತ್ತಾರೆ.

**ಬಸವರಾಜ,** ಪ್ರಕಾಶ ನಗರ



ಮರಿಯಪ್ಪನಪಾಳ್ಯದ ಗಾಯತ್ರಿದೇವಿ ಉದ್ಯಾನದ ಬಳಿಯ ವಾಯುವಿಹಾರ ಪಥದ ಬಳಿ ಚರಂಡಿ ನೀರು ನಿಂತಿರುವುದು.



ಕೆ.ಆರ್.ಪುರ ಮಾರುಕಟ್ಟೆ ಬಳಿ ವಾಹನ ದಟ್ಟಣೆ

## ದಟ್ಟಣೆಯಿಂದ ಹೈರಾಣ

ಕೆ.ಆರ್.ಪುರ ಮಾರುಕಟ್ಟೆ ಬಳಿ ಪ್ರತಿದಿನ ಬೆಳಿಗ್ಗೆ ವಾಹನ ದಟ್ಟಣೆ ಅಧಿಕವಾಗುತ್ತಿದ್ದು, ಇದರಿಂದ ಎಚ್‌ಎಎಲ್ ನೌಕರರು ಹಾಗೂ ಈ ಭಾಗದಲ್ಲಿರುವ ಸಂಸ್ಥೆಗಳಿಗೆ ಸಕಾಲಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ. ಮಾರುಕಟ್ಟೆಗೆ ತರಕಾರಿ ಸಾಗಿಸುವ ವಾಹನಗಳು ಬಸ್‌ಗಳಿಗೆ ಮೀಸಲಾಗಿರುವ ಸರ್ವೀಸ್ ರಸ್ತೆಯಲ್ಲೇ ಹೆಚ್ಚಾಗಿ ಸಂಚರಿಸುತ್ತವೆ. ಇದರಿಂದಲೇ ಈ ಜಾಗದಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತದೆ. ಮನೆಯಿಂದ ಮುಂಜಾನೆ 6 ಗಂಟೆಗೆ ತಲುಪಿದರೂ ಈ ಮಾರುಕಟ್ಟೆ ಜಂಕ್ಷನ್ ದಾಟಲು ಅರ್ಧಗಂಟೆ ಸಮಯ ಬೇಕು. ಇದರಿಂದ ನೌಕರರಿಗೆ ಬಹಳ ಅನನುಕೂಲವಾಗುತ್ತಿದೆ. ದಟ್ಟಣೆಯಿಂದ ಮುಕ್ತಿ ನೀಡಲು ಸಂಚಾರ ಪೊಲೀಸರು ಕ್ರಮ ಕೈಗೊಳ್ಳಬೇಕು. ವಾಹನಗಳ ಸುಗಮ ಸಂಚಾರಕ್ಕೆ ಪರ್ಯಾಯ ಮಾರ್ಗಗಳನ್ನು ಸೂಚಿಸಬೇಕು.

**ಸೂರ್ಯದೇವರ ಚಂದ್ರಶೇಖರ್,** ಹಿಂದೂಸ್ತಾನ್ ಏರೋನಾಟಿಕ್ಸ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ



ರಾಜಭವನ ರಸ್ತೆಯುದ್ದಕ್ಕೂ ಗುಂಡಿಗಳು ಬಿದ್ದಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ –ಪ್ರಜಾವಾಣಿ ಚಿತ್ರ

## ರಸ್ತೆಯನ್ನು ಗುಂಡಿಮುಕ್ತಗೊಳಿಸಿ

ದಾಸನಪುರ ವ್ಯಾಪ್ತಿಯ ರಾವುತನಹಳ್ಳಿ ರಸ್ತೆಯಲ್ಲಿ ಭಾರಿ ಗುಂಡಿಗಳು ಬಿದ್ದಿವೆ. ವಿವಿಧ ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ವರ್ಷಗಳಿಂದ ದುಃಸ್ಥಿತಿಯಲ್ಲೇ ಇದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ವಾಹನಗಳು ಹೆಚ್ಚಿನ ಪ್ರಮಾಣದಲ್ಲಿ ಸಂಚರಿಸುತ್ತವೆ. ಗುಂಡಿಮಯ ರಸ್ತೆಯಲ್ಲಿ ವಾಹನ ಸವಾರರು ಹಾಗೂ ಚಾಲಕರು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆಗೆ ಶೀಘ್ರವಾಗಿ ಡಾಂಬರು ಕಲ್ಪಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಿ.

**ಲೋಕೇಶ್ವರ,** ಸ್ಥಳೀಯ ನಿವಾಸಿ



ಗುಂಡಿಗಳಿಂದ ಕೂಡಿರುವ ರಾವುತನಹಳ್ಳಿ ರಸ್ತೆ



## ದೂಳಿನ ಮಜ್ಜನ

ಶಿವಾಜಿನಗರ ಸಮೀಪದ ವೆಂಕಟಸ್ವಾಮಿ ನಾಯ್ಡು ಮುಖ್ಯ ರಸ್ತೆಯಲ್ಲಿ ದೂಳಿನ ನಡುವೆ ವಾಹನಗಳ ಸಂಚಾರ –ಪ್ರಜಾವಾಣಿ ಚಿತ್ರ

### ನಂದಿನಿ ನಾರಾಯಣ್ ರಚಿಸಿದ ಎರಡು ಕೃತಿಗಳು ಬಿಡುಗಡೆ

# ‘ಬರವಣಿಗೆ ಇಕ್ಕಟ್ಟಿನ ಕೆಲಸ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ‘ಮಳೆಯಲ್ಲಿ ಮಳೆಯಾಗಿ’ ಕವನ ಸಂಕಲನ ಹಾಗೂ ‘7 ರೂಮ್ಸ್’ ಕಥಾ ಸಂಕಲನ ಬಿಡುಗಡೆ ಮಾಡಲಾಯಿತು. ನಿರೂಪಕಿ ವತ್ಸಲಾ ಮೋಹನ್, ಬರಗೂರು ರಾಮಚಂದ್ರಪ್ಪ, ದೊಡ್ಡರಂಗೇಗೌಡ, ಎಚ್.ಎಲ್. ಪುಷ್ಪಾ ಹಾಗೂ ಲೇಖಕಿ ನಂದಿನಿ ನಾರಾಯಣ್ ಇದ್ದಾರೆ –ಪ್ರಜಾವಾಣಿ ಚಿತ್ರ

**ಬೆಂಗಳೂರು:** ‘ಸಮಕಾಲಿನ ಭಾರತೀಯ ಸಮಾಜದಲ್ಲಿ ಬರವಣಿಗೆ ಇಕ್ಕಟ್ಟಿನ ಕೆಲಸವಾಗಿದೆ’ ಎಂದು ಕವಿ ದೊಡ್ಡರಂಗೇಗೌಡ ಅವರು ಕಳವಳ ವ್ಯಕ್ತಪಡಿಸಿದರು.

ರಂಗ ಮಂಥನ ಎಷ್ಬಾರ್ನ್ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ನಂದಿನಿ ನಾರಾಯಣ್ ಅವರ ‘ಮಳೆಯಲ್ಲಿ ಮಳೆಯಾಗಿ’ ಕವನ ಸಂಕಲನ ಹಾಗೂ ‘7 ರೂಮ್ಸ್’ ಕಥಾ ಸಂಕಲನ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕನ್ನಡ ಕಾವ್ಯ ಕನ್ನಡಿ ಅಭಿಯಾನಕ್ಕೆ ಚಾಲನೆ ನೀಡಿದ ಅವರು, ‘ನಾನು ಸೇರಿದಂತೆ ಹಲವು ಸಾಹಿತಿಗಳು ಕಾವ್ಯ ಕೃಷಿಯನ್ನೇ ನಂಬಿಕೊಂಡು ಬಂದಿದ್ದೇವೆ. ಈಗ ಒಂದು ಮಾತು ಬರೆದರೆ ಹೆಚ್ಚು, ಒಂದು ಮಾತು ಬರೆದರೆ ಕಡಿಮೆ ಎಂಬ ಪರಿಸ್ಥಿತಿಯಿದೆ. ಸುಲಭವಾಗಿ ಬರವಣಿಗೆ ಮಾಡಿಕೊಂಡು, ಹೊಗಳಿಕೊಂಡು ಹೋದರೆ ಪುಷ್ಪ ಮಾಲೆಗಳು ಮಾತ್ರ ಕೊರಳಿಗೆ ಬೀಳಬಹುದು’ ಎಂದರು.

‘ಪ್ರತಿಯೊಂದು ಕಾವ್ಯವೂ ತನ್ನದೆಯಾದ ವಾಗರ್ಥ ಮತ್ತು ಆಂತರಿಕ ಲಯಗಳನ್ನು ಹೊಂದಿರಬೇಕು. ಈಗಿನ ಎಷ್ಟೋ ಕವಿತೆಗಳಲ್ಲಿ ಯಾವ ಆಂತರಿಕ ಲಯವೂ ಇರುವುದಿಲ್ಲ. ಗದ್ಯದಲ್ಲಿ ಬರೆಯುವಂತಹ ಪದ್ಯ ಎಂದು ಭಾವಿಸಿರುವ ಕವಿಗಳೇ ಕನ್ನಡ ನಾಡಿನಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿದ್ದಾರೆ. ಗದ್ಯಕ್ಕೂ ಒಂದು ಲಯ ಇರುತ್ತದೆ. ಆ ಲಯವೂ ಇರದ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೇವೆ’ ಎಂದು ಹೇಳಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, ‘ವಿದೇಶದಲ್ಲಿ ದೇಹ ಇರಿಸಿಕೊಂಡು, ಮನಸ್ಸನ್ನು ಇಲ್ಲಿ ಇರಿಸಿಕೊಂಡವರಿಗೆ ಕೆಲವೊಂದು ಬಿಕ್ಕಟ್ಟು ಕಾಣಿಸಿಕೊಳ್ಳಲಿವೆ. ಇದರಿಂದಾಗಿಯೇ ವಿದೇಶದಲ್ಲಿಯೂ ಕನ್ನಡಪರ ಸಂಘಟನೆ, ಕೂಟಗಳು ಹುಟ್ಟಿಕೊಂಡಿವೆ. ಇದು ಅವರ ಅಸ್ಮಿತೆಯ ಹುಡುಕಾಟವಾಗಿದೆ. ಇಲ್ಲಿನವರೂ ಅಸ್ಮಿತೆಯನ್ನು ಹುಡುಕುತ್ತಾರೆ. ಶಿಕ್ಷಣದ ಮೂಲಕ ಅಸ್ಮಿತೆಯ ಸಮಸ್ಯೆಗಳನ್ನು ನಿಭಾಯಿಸಿಕೊಳ್ಳುತ್ತೇವೆ. ಆದರೆ, ವಿದೇಶದಲ್ಲಿ ಇರುವವರು ಹೇಗೆ ನಿಭಾಯಿಸಿಕೊಳ್ಳುತ್ತಾರೆ ಎನ್ನುವುದು ಮುಖ್ಯ’ ಎಂದು ತಿಳಿಸಿದರು.

ಕವಯತ್ರಿ ಎಚ್.ಎಲ್. ಪುಷ್ಪಾ ಪುಸ್ತಕಗಳ ಕುರಿತು ಮಾತನಾಡಿದರು.

## ಕನ್ನಡೇತರರಿಗೆ ‘ಕನ್ನಡ ನುಡಿ ಕಲಿಕೆ ಪಾಠ’ ಪ್ರಾರಂಭ


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ ಭಾಷೆಯನ್ನು ಕಲಿಯಲು ಆಸಕ್ತಿ ಹೊಂದಿರುವ ಕನ್ನಡೇತರರಿಗಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ‘ಕನ್ನಡ ನುಡಿ ಕಲಿಕೆ ಪಾಠ’ಗಳನ್ನು ಪ್ರಾರಂಭಿಸಿದೆ.

ಕನ್ನಡ ಕಾಯಕ ವರ್ಷದ ಭಾಗವಾಗಿ ಇದು ರೂಪುಗೊಂಡಿದೆ. ಎರಡು ಸಂಚಿಕೆಗಳಲ್ಲಿ ಪಾಠಗಳನ್ನು ಪ್ರಾಧಿಕಾರ ಹೊರತಂದಿದೆ. ಈ ಸಂಚಿಕೆಗಳು ಕ್ರಮವಾಗಿ 13 ಹಾಗೂ 11 ನಿಮಿಷಗಳ ಪಾಠಗಳನ್ನು ಹೊಂದಿವೆ. ಕನ್ನಡ ಕಲಿಯುವ ಸರಳ ವಿಧಾನದ ಕುರಿತು ನಿರೂಪಕರು ಈ ವಿಡಿಯೊದಲ್ಲಿ ವಿವರಿಸುತ್ತಾರೆ.

ಕನ್ನಡ ಕಲಿಕೆಗೆ ಪೂರಕವಾಗಿ ಸಂಭಾಷಣೆಗಳನ್ನೂ ಚಿತ್ರೀಕರಿಸಲಾಗಿದೆ. ಈ ಸಂಚಿಕೆಗಳಿಗೆ ಬರುವ ಪ್ರತಿಕ್ರಿಯೆ ಆಧರಿಸಿ ಪಾಠಗಳನ್ನು ವಿಸ್ತರಿಸಲು ಪ್ರಾಧಿಕಾರ ನಿರ್ಧರಿಸಿದೆ.

‘ತಮಿಳು, ತೆಲುಗು, ಹಿಂದಿ ಸೇರಿದಂತೆ ಹಲವು ಭಾಷಿಗರು ಉದ್ಯೋಗ, ಕಲಿಕೆ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ಇಲ್ಲಿ ಬಂದು ನೆಲೆಸಿದ್ದಾರೆ. ಹೀಗೆ ಬಂದವರು ನೆಲದ ಭಾಷೆಯಾದ ಕನ್ನಡವನ್ನು ಕಲಿಯಬೇಕು. ಅಂಥವರಿಗಾಗಿ ಕನ್ನಡ ನುಡಿ ಕಲಿಕಾ ಪಾಠಗಳನ್ನು ಪ್ರಾರಂಭಿಸಿದ್ದೇವೆ. ಜನರ ಪ್ರತಿಕ್ರಿಯೆಗಳನ್ನು ಆಧರಿಸಿ ಒಟ್ಟು 50 ಪಾಠಗಳನ್ನು ರೂಪಿಸುವ ಯೋಜನೆ ಹಾಕಿಕೊಂಡಿದ್ದೇವೆ’ ಎಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ವಿವರಿಸಿದರು.




‘ಕನ್ನಡ ಕಲಿತ ಅನ್ಯ ಭಾಷಿಕರ ಭಾಷಾ ಪ್ರೌಢಿಮೆ ತಿಳಿಯಲು ಕನ್ನಡ ಭಾಷಾ ಕೌಶಲ ಪರೀಕ್ಷೆ ನಡೆಸುವ ಚಿಂತನೆ ಇದೆ. ಉನ್ನತ ಮಟ್ಟದ ಅಧಿಕಾರಿಗಳಿಂದ ಹಿಡಿದು ಕೆಳಹಂತದ ನೌಕರರವರೆಗೆ ರಾಜ್ಯದಲ್ಲಿ ನೆಲೆಸಿರುವ ಪ್ರತಿಯೊಬ್ಬರೂ ಕನ್ನಡ ಭಾಷೆಯನ್ನು ಕಲಿಯಬೇಕು ಎನ್ನುವುದು ನಮ್ಮ ಆಶಯ. ಮುಂದಿನ ದಿನಗಳಲ್ಲಿ ಆನ್‌ಲೈನ್ ಪರೀಕ್ಷೆ ನಡೆಸಿ, ತೇರ್ಗಡೆಯಾದವರಿಗೆ ಪ್ರಮಾಣಪತ್ರ ನೀಡುವ ಯೋಜನೆಯಿದೆ. ಉದ್ಯೋಗ ಪಡೆಯುವ ಸಂದರ್ಭದಲ್ಲೂ ಈ ಪ್ರಮಾಣಪತ್ರ ಸಹಕಾರಿಯಾಗಬೇಕು. ಈ ಬಗ್ಗೆ ಕ್ರಮ ವಹಿಸಲಾಗುವುದು’ ಎಂದು ಹೇಳಿದರು.

## ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅವಧಿ ವಿಸ್ತರಣೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿ ಪ್ರವೇಶಾತಿಯ ಅವಧಿ ಮುಂದುವರಿಸಿದೆ. ಅರ್ಜಿ ವಿತರಣೆ, ಸಲ್ಲಿಕೆ ಹಾಗೂ ಪ್ರವೇಶಾತಿಗೆ ಪರಿಷ್ಕೃತ ದಿನಾಂಕಗಳನ್ನು ನಿಗದಿಪಡಿಸಿದೆ.

‘ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು ಡಿ.13 ಕೊನೆಯ ದಿನ. ₹200 ದಂಡ ಶುಲ್ಕದೊಂದಿಗೆ ಡಿ.18ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು. ಡೌನ್‌ಲೋಡ್ ಮಾಡಿಕೊಂಡ ಅರ್ಜಿಗಳ ಜೊತೆಗೆ ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಡಿ.21ರೊಳಗೆ ಸಲ್ಲಿಸಬೇಕು’ ಎಂದು ಪ್ರಕಟಣೆ ತಿಳಿಸಿದೆ.

‘ಡಿ.24ರಂದು ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸಲಾಗುತ್ತದೆ. ಈ ಪಟ್ಟಿಯ ಬಗ್ಗೆ ಡಿ.28ರೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಡಿ.31ರಂದು ಅಂತಿಮ ಜೇಷ್ಠತಾ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ. ವಿಜ್ಞಾನ, ವಾಣಿಜ್ಯ ಹಾಗೂ ಕಲಾ ಮತ್ತು ಶಿಕ್ಷಣ ವಿಷಯಗಳ ಪ್ರವೇಶಾತಿಯ ದಿನಾಂಕವನ್ನು ಶೀಘ್ರವೇ ತಿಳಿಸಲಾಗುತ್ತದೆ’ ಎಂದು ಹೇಳಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಮಗಳ ಸಖ್ಯ ಬೆಳೆಸಿದ್ದ ಯುವಕನ ಕೊಂದ ತಂದೆ


ನಾರಾಯಣ


ನಿವೇಶ್

**ಬೆಂಗಳೂರು:** ವಿ.ವಿ. ಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ನಿವೇಶ್ ಕುಮಾರ್ (19) ಎಂಬುವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಆರೋಪಿ ವಿ. ನಾರಾಯಣ (39) ಎಂಬಾತನನ್ನು ಬಂಧಿಸಿದ್ದಾರೆ.

'ವಿನೋಭಾನಗರ ನಿವಾಸಿ ನಾರಾಯಣ, ಆಟೊ ಚಾಲಕ. ಪತ್ನಿ ಹಾಗೂ ಮೂವರು ಮಕ್ಕಳ ಜೊತೆ ವಾಸವಿದ್ದ. ಕಲಾಸಿಪಾಳ್ಯದ ಮಾರುಕಟ್ಟೆಯಲ್ಲಿ ತರಕಾರಿ ಸಾಗಿಸುವ ಕೆಲಸ ಮಾಡುತ್ತಿದ್ದ ತನ್ನ ಮಗಳ ಜೊತೆ ಸಲುಗೆ ಬೆಳೆಸಿ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾನೆಂಬ ಕಾರಣಕ್ಕೆ ನಿವೇಶ್ ಕುಮಾರ್‌ನನ್ನು ಕೊಲೆ ಮಾಡಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ತಮಿಳುನಾಡಿನ ನಿವೇಶ್, ಕೆಲಸ ಹುಡುಕಿಕೊಂಡು 2 ತಿಂಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ತಮ್ಮ ದೊಡ್ಡಪ್ಪನ ಮನೆಯಲ್ಲಿ ನೆಲೆಸಿದ್ದರು. ಅದೇ ಮನೆ ಬಳಿಯ ಮತ್ತೊಂದು ಮನೆಯಲ್ಲಿ ಆರೋಪಿ ನಾರಾಯಣ ಕುಟುಂಬ ವಾಸವಿತ್ತು. ಆತನ ಮಗಳ ಜೊತೆ ಸ್ನೇಹ ಬೆಳೆಸಿದ್ದ ನಿವೇಶ್, ಸಲುಗೆ ಇಟ್ಟುಕೊಂಡಿದ್ದರು. ಯುವತಿಯನ್ನು ಆಗಾಗ ಭೇಟಿಯಾಗುತ್ತಿದ್ದರು. ಯಾರೂ ಇಲ್ಲದಿದ್ದಾಗ ಮನೆಗೂ ಹೋಗಿ ಬರುತ್ತಿದ್ದರೆಂದು ಗೊತ್ತಾಗಿದೆ. ಈ ವಿಷಯ ನಾರಾಯಣನಿಗೆ ಗೊತ್ತಾಗಿತ್ತು' ಎಂದರು.

**ದೊಣ್ಣೆಯಿಂದ ಹೊಡೆದು, ಆಸ್ಪತ್ರೆಗೆ ದಾಖಲು:** 'ನಿವೇಶ್ ಅವರ ದೊಡ್ಡಪ್ಪ ಹಾಗೂ ಮಕ್ಕಳು, ಪೂಜೆ ನಿಮಿತ್ತ ತಮಿಳುನಾಡಿಗೆ ಹೋಗಿದ್ದರು. ಒಬ್ಬರೇ ಇದ್ದ ನಿವೇಶ್, ನ. 28ರಂದು ರಾತ್ರಿ ಯುವತಿ ಮನೆಗೆ ಹೋಗಿ ಅವರ ಜೊತೆ ಸಲುಗೆಯಿಂದ ವರ್ತಿಸುತ್ತಿದ್ದ. ಅದೇ ಸಮಯಕ್ಕೆ ಆರೋಪಿ ನಾರಾಯಣ ಮನೆಗೆ ಬಂದಿದ್ದ. ಕೋಪಗೊಂಡು ನಿವೇಶ್ ಜೊತೆ ಜಗಳ ತೆಗೆದಿದ್ದ. ಮರದ ದೊಣ್ಣೆಯಿಂದ ತಲೆಗೆ ಹೊಡೆದಿದ್ದ. ರಕ್ತ ಸೋರಲಾರಂಭಿಸಿತ್ತು. ತಲೆ ಹಿಡಿದುಕೊಂಡೇ ನಿವೇಶ್, ಮನೆಯಿಂದ ಹೊರಬಂದಿದ್ದರು. ನರಳುತ್ತ ರಸ್ತೆಯಲ್ಲಿ ಕುಳಿತಿದ್ದರು.'

'ನಿವೇಶ್ ಸ್ಥಿತಿ ನೋಡಿ ತನ್ನ ಮೇಲೆಯೇ ಕೊಲೆ ಆರೋಪ ಬರುತ್ತದೆಂದು ತಿಳಿದ ನಾರಾಯಣ, ಆಟೊದಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದ. ನಂತರ, ಆಟೊ ಸಮೇತ ಪರಾರಿಯಾಗಿದ್ದ. ಚಿಕಿತ್ಸೆಗೆ ಸ್ಪಂದಿಸದೇ ನಿವೇಶ್ ರಾತ್ರಿಯೇ ತೀರಿಕೊಂಡಿದ್ದ' ಎಂದು ಅಧಿಕಾರಿ ಮಾಹಿತಿ ನೀಡಿದರು.

'ಕೃತ್ಯದ ನಂತರ ಆರೋಪಿ ತಲೆಮರೆಸಿಕೊಂಡಿದ್ದ. ಪೊಲೀಸರ ವಿಶೇಷ ತಂಡ ಆತನನ್ನು ಬಂಧಿಸಿದೆ' ಎಂದೂ ಹೇಳಿದರು.

ಬಹುರಾಷ್ಟ್ರೀಯ ಕಂಪನಿಗಳ ದತ್ತಾಂಶ ಕದ್ದು ವಂಚನೆ • ದೂರು ದಾಖಲು

# ನಕಲಿ ಇ–ಮೇಲ್ ಸೃಷ್ಟಿಸಿ ಕೋಟಿ ದೋಚುವ ಜಾಲ

• ಸಂತೋಷ ಜಿಗಳಿಕೊಪ್ಪ



ಪ್ರಜಾವಾಣಿ ವಿಶೇಷ

**ಬೆಂಗಳೂರು:** ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಡೆಸುವ ಕಂಪನಿಗಳ ದತ್ತಾಂಶ ಕದಿಯುತ್ತಿರುವ ಸೈಬರ್ ವಂಚಕರ ಜಾಲ, ನಕಲಿ 'ಇ–ಮೇಲ್ ಐ.ಡಿ.ಗಳನ್ನು ಸೃಷ್ಟಿಸಿ ಕೋಟ್ಯಂತರ ರೂಪಾಯಿ ದೋಚುತ್ತಿದೆ.

ರಾಜಧಾನಿಯನ್ನು ಕೇಂದ್ರ ಸ್ಥಾನ ಮಾಡಿಕೊಂಡಿರುವ ಹಲವು ಕಂಪನಿಗಳು, ನಕಲಿ 'ಇ–ಮೇಲ್ ಐ.ಡಿ.ಗಳಿಂದ ಬರುವ ಸಂದೇಶಗಳನ್ನು ನಂಬಿ ಹಣ ಕಳೆದುಕೊಳ್ಳುತ್ತಿವೆ. ಈ ಪೈಕಿ ಐದು ಪ್ರಮುಖ ಕಂಪನಿಗಳು ನಗರದ ಸೈಬರ್ ಕ್ರೈಂ ಠಾಣೆಯಲ್ಲಿ ದೂರು ದಾಖಲಿಸಿವೆ.

'ಕಂಪನಿಗಳಿಗೆ ಕಚ್ಚಾವಸ್ತು ಪೂರೈಸುವವರ ಹಾಗೂ ಸೇವೆ ನೀಡುವ ಗ್ರಾಹಕರ ದತ್ತಾಂಶ ಕದಿಯಲಾಗುತ್ತಿದೆ. ಅವರೆಲ್ಲರ ಅಸಲಿ 'ಇ–ಮೇಲ್ ಐ.ಡಿ. ಯನ್ನು ಹೋಲುವಂತೆ ಒಂದೇ ಅಕ್ಷರವನ್ನು ಬದಲಿಸಿ ನಕಲಿ ಐ.ಡಿ. ಸೃಷ್ಟಿಸಲಾಗುತ್ತಿದೆ. ಅದೇ ಐ.ಡಿ. ಯಿಂದ ಕಂಪನಿಗಳ ಪ್ರತಿನಿಧಿಗಳಿಗೆ ಸಂದೇಶ ಕಳುಹಿಸಿ, ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿಸಿಕೊಂಡು ವಂಚಿಸಲಾಗುತ್ತಿದೆ' ಎಂದು ನಗರದ ಸೈಬರ್ ಕ್ರೈಂ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ಕಾಂಟಿನೆಂಟಲ್, ಫ್ಯೂಚರ್ ರೋಬೊಟಿಕ್ ಆ್ಯಂಡ್ ಆಟೊಮೇಷನ್, ಅಡ್ವಿಕ್ ಆಟೊ ಹಾಗೂ ಇತರೆ ಕಂಪನಿಗಳು ಈ ಕುರಿತು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ಈಗಾಗಲೇ ದೂರು ನೀಡಿವೆ. ಕಂಪನಿಯಲ್ಲಿರುವ ವ್ಯಕ್ತಿಗಳೇ ದತ್ತಾಂಶವನ್ನು ಕದ್ದು ಸೈಬರ್ ವಂಚಕರಿಗೆ ನೀಡಿರುವ ಅನುಮಾನವಿದೆ. ಆಂತರಿಕ ತನಿಖೆ ನಡೆಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ' ಎಂದೂ ತಿಳಿಸಿದರು.

**₹ 60.97 ಲಕ್ಷ ವಂಚನೆ:** 'ಕಚ್ಚಾವಸ್ತು ಪೂರೈಕೆದಾರರ 'ಇ–ಮೇಲ್ ಐ.ಡಿ.ಯಿಂದ ಬಂದ ಸಂದೇಶದಿಂದ ₹ 60.97 ಲಕ್ಷ ವಂಚನೆಯಾಗಿರುವುದಾಗಿ ಕಾಂಟಿನೆಂಟಲ್ ಕಂಪನಿ ಕಾರ್ಯದರ್ಶಿ ಶ್ರೀನಿವಾಸಯ್ಯ ದೂರು ನೀಡಿದ್ದಾರೆ.

'ಕಂಪನಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಪೂರೈಸುವ ಸಮ್ಮಾಟೆಕ್ ಕಂಪನಿಯಿಂದ ಅವುಗಳನ್ನು ಮಾಡಿಕೊಳ್ಳಲಾಗುತ್ತದೆ. ಇದಕ್ಕೆ ಸಂಬಂಧಪಟ್ಟ ವ್ಯವಹಾರ ಹಾಗೂ ಹಣ ವರ್ಗಾವಣೆಯನ್ನು 'bhchun@samwha.com' ಇ–ಮೇಲ್ ಮೂಲಕ ನಡೆಸಲಾಗುತ್ತಿದೆ' ಎಂದು ಶ್ರೀನಿವಾಸಯ್ಯ ದೂರಿನಲ್ಲಿ ತಿಳಿಸಿದ್ದಾರೆ.

'ಕಂಪನಿ ವ್ಯವಹಾರದ ಮಾಹಿತಿ ಕದ್ದಿರುವ ಸೈಬರ್ ವಂಚಕರು, ಸಮ್ಮಾಟೆಕ್ ಕಂಪನಿಯ ಅಸಲಿ ಇ–ಮೇಲ್ ಐ.ಡಿ.ಗೆ ಹೋಲುವಂತೆ 'bhchun@sawmah.com' ಹಾಗೂ 'bhchun@sawmha' ಹೆಸರಿನಲ್ಲಿ ನಕಲಿ ಇ–ಮೇಲ್ ಐ.ಡಿ. ಸೃಷ್ಟಿಸಿದ್ದಾರೆ. ಅದೇ ಐ.ಡಿ.ಯಿಂದ ಅ. 28ರಂದು ಸಂದೇಶ ಕಳುಹಿಸಿದ್ದರು. ಅದನ್ನು ನಂಬಿ ₹ 60.97 ಲಕ್ಷ ಪಾವತಿ ಮಾಡಲಾಗಿದೆ. ಕೆಲ ದಿನಗಳ ನಂತರ ಕಂಪನಿಯವರು ಸಂಪರ್ಕಕ್ಕೆ ಸಿಕ್ಕಾಗಲೇ ವಂಚನೆ ಗಮನಕ್ಕೆ ಬಂದಿದೆ' ಎಂದೂ ಹೇಳಿದ್ದಾರೆ.

**₹ 33.48 ಲಕ್ಷ ವಂಚನೆ:** ಅಡ್ವಿಕ್ ಆಟೊ ಕಂಪನಿ ಸಹ ₹ 33.48 ಲಕ್ಷ ಕಳೆದುಕೊಂಡಿದೆ. ಕಂಪನಿಯ ಘಟಕದ ಮುಖ್ಯಸ್ಥ ಪ್ರಭಾಕರ್ ರಾವ್ ದೂರು ನೀಡಿದ್ದಾರೆ.

'ಕಂಪನಿಗೆ ಕಚ್ಚಾ ವಸ್ತುಗಳನ್ನು ಪೂರೈಸುವವರ ಹೆಸರಿನಲ್ಲಿ ನಕಲಿ ಇ–ಮೇಲ್ ಸೃಷ್ಟಿಸಿದ್ದ ಆರೋಪಿಗಳು, ಸಂದೇಶ ಕಳುಹಿಸಿದ್ದರು. ಅದು ನಿಜವೆಂದು ನಂಬಿ ₹33.48 ಲಕ್ಷ ಪಾವತಿಸಲಾಗಿದೆ. ಆ ಹಣ ಬೇರೆಯವರಿಗೆ ಹೋಗಿರುವುದು ತಡವಾಗಿ ಗೊತ್ತಾಗಿದೆ' ಎಂದು ಹೇಳಿದ್ದಾರೆ.

**ಗ್ರಾಹಕರಿಂದ ₹ 1.92 ಲಕ್ಷ ವರ್ಗಾವಣೆ:** ಫ್ಯೂಚರ್ ರೋಬೊಟಿಕ್ ಆ್ಯಂಡ್ ಆಟೊಮೇಷನ್ ಕಂಪನಿ ಹೆಸರಿನಲ್ಲಿ ನಕಲಿ ಇ–ಮೇಲ್ ಐ.ಡಿ. ಸೃಷ್ಟಿಸಿದ್ದ ವಂಚಕರು, ಗ್ರಾಹಕರೊಬ್ಬರಿಂದ ₹1.92 ಲಕ್ಷ ದೋಚಿದ್ದಾರೆ. ಈ ಬಗ್ಗೆ ಕಂಪನಿ ನಿರ್ದೇಶಕ ರಾಘವೇಂದ್ರ ಉಡುಪ ದೂರು ದಾಖಲಿಸಿದ್ದಾರೆ.

### 'ದಕ್ಷಿಣ ಕೊರಿಯಾದಲ್ಲಿ ಕೃತ್ಯ'

'ವಂಚನೆಗೀಡಾಗಿರುವ ಕೆಲ ಕಂಪನಿಗಳ ಶಾಖೆಗಳು, ದಕ್ಷಿಣ ಕೊರಿಯಾದಲ್ಲಿವೆ. ಕೆಲ ನಕಲಿ ಇ–ಮೇಲ್ ಐ.ಡಿ.ಗಳನ್ನು ಅದೇ ದೇಶದಲ್ಲೇ ಸೃಷ್ಟಿಸಿದ್ದ ಮಾಹಿತಿ ಇದೆ. ಹೀಗಾಗಿ, ಅಲ್ಲಿಯ ಪೊಲೀಸರಿಗೆ ದೂರು ನೀಡುವಂತೆ ಸಲಹೆ ನೀಡಲಾಗಿದೆ' ಎಂದೂ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

## ಸುದ್ದಿ 2 ನಿಮಿಷ

### 'ಉದ್ಯಮ ಬೆಳವಣಿಗೆಗೆ ವಿಶ್ವಮಟ್ಟದ 10 ಕಾರ್ಯಕ್ರಮ'

**ಬೆಂಗಳೂರು:** ರಾಜ್ಯದ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗಾಗಿ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟದ (ಅಸೋಚಾಮ್) ಜತೆ ಸೇರಿ ಮುಂದಿನ ವರ್ಷ ಅಂತರರಾಷ್ಟ್ರೀಯ ಮಟ್ಟದ ಗರಿಷ್ಠ ಹತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಅಸೋಚಾಮ್ ಏರ್ಪಡಿಸಿದ್ದ 'ಸ್ಟಾರ್ಟ್‌ ಟೆಕ್ ಇಂಡಿಯಾ–2021' ಸಮಾವೇಶದಲ್ಲಿ ಮಾತನಾಡಿ, ರಾಜ್ಯದಲ್ಲಿ ಉದ್ಯಮಕ್ಕೆ ಪೂರಕ ವಾತಾವರಣವಿದೆ. ಕೈಗಾರಿಕಾ ವಲಯದ ಬೆಳವಣಿಗೆಗೆ ಅಗತ್ಯವಾದ ಯಾವುದೇ ಬದಲಾವಣೆ ಮಾಡಲು ಸರ್ಕಾರ ಸಿದ್ಧವಿದೆ ಎಂದು ತಿಳಿಸಿದರು.



'ಇದೇ ಸಂದರ್ಭದಲ್ಲಿ ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಎಲ್ ಆಂಡ್ ಟಿ ಟೆಕ್ನಾಲಜೀಸ್, ಇನ್ಫೊಬ್ಲೂಸನ್ಸ್ ಗ್ಲೋಬಲ್ ಲಿಮಿಟೆಡ್, ಬ್ಲೂ ಕೋಪ್ ಡಿಜಿಟಲ್, ತಿರುವ ಗ್ರೂಪ್, ಎಸ್–ಮಂತ್ರ ಸೊಲ್ಯೂಷನ್ಸ್ ಮತ್ತು ಅಸಿರಿಯೋನ್ ಟೆಕ್ನೋ ವೆಂಚರ್ಸ್ ಕಂಪನಿಗಳಿಗೆ ಸಚಿವರು ಪ್ರಶಸ್ತಿ ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮುಖ್ಯಸ್ಥ ಬಿ.ವಿ.ನಾಯ್ಡು, ಇನ್ವೆಸ್ಟ್ ಪ್ರತಿನಿಧಿ ಜೋಸೆಫ್ ಅಬ್ರಹಾಂ, ಜಪಾನ್ ಪ್ರತಿನಿಧಿ ತಕಾಶಿ ಸುಜುಕಿ, ಉದ್ಯಮಿಗಳಾದ ರಜತ್ ಕುಮಾರ್, ಉಮಾ, ಸಂಜೀವ್ ಗುಪ್ತಾ ಇದ್ದರು.

### ಕೆಪಿಎಸ್‌ಸಿ ಪರೀಕ್ಷೆ ದಿನಾಂಕ ಬದಲಿಸಲು ಆಗ್ರಹ

**ಬೆಂಗಳೂರು:** ಭಾರತೀಯ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ (ಐಬಿಪಿಎಸ್) ಸಂಸ್ಥೆಯು ಕ್ಲರ್ಕ್ ಹುದ್ದೆಗಳ ಮತ್ತು ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಗ್ರೂಪ್ 'ಎ' ಹುದ್ದೆಗಳ ನೇಮಕಾತಿಗಾಗಿ ಇದೇ 19ರಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿಗದಿಪಡಿಸಿವೆ. ಒಂದೇ ದಿನ ಎರಡೂ ಪರೀಕ್ಷೆಗಳನ್ನು ನಿಗದಿಪಡಿಸಿರುವುದರಿಂದ ತೊಂದರೆಯಾಗಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

ಕೆಪಿಎಸ್‌ಸಿ ಬೇರೆ ದಿನಾಂಕವನ್ನು ನಿಗದಿಪಡಿಸಿ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

## ಕಾಮೋತ್ತೇಜಕ ಮದ್ದು ನೀಡಿ ಅತ್ಯಾಚಾರ, ಬಾಲಕಿ ಸಾವು

**ಅನುಪ್ಪುರ್ (ಪಿಟಿಐ):** ಮಧ್ಯಪ್ರದೇಶದ ಅನುಪ್ಪುರ್ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬ 17 ವರ್ಷದ ಬಾಲಕಿಗೆ ಕಾಮೋತ್ತೇಜಕ ಮದ್ದು ನೀಡಿ ಅತ್ಯಾಚಾರ ಎಸಗಿರುವ ಕೃತ್ಯ ನಡೆದಿದೆ. ಬಾಲಕಿಯು ಅಧಿಕ ರಕ್ತಸ್ರಾವದಿಂದ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ರಾಜೇಂದ್ರನಗರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿ ಕೃತ್ಯ ನಡೆದಿದೆ. ಆರೋಪಿ, 22 ವರ್ಷದ ಯಶವಂತ್ ಮರವಿ ಎಂಬಾತ ಸದ್ಯ ತಲೆಮರೆಸಿಕೊಂಡಿದ್ದಾನೆ. ಆತನ ಸುಳಿವು ನೀಡಿದವರಿಗೆ ₹30 ಸಾವಿರ ಬಹುಮಾನ ಘೋಷಿಸಲಾಗಿದೆ ಎಂದು ಹೆಚ್ಚುವರಿ ಡಿಜಿ ಸಾಗರ್ ತಿಳಿಸಿದ್ದಾರೆ.

ಅಧಿಕ ರಕ್ತಸ್ರಾವದಿಂದ ಬಳಲುತ್ತಿದ್ದ ಬಾಲಕಿಯು ಸಾವಿಗೂ ಮೊದಲು ಪೋಷಕರಿಗೆ ವಿಷಯ ತಿಳಿಸಿದ್ದಾರೆ. ರಕ್ತಸ್ರಾವದಿಂದ ಸತ್ತಿರುವುದು ಮರಣೋತ್ತರ ಪರೀಕ್ಷೆಯಿಂದ ಗೊತ್ತಾಗಿದೆ. ಆರೋಪಿಯ ಪತ್ತೆ, ಬಂಧಿಸಲು ಪೊಲೀಸರು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಸ್ಥಳೀಯರು ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

### 4 ದ್ವಿಚಕ್ರ ವಾಹನ ಜಪ್ತಿ

**ಬೆಂಗಳೂರು:** ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕಳವು ಮಾಡಿದ್ದ ಆರೋಪದಡಿ ಕೌಶಿಕ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಕೌಶಿಕ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 2.91 ಲಕ್ಷ ಮೌಲ್ಯದ 4 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ಅ. 8ರಂದು ರಾತ್ರಿ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾದ ಬಗ್ಗೆ ದೂರು ನೀಡಿದ್ದರು. ಪುರಾವೆ ಸಂಗ್ರಹಿಸಿ ಕೌಶಿಕ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ.' ಎಂದೂ ಮೂಲಗಳು ತಿಳಿಸಿವೆ.

## ಸೈಕಲ್‌ನಲ್ಲಿ ಹೋಗುತ್ತಿದ್ದ ಸೇನಾಧಿಕಾರಿಯ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಸೈಕಲ್‌ನಲ್ಲಿ ಸಾಗುತ್ತಿದ್ದ ಸೇನಾಧಿಕಾರಿಯೊಬ್ಬರನ್ನು ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಭಾರತೀಯ ವಾಯು ಸೇನೆಯಲ್ಲಿ ಸಾರ್ಜಂಟ್ ಆಗಿರುವ ವೈಶಾಖ್ ಅವರು ಸುಲಿಗೆ ಬಗ್ಗೆ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲಸೂರಿನ ಸರಸ್ವತಿಪುರದಲ್ಲಿ ವಾಸವಿರುವ ವೈಶಾಖ್, ತಮ್ಮ ಮನೆಯಿಂದ ಡಿಸೆಂಬರ್ 3ರಂದು ಬೆಳಿಗ್ಗೆ 5.20ರ ಸುಮಾರಿಗೆ ಸೈಕ್ಲಿಂಗ್‌ಗೆ ಹೊರಟಿದ್ದರು. ಉಪ್ಪಾರಪೇಟೆ ಠಾಣೆ ವ್ಯಾಪ್ತಿಯ ಕೆ.ಜಿ. ರಸ್ತೆಯಲ್ಲಿರುವ ಪೋತಿಸ್ ಬಟ್ಟೆ ಮಾರಾಟ ಮಳಿಗೆ ಬಳಿ 5.40ರ ಸುಮಾರಿಗೆ ಸೈಕಲ್‌ನಲ್ಲಿ ಬಂದಿದ್ದರು.'

'ಅವರನ್ನು ಹಿಂಬಾಲಿಸಿದ್ದ ಆರೋಪಿಯೊಬ್ಬ ಮಾರ್ಗಮಧ್ಯೆಯೇ ಸೈಕಲ್ ತಳ್ಳಿ ಬೀಳಿಸಿದ್ದ. ಮತ್ತೊಬ್ಬ, ಅವರ ಮೊಬೈಲ್ ಕಿತ್ತುಕೊಂಡಿದ್ದ. ನಂತರ, ಇಬ್ಬರೂ ಸ್ಥಳದಿಂದ ಓಡಿಹೋಗಿದ್ದಾರೆ. ಘಟನೆಯಿಂದ ವೈಶಾಖ್ ಅವರ ಬಲಗಾಲು ಹಾಗೂ ಮುಖಕ್ಕೆ ಗಾಯಗಳಾಗಿವೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು, ನಂತರ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

### ದ್ವಿಚಕ್ರ ವಾಹನಕ್ಕೆ ಗುದ್ದಿದ ಲಾರಿ: ಸವಾರ ಸಾವು

**ಬೆಂಗಳೂರು:** ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಹಾಗೂ ಕಂಟೇನರ್ ಲಾರಿ ನಡುವೆ ಅಪಘಾತ ಸಂಭವಿಸಿದ್ದು, ಗುಜರಿ ವ್ಯಾಪಾರಿ ಮಣಿವಣ್ಣನ್ (40) ಎಂಬುವರು ಮೃತಪಟ್ಟಿದ್ದಾರೆ.

'ನಾಗನಾಥಪುರ ನಿವಾಸಿ ಮಣಿವಣ್ಣನ್, ಸಂಬಂಧಿ ಜೊತೆಯಲ್ಲಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಹಿಂಬದಿ ಸವಾರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹೊಸ ರಸ್ತೆಯ ನಾಗನಾಥಪುರ ಜಂಕ್ಷನ್‌ನಲ್ಲಿ ಶನಿವಾರ ತಡರಾತ್ರಿ ದ್ವಿಚಕ್ರ ವಾಹನಕ್ಕೆ ಕಂಟೇನರ್ ಲಾರಿ ಗುದ್ದಿತ್ತು. ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಮಣಿವಣ್ಣನ್, ರಸ್ತೆಗೆ ಬಿದ್ದು ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಅಪಘಾತದ ನಂತರ ಲಾರಿ ಸಮೇತ ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿದರು.

### ಗಾಂಜಾ ಮತ್ತಿನಲ್ಲಿ ಬೆದರಿಕೆ: ಮೂವರು ವಶಕ್ಕೆ

ಗಾಂಜಾ ಸೇವಿಸಿ, ಅದರ ಮತ್ತಿನಲ್ಲಿ ಸುತ್ತಾಡಿ ಸಾರ್ವಜನಿಕರನ್ನು ಬೆದರಿಸುತ್ತಿದ್ದ ಮೂವರು ಬಾಲಕರ ತಂಡವನ್ನು ಪುಲಿಕೇಶಿನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ತಮ್ಮದೇ ತಂಡ ಕಟ್ಟಿಕೊಂಡಿದ್ದ ಬಾಲಕರು, ಠಾಣೆ ವ್ಯಾಪ್ತಿಯಲ್ಲಿ ನಿತ್ಯವೂ ರಾತ್ರಿ ಸುತ್ತಾಡುತ್ತಿದ್ದರು. ಮಾರಕಾಸ್ತ್ರ ಹಿಡಿದು ಜನರನ್ನು ಬೆದರಿಸುತ್ತಿದ್ದರು. ದಾರಿಹೋಕರನ್ನು ಹಾಗೂ ಅಂಗಡಿಗಳಿಗೆ ನುಗ್ಗಿ ಸುಲಿಗೆ ಮಾಡುತ್ತಿದ್ದರು. ಬಾಲಕರನ್ನು, ಬಾಲ ನ್ಯಾಯಮಂಡಳಿಯ ಸುಪರ್ದಿಗೆ ಒಪ್ಪಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ

## 5 ವರ್ಷದ ಹಿಂದೆ ಮಹಿಳೆ ಸಾವು: ಮರು ತನಿಖೆಗೆ ಆದೇಶ

**ಬೆಂಗಳೂರು:** ನಗರದಲ್ಲಿ 5 ವರ್ಷಗಳ ಹಿಂದೆ ನಡೆದಿದ್ದ ಮಹಿಳೆಯೊಬ್ಬರ ಸಾವಿನ ಪ್ರಕರಣದ ಮರು ತನಿಖೆಗೆ ಹೈಕೋರ್ಟ್ ಆದೇಶಿಸಿದೆ.

ಮೃತ ಮಹಿಳೆ ಖುಷ್ಬೂ ನಿಂಬಾಳ್ಕರ್ ತಂದೆ ಚತ್ತೀಸ್‌ಗಡದ ನಿವಾಸಿ ಭಾಸ್ಕರ್ ರಾವ್ ನಿಂಬಾಳ್ಕರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಘಟನೆ ಬಗ್ಗೆ ಪೊಲೀಸರು ಮೂರು ತಿಂಗಳಲ್ಲಿ ತನಿಖೆ ನಡೆಸಿ ಸಂಬಂಧಿಸಿದ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಪರಿಶೀಲಿಸಿದರೆ, ಮೇಲ್ನೋಟಕ್ಕೆ ಮೃತ ಮಹಿಳೆ ನೇಣು ಬಿಗಿದುಕೊಂಡು ಸಾವನ್ನಪ್ಪಿಲ್ಲ ಎನಿಸುತ್ತದೆ. ಪೊಲೀಸರು ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ವಿಶ್ಲೇಷಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

'2015ರಲ್ಲಿ ನನ್ನ ಮಗಳು ವಿವಾಹವಾಗಿದ್ದಳು. ಆಕೆಗೆ ಗಂಡ ಕಿರುಕುಳ ನೀಡುತ್ತಿದ್ದ. ಅವಳು ಆತ್ಮಹತ್ಯೆ ಮಾಡಿಕೊಂಡಿಲ್ಲ. ಆದರೆ, ಹೆಬ್ಬಾಳ ಪೊಲೀಸರು ಆತ್ಮಹತ್ಯೆ ಎಂದು ವರದಿ ಸಲ್ಲಿಸಿದ್ದಾರೆ. ಈ ಬಗ್ಗೆ ಮರು ತನಿಖೆ ನಡೆಸಲು ಆದೇಶಿಸಬೇಕು' ಎಂದು ಮೃತ ಖುಷ್ಬೂ ತಂದೆ ಹೈಕೋರ್ಟ್ ಮೆಟ್ಟಿಲೇರಿದ್ದರು.

## ನಗರದಲ್ಲಿ ಇಂದು

**ಸ್ಟೀವ್ ರೋಚ್ ಅವರ ಬಸವ ಲಿಂಗ ದೀಕ್ಷೆ:** ಆಯೋಜನೆ–ಬಸವ ಸೆಂಟರ್ ಆಫ್ ನಾರ್ತ್ ಅಮೆರಿಕ (ಬಿಸಿಎನ್‌ಎ), ಸ್ಥಳ–ಬಸವ ಮಂಟಪ, ರಾಜಾಜಿನಗರ 2ನೇ ಬ್ಲಾಕ್, ಬೆಳಿಗ್ಗೆ 9.30

**'ಅಂಬೇಡ್ಕರ್ ಮತ್ತು ಪ್ರಸ್ತುತತೆ' ವಿಚಾರ ಸಂಕಿರಣ:** ಉದ್ಘಾಟನೆ-ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ-ಚಿ.ನಾ.ರಾಮು, ಅತಿಥಿಗಳು-ವೈ.ಎ.ನಾರಾಯಣಸ್ವಾಮಿ, ವಿಷಯ ಮಂಡನೆ-ನಾಗರಾಜ ಬಳ್ಳೇಕೆರೆ, ಆಯೋಜನೆ-ಅಖಿಲ ಭಾರತ ದಲಿತ ಕ್ರಿಯಾ ಸಮಿತಿ, ಸ್ಥಳ-ಶಾಸಕರ ಭವನ-01, ಮೂರನೇ ಮಹಡಿ ಸಮ್ಮೇಳನ ಸಭಾಂಗಣ, ಬೆಳಿಗ್ಗೆ 10.30

**ಬೆಂಗಳೂರು ಗಾಯನ ಸಮಾಜದ 51ನೇ ರಾಷ್ಟ್ರೀಯ ಸಂಗೀತ ಸಮ್ಮೇಳನ:** ಬೆಳಿಗ್ಗೆ 10ಕ್ಕೆ ಕಲಾ ವಿಮರ್ಶಕರ ಸ್ಮರಣೆ: ಅಧ್ಯಕ್ಷತೆ–ಎಂ.ಸೂರ್ಯ ಪ್ರಸಾದ್, ಸಂಜೆ 6ಕ್ಕೆ ಸಂಗೀತ ಕಾರ್ಯಕ್ರಮ, ಸ್ಥಳ–ಬೆಂಗಳೂರು ಗಾಯನ ಸಮಾಜ, ಕೆ.ಆರ್.ರಸ್ತೆ.

**'ಕನಕ ಕೀರ್ತನ ಕಾರ್ಯಾಗಾರ' ಉದ್ಘಾಟನೆ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಅಧ್ಯಕ್ಷತೆ: ಭಾರತೀಯ ವಿದ್ಯಾಭವನ ನಿರ್ದೇಶಕ ಎಚ್.ಎನ್.ಸುರೇಶ್, ಅತಿಥಿಗಳು–ಟಿ.ಎಸ್.ಸತ್ಯವತಿ, ಎಸ್. ಶಂಕರ್ ಶ್ಯಾನಭೋಗ, ಆಯೋಜನೆ–ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಭಾರತೀಯ ವಿದ್ಯಾಭವನ, ಸ್ಥಳ–ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಮಧ್ಯಾಹ್ನ 2.30

**ವಿಶ್ವನಾಥ ಕೃ.ಹಂಪಿಹೊಳಿ ಅವರ 'ವಾತ್ಸ್ಯಾಯನ ಕಾಮಸೂತ್ರ' ಪುಸ್ತಕ ಬಿಡುಗಡೆ:** ಅತಿಥಿಗಳು–ಶತಾವಧಾನಿ ಆರ್. ಗಣೇಶ್, ವೀಣಾ ಬನ್ನಂಜೆ, ಎಸ್. ಎನ್.ಸೇತುರಾಮ್, ಸ್ಥಳ–ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 5.30


ಆರ್.ಗಣೇಶ್

**ಟ್ರುತ್ ಡ್ರೀಮ್-ಲೈಂಗಿಕ ಅಲ್ಪಸಂಖ್ಯಾತರ ಛಾಯಾಚಿತ್ರ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ:** ಆಯೋಜನೆ–'ಪಯಣ' ಮತ್ತು 'ಮರ' ಸಂಸ್ಥೆ, ಸ್ಥಳ–ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6 (ಡಿ.9ರವರೆಗೆ ಕಾರ್ಯಕ್ರಮ ನಡೆಯಲಿದೆ)

## ಚಿತ್ರಾವಳಿ



ಅಂಕಿತ ಪುಸ್ತಕ ವತಿಯಿಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟ ಅನಂತನಾಗ್ ಅವರು ನಂದಕುಮಾರ್ ಜಿ.ಕೆ. ಅವರ 'ಜಾಲಿ ಮುಳ್ಳು', ಅನನ್ಯಾ ತುಷಿರಾ ಅವರ 'ಅರ್ಧ ನೆನಪು ಅರ್ಧ ಕನಸು', ಜೋಗಿ ಅವರ 'ಸು ಬಿಟ್ರೆ ಬಣ್ಣ ಬ ಬಿಟ್ರೆ ಸುಣ್ಣ' ಮತ್ತು 'ಕತೆ ಪುಸ್ತಕ' ಕೃತಿಯನ್ನು ಬಿಡುಗಡೆ ಮಾಡಿದರು. ಪುಸ್ತಕದ ಲೇಖಕರು ಇದ್ದಾರೆ —ಪ್ರಜಾವಾಣಿ ಚಿತ್ರ



ಯಲಹಂಕದ ಗಂಗಮ್ಮದೇವಿ ದೇವಸ್ಥಾನದ ವಾರ್ಷಿಕೋತ್ಸವದ ಅಂಗವಾಗಿ ಜಲಸಿರಿ ಪ್ರತಿಷ್ಠಾನದ ವತಿಯಿಂದ ದೇವಿಗೆ ಹೂವಿನ ಅಲಂಕಾರ ಮಾಡಲಾಯಿತು. ಚಂಡಿಕಾ ಹೋಮ, ಗಣಪತಿ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೂ ನಡೆದವು



ಆದ್ಯ ಫೌಂಡೇಷನ್ ವತಿಯಿಂದ ರಾಜಗೋಪಾಲನಗರ ಹಾಗೂ ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್‌ನ ಬಿಜಿಎಸ್ ಶಾಲೆ ಆವರಣದಲ್ಲಿ ಭಾನುವಾರ ಹಮ್ಮಿಕೊಂಡ ಆರೋಗ್ಯ ತಪಾಸಣೆ ಶಿಬಿರವನ್ನು ಶಾಸಕ ಆರ್.ಮಂಜುನಾಥ್ ಅವರು ರಕ್ತದೊತ್ತಡ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಉದ್ಘಾಟಿಸಿದರು. ಬೆಂಗಳೂರು ರೋಟರಿ ಉದ್ಯೋಗ ಸಂಸ್ಥೆ ಅಧ್ಯಕ್ಷ ಸುರೇಂದ್ರ ರಾವ್, ಜೆಡಿಎಸ್ ಮುಖಂಡ ಅಂದಾನಪ್ಪ, ಸಿ.ಜೆ.ರಮೇಶ್, ರುದ್ರೇಗೌಡ, ಚರಣ್ ಗೌಡ, ವರದರಾಜು, ಆದ್ಯ ಫೌಂಡೇಷನ್‌ನ ವ್ಯವಸ್ಥಾಪಕ ಟ್ರಸ್ಟಿ ಕಿರಣ್ ಮಂಜುನಾಥ್ ಇದ್ದರು.

## ಜನಸೇವಾ ವಿದ್ಯಾಕೇಂದ್ರ 26ಕ್ಕೆ ಪೂರ್ಣ ಮಂಡಲೋತ್ಸವ

**ಮುಖ್ಯಾಂಶಗಳು**

- ರಾಜ್ಯಪಾಲ ಥಾವರ್ ಚಂದ್ ಅವರಿಂದ ಉದ್ಘಾಟನೆ
- ವಿದ್ಯಾರ್ಥಿಗಳಿಂದ ಬ್ಯಾಂಡ್, ದೈಹಿಕ ಕಸರತ್ತು ಪ್ರದರ್ಶನ
- ವರ್ಷವಿಡೀ 50 ಗ್ರಾಮಗಳಲ್ಲಿ ವಿದ್ಯಾರ್ಥಿ ಸಮಾವೇಶ

**ಬೆಂಗಳೂರು:** ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದ ಸುವರ್ಣ ಮಹೋತ್ಸವದ ಅಂಗವಾಗಿ ಜನಸೇವಾ ವಿಶ್ವಸ್ಥ ಮಂಡಳಿಯು ಇದೇ 26ರಂದು 'ಪೂರ್ಣ ಮಂಡಲೋತ್ಸವ' ಕಾರ್ಯಕ್ರಮವನ್ನು ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿಯ ನಿರ್ವಾಹಕ ವಿಶ್ವಸ್ಥ ನಾ. ತಿಪ್ಪೇಸ್ವಾಮಿ, 'ಡಿ.26ರ ಬೆಳಿಗ್ಗೆ 9.30ಕ್ಕೆ ಪೂರ್ಣ ಮಂಡಲೋತ್ಸವವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಉದ್ಘಾಟಿಸಲಿದ್ದಾರೆ. ಮೈಸೂರು ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಕೆ.ಇ.ದೇವನಾಥನ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಭಾಗವಹಿಸಲಿದ್ದಾರೆ' ಎಂದರು.

'ಸಂಜೆ 4.30ಕ್ಕೆ ನಡೆಯಲಿರುವ ಜನಸೇವಾ ವಿದ್ಯಾಕೇಂದ್ರದ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳು ಬ್ಯಾಂಡ್ ಸಹಿತ ದೈಹಿಕ ಕಸರತ್ತು ಪ್ರದರ್ಶಿಸಲಿದ್ದಾರೆ. ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್.ಜಯರಾಂ ಅಧ್ಯಕ್ಷತೆ ವಹಿಸಲಿದ್ದು, ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ ಭಾಗವಹಿಸಲಿದ್ದಾರೆ' ಎಂದೂ ಹೇಳಿದರು.

'ಪೂರ್ಣ ಮಂಡಲೋತ್ಸವದ ನಿಮಿತ್ತ ವರ್ಷವಿಡೀ 50 ಗ್ರಾಮಗಳಲ್ಲಿ ವಿದ್ಯಾರ್ಥಿ ಸಮಾವೇಶ, ಗುರುಕುಲದ ರಾಷ್ಟ್ರೀಯ ಸಮ್ಮೇಳನ, ಯುವ ಸಮಾವೇಶ, ಪ್ರಕೃತಿ ಚಿಕಿತ್ಸಾ ಕೇಂದ್ರಗಳು, ಗೋ ಶಾಲೆಗಳ ಸ್ಥಾಪನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದು ತಿಳಿಸಿದರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, 'ಅರಮನೆ ಹಾಗೂ ಜನಸೇವಾ ವಿಶ್ವಸ್ಥ ಮಂಡಳಿಯ ಚಿಂತನೆಗಳು ಸಂಪೂರ್ಣವಾಗಿ ಹೋಲಿಕೆಯಾಗುತ್ತವೆ. ಆ ಕಾರಣಕ್ಕೆ ನಾನೂ ಮಂಡಲೋತ್ಸವದ ಭಾಗವಾಗಿದ್ದೇನೆ' ಎಂದರು.

## ಸಲಗ ದಾಂದಲೆ ಗ್ರಾಮಸ್ಥರಲ್ಲಿ ಭೀತಿ


**ಹುಣಸೂರು / ಹನಗೋಡು:** ಹೋಬಳಿಯ ಗುರುಪುರ ಟಿಬೆಟ್ ಕ್ಯಾಂಪ್ ಮತ್ತು ನಾಗಪುರ ಹಾಡಿಗೆ ಭಾನುವಾರ ಸಲಗ ದಾಂದಲೆ ನಡೆಸಿದ್ದು, ಗ್ರಾಮಸ್ಥರಲ್ಲಿ ಭೀತಿ ಉಂಟಾಗಿದೆ.

ರಸ್ತೆಯಲ್ಲಿ ಗ್ರಾಮಸ್ಥರನ್ನು ಓಡಿಸಿಕೊಂಡು ಹೋಗಿದ್ದು, ನಾಗಪುರ ಶಾಲೆಯ ಮುಂಭಾಗ ವಿದ್ಯುತ್ ಕಂಬವನ್ನು ಮುರಿದುಹಾಕಿದೆ. ನಾಗಪುರ ಮತ್ತು ಟಿಬೆಟ್ ಕ್ಯಾಂಪ್‌ನಲ್ಲಿ ಶುಂಠಿ ಬೆಳೆ ತುಳಿದು, ನಾಶಮಾಡಿದೆ. ನಂತರ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಸಾರ್ವಜನಿಕರು ಆನೆಯನ್ನು ಕಾಡಿಗಟ್ಟಿದ್ದಾರೆ.

'2 ತಿಂಗಳ ಹಿಂದೆ ಈ ಆನೆಯು ಗುರುಪುರ ಟಿಬೆಟ್ ಕ್ಯಾಂಪ್‌ನ ಮನೆ ಕಾಂಪೌಂಡ್, ಕಾರು ಜಖಂಗೊಳಿಸಿತ್ತು. ಭಾರತ ವಾಡಿಯಲ್ಲಿ ಮನೆ ಮೇಲೆ ದಾಳಿ ಮಾಡಿತ್ತು. ಅರಣ್ಯ ಇಲಾಖೆಯವರು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು' ಎಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ದಾ.ರಾ. ಮಹೇಶ್ ಒತ್ತಾಯಿಸಿದರು.

## 'ವಾಮಮಾರ್ಗದಿಂದ ಬಿಜೆಪಿ ಅಧಿಕಾರಕ್ಕೆ'

ಪ್ರಜಾವಾಣಿ ವಾರ್ತೆ


ಎಚ್. ಆಂಜನೇಯ

**ಮುಖ್ಯಾಂಶಗಳು**

- ಶಾಸಕರನ್ನು ಖರೀದಿಸಿ ಅಧಿಕಾರದ ಗದ್ದುಗೆ ಏರಿದ ಬಿಜೆಪಿ- ಆರೋಪ
- ಕೆಟ್ಟ ಸಂಪ್ರದಾಯಕ್ಕೆ ಬಿಜೆಪಿ ನಾಂದಿ- ಆಂಜನೇಯ ಟೀಕೆ

**ಹಾವೇರಿ:** 'ರಾಜ್ಯದಲ್ಲಿ ಜನಾದೇಶದಿಂದ ಬಿಜೆಪಿ ಅಧಿಕಾರಕ್ಕೆ ಬಂದಿಲ್ಲ. ಅನೈತಿಕ ವ್ಯವಸ್ಥೆಯಲ್ಲಿ ವಾಮಮಾರ್ಗದಲ್ಲಿ ಅಧಿಕಾರಕ್ಕೆ ಬಂದಿದೆ. ಶಾಸಕರನ್ನು ನಾಯಿ–ನರಿಗಳಂತೆ ಖರೀದಿ ಮಾಡಿ, ಮುಂಬೈಗೆ ಕರೆದೊಯ್ದು ಸಿನಿಮಾ ಮಾಡಿ, ಅದನ್ನಿಟ್ಟುಕೊಂಡು ಅಧಿಕಾರದ ಗದ್ದುಗೆ ಏರಿದರು' ಎಂದು ಮಾಜಿ ಸಚಿವ ಎಚ್.ಆಂಜನೇಯ ಆರೋಪ ಮಾಡಿದರು.

'ಪ್ರಜಾಪ್ರಭುತ್ವವನ್ನು ಕೊಲೆ ಮಾಡುವ, ಜನತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದ ಕೊಳಕು ಮನಸ್ಸಿನ ಬಿಜೆಪಿಯವರು ಅನೈತಿಕ ಸಂಬಂಧ ಇಟ್ಟುಕೊಂಡು ಅಧಿಕಾರ ನಡೆಸುತ್ತಿದ್ದಾರೆ. ಜನಪ್ರತಿನಿಧಿಗಳನ್ನೇ ಖರೀದಿ ಮಾಡಿ ಕೆಟ್ಟ ಸಂಪ್ರದಾಯವನ್ನು ರಾಜ್ಯದಲ್ಲಿ ಹುಟ್ಟು ಹಾಕಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಸರ್ಕಾರವನ್ನು '10 ಪರ್ಸೆಂಟೇಜ್ ಸರ್ಕಾರ' ಎಂದು ಜರಿದಿದ್ದರು. ಆದರೆ, ಗುತ್ತಿಗೆದಾರರೇ ಬಿಜೆಪಿ ಸರ್ಕಾರವನ್ನು '40 ಪರ್ಸೆಂಟೇಜ್ ಸರ್ಕಾರ' ಎಂದು ಕರೆದಿದ್ದಾರೆ. ಹಗಲುದರೋಡೆ ಮಾಡುತ್ತಿರುವ ಈ ರೀತಿಯ ಸರ್ಕಾರವನ್ನೇ ನೋಡಿರಲಿಲ್ಲ ಎಂದು ಗುತ್ತಿಗೆದಾರರು ಮೋದಿಗೆ ಪತ್ರ ಬರೆದಿದ್ದಾರೆ' ಎಂದು ಕುಟುಕಿದರು.

'ನಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ಯಾವ ಗುತ್ತಿಗೆದಾರನಿಂದಲೂ ನಾವು ಕಮಿಷನ್ ಕೇಳುತ್ತಿರಲಿಲ್ಲ. ಕೆಲಸ ಬೇಗ ಮಾಡಿ ಎಂದು ಹೇಳುತ್ತಿದ್ದೆವು. ಈಗ ಗುತ್ತಿಗೆದಾರರು ಶಾಸಕರಿಗೆ ಕೊಡಬೇಕಾದ ದಕ್ಷಿಣೆ ಕೊಟ್ಟು, ನಂತರ ಭೂಮಿಪೂಜೆಗೆ ಹಾರೆ–ಕೋಲು ಹಾಕುವ ಪರಿಸ್ಥಿತಿ ಬಂದಿದೆ' ಎಂದು ಲೇವಡಿ ಮಾಡಿದರು.

ತುಳು ಕೂಟದ 50ನೇ ವರ್ಷದ ಸಂಭ್ರಮಕ್ಕೆ ಚಾಲನೆ

## ಕರಾವಳಿಯ ರುಚಿ ಉಣಿಸಿದ ಹೊಸ ಅಕ್ಕಿ ಊಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಊಟವು ಪುಂಡಿ (ಕಡುಬು) ಮತ್ತು ಗಸಿ, ಹಾಲುಬಾಯಿ ಸಿಹಿ ಖಾದ್ಯ, ಪತ್ರೊಡೆ, ತಿಮರೆ (ಒಂದೆಲಗ) ಚಟ್ನಿ, ಅಮ್ಟೆ ಕಾಯಿ ಗೊಜ್ಜು... ಹೀಗೆ ಕರಾವಳಿಯ ಬಗೆ ಬಗೆಯ ತಿನಿಸುಗಳನ್ನು ಸವಿಯುವ ಅವಕಾಶ ಅಲ್ಲಿತ್ತು.

ತುಳು ಕೂಟವು ನಗರದಲ್ಲಿ ಭಾನುವಾರ ಏರ್ಪಡಿಸಿದ್ದ 'ಹೊಸ ಅಕ್ಕಿ ಊಟ' ಕಾರ್ಯಕ್ರಮವು ಕರಾವಳಿಯ ಆಹಾರ ವೈವಿಧ್ಯದ ರಸದೌತಣ ಉಣಬಡಿಸಿತು.

ಸಭಾಂಗಣದ ಎದುರಿನ ತುಳಸಿ ಕಟ್ಟೆಯ ಬಳಿ ನೊಗ, ನೇಗಿಲು, ಈ ವರ್ಷ ಬೆಳೆದ ಭತ್ತದ ತೆನೆಯನ್ನು ಇಟ್ಟು ಪೂಜಿಸಲಾಯಿತು. ಅವುಗಳನ್ನು ವೇದಿಕೆಗೆ ತರುವ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ 'ಭೂಮಿ ತಾಯಿಯ ಒಡಲಿಗೆ ಒಂದು ಕಾಳು ಭತ್ತ ಬಿತ್ತಿದರೆ ತೆನೆ ತುಂಬಾ ಕೊಡುತ್ತಾಳೆ. ಹಸಿವು ನೀಗುವ ಭೂಮಿ ತಾಯಿಗೆ ನಮಿಸಿ ವರ್ಷದ ಮೊದಲ ಅನ್ನವನ್ನು ಸೇವಿಸುವ ಸಂಪ್ರದಾಯವೇ ಹೊಸ ಅಕ್ಕಿ ಊಟ. ಇದು ನಮ್ಮ ಸಂಸ್ಕೃತಿ' ಎಂದರು.



ಡಿ.ವಿ. ಸದಾನಂದ ಗೌಡ ಅವರು ಹೊಂಬಾಳೆ ಬಿಡಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. (ಎಡದಿಂದ) ಶಾಸಕ ಹರೀಶ್ ಪೂಂಜ, ದೇವೇಂದ್ರ ಹೆಗ್ಡೆ ಕೊಕ್ರಾಡಿ, ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಬಿಜೆಪಿ ಮುಖಂಡ ಉಮೇಶ್ ಶೆಟ್ಟಿ, ಕೆ. ಪ್ರಕಾಶ್ ಶೆಟ್ಟಿ ಹಾಗೂ ತುಳುಕೂಟದ ಪದಾಧಿಕಾರಿಗಳು ಇದ್ದಾರೆ —ಪ್ರಜಾವಾಣಿ ಚಿತ್ರ

'ಹಸಿವು ನೀಗಿಸುವ ರೈತ ಬಿಸಿಲು ಮಳೆಗಳ ಪರಿವೇ ಇಲ್ಲದೆ ದುಡಿಯುತ್ತಾನೆ. ಅವನ ಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಎಂತಹ ಕಷ್ಟಗಳು ಎದುರಾದರೂ ರೈತ ಹಿಂಜರಿಯುವುದಿಲ್ಲ. ರೈತ ಭೂಮಿತಾಯ ಮೇಲೆ ಇಟ್ಟ ನಂಬಿಕೆ ಅಂತಹದ್ದು' ಎಂದು ಹೇಳಿದರು.

ತುಳು ಕೂಟದ 50ನೇ ವರ್ಷದ ಸಂಭ್ರಮಕ್ಕೆ ಚಾಲನೆ ನೀಡಿ, 'ತುಳು ಐಸಿರಿ' ಯುಟ್ಯೂಬ್ ಹಾಡು ಬಿಡುಗಡೆ ಮಾಡಿದ ಸಂಸದ ಡಿ.ವಿ. ಸದಾನಂದಗೌಡ, 'ಕರಾವಳಿ ತನ್ನದೇ ಸಂಸ್ಕೃತಿಯನ್ನು ಹೊಂದಿದೆ. ಫಸಲು ಕೈಸೇರಿದಾಗ ಅದಕ್ಕೆ ಕಾರಣವಾದ ಎಲ್ಲರನ್ನು ಸ್ಮರಿಸುವ ಕಾರ್ಯವೇ ಈ ಹೊಸ ಅಕ್ಕಿ ಊಟ. ಎತ್ತು, ಕೋಣ, ನೊಗ, ನೇಗಿಲು ಮುಂತಾದ ಕೃಷಿ ಉಪಕರಣಗಳಿಗೂ ಪೂಜೆ ಮಾಡುವುದು ನಮ್ಮ ಸಂಪ್ರದಾಯ' ಎಂದರು.

ತುಳುಕೂಟದ ಅಧ್ಯಕ್ಷ ದೇವೇಂದ್ರ ಹೆಗ್ಡೆ ಕೊಕ್ರಾಡಿ, 'ಜನ್ಮ ಭೂಮಿ ತೊರೆದು ಕರ್ಮ ಭೂಮಿ ಬೆಂಗಳೂರಿಗೆ ಬಂದವರೆಲ್ಲಾ ಸೇರಿ ಕಟ್ಟಿಕೊಂಡ ಕೂಟವಿದು. ಜನ್ಮ ಭೂಮಿಯನ್ನು ತೊರೆದರೂ ಅಲ್ಲಿನ ಸಂಸ್ಕೃತಿಯನ್ನು ಬಿಟ್ಟು ಬದುಕಲು ಸಾಧ್ಯವಿಲ್ಲ. ಮುಂದಿನ ತಲೆಮಾರಿಗೆ ಸಂಸ್ಕೃತಿಯನ್ನು ಪರಿಚಯಿಸಲು ಈ ಕಾರ್ಯಕ್ರಮ ಒಂದು ವೇದಿಕೆ' ಎಂದರು.

ಎಂ.ಆರ್.ಜಿ. ಸಮೂಹದ ಆಡಳಿತ ನಿರ್ದೇಶಕ ಕೆ.ಪ್ರಕಾಶ್ ಶೆಟ್ಟಿ ತುಳು ಕೂಟದ 50ನೇ ವರ್ಷದ ಲಾಂಛನವನ್ನು ಬಿಡುಗಡೆ ಮಾಡಿದರು. ಸಂಸ್ಥೆಯ ವೆಬ್‌ಸೈಟ್ ಅನ್ನು ಶಾಸಕ ಹರೀಶ್ ಪೂಂಜ ಉದ್ಘಾಟಿಸಿದರು.

### 'ಉಡುಪಿ ಕೇದಾರ ಕಜೆ ಶೀಘ್ರ ಮಾರುಕಟ್ಟೆಗೆ'

'ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಕೇವಲ ಶೇ 30ರಷ್ಟು ಗದ್ದೆಗಳಲ್ಲಿ ಮಾತ್ರ ಬೆಳೆ ಬೆಳೆಯಲಾಗುತ್ತಿದೆ. ಬಹುತೇಕ ಕಡೆ ಪಾಳು ಬಿದ್ದ ಗದ್ದೆಗಳೇ ಇವೆ. ಭೂಮಾಲೀಕರು ವ್ಯವಹಾರದ ನಿಮಿತ್ತ ನಗರ ಸೇರಿದ್ದಾರೆ. ಪಾಳು ಬಿದ್ದ ಗದ್ದೆಗಳಲ್ಲಿ ಕೃಷಿ ಮಾಡಿದೆವು. ಈ ವರ್ಷ ಬೆಳೆದ ಅಕ್ಕಿಯನ್ನು 'ಉಡುಪಿ ಕೇದಾರ ಕಜೆ' ಬ್ರ್ಯಾಂಡ್‌ನಲ್ಲಿ ಶೀಘ್ರವೇ ಮಾರುಕಟ್ಟೆಗೆ ಬಿಡುಗಡೆ ಮಾಡಲಿದ್ದೇವೆ' ಎಂದು ಉಡುಪಿ ಶಾಸಕ ರಘುಪತಿ ಭಟ್ ತಿಳಿಸಿದರು.

3,800 ರೈತರು ಕೃಷಿ ಮಾಡದೇ ಬಿಟ್ಟಿದ್ದ 1500 ಎಕರೆ ಗದ್ದೆಗಳಲ್ಲಿ ಸಾವಯವ ಪದ್ಧತಿಯಲ್ಲಿ ಕೃಷಿ ಮಾಡಿಸಿದ ರಘುಪತಿ ಭಟ್ ಅವರನ್ನು ಸನ್ಮಾನಿಸಲಾಯಿತು.

ಕೋವಿಡ್ ನಿಯಮ ಕಟ್ಟುನಿಟ್ಟಿಗೆ ಮಾರ್ಷಲ್ ಕಾರ್ಯಾಚರಣೆ

# ಐದೇ ದಿನದಲ್ಲಿ ₹9.26 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಪಿಂಗ್ ಮಾಲ್‌ಗಳ ಪ್ರವೇಶಕ್ಕೆ ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣಪತ್ರ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಿರುವ ಬಿಬಿಎಂಪಿ, ಮಾಸ್ಕ್ ಧರಿಸದ ಮತ್ತು ಅಂತರ ಕಾಪಾಡದವರಿಗೆ ದಂಡ ವಿಧಿಸುವ ಪ್ರಕ್ರಿಯೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕ್ರಮ ಕೈಗೊಂಡಿದೆ. ಡಿಸೆಂಬರ್‌ನಲ್ಲಿ ಐದೇ ದಿನಗಳಲ್ಲಿ ₹9.26 ಲಕ್ಷ ದಂಡ ವಸೂಲಿ ಮಾಡಿದೆ.

ವಾರ್ಡ್ ಮಟ್ಟದ ಮಾರ್ಷಲ್‌ಗಳು 320 ಪ್ರಕರಣಗಳನ್ನು ದಾಖಲಿಸಿ ₹80 ಸಾವಿರ ದಂಡ ವಸೂಲಿ ಮಾಡಿದ್ದರೆ, ವಿಶೇಷ ತಂಡದಲ್ಲಿನ ಮಾರ್ಷಲ್‌ಗಳು 430 ಪ್ರಕರಣ ದಾಖಲಿಸಿಕೊಂಡು ₹1.07 ಲಕ್ಷ ದಂಡ ವಸೂಲಿ ಮಾಡಿದ್ದಾರೆ. ಮಾಸ್ಕ್ ಧರಿಸದ 3,537 ಪ್ರಕರಣ ಮತ್ತು ಅಂತರ ಕಾಪಾಡದ 170 ಪ್ರಕರಣಗಳನ್ನು ಡಿಸೆಂಬರ್ ತಿಂಗಳಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

2020ರ ಮೇ ತಿಂಗಳಿಂದ ಈವರೆಗೆ ಒಟ್ಟು 6.61 ಲಕ್ಷ ಪ್ರಕರಣ ದಾಖಲಿಸಿಕೊಂಡಿರುವ ಮಾರ್ಷಲ್‌ಗಳು, ₹14.84 ಕೋಟಿ ದಂಡ ರೂಪದಲ್ಲಿ ವಸೂಲಿ ಮಾಡಿದ್ದಾರೆ. ಪೊಲೀಸರು ಮತ್ತು ಆರೋಗ್ಯ ನಿರೀಕ್ಷಕರು ಸಂಗ್ರಹಿಸಿರುವ ದಂಡದ ಮೊತ್ತ ಇದರಲ್ಲಿ ಸೇರ್ಪಡೆಯಾಗಿಲ್ಲ.

‘ಕೋವಿಡ್ ಲಸಿಕೆಯ ಎರಡು ಡೋಸ್‌ಗಳನ್ನೂ ಪಡೆದರಿಗೆ ಮಾತ್ರ ಶಾಪಿಂಗ್ ಕಾಂಪ್ಲೆಕ್ಸ್, ಚಿತ್ರಮಂದಿರ, ಮಾಲ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ತಪಾಸಣೆ ಕಾರ್ಯವನ್ನು ಮಾಲ್ ಸಿಬ್ಬಂದಿಯೇ ನಿರ್ವಹಿಸಬೇಕು. ಅಗತ್ಯ ಎನಿಸಿದಾಗ ಬಿಬಿಎಂಪಿ ತಂಡ ಪರಿಶೀಲನೆ ನಡೆಸಲಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪೂನಾ ಮತ್ತು ಜೈಪುರದಲ್ಲೂ ಓಮೈಕ್ರಾನ್ ಪತ್ತೆಯಾಗಿದೆ. ಬೆಂಗಳೂರಿನಲ್ಲಿ ಕೋವಿಡ್ ಸೋಂಕಿತರ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ತ್ವರಿತವಾಗಿ ಕಳುಹಿಸಿದ್ದರಿಂದ ಓಮೈಕ್ರಾನ್‌ನ ಮೊದಲ ಎರಡು ಪ್ರಕರಣಗಳು ನಗರದಲ್ಲಿ ಪತ್ತೆಯಾದವು. ಸೋಂಕಿತರ ಜೊತೆ ಸಂಪರ್ಕ ಹೊಂದಿದ್ದ ಎಲ್ಲರೂ ಪತ್ತೆಯಾಗಿದ್ದು, ಅವರ ಮೇಲೆ ನಿಗಾ ಇಡಲಾಗಿದೆ’ ಎಂದರು.

‘ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕಿತರ ಸಂಪರ್ಕಕ್ಕೆ ಬಂದು ಕೋವಿಡ್ ದೃಢಪಟ್ಟ 9 ಮಂದಿಯ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿದೆ. ಮೊದಲ ದಿನ ಕಳುಹಿಸಿದ್ದ ಮಾದರಿಗಳ ಫಲಿತಾಂಶ ಭಾನುವಾರ ಬರಬೇಕಿತ್ತು, ಕಾರಣಾಂತರಗಳಿಂದ ಇದು ವಿಳಂಬವಾಗಿದೆ. ಸೋಮವಾರ ಮಧ್ಯಾಹ್ನದ ವೇಳೆಗೆ ವರದಿ ಕೈಸೇರುವ ನಿರೀಕ್ಷೆ ಇದೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್ ತಿಳಿಸಿದರು.



ಗ್ರಾಹಕರು ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದಿರುವ ಪ್ರಮಾಣಪತ್ರವನ್ನು ಗರುಡಾ ಮಾಲ್ ಸಿಬ್ಬಂದಿ ಭಾನುವಾರ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

**ಬೆಂಗಳೂರು ನಗರ ಜಿಲ್ಲಾ**
**ಕೋವಿಡ್ ಅಂಕಿ–ಅಂಶ**

**12,57,498** ಒಟ್ಟು ಸೋಂಕಿತರು (12,57,242 ನಿನ್ನೆಯ ವಿವರ)

| 5,136 | 12,36,016 | 16,345 |
|---|---|---|
| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 256 |
| ಗುಣಮುಖ | 214 |
| ಸಾವು | 02 |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

**ಕೋವಿಡ್ ಅಂಕಿ–ಅಂಶ**
ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 26.59 ಕೋಟಿ | 3.46 ಕೋಟಿ |
| ಸಕ್ರಿಯ ಪ್ರಕರಣ | 2.10 ಕೋಟಿ | 99,155 |
| ಗುಣಮುಖ | 23.96 ಕೋಟಿ | 3.40 ಕೋಟಿ |
| ಸಾವು | 52.67 ಲಕ್ಷ | 4.73 ಲಕ್ಷ |

ದಿನದ ಮಾಹಿತಿ

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 5.30 ಲಕ್ಷ | 8,895 |
| ಗುಣಮುಖ | 3.77 ಲಕ್ಷ | 6,918 |
| ಸಾವು | 5,737 | 2,796 |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 56,742 ಅಮೆರಿಕ; 46,379 ಜರ್ಮನಿ; 42,848 ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 96.28 ಅಮೆರಿಕ; 10.17 ರಷ್ಯಾ; 10.87 ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 41,439 ಕೇರಳ; 36,519 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.38 ಮಹಾರಾಷ್ಟ್ರ; 51.61 ಕೇರಳ; 27.29 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

**ಅಂಕಿ–ಅಂಶ**

₹7.24 ಕೋಟಿ
ಕೋವಿಡ್ ನಿಯಮ ಉಲ್ಲಂಘನೆಗಾಗಿ 2020ರ ಮೇ 3ರಿಂದ ಡಿಸೆಂಬರ್ ತನಕ ವಸೂಲಿ ಮಾಡಲಾದ ದಂಡ

₹7.60 ಕೋಟಿ
2021ರಲ್ಲಿ ಜನವರಿಯಿಂದ ಈವರೆಗೆ ವಸೂಲಿ ಮಾಡಲಾದ ದಂಡ

₹14.84 ಕೋಟಿ
ಈವರೆಗೆ ವಸೂಲಿ ಮಾಡಲಾದ ಒಟ್ಟು ದಂಡ

ಕೋವಿಡ್ ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸುವ ಬಗ್ಗೆ ಸರ್ಕಾರಕ್ಕೆ ಸದ್ಯ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ. ಪ್ರಕರಣಗಳು ಹೆಚ್ಚಾದರಷ್ಟೇ ಪ್ರಸ್ತಾವನೆ ಸಲ್ಲಿಸುತ್ತೇವೆ
**ಗೌರವ್ ಗುಪ್ತ,** ಬಿಬಿಎಂಪಿ ಮುಖ್ಯ ಆಯುಕ್ತ

### ಡಿಸೆಂಬರ್‌ನಿಂದ ಅಲ್ಪ ಏರಿಕೆ

ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ನವೆಂಬರ್‌ನಲ್ಲಿ ನಿತ್ಯ 150 ಪ್ರಕರಣಗಳ ಆಸುಪಾಸಿನಲ್ಲಿತ್ತು. ಆದರೆ, ಡಿಸೆಂಬರ್ 1ರ ಬಳಿಕ ಪ್ರಕರಣಗಳ ಸಂಖ್ಯೆ ನಿಧಾನವಾಗಿ ಏರುತ್ತಿದೆ. ಡಿ.1ರಂದು 206, ಡಿ.2ರಂದು 212, ಡಿ.3ರಂದು 207, ಡಿ.4ರಂದು 256 ಕೋವಿಡ್ ಪ್ರಕರಣಗಳು ಪತ್ತೆಯಾಗಿದೆ.

‘ಕೋವಿಡ್ ಪ್ರಕರಣಗಳು ನಿಧಾನಗತಿಯಲ್ಲಿ ಏರಿಕೆಯಾಗುತ್ತಿರುವುದು ನಿಜ. ಹಾಗಾಗಿ, ಸೋಂಕು ನಿಯಂತ್ರಣ ಕ್ರಮಗಳನ್ನೂ ಕಟ್ಟುನಿಟ್ಟುಗೊಳಿಸಿದ್ದೇವೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನೆರಡು ಪ್ರಯೋಗಾಲಯಗಳಿಗೆ ಶೀಘ್ರ ಮಾನ್ಯತೆ?

# ಜಿನೋಮ್ ಸೀಕ್ವೆನ್ಸಿಂಗ್ ಎರಡೇ ದಿನದಲ್ಲಿ ಫಲಿತಾಂಶ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೋವಿಡ್ ದೃಢಪಟ್ಟವರು ಓಮೈಕ್ರಾನ್ ಸೋಂಕು ಹೊಂದಿದ್ದರೇ ಎಂಬುದನ್ನು ದೃಢಪಡಿಸಿಕೊಳ್ಳಲು ನಡೆಸುವ ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಸದ್ಯಕ್ಕೆ ಒಂದು ವಾರಕ್ಕೂ ಅಧಿಕ ಸಮಯ ತಗಲುತ್ತಿದೆ. ಇದನ್ನು ಇನ್ನಷ್ಟು ಕಡಿಮೆ ಮಾಡಿ, ಎರಡೇ ದಿನಗಳಲ್ಲಿ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಪ್ರಯತ್ನ ಸಾಗಿದೆ.

ಜಿನೋಮ್ ಸೀಕ್ವೆನ್ಸಿಂಗ್ ಫಲಿತಾಂಶ ಬರುವುದಕ್ಕೆ ವಿಳಂಬವಾಗುತ್ತಿರುವುದು ಕೂಡಾ ಓಮೈಕ್ರಾನ್ ಸೋಂಕು ಹರಡದಂತೆ ನಿಯಂತ್ರಿಸುವ ಸವಾಲನ್ನು ಇನ್ನಷ್ಟು ಕಠಿಣಗೊಳಿಸಿದೆ. ಜಿನೋಮ್ ಸೀಕ್ವೆನ್ಸಿಂಗ್ ಫಲಿತಾಂಶವು ತ್ವರಿತವಾಗಿ ಸಿಕ್ಕಿದರೆ, ಅಗತ್ಯ ಇರುವ ಕಡೆಗಳಲ್ಲಿ ಸೋಂಕು ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವುದು ಸುಲಭವಾಗಲಿದೆ ಎನ್ನುವುದು ಬಿಬಿಎಂಪಿ ಅಧಿಕಾರಿಗಳ ಅಭಿಪ್ರಾಯ.

ಸದ್ಯಕ್ಕೆ ಕೋವಿಡ್ ದೃಢಪಟ್ಟವರ ಮಾದರಿಗಳನ್ನು ನಗರದ ನಿಮ್ಹಾನ್ಸ್‌ನ ಪ್ರಯೋಗಾಲಯ ಹಾಗೂ ಜಿ.ಕೆ.ವಿ.ಕೆ ಬಳಿ ಇರುವ ರಾಷ್ಟ್ರೀಯ ಜೀವವಿಜ್ಞಾನಗಳ ಕೇಂದ್ರದ (ಎನ್‌ಸಿಬಿಎಸ್) ಪ್ರಯೋಗಾಲಯಗಳಲ್ಲಿ ಜಿನೋಮ್ ಸೀಕ್ವೆನ್ಸಿಂಗ್‌ಗೆ ಒಳಪಡಿಸಲಾಗುತ್ತಿದೆ. ಈ ಹಿಂದೆ ಇದರ ಫಲಿತಾಂಶ ಬಿಬಿಎಂಪಿ ಕೈಸೇರಲು ಎರಡು ತಿಂಗಳು ತೆಗೆದುಕೊಳ್ಳುತ್ತಿತ್ತು. ನಂತರ ಈ ಅವಧಿಯು ಎರಡು ವಾರಗಳಿಗೆ ಇಳಿದಿತ್ತು.

‘ಜಿನೋಮ್ ಸೀಕ್ವೆನ್ಸಿಂಗ್‌ನ ಫಲಿತಾಂಶವನ್ನು ಐದರಿಂದ ಏಳು ದಿನಗಳಲ್ಲಿ ಪಡೆಯುವಂತಹ ವ್ಯವಸ್ಥೆ ಸದ್ಯಕ್ಕೆ ಇದೆ. ಈ ಅವಧಿಯನ್ನು ಇನ್ನಷ್ಟು ಕಡಿಮೆಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ಸಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಯೋಗಾಲಯಗಳಿಗೆ ಹೊಸ ಯಂತ್ರಗಳನ್ನು ಖರೀದಿಸುವ ಹಾಗೂ ಅನೇಕ ಮಾದರಿಗಳನ್ನು ಒಟ್ಟೊಟ್ಟಿಗೆ ಪರೀಕ್ಷೆಗೆ ಒಳಪಡಿಸುವ ಮೂಲಕ ತ್ವರಿತವಾಗಿ ಫಲಿತಾಂಶ ಪಡೆಯುವ ಪ್ರಯತ್ನಗಳೂ ನಡೆದಿವೆ. ವೈರಾಣು ಮಾದರಿಗಳ ವಂಶವಾಹಿ ಸಂರಚನೆ ವಿಶ್ಲೇಷಣೆ ನಡೆಸುವ ನಾಲ್ಕು ಪ್ರಯೋಗಾಲಯಗಳು ನಗರದಲ್ಲಿವೆ. ಹಿಂದೆ ನಗರದ ಒಂದು ಪ್ರಯೋಗಾಲಯದಲ್ಲಿ ಮಾತ್ರ ಈ ವಿಶ್ಲೇಷಣೆ ನಡೆಸಲಾಗುತ್ತಿತ್ತು. ಈಗ ಅವುಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗುತ್ತಿದೆ.’

‘ಈ ವಿಶ್ಲೇಷಣೆ ನಡೆಸಲು ಇಂಡಿಯನ್ ಸಾರ್ಸ್ ಕೋವಿಡ್–2 ಜಿನೋಮಿಕ್ ಸೀಕ್ವೆನ್ಸಿಂಗ್ ಕನ್ಸೋರ್ಟಿಯಂನಿಂದ (ಇನ್‌ಸಕಾಗ್) ಮಾನ್ಯತೆ ಪಡೆಯಬೇಕು. ನಗರದಲ್ಲಿರುವ ಎರಡು ಖಾಸಗಿ ಪ್ರಯೋಗಾಲಯಗಳಿಗೂ ಇನ್‌ಸಕಾಗ್ ಮಾನ್ಯತೆ ಸಿಗುವ ನಿರೀಕ್ಷೆ ಇದೆ. ಆಗ ಫಲಿತಾಂಶ ಇನ್ನೂ ಬೇಗ ಸಿಗಲಿದೆ’ ಎಂದು ಅವರು ವಿವರಿಸಿದರು.

‘ಸದ್ಯಕ್ಕೆ ನಗರದಲ್ಲಿ ನಿತ್ಯ 750 ಮಾದರಿಗಳನ್ನು ಜಿನೋಮಿಕ್ ಸೀಕ್ವೆನ್ಸಿಂಗ್‌ಗೆ ಒಳಪಡಿಸುವಷ್ಟು ಸೌಕರ್ಯ ಇದೆ. ವೈರಾಣು ವಿಜ್ಞಾನಿಗಳ ಪ್ರಕಾರ ಈ ವಿಶ್ಲೇಷಣೆಯನ್ನು ಪೂರ್ಣಗೊಳಿಸಲು ಕನಿಷ್ಠ 72 ತಾಸು ಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸಲು ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ. ಹಾಗಾಗಿ ಫಲಿತಾಂಶ ಕೈ ಸೇರುವ ಸಮಯ ಇನ್ನಷ್ಟು ಕಡಿಮೆಯಾಗಲಿದೆ. ಮಾದರಿಗಳನ್ನು ಕಳುಹಿಸಿದ ಎರಡೇ ದಿನಗಳಲ್ಲಿ ಫಲಿತಾಂಶ ಸಿಗುವ ನಿರೀಕ್ಷೆ ಇದೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್ ‘ಪ್ರಜಾವಾಣಿ’ಗೆ ತಿಳಿಸಿದರು.

### ‘ಕ್ಲಸ್ಟರ್‌ಗಳಿಂದ ಹೆಚ್ಚು ಮಾದರಿ ರವಾನೆ’

‘ಓಮೈಕ್ರಾನ್ ಪತ್ತೆಯಾಗುವುದಕ್ಕೆ ಮುನ್ನ ನಿತ್ಯ ಕೋವಿಡ್ ದೃಢಪಟ್ಟವರಲ್ಲಿ ಆಯ್ದ 20ರಿಂದ 30 ಮಾದರಿಗಳನ್ನು ಮಾತ್ರ ಜಿನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುತ್ತಿದ್ದೆವು. ಇನ್ನು ಪ್ರತಿ ಕೋವಿಡ್ ಕ್ಲಸ್ಟರ್‌ಗಳಿಂದ ಹೆಚ್ಚು ಸಂಖ್ಯೆಯ ಮಾದರಿಗಳನ್ನು ವಂಶವಾಹಿ ಸಂರಚನೆ ವಿಶ್ಲೇಷಣೆಗೆ ಕಳುಹಿಸುತ್ತೇವೆ’ ಎಂದು ಡಾ.ಬಾಲಸುಂದರ್ ತಿಳಿಸಿದರು.

# ಕಳಸಾ ಬಂಡೂರಿ ಹೋರಾಟಗಾರರಿಗೆ ಮತ್ತೆ ಸಮನ್ಸ್

ನವಲಗುಂದ (ಧಾರವಾಡ ಜಿಲ್ಲೆ): ಮಹದಾಯಿ ಹಾಗೂ ಕಳಸಾ ಬಂಡೂರಿ ಹೋರಾಟದಲ್ಲಿ ಪಾಲ್ಗೊಂಡಿದ್ದ ರೈತರ ಮೇಲಿನ ಎಲ್ಲ ಪ್ರಕರಣಗಳನ್ನು ಹಿಂಪಡೆಯಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿತ್ತು. ಆದರೆ, ಈಗ ಹೋರಾಟಗಾರರಿಗೆ ಇಲ್ಲಿಯ ಹಿರಿಯ ದಿವಾಣಿ ನ್ಯಾಯಾಲಯದಿಂದ ಮತ್ತೆ ಸಮನ್ಸ್ ಜಾರಿಯಾಗಿದೆ.

ಕಳಸಾ–ಬಂಡೂರಿ ನಾಲೆ ಜೋಡಣೆಗಾಗಿ ನಡೆದ ಹೋರಾಟದಲ್ಲಿ ಪಾಲ್ಗೊಂಡಿದ್ದ ತಾಲ್ಲೂಕಿನ ಪಡೆಸೂರ ಗ್ರಾಮದ ರಮೇಶ ವೆಂಕರಡ್ಡಿ ನವಲಗುಂದ ಅವರಿಗೆ ಡಿ.7ರಂದು ತಪ್ಪದೇ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿದ್ದು, ರೈತ ರಮೇಶ ಆತಂಕ ವ್ಯಕ್ತಪಡಿಸಿದ್ದಾರೆ.

‘ಹೋರಾಟಗಾರರ ಮೇಲಿನ ಎಲ್ಲ ಪ್ರಕರಣಗಳನ್ನು ಹಿಂಪಡೆಯಲಾಗಿದೆ ಎಂದು ಸರ್ಕಾರ ಹೇಳಿತ್ತು. ಆದರೆ, ಸಮನ್ಸ್ ಬಂದಿರುವುದು ಆಶ್ಚರ್ಯ ಮೂಡಿಸಿದೆ. ಈ ಬಗ್ಗೆ ವಕೀಲರೊಂದಿಗೆ ಚರ್ಚಿಸಿದಾಗ ಪ್ರಕರಣ ಮುಕ್ತಾಯವಾಗಿದೆ ಎಂದು ಕಂಪ್ಯೂಟರ್‌ನಲ್ಲಿ ತೋರಿಸುತ್ತಿದೆ. ಆದರೆ, ಪೊಲೀಸರು ನ್ಯಾಯಾಲಯಕ್ಕೆ ಖುದ್ದು ಹಾಜರಾಗಲೇಬೇಕು ಎಂದು ಹೇಳುತ್ತಿದ್ದಾರೆ’ ಎಂದಿದ್ದಾರೆ.

‘ನಮ್ಮೂರಿನಲ್ಲಿ ಒಟ್ಟು ಇಬ್ಬರಿಗೆ ಸಮನ್ಸ್ ಬಂದಿದೆ. ನ್ಯಾಯಾಲಯಕ್ಕೆ ಹಾಜರಾಗುವುದಿಲ್ಲ. ಬೇಕಾದರೆ ಬಂಧಿಸಿ, ಜೈಲಿಗೆ ಹಾಕಲಿ. ನಾವು ಎಲ್ಲದ್ದಕ್ಕೂ ಸಿದ್ಧ’ ಎಂದು ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಂದ ರಕ್ಷಣೆ

# ಮಕ್ಕಳನ್ನು ಮನೆಯಲ್ಲಿ ಬಂಧಿಸಿದ್ದ ತಾಯಿ

ಪ್ರಜಾವಾಣಿ ವಾರ್ತೆ

ಸವಣೂರ (ಹಾವೇರಿ ಜಿಲ್ಲೆ): ಹೆತ್ತ ತಾಯಿ ತನ್ನ ಐದು ವರ್ಷದ ಮಗಳನ್ನು ಹಾಗೂ ಮೂರು ವರ್ಷದ ಮಗನನ್ನು ಮನೆಯಲ್ಲಿ ಬಿಟ್ಟು ಬೀಗ ಹಾಕಿ ಕೆಲಸಕ್ಕೆ ಹೋಗುತ್ತಿದ್ದರು. ಸ್ಥಳೀಯರ ದೂರಿನ ಮೇರೆಗೆ ಮಕ್ಕಳ ರಕ್ಷಣಾ ಇಲಾಖೆಯವರು ಮಕ್ಕಳನ್ನು ತಮ್ಮ ಸುಪರ್ದಿಗೆ ಪಡೆದಿದ್ದಾರೆ.

ಮಂಗಳವಾರ ಪೇಟೆಯ ನಿವಾಸಿ ಶಾರದಾ ಕಮ್ಮಾರ ಎಂಬುವವರು ಪ್ರತಿದಿನ ಬೆಳಿಗ್ಗೆ 7ರಿಂದ ಸಂಜೆ 7 ಗಂಟೆಯವರೆಗೆ ಮನೆಯಲ್ಲಿ ಕೂಡಿ ಹಾಕಿ ಕೆಲಸಕ್ಕೆ ಹೋಗುತ್ತಿದ್ದರು. ಮಕ್ಕಳು ಅಳುವುದನ್ನು ಕೇಳಲಾಗದೆ ಸ್ಥಳೀಯರು ಶನಿವಾರ 1098 ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ತಕ್ಷಣ ಕಾರ್ಯಪ್ರವೃತ್ತರಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ತಂಡದವರು ಮನೆಯಲ್ಲಿ ಕೂಡಿ ಹಾಕಿದ್ದ ಮಕ್ಕಳ ಮನವೊಲಿಸಿ ಕಿಟಕಿ ಬಾಗಿಲನ್ನು ತೆರೆಸಿ ಮಾತನಾಡಿಸಿದ್ದಾರೆ.

ಹೆಣ್ಣು ಮಗು ಮಾತನಾಡಿ, ‘ಅಪ್ಪಾಜಿ ನಮ್ಮ ಜೊತೆ ಇರುವುದಿಲ್ಲ. ಅಮ್ಮ ಮತ್ತು ಮನೆಯಲ್ಲಿ ಇರುವ ಅಂಕಲ್ ಹೊಡೆಯುತ್ತಾರೆ. ತಮ್ಮನನ್ನು ಹಾಗೂ ನನ್ನನ್ನು ಮನೆಯಲ್ಲಿ ಕೂಡಿ ಹಾಕಿ ಹೋಗುತ್ತಾರೆ. ಈ ಕುರಿತು ಯಾರಿಗಾದರೂ ಹೇಳಿದರೆ ಮತ್ತಷ್ಟು ಹಿಂಸೆ ಕೊಡುತ್ತಾರೆ’ ಎಂದು ಮಗು ಅಳುತ್ತಾ ಕಿಟಕಿ ಬಾಗಿಲು ಮುಚ್ಚಿದೆ.

ಮಕ್ಕಳ ತಾಯಿ ಶಾರದಾ ಅವರಿಗೆ ಅಧಿಕಾರಿಗಳು ಕರೆ ಮಾಡಿ ವಿಚಾರಿಸಿದರೆ, ಹಾರಿಕೆ ಉತ್ತರ ನೀಡಲು ಯತ್ನಿಸಿದರು. ತಕ್ಷಣ ಎಎಸ್‌ಐ ಗೀತಾ ತಿರುಮಲೆ ಅವರು ತಕ್ಷಣ ಸ್ಥಳಕ್ಕೆ ಬರಲು ಸೂಚಿಸಿದರು. ಮಕ್ಕಳನ್ನು ಹಾವೇರಿ ಜಿಲ್ಲಾ ಸ್ಪಂದನಾ ವಿಶೇಷ ದತ್ತು ಸ್ವೀಕಾರ ಕೇಂದ್ರಕ್ಕೆ ಕರೆದುಕೊಂಡು ಹೋದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಸಹಾಯವಾಣಿ ಸಿಬ್ಬಂದಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ, ಜಿಲ್ಲಾ ಮಕ್ಕಳ ದತ್ತು ಸ್ವೀಕಾರ ಕೇಂದ್ರ ಸಿಬ್ಬಂದಿ ಪಾಲ್ಗೊಂಡಿದ್ದರು.





ನಗರದ ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆಯ ಪಾದಚಾರಿ ಮಾರ್ಗ ಮತ್ತು ರಸ್ತೆ ಹಾಳಾಗಿರುವ ದೃಶ್ಯ (ಎಡ ಚಿತ್ರ), ನಗರದ ಕನ್ನಿಂಗ್ ಹ್ಯಾಮ್ ರಸ್ತೆ ಹಾಳಾಗಿರವ ದೃಶ್ಯ

–ಪ್ರಜಾವಾಣಿ ಚಿತ್ರಗಳು: ಎಂ.ಎಸ್‌.ಮಂಜುನಾಥ್

# ‘ಅಂಗವಿಕಲರಿಗಾಗಿ ಉದ್ಯೋಗ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಅಂಗವಿಕಲರು ಸ್ವತಂತ್ರ ಬದುಕು ಕಟ್ಟಿಕೊಳ್ಳುವಂತಾಗಬೇಕು. ಇದಕ್ಕಾಗಿ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ಉದ್ಯೋಗ ಸೃಷ್ಟಿಸಲು ಕ್ರಮಕೈಗೊಳ್ಳಲಾಗುತ್ತದೆ’ ಎಂದು ಅಂಗವಿಕಲ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಉಪನಿರ್ದೇಶಕ ಸಿದ್ದರಾಮ ತಿಳಿಸಿದರು.

ಡಿಸೆಬಿಲಿಟೀಸ್ ರಿಹ್ಯಾಬಿಲಿಟೇಷನ್ ಟ್ರಸ್ಟ್, ಕೌಶಲಾಭಿವೃದ್ಧಿ ಕೇಂದ್ರ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಸಹಯೋಗದಲ್ಲಿ ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ‘ರಾಷ್ಟ್ರಮಟ್ಟದ ಕಲಾ ಪ್ರತಿಭೋತ್ಸವ–2021’ ಉದ್ಘಾಟಿಸಿ ಅವರು ಮಾತನಾಡಿದರು.

‘ಅಂಗವಿಕಲರ ಕುರಿತ ದೃಷ್ಟಿಕೋನ ಬದಲಾಗಬೇಕು. ಅವರಲ್ಲಿ ಆತ್ಮಸ್ಥೈರ್ಯ ಮೂಡಿಸಬೇಕು. ಅವರಲ್ಲಿರುವ ವಿಶೇಷ ಕಲೆಯನ್ನು ಗುರುತಿಸಿ ಪೋಷಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ’ ಎಂದರು.

ಡಿಸೆಬಿಲಿಟೀಸ್ ರಿಹ್ಯಾಬಿಲಿಟೇಷನ್ ಟ್ರಸ್ಟ್ ಉಪಾಧ್ಯಕ್ಷೆ ಕವಿತಾ ಪಾಂಚಾಳ, ‘ಅಂಗವಿಕಲರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವಂತಾಗಬೇಕು. ಕಲಾ ಪ್ರತಿಭೋತ್ಸವ ಇದಕ್ಕೆ ನೆರವಾಗಲಿದೆ’ ಎಂದು ಹೇಳಿದರು.

ಬಿಜೆಪಿಯ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಎಸ್.ಕೃಷ್ಣಪ್ಪ, ಎಸ್.ಪಿ.ನಾಗರಾಜ್, ಪತ್ರಕರ್ತ ಗಂಡಸಿ ಸದಾನಂದಸ್ವಾಮಿ, ಮುಖಂಡರಾದ ಎಸ್.ಸೇವಕ ವೆಂಕಟರಮಣಪ್ಪ, ಗ್ರಾ.ಪಂ.ಮಾಜಿ ಸದಸ್ಯ ಅಮ್ಜದ್ ಬೇಗ್, ಕಲಾವಿದ ಕಾಂತರಾಜ್, ಕೆ.ವಿ.ಸತೀಶ್ ಇದ್ದರು.



ಕಾಲಿನ ನೆರವಿನಿಂದ ಬರೆಯುವ ಅಂಗವಿಕಲ ವಿದ್ಯಾರ್ಥಿ ರಾಯಚೂರಿನ ಅನಿಲ್ ಕುಮಾರ್ ಹಾಗೂ ಅವರ ತಾಯಿಯನ್ನು ಸಿದ್ದರಾಮ ಅವರು ಗೌರವಿಸಿದರು. ಕವಿತಾ ಪಾಂಚಾಳ ಇದ್ದಾರೆ

ಕುಂಟುತ್ತ ಸಾಗಿದ ‘ಸ್ಮಾರ್ಟ್ ಸಿಟಿ ಕಾಮಗಾರಿ’: ಹೆಚ್ಚಾದ ದೂಳು, ಜನರ ಗೋಳು

# ಕನ್ನಿಂಗ್‌ಹ್ಯಾಮ್ ರಸ್ತೆ ಸುತ್ತ ಸಂಚಾರ ಕಿರಿಕಿರಿ

• ಕುಮಾರ ಸುಬ್ರಹ್ಮಣ್ಯ ಎಸ್.

ಬೆಂಗಳೂರು: ಬಾನೆತ್ತರದ ಸಾಲು ಸಾಲು ಕಟ್ಟಡಗಳನ್ನು ಹೊಂದಿರುವ ರಸ್ತೆಗಳಿವು. ಇವುಗಳ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗಿರುವ ಸ್ಮಾರ್ಟ್ ಸಿಟಿ ಯೋಜನೆ ಕಾಮಗಾರಿ ನಿಧಾನಗತಿಯಲ್ಲಿ ಸಾಗಿರುವುದರಿಂದ ಈ ಪ್ರದೇಶದ ಜನರ ಗೋಳು ಹೇಳತೀರದು. ಕನ್ನಿಂಗ್ ಹ್ಯಾಮ್ ರಸ್ತೆ, ಅದಕ್ಕೆ ಹೊಂದಿಕೊಂಡಿರುವ ಮಿಲ್ಲರ್ಸ್ ರಸ್ತೆ ಹಾಗೂ ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆಯೇ ಅಧ್ವಾನಗೊಂಡಿದೆ

ಏಕಮುಖ (ಒನ್ ವೇ) ಸಂಚಾರವಿರುವ ರಸ್ತೆಯ ಎರಡು ಬದಿಯಲ್ಲೂ ಒಳಚರಂಡಿ ಮತ್ತು ಪಾದಚಾರಿ ಮಾರ್ಗ ನಿರ್ಮಾಣಕ್ಕಾಗಿ ಅವೈಜ್ಞಾನಿಕವಾಗಿ ಅಗೆದು ಹಾಕಲಾಗಿದೆ. ರಸ್ತೆಯಲ್ಲಿ ಪಾದಚಾರಿಗಳು ಓಡಾಡಲು ಸ್ಥಳವೇ ಇಲ್ಲದಂತಾಗಿದೆ. ಇಲ್ಲಿನ ದೂಳಿಗೆ ಹೆದರಿ ಜನ ಮಾಸ್ಕ್ ಹಾಕುತ್ತಿದ್ದಾರೆ.

ಕನ್ನಿಂಗ್‌ಹ್ಯಾಮ್ ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ‘ಸ್ಮಾರ್ಟ್ ಸಿಟಿ’ ಯೋಜನೆಯ ಕಾಮಗಾರಿ ಆರಂಭವಾಗಿ ವರ್ಷಗಳೇ ಕಳೆದಿವೆ. ತ್ವರಿತವಾಗಿ ಕಾಮಗಾರಿ ಮುಗಿಸಬಹುದೆಂದು ಸ್ಥಳೀಯರು ಭಾವಿಸಿದ್ದರು. ಕಾಮಗಾರಿ ವಿಳಂಬಕ್ಕೆ ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಇಲ್ಲಿ ವಾಹನ ಸಂಚಾರಕ್ಕೆ ಸುಸಜ್ಜಿತ ರಸ್ತೆ, ಪಾದಚಾರಿ ಮಾರ್ಗ ಹಾಗೂ ವಾಹನಗಳ ನಿಲುಗಡೆಗೆ ವ್ಯವಸ್ಥೆ ಇಲ್ಲ. ಕೆಲವರು, ತಮ್ಮ ವಾಹನಗಳನ್ನು ರಸ್ತೆಯಲ್ಲೇ ನಿಲ್ಲಿಸುತ್ತಿದ್ದಾರೆ. ಇಕ್ಕಟ್ಟಾದ ರಸ್ತೆಯಲ್ಲಿ ದಟ್ಟಣೆಯೂ ಉಂಟಾಗುತ್ತಿದೆ. ರಸ್ತೆಯ ಅಕ್ಕ–ಪಕ್ಕ ಅಗೆದಿರುವುದರಿಂದ ದೂಳು ಹೆಚ್ಚಾಗಿದೆ. ರಸ್ತೆಗೆ ಹೊಂದಿಕೊಂಡಿರುವ ಮಳಿಗೆಗಳು ಹಾಗೂ ಹೋಟೆಲ್‌ನವರು, ದೂಳಿನಿಂದ ಮುಕ್ತಿ ಯಾವಾಗ ಎಂದು ಪ್ರಶ್ನಿಸುತ್ತಿದ್ದಾರೆ

‘ಕೋವಿಡ್ ಕಾಣಿಸಿಕೊಂಡ ನಂತರ ಹೋಟೆಲ್‌ಗೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಒಳಚರಂಡಿ ಕಾಮಗಾರಿಗಾಗಿ ಹೋಟೆಲ್‌ನ ಎದುರೇ ದೊಡ್ಡ ಗುಂಡಿ ತೋಡಲಾಗಿದೆ. ಅದರಿಂದಾಗಿ ಗ್ರಾಹಕರು ಹೋಟೆಲ್ ಒಳಗೆ ಬರಲು ಸಮಸ್ಯೆಯಾಗಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು’ ಎಂದು ಹೋಟೆಲ್ ಮಾಲೀಕರೊಬ್ಬರು ಒತ್ತಾಯಿಸಿದರು.

**ರಸ್ತೆ ಸ್ಥಿತಿ ಶೋಚನೀಯ:** ಭಗವಾನ್ ಮಹಾವೀರ ಜೈನ್ ಆಸ್ಪತ್ರೆ ಎದುರಿನ ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆಯು ಸಂಪೂರ್ಣ ಹಾಳಾಗಿದೆ. ಒಳಚರಂಡಿ ವ್ಯವಸ್ಥೆಗಾಗಿ ರಸ್ತೆ ಅಗೆದಿದ್ದರಿಂದ, ಎಲ್ಲೆಂದರಲ್ಲಿ ಮಣ್ಣಿನ ರಾಶಿ ಬಿದ್ದಿದೆ. ಮಳೆ ಬಂದಾಗ ಕೆಸರು ಹೆಚ್ಚಾಗುತ್ತದೆ. ಬಿಸಿಲು ಇದ್ದಾಗ ದೂಳಿನ ಸಮಸ್ಯೆ ವಿಪರೀತವಾಗಿದೆ.

‘ಆಸ್ಪತ್ರೆಗೆ ಬರುವ ರಸ್ತೆ ಕಚ್ಚಾ ರಸ್ತೆಯಂತಾಗಿದೆ. ಆಂಬುಲೆನ್ಸ್ ಸಂಚಾರಕ್ಕೆ ಮತ್ತು ತುರ್ತು ಚಿಕಿತ್ಸೆಗಾಗಿ ಬರುವ ರೋಗಿಗಳ ಓಡಾಟಕ್ಕೆ ಸಮಸ್ಯೆಯಾಗುತ್ತಿದೆ’ ಎಂದು ಆಟೊ ರಿಕ್ಷಾ ಚಾಲಕರೊಬ್ಬರು ಹೇಳಿದರು.



ಕಿರಿದಾದ ರಸ್ತೆ ದೂಳುಮಯವಾಗಿದೆ. ಈ ಭಾಗದಲ್ಲಿರುವ ಅಂಗಡಿಯವರಿಗೆ ಹಾಗೂ ಸುತ್ತಾಡುವ ಜನರಲ್ಲಿ ಆರೋಗ್ಯ ಸಮಸ್ಯೆ ಕಾಣಿಸುತ್ತಿದೆ.
**ಸುರೇಶ್,** ಆಟೊ ಚಾಲಕ

ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ಕೊಳವೆ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. 2022ರ ಜನವರಿ ಅಂತ್ಯಕ್ಕೆ ಕಾಮಗಾರಿ ಮುಗಿಸುವ ಉದ್ದೇಶವಿದೆ.
**ವಿನಾಯಕ ಜಿ. ಸುಗೂರ್,** ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್

ಬೆಂಗಳೂರು ಗಾಯನ ಸಮಾಜ ವಿದ್ವಾನ್ ಎಸ್. ಕೃಷ್ಣ ಮೂರ್ತಿ ನೆನಪಿನಾರ್ಥ 51ನೇ ಸಂಗೀತ ಸಮ್ಮೇಳನ

# ‘ಆಕಾಶವಾಣಿಯಲ್ಲಿನ ಬದಲಾವಣೆ ಖಂಡನಾರ್ಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಕಾಶವಾಣಿಯು ಶಾಸ್ತ್ರೀಯ ಸಂಗೀತದ ತವರು ಮನೆ ಇದ್ದಂತೆ. ಈಗ ಈ ಕೇಂದ್ರದಲ್ಲಿ ಸಂಗೀತ ಕಾರ್ಯಕ್ರಮಗಳ ಪ್ರಸಾರ ನಿಂತೇ ಹೋದಂತಾಗಿದೆ. ಸಂಗೀತದ ಅಭಿವ್ಯಕ್ತಿ ಹಾಗೂ ಜನಪ್ರಿಯತೆಯ ಏಕೈಕ ಬಲಿಷ್ಠ ಮಾಧ್ಯಮವೆನಿಸಿದ್ದ ಆಕಾಶವಾಣಿಯಲ್ಲಿ ಆಗುತ್ತಿರುವ ಈ ಬದಲಾವಣೆ ಖಂಡನಾರ್ಹ’ ಎಂದು ಕಲಾ ವಿಮರ್ಶಕ ಎಂ.ಸೂರ್ಯ ಪ್ರಸಾದ್ ಹೇಳಿದರು.

ಬೆಂಗಳೂರು ಗಾಯನ ಸಮಾಜವು ‘ಸಂಗೀತ ಕಲಾರತ್ನ’ ವಿದ್ವಾನ್ ಎಸ್. ಕೃಷ್ಣ ಮೂರ್ತಿ ನೆನಪಿನಾರ್ಥವಾಗಿ ಭಾನುವಾರ ಹಮ್ಮಿಕೊಂಡಿದ್ದ 51ನೇ ಸಂಗೀತ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಬೆಂಗಳೂರು ಆಕಾಶವಾಣಿಯ ‘ಅಮೃತವರ್ಷಿಣಿ’ ವಾಹಿನಿ ಸ್ಥಳೀಯ ಕಲಾವಿದರಿಗೆ ಮಹತ್ವದ ವೇದಿಕೆಯಾಗಿತ್ತು. ಅದನ್ನು ರಾಷ್ಟ್ರೀಯ ವಾಹಿನಿಯೊಂದರ ಜೊತೆ ವಿಲೀನ ಮಾಡಲು ಸರ್ಕಾರ ಮುಂದಾಗಿದೆ. ಈ ನಿರ್ಧಾರದ ವಿರುದ್ಧ ಹೋರಾಟ ಮುಂದುವರಿಸಬೇಕು’ ಎಂದರು.

‘ರಾಜ್ಯದಲ್ಲಿ ಹಲವು ಆಕಾಶವಾಣಿ ಕೇಂದ್ರಗಳಿವೆ. ಹಣ ಗಳಿಕೆ ಹಾಗೂ ಮನರಂಜನೆಗಳಷ್ಟೇ ಅವುಗಳ ಗುರಿ ಆಗಬಾರದು. ಮನೋವಿಕಾಸ ಹಾಗೂ ಜ್ಞಾನ ಪ್ರಸಾರದ ಜೊತೆಗೆ ಸಂಸ್ಕೃತಿ, ಸಂಗೀತ, ನೃತ್ಯ ಕಲೆಗಳ ಪೋಷಣೆ ಮತ್ತು ಪ್ರಚಾರದ ಹೊಣೆಯನ್ನೂ ಅವು ಹೊರಬೇಕು. ಪತ್ರಿಕೆಗಳೂ ಕಲಾ ವಿಮರ್ಶೆ, ಅವುಗಳ ಪರಿಚಯದ ಕುರಿತ ಅಂಕಣ ಮತ್ತು ಲೇಖನಗಳನ್ನು ಪ್ರಕಟಿಸುವ ಮೂಲಕ ಓದುಗರ ದೃಷ್ಟಿಯನ್ನು ಅವುಗಳತ್ತ ಹೊರಳಿಸಬೇಕು. ಓದುಗರ ಸಂಖ್ಯೆ ಕಡಿಮೆ ಎಂದು ಅವುಗಳನ್ನು ಕಡೆಗಣಿಸಬಾರದು’ ಎಂದು ಸಲಹೆ ನೀಡಿದರು.

ಸಂಸ್ಕಾರ ಭಾರತಿ ಸಂಸ್ಥೆಯ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಪ.ರಾ.ಕೃಷ್ಣಮೂರ್ತಿ,‘ಗಾಯನ ಸಮಾಜವು ಸಂಗೀತ ಗಂಗೆಯ ತೀರ್ಥಕ್ಷೇತ್ರವಿದ್ದಂತೆ. ನಮ್ಮ ಮನಸ್ಸು ಮತ್ತು ಬುದ್ಧಿಯನ್ನು ಶುದ್ಧಗೊಳಿಸುತ್ತಾ ನಮ್ಮನ್ನು ಸನ್ಮಾರ್ಗಕ್ಕೆ ಹಚ್ಚುವಂತಹ ಶಕ್ತಿ ಸಂಗೀತಕ್ಕಿದೆ. ನಮ್ಮ ದೇಶ, ಸಂಸ್ಕೃತಿ, ಹಿಂದುತ್ವ ಹಾಗೂ ರಾಷ್ಟ್ರೀಯತೆಯನ್ನು ಜೀವಂತವಾಗಿಟ್ಟಿದ್ದು ಸಂಗೀತ’ ಎಂದು ತಿಳಿಸಿದರು.




ಸಮ್ಮೇಳನಾಧ್ಯಕ್ಷ ಎಂ.ಸೂರ್ಯ ಪ್ರಸಾದ್ ಹಾಗೂ ವೀರೇಶಾನಂದ ಸರಸ್ವತಿ ಶ್ರೀ ಸಮಾಲೋಚನೆ ನಡೆಸಿದರು. ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್‌.ವಿ.ಪ್ರಸಾದ್ (ಎಡ ತುದಿ), ಪ.ರಾ.ಕೃಷ್ಣಮೂರ್ತಿ ಇದ್ದಾರೆ–ಪ್ರಜಾವಾಣಿ ಚಿತ್ರ

### ‘ಸಂಗೀತ ಒತ್ತೆ ಇಡದಿರಿ’

‘ಸಂಗೀತದಿಂದ ನಾನು ಬದುಕಿದ್ದೇನೆ ಎಂಬ ಭಾವನೆ ಪ್ರತಿಯೊಬ್ಬ ಸಂಗೀತಗಾರರಲ್ಲೂ ಇರಬೇಕು. ಸಂಗೀತದ ತತ್ವಗಳನ್ನು ವ್ಯಾವಹಾರಿಕ ಉತ್ಪತ್ತಿಗೆ ಒತ್ತೆ ಇಡಬಾರದು’ ಎಂದು ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಪೀಠಾಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

‘ನಮ್ಮ ಸಂಗೀತಗಾರರು ಹಿಂದೂ ಸನಾತನ ಧರ್ಮವನ್ನು ತೆಗಳುವುದಕ್ಕಾಗಿ ಹೇಗೆ ಪಕ್ಷಾಂತರ ಹಾಗೂ ಧರ್ಮಾಂತರ ಮಾಡಿದ್ದಾರೆ ಎಂಬುದು ತಿಳಿದಿದೆ. ಈ ಸಮಾಜದಿಂದ ಎಲ್ಲವನ್ನೂ ಪಡೆದ ಅವರು ಹೀಗೇಕೆ ಮಾಡುತ್ತಿದ್ದಾರೆ ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು’ ಎಂದರು.

## ‘ರೆಡ್ಡಿ ಸಮುದಾಯದ ಅಭ್ಯರ್ಥಿಯನ್ನು ಬೆಂಬಲಿಸಿ’

ಬೆಂಗಳೂರು: ‘ವಿಧಾನ ಪರಿಷತ್ ಚುನಾವಣೆಯಲ್ಲಿ ರೆಡ್ಡಿ ಸಮುದಾಯದ ಅಭ್ಯರ್ಥಿಗಳನ್ನು ಬೆಂಬಲಿಸಿ’ ಎಂದು ಹರಿಹರದ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಬೆಂಗಳೂರು ನಗರ ಕ್ಷೇತ್ರದಿಂದ ಎಚ್.ಎಸ್.ಗೋಪಿನಾಥ್, ರಾಯಚೂರು– ಕೊಪ್ಪಳದಿಂದ ಶರಣೇಗೌಡ ಪಾಟೀಲ ಬೈಯಾಪುರ ಮತ್ತು ವಿಜಯಪುರ–ಬಾಗಲಕೋಟೆಯಿಂದ ಪಿ.ಎಸ್. ಪೂಜಾರ್ ಸ್ಪರ್ಧಿಸುತ್ತಿದ್ದಾರೆ. ಈ ಮೂವರೂ ಉತ್ತಮ ಆಡಳಿತಗಾರರು.’ ಎಂದರು.

ಕರ್ನಾಟಕ ರೆಡ್ಡಿ ಜನ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎನ್. ಕೃಷ್ಣಾ ರೆಡ್ಡಿ, ‘ಮಸೂದೆಗಳ ಕುರಿತು ಚರ್ಚಿಸಿ, ಉತ್ತಮ ಕಾನೂನು ರೂಪಿಸುವ ಕಾರ್ಯವನ್ನು ಪರಿಷತ್ ಮಾಡುತ್ತದೆ. ಸುಶಿಕ್ಷಿತ ಮತ್ತು ಸಾಮಾಜಿಕ ಕಾಳಜಿ ಇರುವವರನ್ನು ಚುನಾಯಿಸಿ’ ಎಂದರು.



ನಾಗಸಂದ್ರದ ವಿನಾಯಕನಗರ ಹಾಗೂ ವಿಕಾಸನಗರದ ನಿವಾಸಿಗಳು ಕನಕ ಜಯಂತಿಯನ್ನು ಭಾನುವಾರ ಆಚರಿಸಿದರು. ಸ್ಥಳೀಯ ಮುಖಂಡರಾದ ರಾಜಶೇಖರ, ಶಂಕ್ರಪ್ಪ, ಅಶೋಕ ಪಾಟೀಲ, ಬಾಬು, ಚಂದ್ರಣ್ಣ, ಶ್ರೀನಿವಾಸ, ವರದರಾಜ, ಮಲ್ಲೇಶ, ಬೆಟ್ಟೇಗೌಡ, ಗಂಗ ಬೈರಪ್ಪ, ಕೃಷ್ಣಯ್ಯ, ಲಕ್ಮೀನಾರಾಯಣ ಹಾಗೂ ಇತರರು ಇದ್ದಾರೆ

**ನಿಧನ ವಾರ್ತೆ**

### ವೆಂಕಟರಮಣ ಚಿಲ್ಲಾಳೆ



ಬೆಂಗಳೂರು: ಒಡಿಶಾದಲ್ಲಿರುವ ‘ನ್ಯಾಷನಲ್ ಅಲ್ಯೂಮಿನಿಯಂ ಕಂಪನಿಯ (ನ್ಯಾಲ್ಕೊ)’ ನಿವೃತ್ತ ಅಧ್ಯಕ್ಷ ವೆಂಕಟರಮಣ ಚಿಲ್ಲಾಳೆ (72) ಅವರು ನಗರದಲ್ಲಿ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಇಬ್ಬರು ಪುತ್ರರು ಇದ್ದಾರೆ.

‘ನ್ಯಾಲ್ಕೊ’ ಕಾರ್ಯನಿರ್ವಾಹಕ ನಿರ್ದೇಶಕರಾಗಿಯೂ ಅವರು ಕೆಲಸ ಮಾಡಿದ್ದರು. ನಿವೃತ್ತಿ ಬಳಿಕ ಬೆಂಗಳೂರಿಗೆ ಬಂದು ಕೋರಮಂಗಲದಲ್ಲಿ ನೆಲೆಸಿದ್ದರು.

## ‘ಈ ಹೊತ್ತಿಗೆ’ ಪ್ರಶಸ್ತಿ ಕೃತಿಗಳ ಆಹ್ವಾನ

ಬೆಂಗಳೂರು: ‘ಈ ಹೊತ್ತಿಗೆ’ ಟ್ರಸ್ಟ್ 2021–22ನೇ ಸಾಲಿನ ‘ಈ ಹೊತ್ತಿಗೆ ಪ್ರಶಸ್ತಿ’ಗಾಗಿ ಕನ್ನಡದ ಅಪ್ರಕಟಿತ ಕಥಾ ಸಂಕಲನ ಮತ್ತು ಕವನ ಸಂಕಲನಗಳನ್ನು ಆಹ್ವಾನಿಸಿದೆ. ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಈ ವರ್ಷದಿಂದ ಕಾವ್ಯಕ್ಕೂ ಪ್ರಶಸ್ತಿ ಕೊಡಲು ಟ್ರಸ್ಟ್ ನಿರ್ಧರಿಸಿದೆ.

ಕಥಾ ಸಂಕಲನವು 8ರಿಂದ 10 ಕಥೆಗಳನ್ನು, ಕವನ ಸಂಕಲನವು 35ರಿಂದ 40 ಕವನಗಳನ್ನು ಒಳಗೊಂಡಿರಬೇಕು. ಪ್ರಶಸ್ತಿ ಘೋಷಣೆಯಾದ 30 ದಿನಗಳಲ್ಲಿ ಆಯ್ಕೆಯಾದ ಕೃತಿಯು ಮುದ್ರಣಗೊಳ್ಳಬೇಕು. ಆಗ ಮಾತ್ರ ಘೋಷಿತ ಬಹುಮಾನದ ಮೊತ್ತ ಹಾಗೂ ಪ್ರಶಸ್ತಿ ಫಲಕವನ್ನು ಈ ಹೊತ್ತಿಗೆಯ ‘ಹೊನಲು’ ಸಮಾರಂಭದಲ್ಲಿ ನೀಡಲಾಗುತ್ತದೆ. 2022ರ ಮಾರ್ಚ್‌ನಲ್ಲಿ ಈ ಹೊತ್ತಿಗೆ ಹೊನಲು ಸಮಾರಂಭದಲ್ಲಿ ವಿಜೇತರಿಗೆ ಪ್ರಶಸ್ತಿ ನೀಡಲಾಗುವುದು. ಅಪ್ರಕಟಿತ ಕಥಾ ಸಂಕಲನ, ಕವನ ಸಂಕಲನಗಳನ್ನು 2022ರ ಜ.5 ರೊಳಗೆ ಕಳುಹಿಸಬೇಕು ಎಂದು ಟ್ರಸ್ಟ್‌ನ ಜಯಲಕ್ಷ್ಮಿ ಪಾಟೀಲ್ ತಿಳಿಸಿದ್ದಾರೆ.

ವಿಳಾಸ: ‘ಈ ಹೊತ್ತಿಗೆ’, #65, ಮುಗುಳ್ನಗೆ, 3ನೇ ಅಡ್ಡ ರಸ್ತೆ, ಪಿ.ಎನ್.ಬಿ. ನಗರ, ದೊಡ್ಡಕಲ್ಲಸಂದ್ರ, ಕೋಣನಕುಂಟೆ, ಬೆಂಗಳೂರು-560 062 , ದೂ: ಮೊ.8861408585

### ಕೋವಿಡ್ ಲಸಿಕೆ: ಕೆಲವೆಡೆ ಎರಡು ಡೋಸ್ ಕಡ್ಡಾಯದ ನಿರ್ಬಂಧ

# 1.49 ಕೋಟಿ ಮಂದಿಗೆ ಸೌಲಭ್ಯ ವಂಚನೆ?

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ಸರ್ಕಾರ ಜಾರಿಗೊಳಿಸುತ್ತಿದೆ. ವಿವಿಧ ಸೌಲಭ್ಯ ಪಡೆಯಲು ಹಾಗೂ ಕೆಲವು ಸ್ಥಳಗಳ ಪ್ರವೇಶಕ್ಕೆ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಇದು ಕಟ್ಟುನಿಟ್ಟಾಗಿ ಜಾರಿಯಾದರೆ, ರಾಜ್ಯದಲ್ಲಿನ 1.49 ಕೋಟಿ ಮಂದಿ ಸಮಸ್ಯೆ ಎದುರಿಸಲಿದ್ದಾರೆ. ಕೆಲವರು ಸೌಲಭ್ಯಗಳಿಂದಲೂ ವಂಚಿತರಾಗಲಿದ್ದಾರೆ.

ಕೋವಿಡ್ ಹರಡುವಿಕೆ ಹಾಗೂ ಕಾಯಿಲೆಯ ತೀವ್ರತೆ ತಡೆಯಲು ಲಸಿಕೆ ಸಹಕಾರಿ ಎಂದು ವಿಶ್ಲೇಷಿಸಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು, ವಿವಿಧ ಸರ್ಕಾರಿ ಸೌಲಭ್ಯ ಮತ್ತು ಸರ್ಕಾರಿ ಕೋಟಾದಡಿ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಲಸಿಕೆಯ ಎರಡು ಡೋಸ್ ಕಡ್ಡಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ರೂಪಾಂತರಗೊಂಡ ಕೊರೊನಾ ವೈರಾಣು ಓಮೈಕ್ರಾನ್ ರಾಜ್ಯದಲ್ಲಿ ಕಾಣಿಸಿಕೊಂಡ ಬಳಿಕ ಸರ್ಕಾರವು ಇದರ ಹರಡುವಿಕೆ ತಡೆಯಲು ಕೆಲವೊಂದು ನಿರ್ಬಂಧಗಳನ್ನು ಜಾರಿಗೊಳಿಸಿದೆ.

ಪ್ರಜಾವಾಣಿ ವಿಶೇಷ

ಶಾಲಾ–ಕಾಲೇಜುಗಳ ಪೋಷಕರಿಗೆ ಎರಡು ಡೋಸ್ ಲಸಿಕೆ ಕಡ್ಡಾಯಗೊಳಿಸಲಾಗಿದೆ. ಮಾಲ್‌ಗಳು, ಚಿತ್ರಮಂದಿರದಂತಹ ತಾಣಗಳ ಪ್ರವೇಶಕ್ಕೂ ಲಸಿಕೆಯ ಎರಡು ಡೋಸ್ ಪಡೆದಿರಬೇಕು ಎಂಬ ನಿಯಮ ರೂಪಿಸಲಾಗಿದೆ.

ಓಮೈಕ್ರಾನ್ ಪ್ರಸರಣ ತಡೆಗೆ ಜರ್ಮನಿ ಸೇರಿದಂತೆ ಕೆಲ ದೇಶಗಳಲ್ಲಿ ಸಾರ್ವಜನಿಕ ಸ್ಥಳಗಳೂ ಸೇರಿದಂತೆ ಕೆಲವು ತಾಣಗಳ ಪ್ರವೇಶಕ್ಕೆ ಈಗಾಗಲೇ ಲಸಿಕೆಯ ಎರಡು ಡೋಸ್ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ವಾರದಿಂದ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವುದರಿಂದ ರಾಜ್ಯದಲ್ಲೂ ಇದನ್ನು ಜಾರಿಗೊಳಿಸಬೇಕೆಂದು ಸರ್ಕಾರ ರಚಿಸಿದ ತಜ್ಞರ ಸಮಿತಿಯೂ ಸಲಹೆ ನೀಡಿದೆ. ಸಮಿತಿ ವರದಿ ಪ್ರಕಾರ ರಾಜ್ಯದಲ್ಲಿ 4.64 ಕೋಟಿ ಮಂದಿ 18 ವರ್ಷ ಮೇಲ್ಪಟ್ಟವರಿದ್ದಾರೆ.

7.98 ಲಕ್ಷ ಮಂದಿ ಹೊರಗೆ: ರಾಜ್ಯದಲ್ಲಿ 4.56 ಕೋಟಿ ಮಂದಿ ಈವರೆಗೆ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ 3.15 ಕೋಟಿ ಮಂದಿ ಎರಡೂ ಡೋಸ್ ಹಾಕಿಸಿಕೊಂಡಿದ್ದಾರೆ. 18 ವರ್ಷ ಮೇಲ್ಪಟ್ಟವರಲ್ಲಿ 7.98 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿಲ್ಲ. 1.40 ಕೋಟಿ ಮಂದಿ ಎರಡನೇ ಡೋಸ್ ಪಡೆದಿಲ್ಲ. ಅವರಿಗೆ ಮಾಲ್‌ಗಳು, ಚಿತ್ರಮಂದಿರ ಸೇರಿದಂತೆ ವಿವಿಧೆಡೆ ಪ್ರವೇಶ ನೀಡಲು ನಿರ್ಬಂಧ ಅಡ್ಡಿಯಾಗಿದೆ.

ರಾಜ್ಯದಲ್ಲಿ 2.38 ಕೋಟಿಗೂ ಅಧಿಕ ಮಂದಿ 18 ವರ್ಷದೊಳಗಿನವರಿದ್ದಾರೆ. ಇವರಿಗೆ ಲಸಿಕೆ ವಿತರಣೆ ಪ್ರಾರಂಭವಾಗಿಲ್ಲ. ಹೀಗಾಗಿ, ಮೂರನೇ ಅಲೆ ಕಾಣಿಸಿಕೊಂಡಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಬಗ್ಗೆಯೂ ತಜ್ಞರ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕೆ ಕ್ರಮವಾಗಿ ಪರೀಕ್ಷೆ ಹಾಗೂ ಲಸಿಕೆಗೆ ಆದ್ಯತೆ ನೀಡಲಾಗಿದೆ. 18 ವರ್ಷಗಳು ಮೇಲ್ಪಟ್ಟವರಲ್ಲಿ ಶೇ 93 ರಷ್ಟು ಮಂದಿ ಮೊದಲ ಡೋಸ್ ಹಾಗೂ ಶೇ 63 ರಷ್ಟು ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ವೈರಾಣುವಿನ ವಿರುದ್ಧ ಹೋರಾಡಲು ಪ್ರತಿಯೊಬ್ಬರೂ ಎರಡೂ ಡೋಸ್ ಪಡೆದುಕೊಳ್ಳಬೇಕು. ಲಸಿಕೆ ಕಡ್ಡಾಯಗೊಳಿಸಬೇಕೆಂದು ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಶಿಫಾರಸು ಮಾಡಿದ್ದಾರೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

### ಎರಡನೇ ಡೋಸ್‌ಗೆ ಹೆಚ್ಚಿದ ಬೇಡಿಕೆ

ಕೋವಿಡ್ ಎರಡನೇ ಅಲೆಯು ನಿಯಂತ್ರಣಕ್ಕೆ ಬಂದ ಬಳಿಕ ಹಲವರು ಅವಧಿ ಮುಗಿದಿದ್ದರೂ ಎರಡನೇ ಡೋಸ್ ಪಡೆದಿರಲಿಲ್ಲ. ರಾಜ್ಯದಲ್ಲಿ ಓಮೈಕ್ರಾನ್ ಪತ್ತೆಯಾದ ಬಳಿಕ ಹಾಗೂ ಪ್ರಕರಣಗಳ ಸಂಖ್ಯೆ ಹೆಚ್ಚಳವಾದ ನಂತರ ಕೋವಿಡ್ ಲಸಿಕೆಯ ಎರಡನೇ ಡೋಸ್ ಪಡೆದುಕೊಳ್ಳುವವರ ಸಂಖ್ಯೆ ಅಧಿಕಗೊಂಡಿದೆ. ಎರಡು ವಾರದಿಂದ ಪ್ರತಿನಿತ್ಯ ಸರಾಸರಿ 5 ಲಕ್ಷ ಡೋಸ್ ಲಸಿಕೆ ವಿತರಿಸಲಾಗುತ್ತಿದೆ. 4,500ಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ಒದಗಿಸಲಾಗುತ್ತಿದೆ.

18 ರಿಂದ 44 ವರ್ಷದೊಳಗಿನವರಲ್ಲಿ 2.60 ಕೋಟಿ ಮಂದಿ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಗೂ 1.61 ಕೋಟಿ ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.79 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.38 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

> ಕೋವಿಡ್ ಲಸಿಕೆಯು ಸೋಂಕಿನ ಹರಡುವಿಕೆ ಹಾಗೂ ಕಾಯಿಲೆಯ ತೀವ್ರತೆ ತಡೆಯಲು ಸಹಕಾರಿ. ಎಲ್ಲರೂ ಆದಷ್ಟು ಬೇಗ ಎರಡೂ ಡೋಸ್ ಲಸಿಕೆ ಹಾಕಿಸಿಕೊಳ್ಳಬೇಕು
>
> **ಡಾ.ಸಿ. ನಾಗರಾಜ್,** ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

> ತಜ್ಞರ ಶಿಫಾರಸಿನಂತೆ ಚಿತ್ರಮಂದಿರ, ಮಾಲ್‌ಗಳು ಸೇರಿದಂತೆ ಕೆಲವೆಡೆ ಪ್ರವೇಶಕ್ಕೆ ಲಸಿಕೆಯ ಎರಡು ಡೋಸ್ ಪಡೆದಿರುವುದು ಕಡ್ಡಾಯ. ಸರ್ಕಾರಿ ಸೌಲಭ್ಯಕ್ಕೆ ಇದನ್ನು ಕಡ್ಡಾಯ ಮಾಡುವುದಿಲ್ಲ
>
> **ಡಿ. ರಂದೀಪ್,** ಆರೋಗ್ಯ ಇಲಾಖೆ ಆಯುಕ್ತ

## ಸುದ್ದಿ 2 ನಿಮಿಷ

### ಸೈನಿಕರಿಗೆ ಕಸಾಪ ಗೌರವ ಸದಸ್ಯತ್ವ: ಮಹೇಶ್ ಜೋಷಿ

ಮೈಸೂರು: ಹಾಲಿ ಹಾಗೂ ಮಾಜಿ ಸೈನಿಕರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಗೌರವ ಸದಸ್ಯತ್ವವನ್ನು ಶುಲ್ಕ ಇಲ್ಲದೆ ನೀಡಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ ತಿಳಿಸಿದರು.

ಭಾನುವಾರ ನಗರದಲ್ಲಿ ಎಸ್. ಉಮೇಶ್ ಅವರ ‘ಸಿಯಾಚಿನ್’ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಪರಿಷತ್ತಿನ ಸದಸ್ಯತ್ವ ಸಂಖ್ಯೆಯನ್ನು ಒಂದು ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ, ಮುಂದಿನ ದಿನಗಳಲ್ಲಿ ಈ ಕೆಲಸಕ್ಕೆ ಆದ್ಯತೆ ನೀಡುವುದರ ಜತೆಗೆ ಇತರ ಕನ್ನಡ ಕಾಯಕದಲ್ಲಿ ತೊಡಗಿಸಿಕೊಳ್ಳಲಾಗುವುದು’ ಎಂದು ಅವರು ಹೇಳಿದರು. ಈಗಾಗಲೇ ಹಲವು ಕೆಲಸಗಳನ್ನು ಆರಂಭಿಸಲಾಗಿದೆ ಎಂದರು.



### ಪ್ರಾದೇಶಿಕ ಕೌಶಲ ಸ್ಪರ್ಧೆ: ರಾಜ್ಯಕ್ಕೆ 14 ಚಿನ್ನ, 13 ಬೆಳ್ಳಿ ಪದಕ

ಬೆಂಗಳೂರು: ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ನಡೆದ ದಕ್ಷಿಣ ಭಾರತ ಮಟ್ಟದ ಪ್ರಾದೇಶಿಕ ಕೌಶಲ ಸ್ಪರ್ಧೆಯಲ್ಲಿ ಕರ್ನಾಟಕ ತಂಡ 14 ಚಿನ್ನ ಮತ್ತು 13 ಬೆಳ್ಳಿ ಪದಕಗಳ ಸಹಿತ ಒಟ್ಟು 27 ಪದಕಗಳನ್ನು ಮಡಿಲಿಗೆ ಹಾಕಿಕೊಂಡು ಪ್ರಥಮ ಸ್ಥಾನ ತನ್ನದಾಗಿಸಿಕೊಂಡಿದೆ.

ಕರ್ನಾಟಕವೂ ಸೇರಿದಂತೆ ಆಂಧ್ರಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಮತ್ತು ಒಡಿಶಾ ರಾಜ್ಯದ ತಂಡಗಳು ಈ ಪ್ರಾದೇಶಿಕ ಮಟ್ಟದ ಸುತ್ತಿನ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು.

ಈ ಸ್ಪರ್ಧಿಗಳಲ್ಲಿ 17 ಅಭ್ಯರ್ಥಿಗಳಿಗೆ ಕರ್ನಾಟಕ ರಾಜ್ಯ ಕೌಶಲಾಭಿವೃದ್ಧಿ ನಿಗಮ ಮತ್ತು 10 ಸ್ಪರ್ಧಿಗಳಿಗೆ ಸರ್ಕಾರಿ ಉಪಕರಣ ಕಾರ್ಯಾಗಾರದ ವತಿಯಿಂದ ತರಬೇತಿ ನೀಡಲಾಗಿತ್ತು. ರಾಜ್ಯದಿಂದ ಈ ಸ್ಪರ್ಧೆಯಲ್ಲಿ ಒಟ್ಟು 69 ಸ್ಪರ್ಧಿಗಳು ಭಾಗವಹಿಸಿದ್ದು, 35 ಬಗೆಯ ಕೌಶಲಗಳಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿದ್ದರು.

ರಾಜ್ಯದ ಸ್ಪರ್ಧಿಗಳು ಮೆಕಾಟ್ರಾನಿಕ್ಸ್, ಮುದ್ರಣ ತಂತ್ರಜ್ಞಾನ, ಆಭರಣ ತಯಾರಿಕೆ, ಕೈಗಾರಿಕಾ ನಿಯಂತ್ರಣ, ಕಾರ್ ಪೇಂಟಿಂಗ್, ಅಡುಗೆ ತಯಾರಿಕೆ, ಪ್ಲಾಸ್ಟಿಕ್ ಡೈ ಎಂಜಿನಿಯರಿಂಗ್, ಬೇಕರಿ ಪದಾರ್ಥಗಳ ತಯಾರಿಕೆ ಮತ್ತು ಕ್ಲೌಡ್ ಕಂಪ್ಯೂಟಿಂಗ್ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದಿದ್ದಾರೆ.

ಉಳಿದಂತೆ ಎಂ-ಕ್ಯಾಡ್, ಕೇಶವಿನ್ಯಾಸ, ಗ್ರಾಫಿಕ್ ವಿನ್ಯಾಸ, ವಿಷುಯಲ್ ಮರ್ಕಂಡೈಸಿಂಗ್, 3ಡಿ ಡಿಜಿಟಲ್ ಗೇಮ್ ಆರ್ಟ್ ಮತ್ತು ವಾಟರ್ ಟೆಕ್ನಾಲಜಿ ಮತ್ತಿತರ ವಿಭಾಗಗಳಲ್ಲಿ ಬೆಳ್ಳಿ ಪದಕ ಮುಡಿಗೇರಿಸಿಕೊಂಡಿದ್ದಾರೆ.

### ಅಧಿವೇಶನ: ಮಿತವ್ಯಯಕ್ಕೆ ಕ್ರಮ

ಬೆಂಗಳೂರು: ಓಮೈಕ್ರಾನ್ ಆತಂಕದ ಮಧ್ಯೆ, ಬೆಳಗಾವಿಯಲ್ಲಿ ಇದೇ 13ರಿಂದ 24 ರವರೆಗೆ ಚಳಗಾಲದ ಅಧಿವೇಶನ ನಡೆಸಲು ರಾಜ್ಯ ಸರ್ಕಾರ ಮುಂದಾಗಿದೆ. ಕೊರೊನಾ ಮುನ್ನೆಚ್ಚರಿಕೆ ಕ್ರಮದ ಜೊತೆಗೆ, ಮಿತವ್ಯಯದಲ್ಲಿ ಅಧಿವೇಶನ ನಡೆಸಲು ನಿರ್ಧರಿಸಲಾಗಿದೆ.

ಶಾಸಕರು, ಅಧಿಕಾರಿಗಳು, ಸಿಬ್ಬಂದಿ, ಮಾಧ್ಯಮ ಪ್ರತಿನಿಧಿಗಳ ವಸತಿ ವ್ಯವಸ್ಥೆಗೆ ವಿವಿಧ ಹೋಟೆಲ್‌ಗಳಲ್ಲಿ ಒಟ್ಟು 1,740 ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ಶಾಸಕರುಗಳಿಗೆ ಈ ಬಾರಿ ಹೋಟೆಲ್ ಕೊಠಡಿಗಳು ಬೆಳಗಾವಿಯಲ್ಲೇ ಲಭ್ಯವಿದೆ. ಹೀಗಾಗಿ ಹುಬ್ಬಳ್ಳಿ, ಧಾರವಾಡದಲ್ಲಿ ವಸತಿ ವ್ಯವಸ್ಥೆ ಮಾಡುವ ಅನಿವಾರ್ಯತೆ ಬಂದಿಲ್ಲ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 124.80 | 5,869 | 5,436 |
| ಹಾರಂಗಿ | 2,859 | 2,856.18 | 135 | 1,050 |
| ಕಬಿನಿ | 2284.00 | 2,283.60 | 1,400 | 700 |
| ಹೇಮಾವತಿ | 2,922 | 2,913.93 | 2,505 | 1,890 |
| ಲಿಂಗನಮಕ್ಕಿ | 1,819 | 1,811.95 | 1,243 | 00 |
| ಸೂಪಾ (ಮೀ) | 564 | 554.62 | 901 | 4,338 |
| ಮಾಣಿ | 594.36 | 586.38 | 00 | 00 |
| ತುಂಗಭದ್ರಾ | 1,633 | 1,632.99 | 8,726 | 8,486 |
| ಮಲಪ್ರಭಾ | 2079.5 | 2,077.20 | 569 | 569 |
| ಘಟಪ್ರಭಾ | 2175 | 2,166.15 | 618 | 176 |
| ಭದ್ರಾ | 186 | 185.11 | 1,207 | 1,207 |
| ಆಲಮಟ್ಟಿ (ಮೀ) | 519.6 | 519.50 | 28,797 | 580 |
| ನಾರಾಯಣಪುರ (ಮೀ) | 492.25 | 492.24 | 2,450 | 620 |

* ನೆಲಮಟ್ಟದಿಂದ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ



## ಕಂಬಳದ ದೃಶ್ಯವೈಭವ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಹೊಕ್ಕಾಡಿಗೋಳಿಯಲ್ಲಿ ಭಾನುವಾರ ಜರುಗಿದ ವೀರ ವಿಕ್ರಮ ಕಂಬಳದಲ್ಲಿ ಕನೆಹಲಗೆ ವಿಭಾಗದಲ್ಲಿ ಮುಸ್ಸಂಜೆಯ ವೇಳೆ ನೀರನ್ನು ಚಿಮ್ಮಿಸುತ್ತಾ ಓಡಿದ ಕೋಣಗಳು –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್



## ಪೊಲೀಸರ ವಶದಲ್ಲಿದ್ದ ವ್ಯಕ್ತಿ ಸಾವು: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸಿಇಎನ್ ಠಾಣೆ ಪೊಲೀಸರು ವಶಕ್ಕೆ ತೆಗೆದುಕೊಂಡು ಲಾಡ್ಜ್‌ನಲ್ಲಿ ಇಟ್ಟು ವಿಚಾರಣೆ ನಡೆಸುತ್ತಿದ್ದ ವ್ಯಕ್ತಿ ಭಾನುವಾರ ಮುಂಜಾನೆ ಮೃತಪಟ್ಟಿದ್ದಾರೆ. ‘ಪೊಲೀಸರೇ ಕೊಲೆ ಮಾಡಿದ್ದಾರೆ’ ಎಂದು ಆರೋಪಿಸಿ ಸಂಬಂಧಿಕರು ಜಿಲ್ಲಾ ಆಸ್ಪತ್ರೆಯ ಮುಂದೆ ಪ್ರತಿಭಟಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಬಳಿಯ ಬಹದ್ದೂರು ಘಟ್ಟದ ರಾಮಚಂದ್ರ–ಚೌಡಮ್ಮ ದಂಪತಿಯ ಮಗ ಕುಮಾರ್ (35) ಮೃತಪಟ್ಟವರು.

‘ಕುಮಾರ್ ವಿರುದ್ಧ ನ.18ರಂದು ಬೆಂಗಳೂರಿನ ವ್ಯಕ್ತಿಯೊಬ್ಬರು ನೀಡಿದ ದೂರಿನಂತೆ ದಾವಣಗೆರೆ ಸಿಇಎನ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಕುಮಾರ್ ವಕೀಲರ ಜತೆಗೆ ಮಾತನಾಡಿದ್ದ. ಶನಿವಾರ ಸಂಜೆ ವಕೀಲರಾದ ಘಾತ್ಯರಾಜನ್ ಮತ್ತು ಪ್ರಕಾಶ್ ಅವರನ್ನು ಚಿತ್ರದುರ್ಗದಲ್ಲಿ ಭೇಟಿಯಾಗಿದ್ದರು. ಬಳಿಕ ಮನೆಗೆ ಹೊರಟಿದ್ದ ವೇಳೆ ದಾವಣಗೆರೆ ಸಿಇಎನ್ ಪೊಲೀಸ್ ಇನ್‌ಸ್ಪೆಕ್ಟರ್ ಗಿರೀಶ್ ಮತ್ತು ಸಿಬ್ಬಂದಿ ಕೊಟ್ರೇಶ್ ಅವರು ಕುಮಾರ್ ಅವರನ್ನು ವಶಕ್ಕೆ ತೆಗೆದುಕೊಂಡು ದಾವಣಗೆರೆಗೆ ಕರೆದುಕೊಂಡು ಬಂದಿದ್ದರು. ಠಾಣೆಗೆ ಕರೆದೊಯ್ಯದೇ ಶ್ರೀ ಲಾಡ್ಜ್‌ನಲ್ಲಿ ಇಟ್ಟಿದ್ದರು. ಬೆಳಿಗ್ಗೆ ಲಾಡ್ಜ್‌ನಿಂದ ಜಿಲ್ಲಾ ಆಸ್ಪತ್ರೆಗೆ ಮೃತ ದೇಹವನ್ನು ತೆಗೆದುಕೊಂಡು ಹೋಗಿ ದಾಖಲು ಮಾಡಿದ್ದಾರೆ. ಆಸ್ಪತ್ರೆಗೆ ತರುವ ಮೊದಲೇ ಮೃತಪಟ್ಟಿರುವುದಾಗಿ ವೈದ್ಯರೂ ತಿಳಿಸಿದ್ದಾರೆ. ಇದು ಕಸ್ಟೋಡಿಯಲ್ ಡೆತ್’ ಎಂದು ಜಿಲ್ಲಾ ಆಸ್ಪತ್ರೆ ಎದುರು ಪ್ರತಿಭಟಿಸಿದ ಸಂಬಂಧಿಕರು ಮತ್ತು ಭಾರತೀಯ ದಲಿತ ಸಂಘರ್ಷ ಸಮಿತಿ ಸದಸ್ಯರು ದೂರಿದರು.

‘ಪೊಲೀಸರೇ ಕೊಲೆ ಮಾಡಿದ್ದಾರೆ. ಹಾಗಾಗಿ ಇನ್‌ಸ್ಪೆಕ್ಟರ್ ಗಿರೀಶ್ ಮತ್ತು ಸಿಬ್ಬಂದಿ ಕೊಟ್ರೇಶ್ ಅವರನ್ನು ಜೈಲಿಗೆ ಕಳುಹಿಸಬೇಕು. ಕುಮಾರ್ ಅವರ ಪತ್ನಿಗೆ ಸರ್ಕಾರಿ ಕೆಲಸ ನೀಡಬೇಕು. ₹ 50 ಲಕ್ಷ ಪರಿಹಾರ ನೀಡಬೇಕು. ಎರಡೂವರೆ ವರ್ಷದ ಹೆಣ್ಣು ಮಗು, ಒಂದೂವರೆ ವರ್ಷದ ಗಂಡು ಮಗು ಇದೆ. ಅವರ ಶೈಕ್ಷಣಿಕ ವೆಚ್ಚವನ್ನು ಭರಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕುಮಾರ್ ಮನೆಯ ಸದಸ್ಯರು, ಸಂಬಂಧಿಕರ ರೋದನ ಮುಗಿಲು ಮುಟ್ಟಿತ್ತು.

### ತನಿಖೆ ನಡೆಸುತ್ತೇವೆ: ಎಸ್‌ಪಿ

‘ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕುಮಾರ್ ಅವರನ್ನು ಸಿಬ್ಬಂದಿ ಕರೆದಾಗ ಅವರು ಬಂದಿದ್ದರು. ಅವರು ಶ್ರೀ ಲಾಡ್ಜ್‌ನಲ್ಲಿ ಮೃತಪಟ್ಟಿದ್ದಾರೆ. ಸಂಬಂಧಿಕರು ಏನು ಆರೋಪ ಮಾಡುತ್ತಿದ್ದಾರೋ ಅದರಂತೆ ಪ್ರಕರಣ ದಾಖಲಿಸಿ, ತನಿಖೆ ಮಾಡುತ್ತೇವೆ. ಬಳಿಕ ಸಿಐಡಿ ಪೊಲೀಸರು ತನಿಖೆ ನಡೆಸಲಿದ್ದಾರೆ’ ಎಂದು ಎಸ್‌ಪಿ ಸಿ.ಬಿ. ರಿಷ್ಯಂತ್ ತಿಳಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

### ಬೆಂಗಳೂರು ಆರ್ಚ್ ಬಿಷಪ್ ಪೀಟರ್ ಮಚಾದೊ ಸವಾಲು

## ಮತಾಂತರ ಆರೋಪಕ್ಕೆ ಸಾಕ್ಷ್ಯ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೈಸ್ತ ಮಿಷನರಿಗಳು ನಡೆಸುತ್ತಿರುವ ಶಾಲೆ, ಆಸ್ಪತ್ರೆಗಳಲ್ಲಿ ಮತಾಂತರ ನಡೆಯುತ್ತಿರುವುದಕ್ಕೆ ಸಾಕ್ಷ್ಯ ನೀಡಿದರೆ ಅಂತಹ ಸಂಸ್ಥೆಗಳನ್ನೇ ಮುಚ್ಚಲು ಸಿದ್ಧ ಎಂದು ಬೆಂಗಳೂರು ಧರ್ಮಪ್ರಾಂತ್ಯದ ಆರ್ಚ್ ಬಿಷಪ್ ಪೀಟರ್ ಮಚಾದೊ ಹೇಳಿದರು.



ಪೀಟರ್ ಮಚಾದೊ

ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್, ಯುನೈಟೆಡ್ ಕ್ರಿಶ್ಚಿಯನ್ ಫೋರಂ ಮತ್ತು ಯುನೈಟೆಡ್ ಎಗೆನೆಸ್ಟ್ ಹೇಟ್ ಸಂಘಟನೆಗಳು ಜಂಟಿಯಾಗಿ ಸಿದ್ಧಪಡಿಸಿರುವ ‘ಭಾರತದಲ್ಲಿ ದಾಳಿಗೊಳಗಾದ ಕ್ರೈಸ್ತರು– ಒಂದು ಸತ್ಯಶೋಧನಾ ವರದಿ’ ಬಿಡುಗಡೆ ಕಾರ್ಯಕ್ರಮದಲ್ಲಿ ಭಾನುವಾರ ಅವರು ಮಾತನಾಡಿದರು.

‘ಶಾಲೆ, ಆಸ್ಪತ್ರೆಗಳಲ್ಲಿ ಮತಾಂತರ ನಡೆಸಲಾಗುತ್ತಿದೆ ಎಂಬ ಸುಳ್ಳು ಆರೋಪ ಮಾಡಲಾಗುತ್ತಿದೆ. ಕೋವಿಡ್ ಕಾಲದಲ್ಲಿ ಸೋಂಕಿತರಿಗೆ ತಮ್ಮ ಸಂಸ್ಥೆಗಳ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಯಿತು. ಆಗ, ಚಿಕಿತ್ಸೆಯ ಆಮಿಷವೊಡ್ಡಿ ಮತಾಂತರಕ್ಕೆ ಯತ್ನಿಸಬಹುದಿತ್ತು. ಆದರೆ, ಕ್ರೈಸ್ತ ಧಾರ್ಮಿಕ ಸಂಸ್ಥೆಗಳು ಎಂದೂ ಅಂತಹ ಕೆಲಸ ಮಾಡುವುದಿಲ್ಲ’ ಎಂದರು.

‘ಈಗ ಮತಾಂತರ ನಿಷೇಧ ಮಸೂದೆ ಹೆಸರಿನಲ್ಲಿ ಕ್ರೈಸ್ತ ಧರ್ಮೀಯರನ್ನು ನಿಯಂತ್ರಿಸುವ ಪ್ರಯತ್ನ ಆರಂಭವಾಗಿದೆ. ನಾವು ಎಲ್ಲದಕ್ಕಿಂತಲೂ ಮೊದಲು ಭಾರತೀಯರು. ನಮ್ಮ ಸಂವಿಧಾನ ಅತ್ಯುತ್ತಮವಾದುದು. ಧರ್ಮ ಪ್ರಚಾರದಲ್ಲಿ ಮುಕ್ತ ಅವಕಾಶ ವಿದೆ. ಸ್ವಯಂ ಇಚ್ಛೆಯಿಂದ ಮತಾಂತರಕ್ಕೂ ಅವಕಾಶಗಳಿವೆ’ ಎಂದು ಹೇಳಿದರು.

‘ಸಬ್ ಕೆ ಸಾತ್ ಸಬ್ ಕಾ ವಿಕಾಸ್, ಸಬ್ ವಿಶ್ವಾಸ್ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿದ್ದಾರೆ. ಅವರು ಹೇಳುವ ಮಾತು ಚೆನ್ನಾಗಿದೆ. ಆದರೆ, ಒಂದು ವರ್ಷದಲ್ಲಿ ದೇಶದಲ್ಲಿ ಕ್ರೈಸ್ತರು, ಮುಸ್ಲಿಮರು ಮತ್ತು ದಲಿತರ ಮೇಲೆ ನಡೆದಿರುವ ದೌರ್ಜನ್ಯಗಳನ್ನು ಗಮನಿಸಬೇಕು. ನಾವು ಸರ್ಕಾರದಿಂದ ಯಾವ ನೆರವನ್ನೂ ಕೇಳುವುದಿಲ್ಲ. ಎಲ್ಲ ಧರ್ಮದವರೂ ಸಮಾನವಾಗಿ ಬದುಕುವ ಸಂವಿಧಾನಬದ್ಧ ಹಕ್ಕು ಬೇಕು’ ಎಂದು ಆಗ್ರಹಿಸಿದರು.

**ಒಂಬತ್ತು ತಿಂಗಳಲ್ಲಿ 305 ದಾಳಿ:** 2021ರ ಜನವರಿ 1ರಿಂದ ಸೆಪ್ಟೆಂಬರ್ 30ರವರೆಗೆ ದೇಶದ ವಿವಿಧೆಡೆ ಕ್ರೈಸ್ತ ಧರ್ಮೀಯರ ಮೇಲೆ ನಡೆದಿರುವ ದಾಳಿಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯುಳ್ಳ ವರದಿಯನ್ನು ವಕೀಲ ಬಿ.ಟಿ. ವೆಂಕಟೇಶ್ ಬಿಡುಗಡೆ ಮಾಡಿದರು.

273 ದಿನಗಳಲ್ಲಿ ದೇಶದ ವಿವಿಧೆಡೆ ಕ್ರೈಸ್ತ ಧರ್ಮೀಯರ ಮೇಲೆ 305 ದಾಳಿಗಳು ನಡೆದಿವೆ. ಉತ್ತರ ಪ್ರದೇಶದಲ್ಲಿ 66, ಛತ್ತೀಸ್‌ಗಢದಲ್ಲಿ 47, ಕರ್ನಾಟಕದಲ್ಲಿ 32 ಪ್ರಕರಣಗಳು ನಡೆದಿವೆ ಎಂಬ ಮಾಹಿತಿ ವರದಿಯಲ್ಲಿದೆ.

‘ನೀವು ದೇಶದ ಎರಡನೇ ದರ್ಜೆಯ ನಾಗರಿಕರು ಎಂದು ಹೇಳುವುದೇ ಮತಾಂತರ ನಿಷೇಧ ಕಾಯ್ದೆಯನ್ನು ತರುವ ಪ್ರಯತ್ನದ ಹಿಂದಿರುವ ಉದ್ದೇಶ’ ಎಂದು ವೆಂಕಟೇಶ್ ಹೇಳಿದರು.

**ಮುಖ್ಯಾಂಶಗಳು**

- ಸರ್ಕಾರದ ನೆರವು ಬೇಡ, ಸಮಾನ ಬದುಕಿನ ಹಕ್ಕು ಬೇಕು
- 9 ತಿಂಗಳಲ್ಲಿ ನಡೆದ ದಾಳಿಯ ವರದಿ ಬಿಡುಗಡೆ ಮಾಡಿದ ವಕೀಲ

## ಸರ್ಕಾರಿ ಗೌರವದೊಂದಿಗೆ ಶಿವರಾಂ ಅಂತ್ಯಕ್ರಿಯೆ

ಬೆಂಗಳೂರು: ಶನಿವಾರ ನಿಧನರಾದ ನಟ ಎಸ್.ಶಿವರಾಂ(83) ಅವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಬನಶಂಕರಿಯ ಚಿತಾಗಾರದಲ್ಲಿ ಸರ್ಕಾರಿ ಗೌರವದೊಂದಿಗೆ ನಡೆಯಿತು.

ಮನೆಯಲ್ಲಿ ಕುಸಿದು ಬಿದ್ದಿದ್ದ ಶಿವರಾಂ ಅವರ ತಲೆಗೆ ಏಟಾಗಿ ಮಿದುಳಿಗೆ ಹಾನಿಯಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಮಧ್ಯಾಹ್ನ ನಗರದ ಪ್ರಶಾಂತ್ ಆಸ್ಪತ್ರೆಯಲ್ಲಿ ಅವರು ಕೊನೆಯುಸಿರೆಳೆದಿದ್ದರು.

ಬನಶಂಕರಿಯ ಚಿತಾಗಾರದಲ್ಲಿ, ಚಾಮರಾಜಪೇಟೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಗುರುಸ್ವಾಮಿ, ಶಿವರಾಂ ಅವರ ಶಿಷ್ಯರಾಗಿದ್ದ ಎನ್.ಜಯರಾಮ ಸ್ವಾಮಿ ಅವರ ಸಮ್ಮುಖದಲ್ಲಿ ಕರ್ನಾಟಕದ ಅಯ್ಯಪ್ಪ ಭಕ್ತರ ಪರವಾಗಿ ಶಿವರಾಂ ಅವರ ಪಾರ್ಥಿವ ಶರೀರಕ್ಕೆ ಪಂಚಾಮೃತ, ಗಂಧ, ಹಾಲು, ಪುಷ್ಪ, ವಿಭೂತಿ, ಜೇನುತುಪ್ಪ, ತುಪ್ಪದ ಅಭಿಷೇಕ ಮಾಡಿ ಕರ್ಪೂರ ಬೆಳಗಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಪೊಲೀಸ್ ಗೌರವದ ಬಳಿಕ ಸರ್ಕಾರದ ಪರವಾಗಿ ಸಚಿವ ಆರ್.ಅಶೋಕ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು. ಪುತ್ರರಾದ ರವಿಶಂಕರ್ ಹಾಗೂ ಲಕ್ಷ್ಮೀಶ ಅವರು ಬ್ರಾಹ್ಮಣ ಸಂಪ್ರದಾಯದಂತೆ ಅಂತಿಮ ವಿಧಿ-ವಿಧಾನಗಳನ್ನು ನೆರವೇರಿಸಿ, ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಶನಿವಾರ ಶಿವರಾಂ ಅವರ ನಿವಾಸಕ್ಕೆ ಭೇಟಿ ನೀಡಿ ಸಿನಿಮಾ ಹಾಗೂ ರಾಜಕೀಯ ಕ್ಷೇತ್ರದ ಹಲವು ಗಣ್ಯರು ಶಿವರಾಂ ಅವರಿಗೆ ಅಂತಿಮ ನಮನ ಸಲ್ಲಿಸಿದ್ದರು. ಭಾನುವಾರ ಪಾರ್ಥಿವ ಶರೀರವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಪ್ರೊ.ಬರಗೂರು ರಾಮಚಂದ್ರಪ್ಪ, ಟಿ.ಎನ್. ಸೀತಾರಾಮ್, ಭಾರತಿ ವಿಷ್ಣುವರ್ಧನ್, ಸುಧಾರಾಣಿ, ತಾರಾ ಅನುರಾಧಾ ಸೇರಿದಂತೆ ಚಿತ್ರರಂಗದ ಪ್ರಮುಖರು ಅಂತಿಮ ನಮನ ಸಲ್ಲಿಸಿದರು. ಸಮರ್ಥನಂ ಟ್ರಸ್ಟ್‌ನ ಅಂಧ ಮಕ್ಕಳು ಗೀತನಮನ ಸಲ್ಲಿಸಿದರು.



ಶನಿವಾರ ನಿಧನರಾದ ನಟ ಶಿವರಾಂ ಅವರ ಅಂತ್ಯಕ್ರಿಯೆ ಭಾನುವಾರ ಬೆಂಗಳೂರಿನ ಬನಶಂಕರಿಯ ಚಿತಾಗಾರದಲ್ಲಿ ನಡೆಯಿತು. ಪುತ್ರರಾದ ರವಿಶಂಕರ್ ಮತ್ತು ಲಕ್ಷ್ಮೀಶ ಅಂತಿಮ ವಿಧಿ ವಿಧಾನ ನೆರವೇರಿಸಿದರು –ಪ್ರಜಾವಾಣಿ ಚಿತ್ರ

### ಕೆಇಎ: ವೈದ್ಯಕೀಯ ತಪಾಸಣೆ 8ಕ್ಕೆ

ಬೆಂಗಳೂರು: ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆಯನ್ನು ಇದೇ 8 ಮತ್ತು 9ರಂದು ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

2021ನೇ ಸಾಲಿಗೆ ಎಂಜಿನಿಯರಿಂಗ್ ಎರಡನೇ ವರ್ಷ ಪ್ರವೇಶ ಪಡೆಯುವ ಡಿಪ್ಲೊಮಾ ಅಭ್ಯರ್ಥಿಗಳು ಹಾಗೂ ಎಂಬಿಎ, ಎಂಸಿಎ, ಎಂ.ಇ ಮತ್ತು ಎಂ.ಟೆಕ್. ಪ್ರವೇಶ ಪಡೆಯುವವರ ವೈದ್ಯಕೀಯ ತಪಾಸಣೆ ನಡೆಸಲಾಗುವುದು ಎಂದು ತಿಳಿಸಿದೆ.

ಬೆಳಿಗ್ಗೆ 11ಕ್ಕೆ ಬೆಂಗಳೂರಿನ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ತಪಾಸಣೆ ನಡೆಯಲಿದೆ. ಅಂಗವಿಕಲ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣಪತ್ರ, ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕು. ಎಂದು ತಿಳಿಸಿದೆ.



## ಒಳನೋಟ

### ಪ್ರಾಧಿಕಾರ: ಅಕ್ರಮ ಅಪಾರ

ಬೆಂಗಳೂರು:‘ಪ್ರಾಧಿಕಾರ: ಅಕ್ರಮ ಅಪಾರ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಡಿ.5) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

### ಮಂದಗತಿಯಲ್ಲಿ ಕಾರ್ಯವೈಖರಿ

ಜನಸಾಮಾನ್ಯರಿಗೂ ಸ್ವಂತ ಸೂರು ಕಲ್ಪಿಸುವ ಉದ್ದೇಶದಿಂದ ಪ್ರಾರಂಭವಾದ ಪ್ರಾಧಿಕಾರಗಳು ನಿಧಾನಗತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅರ್ಜಿದಾರ ಈಗ ಅರ್ಜಿ ಸಲ್ಲಿಸಿದರೆ, ಅವರ ಮಕ್ಕಳ ಕಾಲಕ್ಕೆ ನಿವೇಶನ ಹಂಚಿಕೆಯಾಗುವಂತಿದೆ. ಮತ್ತೊಂದೆಡೆ ಈಗಾಗಲೇ ನಿವೇಶನ ಇರುವವರೂ ಮತ್ತೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ, ಅರ್ಹ ಫಲಾನುಭವಿಗಳನ್ನು ಅವಕಾಶ-ವಂಚಿತರನ್ನಾಗಿ ಮಾಡುತ್ತಿದ್ದಾರೆ. ಈಗಿನ ಬಡಾವಣೆಗಳು ಭವಿಷ್ಯದ ದೃಷ್ಟಿಯಿಂದ ನಿರ್ಮಾಣವಾಗುತ್ತಿಲ್ಲ. ಇದಕ್ಕೆ ಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಬಡಾವಣೆಗಳನ್ನು ಮಾದರಿಯಾಗಿ ತೆಗೆದುಕೊಳ್ಳಬೇಕು.



**ಕೆ.ಎಂ.ನಾಗರಾಜು,** ಮೈಸೂರು

### ಮಧ್ಯವರ್ತಿಗಳ ಹಾವಳಿ

ಕನಸಿನ ಮನೆ ನಿರ್ಮಿಸಿಕೊಳ್ಳಲು ಕನಸು ಹೊತ್ತು ಹೋಗುವ ಮಧ್ಯಮ ವರ್ಗದ ಜನ ಪ್ರಾಧಿಕಾರಗಳಲ್ಲಿನ ವಾತಾವರಣ ನೋಡಿ ಅಸಹಾಯಕರಾಗಿ ಹೆಜ್ಜೆ ಹಿಂದಕ್ಕೆ ಇಡುತ್ತಾರೆ. ಒಂದು ದಾಖಲೆಗಾಗಿ ಹತ್ತಾರು ಬಾರಿ ಅಲೆದಾಡಬೇಕು. ಮಧ್ಯವರ್ತಿಗಳಿಗೆ ಕೇಳಿದಷ್ಟು ಹಣ ನೀಡಿದರೆ ಕ್ಷಣ ಮಾತ್ರದಲ್ಲಿ ಕೆಲಸಗಳು ಪೂರ್ಣಗೊಳ್ಳುತ್ತವೆ. ದುಡ್ಡು ಕೊಡಲು ಸಾಧ್ಯವಾಗದವರ ಕನಸಿನ ಮನೆ ನುಚ್ಚು ನೂರಾಗುತ್ತದೆ. ಅಲ್ಲಿ ನಡೆಯುವ ಮಧ್ಯವರ್ತಿಗಳ ಅಕ್ರಮಗಳು ಪ್ರಾಧಿಕಾರಗಳ ಅಧಿಕಾರಿಗಳಿಗೆ ಗೊತ್ತಿದ್ದರೂ ಮೂಕಪ್ರೇಕ್ಷಕರಾಗಿ ಇರುತ್ತಾರೆ, ಅಕ್ರಮದಲ್ಲಿ ಅವರೂ ಶಾಮೀಲಾಗಿರುತ್ತಾರೆ. ಸರ್ಕಾರ ಜನಸಾಮಾನ್ಯರಿಗೆ ಸರಳವಾದ ನಿಯಮಗಳನ್ನು ರೂಪಿಸಿದರೆ, ಅಲೆದಾಟ ನಿಲ್ಲುತ್ತದೆ. ಸೂರಿನ ಕನಸು ನನಸಾಗುತ್ತದೆ.



**ಅಶೋಕ,** ನೆಲಮಂಗಲ

### ಯೋಜನೆಗಳು ಉಳ್ಳವರ ಪಾಲು

ಬಡವರಿಗೆ ಸೂರು ಕಲ್ಪಿಸಲು ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಆದರೆ, ಅವುಗಳೆಲ್ಲ ಇದ್ದೂ ಇಲ್ಲದಂತಹ, ಅರ್ಹರಿಗೆ ಸಿಗದಂತಹ ಸ್ಥಿತಿಯಲ್ಲಿವೆ. ಯೋಜನೆಗಳ ಹೆಸರು ಪಠಿಸುತ್ತಾ ಕಚೇರಿಗಳಿಗೆ ಅಲೆಯಬೇಕು. ಭ್ರಷ್ಟ ಅಧಿಕಾರಿಗಳಿಗೆ ಲಂಚದ ರುಚಿ ಉಣಬಡಿಸಲೇಬೇಕು. ಹಣ ನೀಡಲು ಸಾಧ್ಯವಾಗದವರು ಸೌಲಭ್ಯ ಪಡೆಯಲಾರದೆ, ಬಂದ ದಾರಿ ಹಿಡಿಯುತ್ತಾರೆ. ಉಳ್ಳವರು ಹಣ ಕೊಟ್ಟು, ಮೆರೆಯುತ್ತಾರೆ. ಆಡಳಿತ ವ್ಯವಸ್ಥೆಯಲ್ಲೇ ಸುಧಾರಣೆ ಆಗಬೇಕಾಗಿದೆ.



**ಅನಿಲ್,** ಬೀದರ್

### ಪ್ರಾಧಿಕಾರಗಳನ್ನು ಮುಚ್ಚಿರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸೇರಿದಂತೆ ಎಲ್ಲ ಪ್ರಾಧಿಕಾರಗಳು ನಿವೇಶನದ ನಿರೀಕ್ಷೆಯಲ್ಲಿರುವವರಿಗೆ ಅಕ್ರಮ, ಭ್ರಷ್ಟಾಚಾರ, ವಿಳಂಬ ನೀತಿಯ ಉಡುಗೊರೆ ನೀಡುತ್ತವೆ. ಮಧ್ಯವರ್ತಿಗಳು ಹಾಗೂ ಭ್ರಷ್ಟರಿಂದ ಫಲಾನುಭವಿಗಳಿಗೆ ಶೋಷಣೆ ತಪ್ಪುತ್ತಿಲ್ಲ. ಬಿಡಿಎ ಸೇರಿದಂತೆ ಪ್ರಾಧಿಕಾರಗಳು ಭ್ರಷ್ಟಾಚಾರದ ಸೂಚಕವಾಗಿವೆ. ಜನರಿಗೆ ಒಳಿತು ಮಾಡಲಾರದ ಇಂತಹ ಪ್ರಾಧಿಕಾರಗಳನ್ನು ಮುಚ್ಚುವುದೇ ಒಳ್ಳೆಯದು.



**ಬಿ.ಆರ್.ಮೋಹನ್,** ಬೆಂಗಳೂರು




ಮಕ್ಕಳಿಗೆ ಏನನ್ನು ಯೋಚಿಸಬೇಕು ಎಂದು ಕಲಿಸುವ ಬದಲು ಹೇಗೆ ಯೋಚಿಸಬೇಕು ಎಂಬುದನ್ನು ಕಲಿಸಬೇಕು





# ಮಕ್ಕಳಲ್ಲಿ ಕಲಿಕಾ ಆಸಕ್ತಿ ಹೆಚ್ಚಿಸಲು ಸರಳ ಸೂತ್ರಗಳು

**ವೆಂಕಟ ಸುಬ್ಬರಾವ್. ವಿ**

ಕಳೆದ ವಾರದ ಲೇಖನದಲ್ಲಿ, ಮಕ್ಕಳು ಯಾವ್ಯಾವ ರೀತಿಯಲ್ಲಿ ಕಲಿಯುತ್ತಾರೆ ಮತ್ತು ಅವರು ಕಲಿಯುವ ರೀತಿಯನ್ನು ಆಧರಿಸಿ ಮನೆಯಲ್ಲಿ ಪೋಷಕರು ಕಲಿಕೆಗೆ ಪೂರಕವಾದ ವಾತಾವರಣವನ್ನು ಯಾವ ರೀತಿ ಕಲ್ಪಿಸಬಹುದು ಎನ್ನುವುದರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿತ್ತು. ಈ ವಾರ ಮಕ್ಕಳ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಲು ಮನೆಯಲ್ಲಿ ಪೋಷಕರು ಏನು ಮಾಡಬಹುದು. ಅವರ ಕಲಿಕಾ ಪ್ರಕ್ರಿಯೆಯಲ್ಲಿ ನಾವು ಹೇಗೆ ನೆರವಾಗಬಹುದು ಎಂಬುದರ ಬಗ್ಗೆ ತಿಳಿದುಕೊಳ್ಳೋಣ.

> ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಲು ಪೋಷಕರು ಒತ್ತಡ ಹೇರುವ ಬದಲು ಪೂರಕ ವಾತಾವರಣ ನಿರ್ಮಾಣ ಮಾಡುವುದು ಅಗತ್ಯ.

**1. ಮಕ್ಕಳಿಗೆ ಓದಲು ಹೇಳಲೇಬೇಡಿ**

ಹೀಗೆಂದು ಹೇಳಿದಾಗ, ಅದನ್ನು ಒಪ್ಪಿಕೊಳ್ಳುವುದು ಕಷ್ಟ, ಅಲ್ಲವಾ? ನಿಜ, ಮಕ್ಕಳಿಗೆ ಮನೆಯಲ್ಲಿ ಓದಲು ಹೇಳಲೇಬೇಡಿ. ಆದರೆ, ಅವರಲ್ಲಿ ಓದುವ ಆಸಕ್ತಿ ಮೂಡುವಂತೆ ಮಾಡಿ. ಅದು ಹೇಗೆ - ಎಂದು ಕೇಳ್ತೀರಾ? ನೋಡಿ, ನೀವು ಮಕ್ಕಳಿಗೆ ಏನಾದರೂ ಕೆಲಸ ಹೇಳಿದಾಗ, ಅವರು ಅದಕ್ಕೆ ವಿರುದ್ಧವಾದುದನ್ನೇ ಮಾಡಲು ಆಸಕ್ತಿ ತೋರುತ್ತಾರೆ. ನಾವು ಹೇಳಿದ್ದನ್ನು ಮಾಡದೇ, ನಾವು ಮಾಡುವುದನ್ನೇ ಅನುಕರಿಸುತ್ತಾರೆ, ಹೌದಲ್ಲವಾ? ಹಾಗಾಗಿ, ಮನೆಯ ಸದಸ್ಯರು ಪ್ರತಿದಿನ ಒಂದು ನಿರ್ದಿಷ್ಟ ಸಮಯದಲ್ಲಿ (ಉದಾಹರಣೆಗೆ ಪ್ರತಿದಿನ ಸಂಜೆ 7 ರಿಂದ 8 ಗಂಟೆ) ನಿಮಗೆ ಇಷ್ಟವಾದ ಯಾವುದಾದರೂ ಒಂದು ಪುಸ್ತಕವನ್ನು ಓದಲು ಪ್ರಾರಂಭಿಸಿ. ಕೆಲವು ದಿನಗಳವರೆಗೆ ಇದನ್ನು ನಿರಂತರವಾಗಿ ಮುಂದುವರಿಸಿ. ಆಗಲೂ ನೀವು ಮಗುವಿಗೆ ಓದಲು ಹೇಳಬೇಡಿ, ಒತ್ತಾಯವನ್ನೂ ಮಾಡಬೇಡಿ. ನಿಮ್ಮ ಪಾಡಿಗೆ ಓದುವುದನ್ನು ಮುಂದುವರಿಸಿ. ಆರಂಭದ ಕೆಲವು ದಿನಗಳಲ್ಲಿ ಮಕ್ಕಳು ನಿಮ್ಮ ಈ ಓದುವಿಕೆಯನ್ನು ಗಮನಿಸದಿರಬಹುದು. ಆದರೆ, ನಂತರದಲ್ಲಿ ಗಮನಿಸಲು ಪ್ರಾರಂಭಿಸುತ್ತಾರೆ. ನಂತರ ಅವರು ನಿಮ್ಮನ್ನು ಅನುಕರಿಸುತ್ತಾರೆ. ತಮ್ಮಷ್ಟಕ್ಕೆ ತಾವೇ ನಿಮ್ಮ ಬಳಿ ಬಂದು ಕುಳಿತು ಓದಲು ಶುರು ಮಾಡುತ್ತಾರೆ.

**2. ಮಕ್ಕಳ ಮೇಲಿನ ನಿಯಂತ್ರಣ ಕಡಿಮೆ ಮಾಡಿ**

ಕೆಲವು ಪೋಷಕರು ಮಕ್ಕಳು ಓದುವ ಸಮಯದಲ್ಲಿ ಅವರ ಪಕ್ಕದಲ್ಲಿಯೇ ಕುಳಿತು, ಓದುವ ರೀತಿಯನ್ನು ಗಮನಿಸುತ್ತಿರುತ್ತಾರೆ. 'ಏನು ಓದುತ್ತಿದ್ದೀಯ' ಎಂದು ಪದೇ ಪದೇ ಕೇಳುತ್ತಿರುತ್ತಾರೆ. ಓದುವ ವಿಷಯ ಮತ್ತು ಓದುವ ರೀತಿ ಎರಡನ್ನೂ ನಿಯಂತ್ರಿಸಲು ಪ್ರಯತ್ನಿಸುತ್ತಾರೆ. 'ಹೀಗೆ ಮಾಡಿದರೆ ಮಾತ್ರ ಮಕ್ಕಳು ಕಲಿಯುತ್ತಾರೆ' ಎಂಬುದು ಅವರ ನಂಬಿಕೆ. ನಿಜ, ಮಕ್ಕಳ ಮೇಲೆ ಸ್ವಲ್ಪಮಟ್ಟಿಗೆ ನಿಯಂತ್ರಣ ಅವಶ್ಯಕ. ಹಾಗೆಂದು, ಅದು ಅತಿಯಾಗಬಾರದು. ಇದರಿಂದ ಮಕ್ಕಳ ಕಲಿಕೆಯ ಆಸಕ್ತಿಯೇ ಕಡಿಮೆಯಾಗಬಹುದು. ಹಾಗಾಗಿ, ಮಕ್ಕಳನ್ನು ನಿಯಂತ್ರಣ ಮಾಡುವುದರ ಬದಲು, ಅವರಿಂದ ಏನಾದರೂ ಕಲಿಯಲು ಪ್ರಯತ್ನಿಸಿ!

ಉದಾಹರಣೆಗೆ; ಮಕ್ಕಳು ಶಾಲೆಯಲ್ಲಿ ಯಾವ ಪಾಠ ಕಲಿಯುತ್ತಿದ್ದಾರೆ ಎಂದು ತಿಳಿದುಕೊಳ್ಳಿ. ನಂತರ, ಆ ಪಾಠದ ಬಗ್ಗೆ ನಿಮಗಿರುವ ಆಸಕ್ತಿಯನ್ನು ತಿಳಿಸಿ. ಆ ಪಾಠವನ್ನು ಕಲಿಸುವಂತೆ ಕೇಳಿ. ನಂತರ, ಏನಾಗುತ್ತದೆ ಎಂದು ನೀವೇ ಗಮನಿಸಿ. ಆಗ ನಿಮ್ಮ ಮಕ್ಕಳೇ ನಿಮಗೆ ಶಿಕ್ಷಕರಾಗುತ್ತಾರೆ. ನಿಮಗೆ ಕಲಿಸುತ್ತಾ ತಾವೂ ಓದಿ ಕಲಿಯತ್ತಾರೆ. ಇದರಿಂದ ನಿಮ್ಮ ಮತ್ತು ಮಕ್ಕಳ ನಡುವೆ ಪರಸ್ಪರ ನಂಬಿಕೆ, ವಿಶ್ವಾಸ ಬಾಂಧವ್ಯವೂ ಹೆಚ್ಚುತ್ತದೆ.

**3. ಮಕ್ಕಳನ್ನು ಸ್ವತಂತ್ರವಾಗಿ ಕೆಲಸ ಮಾಡಲು ಬಿಡಿ**

ಶಾಲೆಯಲ್ಲಿ ಕೊಟ್ಟ ಚಟುವಟಿಕೆ ಅಥವಾ ಪ್ರಾಜೆಕ್ಟ್ ಮಾಡುವಾಗ ಮಕ್ಕಳಿಗೆ ಪೋಷಕರು ಸಹಾಯ ಮಾಡುವ ಆಸಕ್ತಿ ತೋರುತ್ತಾರೆ. ಕೆಲವು ವೇಳೆ ಅವಶ್ಯಕತೆಗಿಂತ ಹೆಚ್ಚು ಸಲಹೆ ಕೊಡುವುದು ಅಥವಾ ಸಹಾಯ ಮಾಡುವುದೂ ಇದೆ. ಹೀಗೆ ಮಾಡುವುದರಿಂದ ಮಕ್ಕಳ ಸ್ವತಂತ್ರ ಆಲೋಚನೆಗಳಿಗೆ ಅವಕಾಶವೇ ಇಲ್ಲದಂತೆ ಆಗುತ್ತದೆ. ಆದ್ದರಿಂದ ಈ ರೀತಿಯ ಕೆಲಸಗಳನ್ನು ಮಾಡುವಾಗ ಅವರಷ್ಟಕ್ಕೆ ಅವರನ್ನು ಬಿಡಿ. ಅವಶ್ಯಕತೆ ಇದ್ದಾಗ ಮಾತ್ರ ನೀವು ಭಾಗವಹಿಸಿ. ಅವರು ತಪ್ಪು ಮಾಡಿದರೆ ಮಾಡಲಿ. ಆ ತಪ್ಪುಗಳ ಬಗ್ಗೆ ನಂತರ ವಿವರಿಸಿ ಹಾಗೂ ಆ ರೀತಿಯ ತಪ್ಪುಗಳನ್ನು ಹೇಗೆ ಕಡಿಮೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ನಿಮಗೆ ತಿಳಿದಿದ್ದರೆ ಅವರಿಗೆ ವಿವರಿಸಿ.

ನೆನಪಿಡಿ; ಶಾಲೆಯಲ್ಲಿ ಚಟುವಟಿಕೆಗಳು ಅಥವಾ ಪ್ರಾಜೆಕ್ಟ್‌ಗಳನ್ನು ಕೊಡುವುದು ನಿಮ್ಮ ಮಕ್ಕಳಿಗೆ ಹೊರತು ನಿಮಗಲ್ಲಾ !

**4. ಕಲಿಯುವಿಕೆಯಲ್ಲಿ ನಿಮ್ಮ ಉತ್ಸಾಹ ಮತ್ತು ಆಸಕ್ತಿಯನ್ನು ಪ್ರದರ್ಶಿಸಿ**

ಮೊದಲೇ ಹೇಳಿದಂತೆ, ನಮ್ಮ ಮಕ್ಕಳು ನಮ್ಮನ್ನು ಅನುಕರಿಸಲು ಪ್ರಯತ್ನಿಸುತ್ತಾರೆ. ಮಕ್ಕಳ ಎದುರು ಕಲಿಯುವಿಕೆಯಲ್ಲಿನ ನಿಮ್ಮ ಉತ್ಸಾಹವನ್ನು ಮಕ್ಕಳ ಜೊತೆ ಹಂಚಿಕೊಳ್ಳಿ. ಉದಾಹರಣೆಗೆ; ನಿಮಗೆ ಗಿಡಗಳನ್ನು ಬೆಳೆಸುವ ಆಸಕ್ತಿಯಿದ್ದರೆ, ನಿಮ್ಮ ಆಸಕ್ತಿಯನ್ನು ನಿಮ್ಮ ಮಕ್ಕಳ ಜೊತೆ ಹಂಚಿಕೊಳ್ಳಿ. ಅವರನ್ನೂ ಆ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ. ಅವರು ಶಾಲೆಯಲ್ಲಿ ಗಿಡಗಳ ಭಾಗಗಳ ಬಗ್ಗೆ ಕಲಿಯುತ್ತಿದ್ದರೆ ಅದನ್ನು ನಿಮಗೆ ಕಲಿಸುವಂತೆ ಕೇಳಿ.


ನಿಮಗೆ ಅಡುಗೆ ಮಾಡುವಲ್ಲಿ ಆಸಕ್ತಿಯಿದ್ದರೆ, ಸಾಧ್ಯವಾದಾಗ ಅವರನ್ನೂ ಅಡುಗೆ ಕೆಲಸಕ್ಕೆ ತೊಡಗಿಸಿಕೊಳ್ಳಿ. ನೀವು ಉಪಯೋಗಿಸುತ್ತಿರುವ ತರಕಾರಿಗಳ ವೈಜ್ಞಾನಿಕ ಹೆಸರುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ತಿಳಿಸಿ.

(....... ಮುಂದುವರಿಯುತ್ತದೆ)

ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈ. ಲಿಮಿಟೆಡ್, ಬೆಂಗಳೂರು

## ಮಕ್ಕಳಿಗಿರಲಿ ಸ್ವಾತಂತ್ರ್ಯ

ಮಕ್ಕಳ ಕಲಿಕೆಯ ವಿಷಯದಲ್ಲಿ ಪೋಷಕರ ಪಾತ್ರ ದೊಡ್ಡದು. ಹಾಗಂತ ಮಕ್ಕಳ ಓದು, ಬರಹ, ಪ್ರಾಜೆಕ್ಟ್ ಎಲ್ಲದರಲ್ಲೂ ತಮ್ಮ ಪಾತ್ರ ಇರಬೇಕು



ಎಂಬುದು ಸರಿಯಲ್ಲ. ಮಕ್ಕಳಿಗೆ ಓದಿನ ವಿಷಯದಲ್ಲಿ ಸ್ವಾತಂತ್ರ್ಯ ನೀಡುವುದು ಅವಶ್ಯ. ಇದರಿಂದ ಮಕ್ಕಳಲ್ಲಿ ಪಾಠ ಹಾಗೂ ಪಠ್ಯೇತರ ಕೌಶಲ ಎರಡೂ ಸುಧಾರಿಸುತ್ತದೆ.

## ವಿದ್ಯಾರ್ಥಿ ವೇತನ ಕೈಪಿಡಿ

**ಐಸಿಎಆರ್-ಐಎಆರ್‌ಐ ಸಿಎಸ್‌ಐಆರ್ ಜೂನಿಯರ್ / ಸೀನಿಯರ್ ರಿಸರ್ಚ್ ಫೆಲೋಶಿಪ್ 2021**

**ವಿವರ:** ಐಸಿಎಆರ್-ಐಎಆರ್‌ಐ ಸಿಎಸ್‌ಐಆರ್ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಜೂನಿಯರ್/ಸೀನಿಯರ್ ರಿಸರ್ಚ್ ಫೆಲೋಶಿಪ್‌ಗೆ ಅರ್ಜಿ ಆಹ್ವಾನಿಸಿದೆ. ಈ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ಅಭ್ಯರ್ಥಿಯು 'ಅಸೆಸ್‌ಮೆಂಟ್ ಆಫ್ ಓಲ್ಡ್ ಅಂಡ್ ನ್ಯೂ ವೀಟ್ ವೆರೈಟೀಸ್ ಫಾರ್ ಜನೆಟಿಕ್ ವೇರಿಯಬಿಲಿಟಿ ಇನ್ ಕ್ವಾಲಿಟಿ ಟ್ರೇಟ್ಸ್ ಅಂಡ್ ದೇರ್ ರಿಲೇಷನ್‌ಶಿಪ್ ವಿಥ್ ಪಿಜ್ಜಾ, ಎಕ್ಸ್‌ಟ್ರೂಡೆಡ್ ಅಂಡ್ ಬೇಕ್ಡ್ ಪ್ರಾಡಕ್ಟ್ ಮೇಕಿಂಗ್' ಎನ್ನುವ ಶೀರ್ಷಿಕೆಯ ವಿಷಯದ ಮೇಲೆ ಕೆಲಸ ಮಾಡಬೇಕಾಗುತ್ತದೆ.

**ಅರ್ಹತೆ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಬಿಎಸ್-ಎಂಎಸ್, ಎಂಎಸ್‌ಸಿ, ಬಿಟೆಕ್ ಪದವಿಯನ್ನು ಶೇ 55 ಅಂಕಗಳೊಂದಿಗೆ ಮುಗಿಸಿರಬೇಕು. ನೆಟ್ ಅಥವಾ ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಅಭ್ಯರ್ಥಿಗಳನ್ನು ಜೆಆರ್‌ಎಫ್‌ಗೆ ಪರಿಗಣಿಸಲಾಗುತ್ತದೆ.

**ಆರ್ಥಿಕ ನೆರವು:** ತಿಂಗಳಿಗೆ ₹ 35,000ದ ಜೊತೆಗೆ ಶೇ 24 ಮನೆ ಬಾಡಿಗೆ ಭತ್ಯೆ ನೀಡಲಾಗುತ್ತದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಡಿಸೆಂಬರ್ 15, 2021

**ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ

**ಹೆಚ್ಚಿನ ಮಾಹಿತಿಗೆ:** www.b4s.in/praja/JSR4

**ಕೃಪೆ:** buddy4study.com

# 'ವಿಎಫ್‌ಎಕ್ಸ್' ಕೋರ್ಸ್ ಕಲಿಕೆ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

**ವಿ. ಪ್ರದೀಪ್ ಕುಮಾರ್**

- **1. ನಾನು ದ್ವಿತೀಯ ಪಿಯುಸಿ ಓದುತ್ತಿದ್ದೇನೆ (ವಿಜ್ಞಾನ). ವಿಎಫ್‌ಎಕ್ಸ್ ಮತ್ತು ಅನಿಮೇಷನ್‌ನಲ್ಲಿ ತುಂಬಾ ಆಸಕ್ತಿ ಇದೆ. ಯಾವ ಕಾಲೇಜಿಗೆ ಸೇರಿದರೆ ಉತ್ತಮ? ಈ ಕ್ಷೇತ್ರದ ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ.**

**ಪ್ರಜ್ವಲ್,** ಊರು ತಿಳಿಸಿಲ್ಲ.

ವಿಎಫ್‌ಎಕ್ಸ್ ಮತ್ತು ಅನಿಮೇಷನ್ ಈಗ ಬೇಡಿಕೆಯಲ್ಲಿರುವ ಕ್ಷೇತ್ರ. ಸೃಜನಶೀಲತೆಯ ಜೊತೆಗೆ, ಈ ಕ್ಷೇತ್ರದಲ್ಲಿ ಸ್ವಾಭಾವಿಕ ಆಸಕ್ತಿ ಇದ್ದರೆ ಮತ್ತು ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿಯಿದ್ದಲ್ಲಿ ಬಿಎಸ್‌ಸಿ (ವಿಎಫ್‌ಎಕ್ಸ್, ಅನಿಮೇಷನ್, ಗೇಮ್ ಡಿಸೈನಿಂಗ್ ಇತ್ಯಾದಿ) ಪದವಿ ಕಲಿಯಬಹುದು. ಚಿತ್ರೋದ್ಯಮ, ಟಿವಿ ಚಾನೆಲ್‌ಗಳು, ಸ್ಟುಡಿಯೊಗಳು, ಗೇಮಿಂಗ್ ಸಂಸ್ಥೆಗಳು, ಜಾಹೀರಾತು ಮತ್ತು ಮಾಧ್ಯಮ ಸಂಸ್ಥೆಗಳು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಆಕರ್ಷಕ ಉದ್ಯೋಗಾವ ಕಾಶಗಳಿವೆ.

ಈ ಕೋರ್ಸ್ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗಾಗಿ ಗಮನಿಸಿ: https://collegedunia.com/courses/bachelor-of-science-bsc-animation-and-vfx

- **2. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೇಗೆ ತಯಾರಿಯಾಗಬೇಕು?**

**ಚೇತನ್ ಕಳ್ಳಿಮನಿ,** ಮಹಾಲಿಂಗಪುರ

ಉತ್ಸಾಹಭರಿತ ಮನಸ್ಸು, ಗುರಿ ಸೇರುವ ಸಂಕಲ್ಪ, ನಿಮ್ಮ ಸಾಮರ್ಥ್ಯದಲ್ಲಿ ಅಚಲವಾದ ಆತ್ಮವಿಶ್ವಾಸ ಮತ್ತು ಪರಿಣಾಮಕಾರಿ ಕಾರ್ಯತಂತ್ರ, ನಿಮ್ಮನ್ನು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯ ಯಶಸ್ಸಿನತ್ತ ಕೊಂಡೊಯ್ಯುತ್ತದೆ. ಜೊತೆಗೆ, ಈ ಸಲಹೆಗಳನ್ನು ಅನುಸರಿಸಿ.

- ಪರೀಕ್ಷೆಯಲ್ಲಿ ಅಪೇಕ್ಷಿತ ಶೇಕಡಾವಾರು ಗುರಿಯನ್ನು ನಿರ್ಧರಿಸಿ.
- ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ತಿಳಿದು ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿ.
- ಅಣಕು ಪರೀಕ್ಷೆಗಳನ್ನು ಪ್ರತ್ಯೇಕವಾಗಿ ಮತ್ತು ಸಹಪಾಠಿಗಳೊಡನೆ ಅಭ್ಯಾಸ ಮಾಡಿ.
- ಪ್ರಶ್ನೆಪತ್ರಿಕೆಯಲ್ಲಿನ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿ.
- ಖಚಿತವಾಗಿ ತಿಳಿದಿರುವ ಪ್ರಶ್ನೆಗಳು/ವಿಭಾಗಗಳನ್ನು ಮೊದಲು ಉತ್ತರಿಸಿ.
- ಪ್ರಶ್ನೆಗಳನ್ನು ಉತ್ತರಿಸುವಾಗ ವೇಗ ಮತ್ತು ನಿಖರತೆಯಲ್ಲಿ ಸಮತೋಲನವಿರಲಿ.
- ದಾರಿ ತಪ್ಪಿಸುವ ತಂತ್ರಗಾರಿಕೆಯ ಪ್ರಶ್ನೆಗಳ ಬಗ್ಗೆ ಎಚ್ಚರವಿರಲಿ.
- ಪರೀಕ್ಷೆಯ ದಿನದಂದು ಆದಷ್ಟು ಶಾಂತಚಿತ್ತದಿಂದಿರಿ. ಇದರಿಂದ ಮನಸ್ಸಿನ ಮೇಲಿನ ಒತ್ತಡ ಕಡಿಮೆಯಾಗಿ ಫಲಿತಾಂಶವೂ ಉತ್ತಮವಾಗುತ್ತದೆ.
- ನಿಮ್ಮ ಆಸಕ್ತಿ, ಅಭಿರುಚಿ ಕುರಿತ ಪ್ರಶ್ನೆಗಳನ್ನು ಪ್ರಾಮಾಣಿಕವಾಗಿ ಉತ್ತರಿಸಿ.
- ತಿಳಿಯದ ಬಹು ಆಯ್ಕೆ ಪ್ರಶ್ನೆಗಳನ್ನು ಉತ್ತರಿಸುವಾಗ ಖಚಿತವಾದ ತಪ್ಪು ಆಯ್ಕೆಗಳನ್ನು ತೆಗೆದುಹಾಕಿ ಜಾಣತನದಿಂದ ಊಹಿಸಿ.

ಕಾರ್ಯತಂತ್ರಗಳನ್ನು ರೂಪಿಸುವ ಮಾರ್ಗದರ್ಶನಕ್ಕಾಗಿ ಗಮನಿಸಿ: http://www.vpradeepkumar.com/how-to-succeed-in-entrance-exams/

- **3. ನನಗೀಗ 68 ವರ್ಷ. ನಾನು 2014 ರಲ್ಲಿ ನಿವೃತ್ತಿ ಪಡೆದಿದ್ದೇನೆ. ಈಗ ನನಗೆ ಕಾನೂನು ಪುಸ್ತಕಗಳನ್ನು ಓದಬೇಕೆಂದು ಬಹಳಷ್ಟು ಆಸೆಯಿದೆ. ಈಗ ಓದಬಹುದೇ? ಕಾನೂನಿನ ಪುಸ್ತಕಗಳು ಕನ್ನಡದಲ್ಲಿ ಇದೆಯೇ?**

**ಹೆಸರು,** ಊರು ತಿಳಿಸಿಲ್ಲ.

ಈ ವಯಸ್ಸಿನಲ್ಲೂ ನಿಮ್ಮಲ್ಲಿರುವ ಜ್ಞಾನಾರ್ಜನೆಯ ಆಸಕ್ತಿ, ಓದುವ ಹಂಬಲ ಶ್ಲಾಘನೀಯ. ಕಾನೂನು ವಿಸ್ತಾರವಾದ ಕ್ಷೇತ್ರ; ನಿಮಗೆ ಕಾನೂನಿನ ಯಾವ ಕ್ಷೇತ್ರದಲ್ಲಿ ಆಸಕ್ತಿಯಿದೆ ಎನ್ನುವುದನ್ನು ಗುರುತಿಸಿ. ಕಾನೂನು ಸಂಬಂಧಿತ ಕನ್ನಡದ ಪುಸ್ತಕಗಳು, ಕಾನೂನು ಪುಸ್ತಕ ಮಾರಾಟ ಸಂಸ್ಥೆಗಳು, ಇ-ಕಾಮರ್ಸ್ ಸಂಸ್ಥೆಗಳ ಮುಖಾಂತರ ಲಭ್ಯ. ಆನ್‌ಲೈನ್ ಮತ್ತು ಸಾರ್ವಜನಿಕ ಗ್ರಂಥಾಲಯಗಳಲ್ಲಿಯೂ ನೀವು ಹುಡುಕಬಹುದು.

- **4. ನಾನು ಕಳೆದ 4 ವರ್ಷಗಳಿಂದ ವಕೀಲಿ ವೃತ್ತಿಯಲ್ಲಿದ್ದು ಈ ವೃತ್ತಿಯನ್ನು ಪ್ರೀತಿಸುತ್ತೇನೆ. ಜೊತೆಗೆ ನನಗೆ ಸಮಾಜಸೇವೆಯಲ್ಲಿ ಆಸಕ್ತಿಯಿದ್ದು ಅನೇಕ ಯೋಜನೆಗಳು ಮನಸ್ಸಿನಲ್ಲಿವೆ. ಈ ನಿಟ್ಟಿನಲ್ಲಿ ಎಂಎಸ್‌ಡಬ್ಲ್ಯು ಪದವಿ ಮಾಡಲು ಇಚ್ಛಿಸಿದ್ದೇನೆ. ಸಲಹೆ ನೀಡಿ.**

**ಹೆಸರು,** ಊರು ತಿಳಿಸಿಲ್ಲ.

ನಿಮಗಿರುವ ಸಮಾಜ ಸೇವೆಯ ಬಗೆಗಿನ ಆಸಕ್ತಿ ಮತ್ತು ಅದಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿರುವುದು ಶ್ಲಾಘನೀಯ ಕಾರ್ಯ. ಆದರೆ, ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಎಂಎಸ್‌ಡಬ್ಲ್ಯು ಕೋರ್ಸ್ ಮಾಡುವ ಅಗತ್ಯವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಿಮಗೆ ಆಸಕ್ತಿಯಿರುವ ಯೋಜನೆಗಳಲ್ಲಿ ತೊಡಗಿರುವ ಅನೇಕ ಸಮಾಜ ಸೇವಾ ಸಂಸ್ಥೆಗಳೊಡನೆ ಕೈಜೋಡಿಸಿ ಸಮಾಜಕ್ಕೆ ನಿಮ್ಮ ಕೊಡುಗೆಯನ್ನು ನೀಡಬಹುದು.



- **5. ಸರ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ನನ್ನ ಹೆಸರನ್ನು ತಪ್ಪಾಗಿ ಮುದ್ರಿಸಲಾಗಿದೆ. ಇದನ್ನು ಹೇಗೆ ಸರಿಪಡಿಸಿಕೊಳ್ಳಬಹುದು?**

**ದೀಪಕ್,** ಊರು ತಿಳಿಸಿಲ್ಲ.

ಸಂಬಂಧ ಪಟ್ಟ ದಾಖಲೆಗಳೊಂದಿಗೆ ನಿಮ್ಮ ಶಾಲೆಯ ಮೂಲಕ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಅರ್ಜಿ ಸಲ್ಲಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

**ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ**

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

# ಪ್ರಜಾ ಮತ

ಜನತಂತ್ರದ ಹಬ್ಬ 2021

### ತುಮಕೂರು: ವಿಧಾನ ಪರಿಷತ್ ಚುನಾವಣೆ

# ಮೂರೂ ಪಕ್ಷಗಳಿಗೆ ಒಳ ಏಟಿನ ಚಿಂತೆ

• ಕೆ.ಜೆ. ಮರಿಯಪ್ಪ

**ತುಮಕೂರು:** ವಿಧಾನ ಪರಿಷತ್ ಚುನಾವಣೆಯಲ್ಲಿರುವ ಘಟಾನುಘಟಿ 'ಕೋಟಿ ಕುಳ'ಗಳಿಂದಾಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ಪ್ರಮುಖ ಮೂರು ಪಕ್ಷಗಳಿಗೂ ಗೆಲುವು ಪ್ರತಿಷ್ಠೆಯಾಗಿದೆ.

ಕಾಂಗ್ರೆಸ್‌ನ ಆರ್.ರಾಜೇಂದ್ರ, ಬಿಜೆಪಿಯ ಎನ್.ಲೋಕೇಶ್, ಜೆಡಿಎಸ್‌ನ ಆರ್.ಅನಿಲ್ ಕುಮಾರ್ ಈ ಮೂವರು ಅಭ್ಯರ್ಥಿಗಳು ಕೋಟಿ ಕುಳಗಳು. ಇವರ ಧಾರಾಳತನದಿಂದಾಗಿ ಚುನಾವಣೆ ರಂಗೇರಿದೆ. ಮತದಾರರಲ್ಲಿ ಅಧಿಕ ಸಂಖ್ಯೆಯಲ್ಲಿರುವ ಗ್ರಾಮ ಪಂಚಾಯಿತಿ ಸದಸ್ಯರೂ ತಕ್ಕಡಿ ಯಾವ ಕಡೆ ಹೆಚ್ಚು 'ತೂಗುತ್ತಿದೆ' ಎಂದು ನೋಡುತ್ತಿದ್ದಾರೆ.

ಸತತ ಎರಡು ಬಾರಿ ಗೆದ್ದಿರುವ ಜೆಡಿಎಸ್, ಕ್ಷೇತ್ರ ಉಳಿಸಿಕೊಳ್ಳುವ ಪ್ರಯತ್ನದಲ್ಲಿದೆ. ಹ್ಯಾಟ್ರಿಕ್ ಗೆಲುವಿಗೆ ತಡೆಯೊಡ್ಡಲು ಕಾಂಗ್ರೆಸ್, ಬಿಜೆಪಿ ಸಜ್ಜಾಗಿವೆ. ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ನಾಯಕರು ಒಟ್ಟಾಗಿ ಅಖಾಡಕ್ಕೆ ಇಳಿದಿದ್ದಾರೆ. ಬಿಜೆಪಿ ನಾಯಕರು ಶತಾಯಗತಾಯ ಗೆಲ್ಲಲೇಬೇಕು ಎಂದು ಪಣತೊಟ್ಟಿದ್ದಾರೆ. ಜತೆಗೆಜಾತಿ ಲೆಕ್ಕಾಚಾರವೂ ಕೆಲಸ ಮಾಡುತ್ತಿದೆ.

ಪ್ರಮುಖವಾಗಿ ಮೂರು ಪಕ್ಷಗಳಿಗೆ ಒಳ ಏಟಿನದೇ ಚಿಂತೆ. ಯಾವ ನಾಯಕರು ಯಾವ ಸಂದರ್ಭದಲ್ಲಿ ಕೈಕೊಡುತ್ತಾರೆ ಎಂಬ ಗುಮಾನಿ ಎಲ್ಲರನ್ನೂ ಕಾಡುತ್ತಿದೆ. ಕಾಂಗ್ರೆಸ್ ನಾಯಕರು ಒಗ್ಗೂಡಿದ್ದೇವೆ ಎಂಬ ಸಂದೇಶ ರವಾನಿಸಿದ್ದಾರೆ. ಕೊನೆಯವರೆಗೂ ಅದೇ ರೀತಿ ಇರುತ್ತಾರೆಯೆ? ಬಿಜೆಪಿಯಲ್ಲೂ ಭಿನ್ನಮತವಿಲ್ಲ ಎಂದು ಹೇಳಿಕೊಂಡಿದ್ದು, ಅದೇ ರೀತಿ ನಡೆದುಕೊಳ್ಳುವರೆ? ಜೆಡಿಎಸ್ ನಾಯಕರು ಮನಪೂರ್ವಕವಾಗಿ ಕೆಲಸ ಮಾಡುವರೆ? ಎಂಬ ಚರ್ಚೆ ನಡೆದಿದೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು 'ಲೋಕಸಭೆ ಚುನಾವಣೆಯಲ್ಲಿ ನನ್ನ ಸೋಲಿಗೆ ಕಾರಣರಾದವರಿಗೆ ತಕ್ಕ ಪಾಠ ಕಲಿಸಿ' ಎಂದು ಹೇಳುತ್ತಿದ್ದಾರೆ. 'ನಾನೇ ಸೋಲಿಸಿದ್ದು' ಎಂದು ಹೇಳಿಕೊಳ್ಳುತ್ತಿರುವ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್.ರಾಜಣ್ಣ ಅವರ ಪುತ್ರ ಆರ್.ರಾಜೇಂದ್ರ ಅವರನ್ನು ಸೋಲಿಸುವ ಮೂಲಕ 'ನೋವು' ದೂರಮಾಡಿ ಎಂದು ಗೌಡರು ಮನವಿ ಮಾಡಿದ್ದಾರೆ. ಆದರೆ ಕಾಂಗ್ರೆಸ್ ನಾಯಕರು ಮುಂದಿನ ವಿಧಾನಸಭೆ ಚುನಾವಣೆ ದೃಷ್ಟಿಯಿಂದ ಒಗ್ಗಟ್ಟಾಗಿ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಕೆ.ಎನ್.ರಾಜಣ್ಣ ಸಹ ತಮ್ಮ ಮಗನನ್ನು ಗೆಲುವಿನ ದಡ ಸೇರಿಸಲು ಮೂರು ದಶಕಗಳ ರಾಜಕೀಯ ಪಟ್ಟುಗಳನ್ನು ಬಳಸುತ್ತಿದ್ದಾರೆ.

ಇಬ್ಬರು ಸಚಿವರು ಸೇರಿ ಐವರು ಶಾಸಕರು, ತಲಾ ಇಬ್ಬರು ಸಂಸತ್ ಹಾಗೂ ಪರಿಷತ್ ಸದಸ್ಯರು ಇದ್ದಾರೆ. ಅಧಿಕಾರ ಬಲ ಇದೆ. ನಮ್ಮ ಬಳಿ ಎಲ್ಲಾ ರೀತಿಯ 'ಶಕ್ತಿ' ಇದ್ದು ಚುನಾವಣೆಯನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿದ್ದೇವೆ. ಗೆಲ್ಲಿಸಿಕೊಳ್ಳುತ್ತೇವೆ ಎಂಬ ಆತ್ಮವಿಶ್ವಾದಲ್ಲಿ ಬಿಜೆಪಿ ನಾಯಕರಿದ್ದಾರೆ. ಜೆಡಿಯು, ಕರ್ನಾಟಕ ರಾಷ್ಟ್ರ ಸಮಿತಿ, ರೈತ ಸಂಘ ಒಟ್ಟಾಗಿ ಗಜೇಂದ್ರ ಕುಮಾರ್ ಗೌಡ ಅವರನ್ನು ಕಣಕ್ಕಿಳಿಸಿವೆ.



**ಕೆಎಎಸ್ ಅಧಿಕಾರಿಯಾಗಿದ್ದರೂ ಜನರ ಸೇವೆ ಮಾಡಲು ಬಂದಿದ್ದೇನೆ. ಜೆಡಿಎಸ್‌ನಲ್ಲಿ ರಾಜಕೀಯ ಆರಂಭಿಸಿದ್ದು, ಇಲ್ಲೇ ಅಂತ್ಯ.**
**ಆರ್.ಅನಿಲ್ ಕುಮಾರ್,** ಜೆಡಿಎಸ್ ಅಭ್ಯರ್ಥಿ



**ಸಚಿವರು, ಶಾಸಕರು, ಸಂಸದರ ಬಲ ಇದೆ. 4 ಮಂಡಳಿ ಅಧ್ಯಕ್ಷರು ಇದ್ದಾರೆ. ಜಿಲ್ಲೆಗೆ ಬಿಜೆಪಿ ಹೆಚ್ಚು ಅಧಿಕಾರ ಕೊಟ್ಟಿದೆ. ಅವಕಾಶ ಕೊಟ್ಟರೆ ಒಳ್ಳೆ ಕೆಲಸ ಮಾಡುತ್ತೇನೆ**
**ಎನ್.ಲೋಕೇಶ್,** ಬಿಜೆಪಿ ಅಭ್ಯರ್ಥಿ



**ಕಳೆದ ಬಾರಿ ಸ್ಪರ್ಧಿಸಿ ಸೋತಿದ್ದೇನೆ. ಈ ಬಾರಿ ಅವಕಾಶ ಮಾಡಿಕೊಟ್ಟರೆ ಸ್ಥಳೀಯ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸಿ, ಅಭಿವೃದ್ಧಿಗೆ ಶ್ರಮಿಸುತ್ತೇನೆ**
**ಆರ್.ರಾಜೇಂದ್ರ,** ಕಾಂಗ್ರೆಸ್ ಅಭ್ಯರ್ಥಿ

| ಒಟ್ಟು ಮತದಾರರು | 5,559 |
|---|---|
| ಪುರುಷ | 2,623 |
| ಮಹಿಳೆ | 2,936 |
| ಒಟ್ಟು ಗ್ರಾ.ಪಂ | 328 |
| ಮಹಾನಗರ ಪಾಲಿಕೆ | 1 |
| ನಗರಸಭೆ | 1 |
| ಪುರಸಭೆ | 4 |
| ಪಟ್ಟಣ ಪಂಚಾಯಿತಿ | 4 |

### ಉಡುಪಿ–ದಕ್ಷಿಣ ಕನ್ನಡ ದ್ವಿಸದಸ್ಯ ಕ್ಷೇತ್ರ

# ಬಿಜೆಪಿಗೆ ಶಕ್ತಿ ಹೆಚ್ಚಿಸಿಕೊಳ್ಳುವ ಗುರಿ

• ಉದಯ ಯು.

**ಮಂಗಳೂರು:** ವಿಧಾನ ಪರಿಷತ್ತಿಗೆ ದ್ವಿಸದಸ್ಯತ್ವ ಕ್ಷೇತ್ರವಾಗಿರುವ ದಕ್ಷಿಣ ಕನ್ನಡದಲ್ಲಿ, ಕಾಂಗ್ರೆಸ್ (ಮಂಜುನಾಥ ಭಂಡಾರಿ) ಹಾಗೂ ಬಿಜೆಪಿಯಿಂದ (ಕೋಟ ಶ್ರೀನಿವಾಸ ಪೂಜಾರಿ) ತಲಾ ಒಬ್ಬ ಅಭ್ಯರ್ಥಿ ಕಣದಲ್ಲಿರುವುದರಿಂದ ಆಯ್ಕೆಯ ವಿಚಾರದಲ್ಲಿ ಬಹು ದೊಡ್ಡ ಕುತೂಹಲವೇನೂ ಉಳಿದುಕೊಂಡಿಲ್ಲ.

'ಆಯ್ಕೆಯು ಅವಿರೋಧ ಆಗಿರಬಾರದು' ಎಂಬ ಕಾರಣಕ್ಕೆ, ಎಸ್‌ಡಿಪಿಐನ ಶಾಫಿ ಕೆ. ಬೆಳ್ಳಾರೆ ಅವರೂ ಕಣಕ್ಕೆ ಇಳಿದಿದ್ದಾರೆ. ಇವರು ಎಷ್ಟು ಮತಗಳನ್ನು ಸೆಳೆಯುತ್ತಾರೆ ಎಂಬುದರ ಮೇಲೆ, ಕಾಂಗ್ರೆಸ್‌ನ 'ಶಕ್ತಿ ಎಷ್ಟು' ಎಂಬುದು ತೀರ್ಮಾನವಾಗುತ್ತದೆ.

**ಪರಿಷತ್ ಚುನಾವಣೆ ಕ್ಷೇತ್ರ ಸಮೀಕ್ಷೆ**

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸೇರಿದಂತೆ ಕ್ಷೇತ್ರದಲ್ಲಿ ಒಟ್ಟಾರೆ 6,040 ಮತದಾರರಿದ್ದಾರೆ. ಅಭ್ಯರ್ಥಿಯ ಗೆಲುವಿಗೆ ಪ್ರಥಮ ಪ್ರಾಶಸ್ತ್ಯದ 2,200 ಮತಗಳು ಸಾಕು. ಆಯಾ ಪಕ್ಷದವರೇ ಹೇಳಿಕೊಳ್ಳುವಂತೆ, ಬಿಜೆಪಿಗೆ 3,200 ಹಾಗೂ ಕಾಂಗ್ರೆಸ್‌ಗೆ 2,100 ಮತಗಳಿವೆ. ಕಾಂಗ್ರೆಸ್‌ಗೆ ನೂರು ಮತಗಳ ಕೊರತೆ ಇದ್ದು, ಬಿಜೆಪಿಯಿಂದ ಮತಗಳನ್ನು ಸೆಳೆದುಕೊಳ್ಳಬಹುದೇ ಅಥವಾ ಬಿಜೆಪಿಯೇ ಇತರ ಪಕ್ಷಗಳಿಂದ ಮತಗಳನ್ನು ಸೆಳೆದುಕೊಂಡು ಬೀಗುವುದೇ ಎಂಬ ಕುತೂಹಲ ಮಾತ್ರ ಈಗ ಉಳಿದುಕೊಂಡಿದೆ.

ಹಾಗೆ ನೋಡಿದರೆ, ಜಿಲ್ಲೆಯಲ್ಲಿ ಚುನಾವಣಾ ಪೂರ್ವದಲ್ಲಿ ನಡೆದ ಬೆಳವಣಿಗೆಗಳೇ ಹೆಚ್ಚು ಕುತೂಹಲ ಮೂಡಿಸಿದ್ದವು. ಚುನಾವಣಾ ದಿನಾಂಕ ಘೋಷಣೆಯಾಗಿ ಕೆಲವೇ ದಿನಗಳಲ್ಲಿ, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಎಸ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ಘೋಷಿಸಿದ್ದರು. ಮಂಗಳೂರಿನಲ್ಲಿ ಚುನಾವಣಾ ಕಚೇರಿಯನ್ನೂ ತೆರೆದರು. ಎರಡೂ ಪಕ್ಷಗಳ ಜತೆಗೆ ಉತ್ತಮ ಬಾಂಧವ್ಯ ಹೊಂದಿರುವ ರಾಜೇಂದ್ರ ಕುಮಾರ್ ಅವರ ಸ್ಪರ್ಧೆಯಿಂದಾಗಿ, ಇರುವ ಒಂದು ಸ್ಥಾನವನ್ನೂ ಕಳೆದುಕೊಳ್ಳುವ ಭೀತಿ ಕಾಂಗ್ರೆಸ್‌ಗೆ ಎದುರಾದದ್ದು ನಿಜ.

ಈ ಮಧ್ಯೆ, ಉಡುಪಿ ಜಿಲ್ಲೆಯ ಕಾಂಗ್ರೆಸ್ ಮುಖಂಡರು ರಾಜೇಂದ್ರ ಕುಮಾರ್ ಅವರನ್ನು ಬೆಂಗಳೂರಿಗೆ ಕರೆದೊಯ್ದು, ಡಿ.ಕೆ. ಶಿವಕುಮಾರ್ ಭೇಟಿ ಮಾಡಿಸಿದರು. ಅನಂತರ 'ರಾಜೇಂದ್ರ ಕುಮಾರ್ ಅವರು ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆ' ಎಂಬ ಗುಸುಗುಸು ಕೇಳಿಬಂತು. ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ನಾಯಕರಿಗೆ ಇದು ಒಪ್ಪಿಗೆಯಾಗಲಿಲ್ಲ, ಬಿಜೆಪಿಗೂ ಅದು ಬೇಕಿರಲಿಲ್ಲ.

ಈ ಬೆಳವಣಿಗೆಯ ಬಳಿಕ ಹೊಸ ಲೆಕ್ಕಾಚಾರ ಹಾಕಿದ ಬಿಜೆಪಿಯು ಮೀನುಗಾರಿಕಾ ನಿಗಮದ ಅಧ್ಯಕ್ಷ ನಿತಿನ್ ಕುಮಾರ್ ಅವರನ್ನೂ ಕಣಕ್ಕಿಳಿಸಿತು. 'ಬಿಜೆಪಿಯ ಹೆಚ್ಚುವರಿ ಮತಗಳು ಯಾರಿಗೂ ಹೋಗುವುದಿಲ್ಲ' ಎಂಬ ಪರಿಸ್ಥಿತಿ ಸೃಷ್ಟಿಯಾಯಿತು.

ಈ ನಡುವೆ, ಜನಸ್ವರಾಜ್ ಸಮಾವೇಶಕ್ಕಾಗಿ ಉಡುಪಿಗೆ ಬಂದಿದ್ದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು, 'ಎಸ್‌ಡಿಸಿಸಿ ಬ್ಯಾಂಕ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸುತ್ತೇವೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಪ್ರತ್ಯೇಕ ಸಹಕಾರಿ ಬ್ಯಾಂಕ್‌ಗಳನ್ನು ರಚಿಸಲು ತೀರ್ಮಾನ ಕೈಗೊಳ್ಳುತ್ತೇವೆ' ಎಂದು ಘೋಷಿಸಿದರು. ಇದಾಗಿ ಕೆಲವೇ ದಿನಗಳಲ್ಲಿ ರಾಜೇಂದ್ರ ಕುಮಾರ್ ತಮ್ಮ ನಾಮಪತ್ರ ಹಿಂತೆಗೆದುಕೊಂಡರು.

**ಶಕ್ತಿ ವೃದ್ಧಿಯೇ ಗುರಿ:** ಈಗ ಬಿಜೆಪಿ ಮುಂದಿರುವ ಗುರಿ 'ಕಾಂಗ್ರೆಸ್‌ನ ಶಕ್ತಿ ಇನ್ನಷ್ಟು ಕುಂದಿದೆ' ಎಂಬ ಸಂದೇಶವನ್ನು ನೀಡುವುದಾಗಿದೆ. ಅದಕ್ಕಾಗಿಯೇ ಕೋಟ ಶ್ರೀನಿವಾಸ ಪೂಜಾರಿ ಪರವಾಗಿ 3,700 ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಪಡೆಯುವ ಗುರಿ ಹಾಕಿಕೊಂಡಿದೆ.

'ಗೊಂದಲ ಸೃಷ್ಟಿಯಾಗಬಾರದೆಂಬ ಕಾರಣಕ್ಕೆ ಒಬ್ಬರೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. 3,700 ಮತಗಳನ್ನು ಪಡೆದು ನಮ್ಮ ಶಕ್ತಿಯನ್ನು ಸಾಬೀತುಪಡಿಸುತ್ತೇವೆ' ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ.

**ಸ್ಥಳೀಯ ಸಂಸ್ಥೆಗಳ ವಿವರ**

| ಸ್ಥಳೀಯ ಸಂಸ್ಥೆ | ಒಟ್ಟು | ಮತದಾರರು |
|---|---|---|
| ಗ್ರಾಮ ಪಂಚಾಯಿತಿ | 377 | 5,677 |
| ಮಹಾನಗರ ಪಾಲಿಕೆ | 1 | 68 |
| ನಗರಸಭೆ | 3 | 105 |
| ಪುರಸಭೆ | 4 | 120 |
| ಪಟ್ಟಣ ಪಂಚಾಯಿತಿ | 4 | 70 |



ಶ್ರೀನಿವಾಸ ಪೂಜಾರಿ



ಮಂಜುನಾಥ್ ಭಂಡಾರಿ



ಶಾಫಿ ಕೆ. ಬೆಳ್ಳಾರೆ

**ವಿಧಾನ ಪರಿಷತ್: ಮತದಾರರ ವಿವರ**

| ತಾಲ್ಲೂಕು | ಮತಗಟ್ಟೆ | ಪುರುಷ | ಮಹಿಳೆ | ಒಟ್ಟು |
|---|---|---|---|---|
| **ದಕ್ಷಿಣ ಕನ್ನಡ ಜಿಲ್ಲೆ** | | | | |
| ಮೂಡುಬಿದಿರೆ | 13 | 110 | 112 | 222 |
| ಮಂಗಳೂರು | 40 | 378 | 391 | 769 |
| ಬಂಟ್ವಾಳ | 59 | 437 | 466 | 903 |
| ಬೆಳ್ತಂಗಡಿ | 49 | 323 | 355 | 678 |
| ಪುತ್ತೂರು | 23 | 185 | 190 | 375 |
| ಸುಳ್ಯ | 26 | 145 | 158 | 303 |
| ಕಡಬ | 21 | 132 | 153 | 285 |
| ಒಟ್ಟು | 231 | 1,710 | 1,825 | 3,535 |
| **ಉಡುಪಿ ಜಿಲ್ಲೆ** | | | | |
| ಬೈಂದೂರು | 15 | 121 | 137 | 258 |
| ಕುಂದಾಪುರ | 45 | 296 | 318 | 614 |
| ಬ್ರಹ್ಮಾವರ | 28 | 211 | 216 | 427 |
| ಉಡುಪಿ | 17 | 181 | 188 | 369 |
| ಕಾಪು | 16 | 134 | 154 | 288 |
| ಹೆಬ್ರಿ | 9 | 57 | 65 | 122 |
| ಕಾರ್ಕಳ | 28 | 207 | 220 | 427 |
| ಒಟ್ಟು | 158 | 1,207 | 1,298 | 2,505 |

### ಚಿತ್ರದುರ್ಗ– ದಾವಣಗೆರೆ: ಕಾಂಗ್ರೆಸ್–ಬಿಜೆಪಿ ನಡುವೆ ಸಮಬಲದ ಪೈಪೋಟಿ

# 'ಕೈ'ಕೋಟೆಯಲ್ಲಿ 'ಕಮಲ' ಅರಳುವ ಉಮೇದು

• ಜಿ.ಬಿ.ನಾಗರಾಜ್

**ಚಿತ್ರದುರ್ಗ:** ಕಲ್ಲಿನಕೋಟೆಯಲ್ಲಿ 'ಕಮಲ' ಅರಳಿಸಿದ ಉಮೇದಿನಲ್ಲಿರುವ ಬಿಜೆಪಿ, ವಿಧಾನಪರಿಷತ್ ಚುನಾವಣೆಯಲ್ಲಿ ವಿಜಯ ಪತಾಕೆ ಹಾರಿಸುವ ವಿಶ್ವಾಸದಿಂದ ಮುನ್ನುಗ್ಗುತ್ತಿದೆ. ಪ್ರಬಲ ಪ್ರತಿರೋಧ ತೋರುತ್ತಲೇ ಸಶಕ್ತವಾಗುವ ಆಶಾಭಾವದೊಂದಿಗೆ ಕ್ಷೇತ್ರ ಉಳಿಸಿಕೊಳ್ಳಲು ಕಾಂಗ್ರೆಸ್ ಸೆಣಸಾಡುತ್ತಿದೆ. ಕಾಂಗ್ರೆಸ್–ಬಿಜೆಪಿ ಸಮಬಲದ ಪೈಪೋಟಿಗೆ ಪಕ್ಷೇತರ ಅಭ್ಯರ್ಥಿ ಸಾಕ್ಷಿಯಾಗಿದ್ದಾರೆ.

ಚಿತ್ರದುರ್ಗ ಹಾಗೂ ದಾವಣಗೆರೆ (ದಾವಣಗೆರೆ, ಜಗಳೂರು, ಹರಿಹರ ತಾಲ್ಲೂಕು) ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ನಡೆಯುತ್ತಿರುವ ಚುನಾವಣೆ ಎರಡೂ ಜಿಲ್ಲೆಗಳಲ್ಲಿ ಕದನ ಕುತೂಹಲ ಮೂಡಿಸಿದೆ. ಬಿಜೆಪಿ ರಾಜ್ಯ ಕಾರ್ಯದರ್ಶಿ ಕೆ.ಎಸ್.ನವೀನ್ ಅವರು 'ಕಮಲ' ಪಡೆಯಿಂದ ಅಖಾಡಕ್ಕೆ ಇಳಿದಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿ.ಸೋಮಶೇಖರ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಪಕ್ಷೇತರರಾಗಿ ಹನುಮಂತಪ್ಪ ಕಣದಲ್ಲಿದ್ದಾರೆ. ಕ್ಷೇತ್ರವನ್ನು ಎರಡು ಬಾರಿ ಪ್ರತಿನಿಧಿಸಿದ್ದ ಕಾಂಗ್ರೆಸ್‌ನ ಜಿ.ರಘು ಆಚಾರ್ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಎರಡು ಬಾರಿ ಸೋಲು ಕಂಡಿದ್ದ ಕೆ.ಎಸ್.ನವೀನ್ ಅವರಿಗೆ ಮತ್ತೊಮ್ಮೆ ಅವಕಾಶ ಕಲ್ಪಿಸಿದ ಬಿಜೆಪಿ, ಅನುಕಂಪದ ದಾಳ ಉರುಳಿಸಿದೆ. ಎಂಟು ಶಾಸಕರು, ಇಬ್ಬರು ಸಂಸದರು ಇವರ ಬೆನ್ನಿಗಿರುವುದರಿಂದ ದೃಢ ಹೆಜ್ಜೆಗಳನ್ನು ಇಡುತ್ತಿದ್ದಾರೆ. ಅಭ್ಯರ್ಥಿಯೊಂದಿಗೆ ಕೆಲ ಶಾಸಕರು ಹೊಂದಿದ್ದ ಭಿನ್ನಾಭಿಪ್ರಾಯಗಳನ್ನು ಬಿಜೆಪಿ ವರಿಷ್ಠರು ನಿವಾರಿಸಿದಂತೆ ಕಾಣುತ್ತಿದೆ. ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಸಾರಿಗೆ ಸಚಿವ ಬಿ.ಶ್ರೀರಾಮುಲು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ, ಸಂಸದ ಜಿ.ಎಂ. ಸಿದ್ದೇಶ್ವರ ಪಕ್ಷದ ಪ್ರತಿಷ್ಠೆ ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ.

ಗ್ರಾಮ ಪಂಚಾಯಿತಿಯಿಂದ ಬೆಳೆದು ಬಂದಿರುವ ಬಿ.ಸೋಮಶೇಖರ 'ಹೊರಗಿನ ಅಭ್ಯರ್ಥಿ' ಎಂಬ ಆರೋಪ ಎದುರಿಸುತ್ತಿದ್ದಾರೆ. ಮೂವರು ಶಾಸಕರು ಹಾಗೂ ವಿಧಾನಸಭಾ, ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡ ಕಾಂಗ್ರೆಸ್ ನಾಯಕರು ಜೊತೆಗಿದ್ದಾರೆ. ಮಾಜಿ ಸಚಿವ ಎಚ್.ಆಂಜನೇಯ ಸಾರಥ್ಯದ ಕಾಂಗ್ರೆಸ್ ಪಡೆಯು ಬಿಜೆಪಿಯ 'ಆಡಳಿತ ವೈಫಲ್ಯ'ವನ್ನು ಮತದಾರರಿಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಿದೆ. ಗ್ರಾಮ ಪಂಚಾಯಿತಿ ಅಧಿಕಾರ ಮೊಟಕುಗೊಳಿಸಲು ಬಿಜೆಪಿ ಹುನ್ನಾರ ನಡೆಸಿದೆ ಎಂಬ ಅಸ್ತ್ರ ಪ್ರಯೋಗಿಸಿದೆ.

ಹಲವು ಬಾರಿ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಜೆಡಿಎಸ್ ತಟಸ್ಥವಾಗಿದೆ. ಹಿರಿಯೂರು, ಚಿತ್ರದುರ್ಗ ಮತ್ತು ಹರಿಹರ ತಾಲ್ಲೂಕುಗಳಲ್ಲಿ ಪ್ರಭಾವ ಇಟ್ಟುಕೊಂಡಿರುವ ಜೆಡಿಎಸ್ ತಳೆಯುವ ನಿಲುವು ಅಭ್ಯರ್ಥಿ ಗೆಲುವು ನಿರ್ಧರಿಸುವ ಸಾಧ್ಯತೆ ಇದೆ. ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿರುವ ಜೆಡಿಎಸ್ ಸದಸ್ಯರು ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಮತದಾನದ ಹಕ್ಕು ಹೊಂದಿರುವ ಸ್ಥಳೀಯ ಸಂಸ್ಥೆಗಳ ಸದಸ್ಯರು ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷ ನಿಷ್ಠೆ ಪ್ರದರ್ಶಿಸಿದ್ದು ಕಡಿಮೆ ಎಂಬುದು ಕ್ಷೇತ್ರದ ಇತಿಹಾಸ.



**ಕ್ಷೇತ್ರಕ್ಕೆ ಸಂಬಂಧವೇ ಇಲ್ಲದ ಅಭ್ಯರ್ಥಿಯನ್ನು ಮತದಾರರು ತಿರಸ್ಕರಿಸುತ್ತಾರೆ ಎಂಬ ವಿಶ್ವಾಸ ಇದೆ. ಸ್ಥಳೀಯ ಸಂಸ್ಥೆಗಳಲ್ಲಿರುವ ಯುವಪಡೆ ಬದಲಾವಣೆ ಬಯಸುತ್ತಿದೆ.**
**ಕೆ.ಎಸ್.ನವೀನ್,** ಬಿಜೆಪಿ ಅಭ್ಯರ್ಥಿ



**ಗ್ರಾಮ ಪಂಚಾಯಿತಿ ಸದಸ್ಯನಾಗಿ ಕಾರ್ಯನಿರ್ವಹಿಸಿದ ಅನುಭವವಿದೆ. ಮೂರು ತಿಂಗಳಿಂದ ಮತದಾರರ ಸಂಪರ್ಕದಲ್ಲಿದ್ದೇನೆ. ಅವರೂ ನನ್ನನ್ನು ಸ್ವೀಕರಿಸಿದ್ದಾರೆ.**
**ಬಿ.ಸೋಮಶೇಖರ ಕಾಂಗ್ರೆಸ್,** ಅಭ್ಯರ್ಥಿ

| ಒಟ್ಟು ಮತದಾರರು | 5,073 |
|---|---|
| ಮಹಿಳಾ ಮತದಾರರು | 2,689 |
| ಪುರುಷ ಮತದಾರರು | 2,384 |
| ಒಟ್ಟು ಮತಗಟ್ಟೆಗಳು | 284 |



**ಪ್ರಚಾರ ಸಭೆ**

ವಿಧಾನಪರಿಷತ್ ಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಚನ್ನರಾಜ ಹಟ್ಟಿಹೊಳಿ ಬೆಳಗಾವಿ ಜಿಲ್ಲೆಯ ರಾಯಬಾಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ನೂರಾರು ಮಂದಿ ಭಾಗವಹಿಸಿದ್ದರು. ಆದರೆ ಯಾರೊಬ್ಬರು ಅಂತರ ಕಾಪಾಡಿಕೊಳ್ಳುವುದಾಗಲಿ, ಮಾಸ್ಕ್ ಧರಿಸಿದ್ದಾಗಲಿ ಕಂಡುಬರಲಿಲ್ಲ

## ವೇದಿಕೆ ಮೇಲೆ ರಘು ಸಾಷ್ಟಾಂಗ ನಮಸ್ಕಾರ

**ಮೈಸೂರು:** ವಿಧಾನ ಪರಿಷತ್ತಿನ ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆರ್.ರಘು ಭಾನುವಾರ ಇಲ್ಲಿನ ರಾಜೇಂದ್ರ ಕಲಾಮಂದಿರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ವೇದಿಕೆ ಮೇಲೆ ಮತದಾರರಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿ, ಮತ ಯಾಚಿಸಿದರು. ಇದಕ್ಕೂ ಮುನ್ನ ಅವರು ಚಪ್ಪಲಿ ಕಳಚಿ ಬಿ.ಎಸ್.ಯಡಿಯೂರಪ್ಪ ಅವರ ಕಾಲಿಗೆ ನಮಸ್ಕರಿಸಿ, 'ನನ್ನ ಆರಾಧ್ಯ ದೈವ ಯಡಿಯೂರಪ್ಪ' ಎಂದರು.

'ಜೆಡಿಎಸ್ ಎಲ್ಲಿ ಸ್ಪರ್ಧಿಸಿಲ್ಲವೋ ಅಲ್ಲಿ ಮಾತ್ರ ಆ ಪಕ್ಷದ ಬೆಂಬಲ ಕೋರಿದ್ದೇವೆ. ಮೈಸೂರು–ಚಾಮರಾಜನಗರ ಕ್ಷೇತ್ರದಲ್ಲಿ ಜೆಡಿಎಸ್ ಜತೆ ಮೈತ್ರಿ ಇಲ್ಲ' ಎಂದು ಯಡಿಯೂರಪ್ಪ ಹೇಳಿದರು.

## ಚುನಾವಣೆ ಎದುರಿಸಲು ಹಣದ ಶಕ್ತಿ ಇಲ್ಲ: ಎಚ್‌.ಡಿ.ದೇವೇಗೌಡ

**ಮಂಡ್ಯ:** 'ಸ್ಥಳೀಯ ಸಂಸ್ಥೆಗಳ ಎಲ್ಲಾ ವಿಧಾನ ಪರಿಷತ್ ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿ ಕಣಕ್ಕಿಳಿಸಲು ನಮ್ಮಲ್ಲಿ ಹಣದ ಶಕ್ತಿ ಇಲ್ಲ. ಹೀಗಾಗಿ, ಗೆಲ್ಲುವ ಕ್ಷೇತ್ರಗಳಲ್ಲಿ ಮಾತ್ರ ನಮ್ಮ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಭಾನುವಾರ ಇಲ್ಲಿ ಹೇಳಿದರು.

'ಕಲಬುರಗಿಯಲ್ಲಿ ನಮ್ಮ ಪಕ್ಷ ಬೆಂಬಲಿಸುವ 1 ಸಾವಿರ ಮತದಾರರಿದ್ದಾರೆ, ರಾಯಚೂರು, ವಿಜಯಪುರದಲ್ಲಿ 900, ಯಾದಗಿರಿಯಲ್ಲಿ 500 ಮತದಾರರಿದ್ದಾರೆ. ನಮ್ಮ ಅಭ್ಯರ್ಥಿಗಳು ಇಲ್ಲದ ಕಡೆ ಬಿಜೆಪಿ ಬೆಂಬಲಿಸುವ ಕುರಿತು ಎಚ್.ಡಿ.ಕುಮಾರಸ್ವಾಮಿ ಸೋಮವಾರ ನಿರ್ಧಾರ ಪ್ರಕಟಿಸುತ್ತಾರೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ಕಲ್ಪಿಸಿದ ಮೀಸಲಾತಿಯಿಂದಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಬುಡುಬುಡುಕೆ ಸಮುದಾಯದವರೂ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗೇರಿದರು. ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷ 16 ಸ್ಥಾನಗಳಲ್ಲಿ ಜಯ ಗಳಿಸಿತು. ಬಳಿಕ ನಮ್ಮ ಪಕ್ಷದವರೇ (ಜೆ.ಎಚ್.ಪಟೇಲ್, ಸಿದ್ದರಾಮಯ್ಯ) ಮೂರೂವರೆ ವರ್ಷ ಅಧಿಕಾರ ನಡೆಸಿದರು. ಆಗ ನಡೆದ ಲೋಕಸಭಾ ಚುನಾವಣೆಯಲ್ಲಿ ಕೇವಲ 2 ಸ್ಥಾನ ಗೆಲ್ಲಲಷ್ಟೇ ಸಾಧ್ಯವಾಯಿತು, ಇದಕ್ಕೆ ಯಾರು ಹೊಣೆ' ಎಂದು ಪ್ರಶ್ನಿಸಿದರು.

'ಎಚ್.ಡಿ.ಕುಮಾರಸ್ವಾಮಿ ಸರ್ಕಾರವನ್ನು ದರಿದ್ರ ಸರ್ಕಾರ ಎಂದಿದ್ದವರು ನಮ್ಮ ಮನೆಯ ಬಾಗಿಲಿಗೆ ಬಂದು ನಿಂತಿದ್ದರು. 2023ಕ್ಕೆ ನಾವು ಯಾರ ಮನೆ ಬಾಗಿಲಿಗೂ ಹೋಗುವುದಿಲ್ಲ. ಬಿಜೆಪಿ ಅಥವಾ ಕಾಂಗ್ರೆಸ್ 150 ಸ್ಥಾನ ಗೆದ್ದರೆ ನಾವು ವಿರೋಧ ಪಕ್ಷದಲ್ಲಿ ಕೂರುತ್ತೇವೆ' ಎಂದರು.

'ನಾನು ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ್ದಕ್ಕೆ ಬೇರೆ ಅರ್ಥ ಕಲ್ಪಿಸುತ್ತಿದ್ದಾರೆ. ಗೋಧ್ರಾ ಘಟನೆ ನಡೆದಾಗ ಇದ್ದ ಮೋದಿ ಅವರಿಗೂ ಈಗಿನ ಮೋದಿ ಅವರಿಗೂ ವ್ಯತ್ಯಾಸವಿದೆ.' ಎಂದು ಹೇಳಿದರು.

## ಜಾರಕಿಹೊಳಿ ಸಹೋದರರು ಒಂದಾಗಲ್ಲ: ಸತೀಶ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಅಣ್ಣ–ತಮ್ಮಂದಿರು (ಜಾರಕಿಹೊಳಿ ಸಹೋದರರು) ಕೊನೆಗೆ ಒಂದಾಗುತ್ತಾರೆ ಎಂಬ ಮನಸ್ಥಿತಿಯಿಂದ ಮತದಾರರು ಹೊರಬರಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ತಿಳಿಸಿದರು.

ವಿಧಾನಪರಿಷತ್ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಚನ್ನರಾಜ ಹಟ್ಟಿಹೊಳಿ ಪರವಾಗಿ ರಾಯಬಾಗದಲ್ಲಿ ಭಾನುವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಈ ಸಹೋದರರೆಲ್ಲರೂ ಒಂದೇ ಎನ್ನುವ ನಿಮ್ಮ ಭ್ರಮೆಗೆ ಜಗತ್ತಿನಲ್ಲಿ ಔಷಧಿ ಇಲ್ಲ; ಕಂಡು ಹಿಡಿಯುವುದಕ್ಕೂ ಆಗುವುದಿಲ್ಲ. ಇವರು ಈಗೇನು ಮತ್ತು ಕೊನೆಗೇನು ಮಾಡುತ್ತಾರೆ ಎಂದೇ ಚರ್ಚಿಸುತ್ತಿದ್ದೀರಿ. ನಾನು ಕಾಂಗ್ರೆಸ್‌ಗೆ ಮಾತ್ರವೇ ಕೆಲಸ ಮಾಡುತ್ತಿದ್ದೇನೆ' ಎಂದು ಸ್ಪಷ್ಟಪಡಿಸಿದರು.

## ಮೈತ್ರಿ ಬಗ್ಗೆ ಇಂದು ನಿರ್ಧಾರ: ಎಚ್‌ಡಿಕೆ

**ಮೈಸೂರು:** 'ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವ ಬಗ್ಗೆ ಸೋಮವಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, 'ಮೈತ್ರಿ ಬಗ್ಗೆ ಎಲ್ಲೂ ಅಧಿಕೃತ ಚರ್ಚೆ ಆಗಿಲ್ಲ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜೆಡಿಎಸ್ ಅಭ್ಯರ್ಥಿಗಳು ಇಲ್ಲದ ಕಡೆಗಳಲ್ಲಿ ಬಿಜೆಪಿ ಬೆಂಬಲಿಸುವಂತೆ ನನ್ನಲ್ಲಿ ಕೋರಿದ್ದಾರೆ. ಇದು ನಮ್ಮಿಬ್ಬರ ನಡುವಿನ ವೈಯಕ್ತಿಕ ಮೈತ್ರಿಯೇ ಹೊರತು, ಪಕ್ಷದ ತೀರ್ಮಾನ ಅಲ್ಲ' ಎಂದು ಸ್ಪಷ್ಟಪಡಿಸಿದರು.

'ಮೈತ್ರಿ ಕುರಿತು ಎಚ್.ಡಿ.ದೇವೇಗೌಡ ಸೇರಿದಂತೆ ಎಲ್ಲರ ಜತೆ ಚರ್ಚಿಸಿ ಸೋಮವಾರ ಬೆಂಗಳೂರಿನಲ್ಲಿ ಅಂತಿಮ ನಿರ್ಧಾರ ಪ್ರಕಟಿಸುತ್ತೇನೆ. ಯಡಿಯೂರಪ್ಪ ಹೊರತುಪಡಿಸಿ, ಬಿಜೆಪಿಯ ಬೇರೆ ಯಾರೂ ಪಕ್ಷದ ಬೆಂಬಲ ಕೇಳಿಲ್ಲ' ಎಂದರು.

## 'ಪಂಚರತ್ನ : ಜಾರಿ ಮಾಡದಿದ್ದರೆ ಜೆಡಿಎಸ್ ಮುಚ್ಚುತ್ತೇನೆ'


**ಮೈಸೂರು:** 'ಪಂಚರತ್ನ ಯೋಜನೆ ರೂಪಿಸಿದ್ದು, 2023ಕ್ಕೆ ಜೆಡಿಎಸ್ ಅಧಿಕಾರಕ್ಕೆ ಬಂದರೆ ಅದನ್ನು ಜಾರಿ ಮಾಡುತ್ತೇನೆ. ಜಾರಿ ಮಾಡಲು ಸಾಧ್ಯವಾಗದಿದ್ದರೆ ಜೆಡಿಎಸ್ ಪಕ್ಷವನ್ನೇ ಮುಚ್ಚುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು ಬನ್ನೂರು ಸಮೀಪದ ತುರಗನೂರು ಗ್ರಾಮದಲ್ಲಿ ಭಾನುವಾರ ಜೆಡಿಎಸ್ ಪ್ರಚಾರ ಸಭೆಯಲ್ಲಿ ಮಾತನಾಡಿ, 'ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮದಲ್ಲಿ ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಲಾಗುವುದು.' ಎಂದರು.

### ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯ

# 'ಕಾಂಗ್ರೆಸ್ ವಯಸ್ಸಾದ ಪಕ್ಷ'

ಪ್ರಜಾವಾಣಿ ವಾರ್ತೆ

**ಬೀದರ್:** 'ಕಾಂಗ್ರೆಸ್ ವಯಸ್ಸಾದ ಪಕ್ಷ. ಸ್ವಾತಂತ್ರ್ಯ ನಂತರ ಕಾಂಗ್ರೆಸ್ ವಿಸರ್ಜಿಸುವಂತೆ ಮಹಾತ್ಮ ಗಾಂಧಿ ಹೇಳಿದ್ದರು. ಆದರೆ, ಆ ಪಕ್ಷದ ಮುಖಂಡರು ಒಪ್ಪಲಿಲ್ಲ. ಈಗ ಜನರೇ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.



ಬಸವರಾಜ ಬೊಮ್ಮಾಯಿ

ನಗರದ ಫಾಳೆ ಫಂಕ್ಷನ್ ಹಾಲ್‌ನಲ್ಲಿ ಭಾನುವಾರ ನಡೆದ ವಿಧಾನ ಪರಿಷತ್ ಬಿಜೆಪಿ ಅಭ್ಯರ್ಥಿ ಪ್ರಕಾಶ ಖಂಡ್ರೆ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ರಾಹುಲ್ ಗಾಂಧಿ ನಾಯಕರೆಂದು ಯಾರೂ ಒಪ್ಪಿಕೊಳ್ಳುವುದಿಲ್ಲ' ಎಂದರು.

'ಕಾಂಗ್ರೆಸ್ ನಾಯಕರು ಅಧಿಕಾರದಲ್ಲಿ ಇದ್ದಾಗ ಒಂದು ರೀತಿ, ಅಧಿಕಾರ ಇಲ್ಲದಿದ್ದಾಗ ಇನ್ನೊಂದು ರೀತಿ ಇರುತ್ತಾರೆ. ಅಧಿಕಾರ ಇದ್ದಾಗ ಜನರ ಸಮಸ್ಯೆ ಅರಿತುಕೊಳ್ಳಲು ಪ್ರಯತ್ನಿಸಲಿಲ್ಲ' ಎಂದರು.

'ಬಿಜೆಪಿ ಸರ್ಕಾರ ಕಲ್ಯಾಣ ಕರ್ನಾಟಕಕ್ಕೆ ₹ 3 ಸಾವಿರ ಕೋಟಿ ಕೊಟ್ಟಿದೆ. ಹಿಂದಿನ ಕಾಂಗ್ರೆಸ್ ಸರ್ಕಾರ 19 ಸಾವಿರ ಹುದ್ದೆಗಳು ಖಾಲಿ ಇದ್ದರೂ ಭರ್ತಿ ಮಾಡಲಿಲ್ಲ. ಬಿಜೆಪಿ ಸರ್ಕಾರ ಇದೀಗ ನೇಮಕಾತಿಗೆ ಆದೇಶ ನೀಡಿದೆ' ಎಂದರು.

## 'ಹಣ ಬಲದಿಂದ ಗೆಲ್ಲುವ ಹುನ್ನಾರ'

**ಆನೇಕಲ್ (ಬೆಂಗಳೂರು ಗ್ರಾಮಾಂತರ ಜಿಲ್ಲೆ):** ಜನ ಬೆಂಬಲವಿಲ್ಲದ ಕಾಂಗ್ರೆಸ್ ಪಕ್ಷ ವಿಧಾನ ಪರಿಷತ್ ಚುನಾವಣೆಯನ್ನು ಹಣಬಲದಿಂದ ಗೆಲ್ಲುವ ಹುನ್ನಾರ ನಡೆಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪ ಮಾಡಿದ್ದಾರೆ.

ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ನೀಡದೆ ಶ್ರೀಮಂತ ಅಭ್ಯರ್ಥಿಗಳನ್ನು ಹುಡುಕಿ ಕಣಕ್ಕಿಳಿಸಿದೆ. ಅಭ್ಯರ್ಥಿಯ ಹಣಬಲದಿಂದ ಚುನಾವಣೆ ಗೆಲ್ಲಲು ಹೊರಟಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ನಿಜವಾದ ಬಣ್ಣ ಬಯಲಾಗಿದೆ ಎಂದರು. ಅತ್ತಿಬೆಲೆಯಲ್ಲಿ ಭಾನುವಾರ ಬಿಜೆಪಿ ಆಯೋಜಿಸಿದ್ದ ವಿಜಯ ಸಂಕಲ್ಪ ಸಮಾವೇಶದಲ್ಲಿ ಅವರು ಮಾತನಾಡಿದರು. ಶ್ರೀಮಂತರಿಗೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ನೈತಿಕತೆ ಕಳೆದುಕೊಂಡಿದೆ. ಅನೈತಿಕ ಮಾರ್ಗದ ಮೂಲಕ ಚುನಾವಣೆ ಗೆಲ್ಲಲು ಬಯಸಿದೆ. ಆದರೆ, ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

## 'ಜಮೀರ್ ಕಾಲು ಹಿಡಿಯಬೇಕು'

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮುಂದಿನ ಚುನಾವಣೆಯಲ್ಲಿ ಬಾದಾಮಿಯಿಂದ ಸ್ಪರ್ಧಿಸುವುದಿಲ್ಲ. ಅವರಿಗೆ ಮುಸ್ಲಿಮರೇ ಗತಿ. ಜಮೀರ್ ಅಹ್ಮದ್‌ಖಾನ್ ಕಾಲು ಹಿಡಿದುಕೊಂಡು ಚಾಮರಾಜಪೇಟೆಯಲ್ಲಿ ಸ್ಪರ್ಧಿಸುತ್ತಾರೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ವಾಗ್ದಾಳಿ ನಡೆಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಧಾನ ಪರಿಷತ್ ಚುನಾವಣೆ ನಂತರ ಕಾಂಗ್ರೆಸ್‌ನಲ್ಲಿ ಅಲ್ಲೋಲ–ಕಲ್ಲೋಲ ಆಗುತ್ತದೆ' ಎಂದು ಭವಿಷ್ಯ ನುಡಿದರು.

'ನಾನು ಏನಾದರೂ ಹೇಳುತ್ತೇನೆ. ಅದಕ್ಕೂ ಅವರಿಗೂ ಸಂಬಂಧವಿಲ್ಲ. ಅದನ್ನು ಕೇಳೋಕೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಯಾರು' ಎಂದು ಈಶ್ವರಪ್ಪ ಅವರು ತಮ್ಮನ್ನು ಟೀಕಿಸಿದ ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದರು.

### ಲಾಟರಿ ಹೊಡೆದು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದರು: ಸಿದ್ದರಾಮಯ್ಯ

# 'ಬಿಜೆಪಿ, ಆರ್‌ಎಸ್‌ಎಸ್ ಗೋಡ್ಸೆ ಪಳೆಯುಳಿಕೆ'

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಗಾಂಧೀಜಿಯವರನ್ನೇ ಕೊಂದವರು ಆರ್‌ಎಸ್‌ಎಸ್‌ನವರು. ನಾಥೂರಾಮ್ ಗೋಡ್ಸೆ ಆರ್‌ಎಸ್‌ಎಸ್‌ನವನು. ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ಗೋಡ್ಸೆ ಪಳೆಯುಳಿಕೆ ಮತ್ತು ವಂಶಸ್ಥರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಕಲ್ಲೂರ ಹೊರವಲಯದ ಸಿದ್ದೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಕಾಂಗ್ರೆಸ್‌ನಿಂದ ಭಾನುವಾರ ಆಯೋಜಿಸಿದ್ದ ಸವದತ್ತಿ ಹಾಗೂ ರಾಮದುರ್ಗ ತಾಲ್ಲೂಕುಗಳ ಗ್ರಾಮ ಪಂಚಾಯಿತಿ ಸದಸ್ಯರ ಸಮ್ಮಿಲನ ಸಮಾವೇಶದಲ್ಲಿ ಅವರು ಮಾತನಾಡಿದರು.

'ನರೇಂದ್ರ ಮೋದಿ ಆರ್‌ಎಸ್‌ಎಸ್‌ನವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರ್‌ಎಸ್‌ಎಸ್‌ನವರಲ್ಲ. ಬಿ.ಎಸ್. ಯಡಿಯೂರಪ್ಪ ಅವರನ್ನು ಕಿತ್ತು ಹಾಕಿದಾಗ ಲಾಟರಿ ಹೊಡೆದು ಮುಖ್ಯಮಂತ್ರಿ ಆಗಿ ಬಿಟ್ಟರು. ಅವರನ್ನೂ ಕಿತ್ತು ಹಾಕಲು ಈಶ್ವರಪ್ಪ ಮಾತನಾಡುತ್ತಿದ್ದಾನೆ' ಎಂದು ಟೀಕಿಸಿದರು.

**ಸಿದ್ಧಾಂತದ ಮೇಲೆ ರಾಜಕಾರಣ ಮಾಡಬೇಕು. ಸ್ವಾರ್ಥಕ್ಕಾಗಿ ರಾಜಕಾರಣ ಮಾಡುವುದಲ್ಲ. ಜನರು ಪ್ರಭುಗಳೇ ಹೊರತು ಯಾರೋ ವ್ಯಕ್ತಿ ಅಲ್ಲ**
**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

'ಬಿಜೆಪಿಯವರದ್ದು ಹಿಂದಿನಿಂದಲೂ ಇಬ್ಬಂದಿ ರಾಜಕಾರಣ. ನೇರವಾಗಿ ರಾಜಕೀಯ ಮಾಡಿ ಗೊತ್ತೇ ಇಲ್ಲ ಅವರಿಗೆ' ಎಂದು ಟೀಕಿಸಿದ ಅವರು, 'ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ಬಿಜೆಪಿ ಹೆದರುತ್ತಿದೆ. ಸೋಲಿನ ಭಯ ಅವರನ್ನು ಕಾಡುತ್ತಿದೆ' ಎಂದು ವ್ಯಂಗ್ಯವಾಡಿದರು.

'ಸಾಲ ಮನ್ನಾ ಹಾಗೂ ಆಹಾರ ಭದ್ರತಾ ಕಾಯ್ದೆ ಮಾಡಿದವರು ನರೇಂದ್ರ ಮೋದಿ' ಎಂದು ಹೇಳಿದ ಸಿದ್ದರಾಮಯ್ಯ, ನಂತರ 'ಮನಮೋಹನ್ ಸಿಂಗ್ ಮಾಡಿದರು' ಎಂದು ತಪ್ಪು ತಿದ್ದಿಕೊಂಡರು.

## 'ಅಧಿಕೃತ ಅಭ್ಯರ್ಥಿಯನ್ನೇ ಸೋಲಿಸಿದ್ದ ಜಾರಕಿಹೊಳಿ'

'ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ರಮೇಶ ಜಾರಕಿಹೊಳಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯನ್ನ ಸೋಲಿಸಿದ್ದರು. ಈ ಬಾರಿಯೂ ತಮ್ಮ ಲಖನ್ ಜಾರಕಿಹೊಳಿಗಾಗಿ ಬಿಜೆಪಿ ಅಧಿಕೃತ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಅವರನ್ನು ಸೋಲಿಸಿದರೆ ಆಶ್ಚರ್ಯವಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು. 'ನಿಮ್ಮ ಪರವಾಗಿ ದನಿ ಎತ್ತುವವರನ್ನು ವಿಧಾನಪರಿಷತ್‌ಗೆ ಕಳುಹಿಸಿಕೊಡಬೇಕು. ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುವವರನ್ನು ಕಳುಹಿಸಬಾರದು. ಪಂಚಾಯಿತಿ ವ್ಯವಸ್ಥೆಗೆ ಶಕ್ತಿ ತುಂಬಿದ ಪಕ್ಷವನ್ನು ಬೆಂಬಲಿಸಬೇಕು' ಎಂದು ಕುಟುಕಿದರು. 'ಕುರುಬ ಸಮಾಜದ ವಿವೇಕರಾವ್ ಪಾಟೀಲಗೆ ಟಿಕೆಟ್ ಕೊಡದೆ ಮೋಸ ಮಾಡಿದರು ಎಂದು ರಮೇಶ ಜಾರಕಿಹೊಳಿ ನನ್ನ ಬಗ್ಗೆ ಮಾತನಾಡಿದ್ದಾರೆ. ವಿವೇಕರಾವ್ ನಮ್ಮ ಪಕ್ಷಕ್ಕೆ ಸೇರಲೇ ಇಲ್ಲ. ಅವರಿಗೆ ಟಿಕೆಟ್ ಕೊಡಲಾಗುತ್ತದೆಯೇ? ರಮೇಶನ ಅನುಯಾಯಿ ಅವನು. ರಮೇಶನ ಬ್ಯಾಗ್ ಹಿಡಿದು ಓಡಾಡುತ್ತಿದ್ದ. ಅವನಿಗೆ ಹೇಗೆ ಟಿಕೆಟ್ ಕೊಡಬೇಕು? ಅಷ್ಟು ಪ್ರೀತಿ ಇದ್ದಿದ್ದರೆ ರಮೇಶ ತನ್ನ ಆಪ್ತ ವಿವೇಕ್‌ರಾವ್ ಅವರನ್ನೇ ಚುನಾವಣೆಯಲ್ಲಿ ನಿಲ್ಲಿಸಬೇಕಿತ್ತು. ನಾಟಕ ಮಾಡಿ, ಸುಳ್ಳು ಹೇಳಿ ಜನರ ದಾರಿ ತಪ್ಪಿಸಲು ಸಾಧ್ಯವಿಲ್ಲ' ಎಂದರು.

## ಸಿ.ಎಂ ಬದಲಾವಣೆ ಪ್ರಸ್ತಾವ ಪಕ್ಷದ ಮುಂದಿಲ್ಲ: ಜೋಶಿ

**ಹುಬ್ಬಳ್ಳಿ:** 'ಮುಖ್ಯಮಂತ್ರಿ ಸ್ಥಾನದಿಂದ ಬಸವರಾಜ ಬೊಮ್ಮಾಯಿ ಅವರನ್ನು ಕೆಳಗಿಳಿಸುವ ಯಾವ ಪ್ರಸ್ತಾವವೂ ಪಕ್ಷದ ವರಿಷ್ಠರ ಮುಂದಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾನುವಾರ ಇಲ್ಲಿ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುರುಗೇಶ ನಿರಾಣಿ ಈಗಲೇ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳಿಲ್ಲ. ಅಲ್ಲದೆ, ಮುಖ್ಯಮಂತ್ರಿ ಬದಲಾವಣೆ ಎನ್ನುವುದು ಊಹಾಪೋಹ. ಅಂತಹ ಹೇಳಿಕೆಗಳನ್ನು ಯಾರೂ ನೀಡಬಾರದು ಎಂದು ಈಗಾಗಲೇ ವರಿಷ್ಠರು ರಾಜ್ಯದ ಮುಖಂಡರಿಗೆ ಸೂಚನೆ ನೀಡಿದ್ದಾರೆ' ಎಂದರು.

'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದು ರಾಜಕೀಯ ವಿಷಯವಾಗಿ ಅಲ್ಲ.' ಎಂದು ಹೇಳಿದರು.

## 'ರಮೇಶ್ ಕುಮಾರ್ ನೀತಿ ಹೇಳಲಷ್ಟೇ ಲಾಯಕ್ಕು'

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** 'ರಮೇಶ್ ಕುಮಾರ್ ನೀತಿ ಹೇಳಲು ಅಷ್ಟೇ ಲಾಯಕ್ಕು. ಆದರೆ ಅವರು ತಮ್ಮ ಜೀವನದಲ್ಲಿ ಆ ನೀತಿಪಾಠಗಳ ರೀತಿ ನಡೆದುಕೊಳ್ಳುವುದಿಲ್ಲ. ನುಡಿಯೊಂದು ನಡೆಯೊಂದು' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಟೀಕಿಸಿದರು.

ತಾಲ್ಲೂಕಿನ ಗೋಪಿನಾಥಬೆಟ್ಟದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶ್ರೀನಿವಾಸಪುರ ಶಾಸಕ ಕೆ.ಆರ್.ರಮೇಶ್ ಕುಮಾರ್ ಕೊಕ್ಕರೆ ಇದ್ದಂತೆ. ಮಾತಿಗೊಮ್ಮೆ ದೇವರಾಜ ಅರಸು ಹೆಸರು ಹೇಳುತ್ತಾರೆ. ಆದರೆ ಅರಸು ಅವರನ್ನು ಹಿಂಬಾಲಿಸಲಿಲ್ಲ. ನಂತರ ದೇವೇಗೌಡರ ಜತೆ ಇದ್ದರು. ದೇವೇಗೌಡರ ಅಧಿಕಾರ ಹೋಗುತ್ತಿದ್ದಂತೆ ಮತ್ತೆ ಎತ್ತ ಕಡೆ ಹೋದರು? ಅವರು ಊರೂರು ಅಲೆಯುವ ಕೊಕ್ಕರೆಯಂತೆ ವಲಸಿಗ ಹಕ್ಕಿ' ಎಂದು ಟೀಕಿಸಿದರು.

'ಕೋಲಾರ- ಚಿಕ್ಕಬಳ್ಳಾಪುರ ವಿಧಾನ ಪರಿಷತ್ ಕ್ಷೇತ್ರದಲ್ಲಿ ಜೆಡಿಎಸ್ ಸಹಕಾರ ಕೋರಿದ್ದೇವೆ. ಕಾಂಗ್ರೆಸ್‌ನ ಕೆಲವು ನಾಯಕರ ಹಾಗೂ ಸ್ಥಳೀಯ ಸಂಸ್ಥೆಗಳ ಪಕ್ಷೇತರರ ಸಹಕಾರ ಕೋರಿದ್ದೇವೆ' ಎಂದು ತಿಳಿಸಿದರು.

'ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರ ಮೊಟ್ಟೆ ಮತ್ತು ಹಾಲು ಕೊಡಬೇಕು ಎಂದಿತು. ಕೆಲವರು ಮೊಟ್ಟೆ ತಿನ್ನುವುದಿಲ್ಲ ಎಂದರು. ಈಗಲೂ ಕೆಲವರು ಹಾಲನ್ನೂ ತೆಗೆದುಕೊಳ್ಳುವುದಿಲ್ಲ. ಆಹಾರ ಪದ್ಧತಿ ಅವರ ವೈಯಕ್ತಿಕ ಮತ್ತು ನಂಬಿಕೆಯ ವಿಚಾರ. ತಿನ್ನಲೇಬೇಕು ಎಂದೇನೂ ಇಲ್ಲ. ಆ ನಂಬಿಕೆಗಳಿಗೆ ಸರ್ಕಾರ ಗೌರವ ಕೊಡುತ್ತದೆ' ಎಂದು ಹೇಳಿದರು.

ಆಫ್‌ಸ್ಪ ವಾಪಸ್ ಪಡೆಯಲು ನಾಗಾಲ್ಯಾಂಡ್ ಜನರ ಒತ್ತಾಯ ● ಹಾರ್ನ್‌ಬಿಲ್ ಉತ್ಸವ ಬಹಿಷ್ಕಾರ

# 'ಸೇನೆಯ ವಿಶೇಷಾಧಿಕಾರ ರದ್ದುಪಡಿಸಿ'

ಪ್ರಜಾವಾಣಿ ವಾರ್ತೆ

**ಕೊಹಿಮಾ/ಗುವಾಹಟಿ:** 'ಸೇನೆಗೆ ನೀಡಿರುವ ರಕ್ತಪಿಪಾಸು ವಿಶೇಷಾಧಿಕಾರವನ್ನು ತಕ್ಷಣವೇ ರದ್ದುಪಡಿಸಿ'. 'ನಾಗರಿಕರ ಹತ್ಯೆಯ ಹೊಣೆಗಾರಿಯಿಂದ ಸೈನಿಕರಿಗೆ ರಕ್ಷಣೆ ನೀಡುವ ವಿಶೇಷಾಧಿಕಾರವನ್ನು ತಕ್ಷಣವೇ ವಜಾ ಮಾಡಿ'.

ಸಾಮಾಜಿಕ ಜಾಲತಾಣಗಳಲ್ಲಿ #Nagaland ಹ್ಯಾಷ್‌ಟ್ಯಾಗ್‌ನಲ್ಲಿ ನಾಗಾಲ್ಯಾಂಡ್ ಸೇರಿ ಈಶಾನ್ಯ ಭಾರತದ ರಾಜ್ಯಗಳ ಜನರು ಮಾಡುತ್ತಿರುವ ಆಗ್ರಹವಿದು. ನಾಗಾಲ್ಯಾಂಡ್‌ನ ಮೊನ್ ಜಿಲ್ಲೆಯ ಟಿರು ಮತ್ತು ಒಟಿಂಗ್‌ನಲ್ಲಿ ಸೈನಿಕರ ಗುಂಡಿಗೆ ನಿರಾಯುಧ ಗ್ರಾಮಸ್ಥರು ಬಲಿಯಾದ ನಂತರ ಸೇನೆಯ ವಿಶೇಷಾಧಿಕಾರ ರದ್ದು ಮಾಡಿ ಎಂಬ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ.

ಈಶಾನ್ಯ ಭಾರತದ ಗಲಭೆ ಮತ್ತು ಸಂಘರ್ಷ ಪೀಡಿತ ರಾಜ್ಯಗಳಾದ ನಾಗಾಲ್ಯಾಂಡ್, ಮಣಿಪುರ, ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ಆಯ್ದ ಭಾಗಗಳಲ್ಲಿ ಕಾರ್ಯಾಚರಣೆ ನಡೆಸುವ ಸೇನೆಯ ವಿವಿಧ ಪಡೆಗಳಿಗೆ ವಿಶೇಷಾಧಿಕಾರವಿದೆ. 1958ರಲ್ಲಿ 'ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ (ಆಫ್‌ಸ್ಪ) ಮೂಲಕ ವಿಶೇಷಾಧಿಕಾರ ನೀಡಲಾಗಿತ್ತು. ವ್ಯಕ್ತಿಯೊಬ್ಬ ಕಾನೂನನ್ನು ಉಲ್ಲಂಘಿಸಿದ ಎಂದು ಸೈನಿಕರು ಭಾವಿಸಿದರೆ, ಆ ವ್ಯಕ್ತಿಯ ಮೇಲೆ ಗುಂಡು ಹಾರಿಸಬಹುದು. ವಾರಂಟ್ ಇಲ್ಲದೆ ಯಾವುದೇ ವ್ಯಕ್ತಿಯ ಮನೆಯನ್ನು ತಪಾಸಣೆ ಮಾಡಬಹುದು ಮತ್ತು ಬಂಧಿಸಬಹುದು ಎಂದು ವಿಶೇಷಧಿಕಾರವು ಹೇಳುತ್ತದೆ.

'ಟಿರು ಮತ್ತು ಒಟಿಂಗ್‌ನಲ್ಲಿ ನಾಗರಿಕರ ಮೇಲೆ ಗುಂಡು ಹಾರಿಸಿದ ಸೈನಿಕರು ಸಹ ಈ ಕಾಯ್ದೆಯ ಅಡಿ ರಕ್ಷಣೆ ಪಡೆಯಬಹುದು. ಅವರನ್ನು ಖುಲಾಸೆ ಮಾಡಬಹುದು. ಹೀಗಾಗಿ ಈ ಕಾಯ್ದೆಯನ್ನು ತಕ್ಷಣವೇ ರದ್ದುಪಡಿಸಬೇಕು' ಎಂದು ನಾಗಾಲ್ಯಾಂಡ್‌ನ ಕೂಕಿ ವಿದ್ಯಾರ್ಥಿ ಸಂಘಟನೆ ಆಗ್ರಹಿಸಿದೆ.

'1958ರಲ್ಲಿ ಸೇನೆಗೆ ಆಫ್‌ಸ್ಪ ಮೂಲಕ 'ಕೊಲ್ಲುವ ಪರವಾನಗಿ' ನೀಡಿದ ನಂತರ ಈಶಾನ್ಯ ಭಾರತವು ಸೇನೆಯ ಹತ್ಯಾಕ್ಷೇತ್ರವಾಗಿದೆ. ಬ್ರಿಟಿಷರ ಕಾಲದಲ್ಲಿಯೇ ಈ ಆಫ್‌ಸ್ಪವನ್ನು ಜಾರಿಗೆ ತರಲಾಗಿತ್ತು. ಅದೇ ಕಾನೂನನ್ನು ಪ್ರಜಾಪ್ರಭುತ್ವದಲ್ಲಿಯೂ ಮುಂದುವರಿಸಲು ಸಾಧ್ಯವಿಲ್ಲ. ಇದನ್ನು ತಕ್ಷಣವೇ ವಾಪಸ್ ಪಡೆಯಬೇಕು. ಮೊನ್ ಜಿಲ್ಲೆಯಲ್ಲಿನ ಹತ್ಯಾಕಾಂಡವು 1984ರ ಹಿರಾಂಗೊಯಿತಾಂಗ್ ಹತ್ಯಾಕಾಂಡ, 2000ರ ಮಾಲೊಮ್ ಹತ್ಯಾಕಾಂಡ ಮತ್ತು ಮಣಿಪುರದ ರಿಮ್ಸ್ ಹತ್ಯಾಕಾಂಡವನ್ನು ನೆನಪಿಸುತ್ತಿದೆ' ಎಂದು ಮಣಿಪುರದಲ್ಲಿನ ಮಾನವ ಹಕ್ಕುಗಳ ಕಾರ್ಯಕರ್ತೆ ಬಿನಲಕ್ಷ್ಮಿ ನೆಪ್ರಾನ್ ಹೇಳಿದ್ದಾರೆ.

'ಈ ರಾಜ್ಯಗಳಲ್ಲಿ, ಗಡಿಯಾಚೆಯಿಂದ ಬೆಂಬಲ ಹೊಂದಿರುವ ಉಗ್ರರು ಸೃಷ್ಟಿಸುವ ಸನ್ನಿವೇಶಗಳನ್ನು ಎದುರಿಸಲು ವಿಶೇಷ ಅಧಿಕಾರ ಸೇನೆಗೆ ಬೇಕೇಬೇಕು' ಎಂದು ಸೇನೆ ಅಧಿಕಾರಿಗಳು ಹೇಳಿದ್ದಾರೆ.






ಸೈನಿಕರ ಗುಂಡಿಗೆ ಬಲಿಯಾದ ನಾಗರಿಕರ ಶವಗಳನ್ನು ಕೊನ್ಯಾಕ್ ಮುರಾಂಗ ಸಂಘಟನೆ ಕಚೇರಿ ಎದುರು ಇರಿಸಲಾಗಿತ್ತು (ಎಡಚಿತ್ರ) ನಾಗಾಲ್ಯಾಂಡ್‌ನ ಕಿಸಾಮಾದಲ್ಲಿ ನಡೆಯುತ್ತಿರುವ ಹಾರ್ನ್‌ಬಿಲ್ ಉತ್ಸವದ ಸ್ಥಳಗಳಲ್ಲಿ 'ಸೇನೆಯ ವಿಶೇಷಾಧಿಕಾರ ರದ್ದು ಮಾಡಿ' ಎಂದು ಒತ್ತಾಯಿಸುವ ಪೋಸ್ಟರ್‌ಗಳನ್ನು ಹಾಕಲಾಗಿತ್ತು –ಪಿಟಿಐ ಚಿತ್ರಗಳು

### ನೆಟ್ ಸ್ಥಗಿತ

'ಟಿರು ಮತ್ತು ಒಟಿಂಗ್ ಅವಘಡಕ್ಕೆ ಸಂಬಂಧಿಸಿದಂತೆ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಉಂಟಾಗಿದೆ. ಅವಘಡದ ಚಿತ್ರಗಳು, ವಿಡಿಯೊಗಳನ್ನು ಹಂಚಿಕೊಳ್ಳುವುದನ್ನು ತಡೆಯಲು, ಸುಳ್ಳು ಮತ್ತು ಪ್ರಚೋದನಕಾರಿ ಸುದ್ದಿಗಳನ್ನು ಹಂಚಿಕೊಳ್ಳುವುದನ್ನು ತಡೆಯಲು ಮೊನ್ ಜಿಲ್ಲೆಯಲ್ಲಿ ಇಂಟರ್ನೆಟ್ ಮತ್ತು ಎಸ್‌ಎಂಎಸ್ ಸೇವೆಯನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ' ಎಂದು ನಾಗಾಲ್ಯಾಂಡ್ ಸರ್ಕಾರ ತಿಳಿಸಿದೆ.

**ರಾಜ್ಯ ಸರ್ಕಾರವು ಉನ್ನತಮಟ್ಟದ ತನಿಖಾ ತಂಡವನ್ನು ರಚಿಸಿದೆ. ಸಂತ್ರಸ್ತರ ಕುಟುಂಬಗಳಿಗೆ ತನಿಖೆಯ ಮೂಲಕ ನ್ಯಾಯ ಒದಗಿಸಲಾಗುತ್ತದೆ**
**ಅಮಿತ್ ಶಾ,** ಕೇಂದ್ರ ಗೃಹ ಸಚಿವ

**ಸರ್ಕಾರ ನಿಜಹೇಳಬೇಕು. ದೇಶದಲ್ಲಿ ನಾಗರಿಕರು ಮತ್ತು ಸೈನಿಕರೂ ಸುರಕ್ಷಿತವಲ್ಲ. ಗೃಹ ಸಚಿವಾಲಯ ಮಾಡುತ್ತಿರುವುದಾದರೂ ಏನು?**
**ರಾಹುಲ್ ಗಾಂಧಿ,** ಕಾಂಗ್ರೆಸ್ ಸಂಸದ

**ಇದು ಅತ್ಯಂತ ಖಂಡನೀಯ ಕೃತ್ಯ. ಸಂತ್ರಸ್ತರಿಗೆ ನ್ಯಾಯ ಒದಗಿಸಲಾಗುತ್ತದೆ. ಆದರೆ ಇದು ಸಮಾಜದ ಎಲ್ಲರೂ ಶಾಂತಿ ಕಾಪಾಡಬೇಕಾದ ಸಮಯ**
**ನೆಫಿಯು ರಿಯೊ**
ನಾಗಾಲ್ಯಾಂಡ್ ಮುಖ್ಯಮಂತ್ರಿ

### ಭುಗಿಲೆದ್ದ ಆಕ್ರೋಶ

ಸೈನಿಕರಿಂದ ನಾಗರಿಕರ ಹತ್ಯೆಯನ್ನು ಖಂಡಿಸಿ ನಾಗಾಲ್ಯಾಂಡ್‌ನ ಹಲವು ಬುಡಕಟ್ಟು ಜನರ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಈಗ ನಾಗಾಲ್ಯಾಂಡ್‌ನಲ್ಲಿ ಪ್ರಖ್ಯಾತ 'ಹಾರ್ನ್‌ಬಿಲ್ ಉತ್ಸವ' ನಡೆಯುತ್ತಿದೆ. ಈ ಉತ್ಸವವನ್ನು ಆರು ಬುಡಕಟ್ಟು ಸಮುದಾಯಗಳು ಬಹಿಷ್ಕರಿಸಿವೆ.

ಹಾರ್ನ್‌ಬಿಲ್ ಉತ್ಸವ ನಡೆಯುತ್ತಿರುವ ಸ್ಥಳಗಳಲ್ಲಿ 'ಅಫ್‌ಸ್ಪ ಕಾಯ್ದೆಯನ್ನು ತಕ್ಷಣವೇ ವಾಪಸ್ ಪಡೆಯಿರಿ' ಎಂಬ ಬರಹ ಇರುವ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ. ಉತ್ಸವದ ಸ್ಥಳಗಳಲ್ಲಿ ಭಾನುವಾರ ಕಪ್ಪು ಬಾವುಟವನ್ನು ಹಾರಿಸಿ, ಕರಾಳ ದಿನ ಆಚರಿಸಲಾಗಿದೆ.

ಮೊನ್ ಜಿಲ್ಲೆಯ ಹಲವೆಡೆ ಭಾನುವಾರ ಸಂಜೆಯ ನಂತರ ಪ್ರತಿಭಟನೆ ನಡೆದಿವೆ. ಅಸ್ಸಾಂ ರೈಫಲ್ಸ್‌ನ ಸೇನಾ ಶಿಬಿರಗಳು, ಚೆಕ್‌ಪೋಸ್ಟ್‌ಗಳ ಮೇಲೆ ನಾಗರಿಕರು ದಾಳಿ ನಡೆಸಿದ್ದಾರೆ. ಹಲವೆಡೆ ಚೆಕ್‌ಪೋಸ್ಟ್‌ಗಳಿಗೆ ಮತ್ತು ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ.

ಸೈನಿಕರ ಗುಂಡಿಗೆ ಬಲಿಯಾದ ನಾಗರಿಕರ ಅಂತ್ಯಸಂಸ್ಕಾರದ ವಿಚಾರದಲ್ಲೂ ಗಲಭೆ ನಡೆದಿದೆ. ಇಲ್ಲಿನ ಕೊಯಾಂಕ್ ಬುಡಕಟ್ಟು ಜನರ ಸಂಘಟನೆಯ ಕೇಂದ್ರ ಕಚೇರಿ ಎದುರು ಮೃತರ ಶವಗಳನ್ನು ತರಲಾಗಿತ್ತು. ಅಲ್ಲಿ ಸಾವಿರಾರು ಜನರು ಸೇರಿದ್ದರು. ಭಾನುವಾರವೇ ಅಂತ್ಯಸಂಸ್ಕಾರ ನಡೆಸಲು ಮೊದಲು ತೀರ್ಮಾನಿಸಲಾಗಿತ್ತು. ಆದರೆ ಅಂತ್ಯಸಂಸ್ಕಾರವನ್ನು ಸೋಮವಾರಕ್ಕೆ ಮುಂದೂಡಲಾಯಿತು. ಇದರಿಂದ ಆಕ್ರೋಶಗೊಂಡ ಜನರು ಸಂಘಟನೆಯ ಕಚೇರಿಯ ಒಳನುಗ್ಗಿ, ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದಾರೆ.



## ಬಾಬರಿ ಮಸೀದಿ ಧ್ವಂಸ ದಿನ ಮಥುರಾದಲ್ಲಿ ಭದ್ರತೆ ಹೆಚ್ಚಳ

**ಮಥುರಾ (ಪಿಟಿಐ):** ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸಗೊಳಿಸಿದ ದಿನವಾದ ಡಿ.6ರಂದು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದ್ದು, ಮಥುರಾದಲ್ಲೂ ಭದ್ರತೆ ಹೆಚ್ಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1992ರ ಡಿ.6ರಂದು ಬಾಬರಿ ಮಸೀದಿ ಧ್ವಂಸಗೊಳಿಸಲಾಗಿತ್ತು.

ಅಖಿಲ ಭಾರತ ಹಿಂದೂ ಮಹಾಸಭಾ, ಶ್ರೀಕೃಷ್ಣ ಜನ್ಮಭೂಮಿ ನಿರ್ಮಾಣ್ ನ್ಯಾಸ್, ನಾರಾಯಣಿ ಸೇನಾ ಹಾಗೂ ಶ್ರೀಕೃಷ್ಣ ಮುಕ್ತಿ ದಳಗಳು ಡಿ.6ರಂದು ಕಾರ್ಯಕ್ರಮಗಳನ್ನು ಆಯೋಜಿಸಲು ಈ ಹಿಂದೆಯೇ ಅನುಮತಿ ಕೋರಿದ್ದವು.

ಮಥುರಾದಲ್ಲಿ ದೇಗುಲಕ್ಕೆ ಹೊಂದಿಕೊಂಡು ಮಸೀದಿ ಇದ್ದು, ಆ ಜಾಗವು ಕೃಷ್ಣನ ಜನ್ಮಸ್ಥಳವಾಗಿದೆ. ಅಲ್ಲಿ ಕೃಷ್ಣನ ಪ್ರತಿಮೆ ಸ್ಥಾಪಿಸಲು ಅವಕಾಶ ನೀಡಬೇಕು ಎಂದು ಅಖಿಲ ಭಾರತ ಹಿಂದೂ ಮಹಾಸಭಾ ಮನವಿ ಮಾಡಿತ್ತು. ಈ ಮನವಿಯನ್ನು ತಿರಸ್ಕರಿಸಿದ್ದ ಜಿಲ್ಲಾ ಮ್ಯಾಜಿಸ್ಟ್ರೇಟ್ ನವನೀತ್ ಸಿಂಗ್ ಚಾಹಲ್, ಶಾಂತಿ ಕದಡುವಂಥ ಯಾವುದೇ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಪ್ರಶ್ನೆಯೇ ಇಲ್ಲ ಎಂದು ಹೇಳಿದ್ದರು.

ಮಸೀದಿಯಲ್ಲಿ 'ಮಹಾ ಜಲಾಭಿಷೇಕ' ನಡೆಸಿ ಶುದ್ಧೀಕರಣ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಪ್ರತಿಮೆ ಸ್ಥಾಪಿಸುವುದಾಗಿ ಹಿಂದೂ ಸಂಘಟನೆ ಹೇಳಿಕೊಂಡಿತ್ತು.

ಈ ಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿ ಇರಿಸಿಕೊಂಡು ಮಥುರಾವನ್ನು ಭದ್ರತಾ ಕಾರಣಗಳಿಗಾಗಿ ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಕೇಶವ ದೇವ ಮಂದಿರ ಹಾಗೂ ಶಾಹಿ ಈದ್ಗಾ ಇರುವ ಪ್ರದೇಶವನ್ನು 'ರೆಡ್ ಝೋನ್' ಎಂದು ಪರಿಗಣಿಸಲಾಗಿದ್ದು, ಹೆಚ್ಚಿನ ಸಂಖ್ಯೆಯ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಥುರಾ ಪ್ರವೇಶ ದ್ವಾರದ ಬಳಿಯೂ ಹೆಚ್ಚಿನ ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ- ಎಂದು ಮಥುರಾ ಎಸ್‌ಎಸ್‌ಪಿ ಗೌರವ್ ಗ್ರೋವರ್ ತಿಳಿಸಿದ್ದಾರೆ.

ಮಥುರಾ ಸುತ್ತಮುತ್ತ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಹೇರಲಾಗಿದೆ.

ಓಮೈಕ್ರಾನ್: ರಾಜಸ್ಥಾನದಲ್ಲಿ 9, ಮಹಾರಾಷ್ಟ್ರದಲ್ಲಿ 7, ದೆಹಲಿಯಲ್ಲಿ ಒಬ್ಬರಿಗೆ ಸೋಂಕು ದೃಢ

# ದೇಶದಲ್ಲಿ ಒಂದೇ ದಿನ 17 ಪ್ರಕರಣ

**ಪುಣೆ (ಪಿಟಿಐ):** ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್‌ನ 17 ಪ್ರಕರಣಗಳು ಭಾರತದಲ್ಲಿ ಭಾನುವಾರ ಒಂದೇ ದಿನ ಪತ್ತೆ ಆಗಿವೆ. ರಾಜಸ್ಥಾನದ ರಾಜಧಾನಿ ಜೈಪುರದಲ್ಲಿ ಒಂಬತ್ತು, ಮಹಾರಾಷ್ಟ್ರದ ಪುಣೆಯಲ್ಲಿ ಏಳು, ದೆಹಲಿಯಲ್ಲಿ ಒಂದು ಪ್ರಕರಣಗಳು ದೃಢಪಟ್ಟಿವೆ. ದೇಶದಲ್ಲಿ ಈವರೆಗೆ ಓಮೈಕ್ರಾನ್ ತಳಿಯ 21 ಸೋಂಕು ಪ್ರಕರಣಗಳು ವರದಿ ಆಗಿವೆ.



ಹೆಚ್ಚಿನ ಪ್ರಕರಣಗಳಲ್ಲಿ ಸೋಂಕಿತ ವ್ಯಕ್ತಿಗಳು ದಕ್ಷಿಣ ಆಫ್ರಿಕಾ ಖಂಡದ ದೇಶಗಳಿಗೆ ಇತ್ತೀಚೆಗೆ ಭೇಟಿ ಕೊಟ್ಟವರು ಅಥವಾ ಅಲ್ಲಿಗೆ ಹೋಗಿ ಬಂದವರ ಜತೆಗೆ ಸಂಪರ್ಕದಲ್ಲಿದ್ದವರು.

ಈಗ, ನಾಲ್ಕು ರಾಜ್ಯಗಳು ಮತ್ತು ರಾಷ್ಟ್ರ ರಾಜಧಾನಿಯಲ್ಲಿ ಓಮೈಕ್ರಾನ್ ಪ್ರಕರಣ ದೃಢಪಟ್ಟಂತಾಗಿದೆ.

ಜೈಪುರದಲ್ಲಿ ಪತ್ತೆಯಾದ ಒಂಬತ್ತು ಪ್ರಕರಣಗಳಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿದ್ದಾರೆ. ಈ ನಾಲ್ವರು ದಕ್ಷಿಣ ಆಫ್ರಿಕಾಕ್ಕೆ ಇತ್ತೀಚೆಗೆ ಹೋಗಿ ಬಂದಿದ್ದರು. 'ಈ ಒಂಬತ್ತು ಜನರಲ್ಲಿ ಪತ್ತೆಯಾದ ವೈರಾಣುವಿನ ಸಂರಚನೆ ವಿಶ್ಲೇಷಣೆಯಲ್ಲಿ ಓಮೈಕ್ರಾನ್ ಸೋಂಕು ಇರುವುದು ದೃಢಪಟ್ಟಿತು' ಎಂದು ರಾಜಸ್ಥಾನ ಆರೋಗ್ಯ ಕಾರ್ಯದರ್ಶಿ ವೈಭವ್ ಗಲ್ರಿಯಾ ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಪತ್ತೆಯಾದ ಪ್ರಕರಣಗಳಲ್ಲಿ ನೈಜೀರಿಯಾದಿಂದ ಬಂದ ತಾಯಿ, ಮಗಳು ಮತ್ತು ಒಬ್ಬ ಸಂಬಂಧಿ ಸೇರಿದ್ದಾರೆ. ಇನ್ನೊಬ್ಬರು ಫಿನ್ಲೆಂಡ್‌ನಿಂದ ಇತ್ತೀಚೆಗೆ ಬಂದವರು. ಮಹಾರಾಷ್ಟ್ರದಲ್ಲಿ ದೃಢಪಟ್ಟ ಪ್ರಕರಣಗಳ ಒಟ್ಟು ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ.

ಎಲ್ಲ ಪ್ರಕರಣಗಳಲ್ಲಿಯೂ ಸೋಂಕಿತರ ಸಂಪರ್ಕಿತರ ಪತ್ತೆ ಕೆಲಸ ನಡೆಯುತ್ತಿದೆ.

ದೇಶದಲ್ಲಿ ಓಮೈಕ್ರಾನ್‌ನ ಮೊದಲ ಪ್ರಕರಣ ಕರ್ನಾಟಕದಲ್ಲಿ ಗುರುವಾರ ದೃಢಪಟ್ಟಿತ್ತು. 66 ವರ್ಷದ ಆಫ್ರಿಕಾದ ವ್ಯಕ್ತಿ ಮತ್ತು 46 ವರ್ಷ ವಯಸ್ಸಿನ ಬೆಂಗಳೂರಿನ ವೈದ್ಯರಲ್ಲಿ ಪ್ರಕರಣ ಪತ್ತೆಯಾಗಿತ್ತು. ಬೆಂಗಳೂರಿನ ವೈದ್ಯ ಯಾವುದೇ ದೇಶಕ್ಕೆ ಇತ್ತೀಚೆಗೆ ಹೋಗಿಲ್ಲ. ಈ ಇಬ್ಬರೂ ಲಸಿಕೆಯ ಎರಡೂ ಡೋಸ್ ಹಾಕಿಸಿಕೊಂಡಿದ್ದರು.

ಗುಜರಾತ್‌ನ ಅನಿವಾಸಿ ಭಾರತೀಯ ವ್ಯಕ್ತಿಯೊಬ್ಬರಲ್ಲಿ ಶನಿವಾರ ಸೋಂಕು ದೃಢಪಟ್ಟಿತ್ತು. ಮಹಾರಾಷ್ಟ್ರದ ಠಾಣೆಯ ವ್ಯಕ್ತಿಯಲ್ಲಿಯೂ ಹೊಸ ವೈರಾಣು ತಳಿ ಪತ್ತೆಯಾಗಿತ್ತು. ಸೋಂಕಿತರಲ್ಲಿ ಸೌಮ್ಯ ಸ್ವರೂಪದ ಲಕ್ಷಣಗಳಷ್ಟೇ ಕಾಣಿಸಿಕೊಂಡಿವೆ.

### ಅಮೆರಿಕ, ಬ್ರಿಟನ್ ಪ್ರವೇಶಕ್ಕೆ ನೆಗೆಟಿವ್ ಪ್ರಮಾಣಪತ್ರ ಕಡ್ಡಾಯ

ಅಮೆರಿಕ ಹಾಗೂ ಬ್ರಿಟನ್‌ಗೆ ಹೋಗುವವರು ಕೋವಿಡ್ ನೆಗೆಟಿವ್ ಪ್ರಮಾಣಪತ್ರವನ್ನು ಹೊಂದಿರುವುದು ಇನ್ನು ಕಡ್ಡಾಯ. ಓಮೈಕ್ರಾನ್ ವ್ಯಾಪಿಸುತ್ತಿರುವ ಕಾರಣ, ಈ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ.

ಮಂಗಳವಾರದಿಂದ ದೇಶವನ್ನು ಪ್ರವೇಶಿಸುವ ಎಲ್ಲ ಪ್ರಯಾಣಿಕರು 48 ಗಂಟೆಗೂ ಮುನ್ನ ಪಡೆದ ಆರ್‌ಟಿ–ಪಿಸಿಆರ್ ಪರೀಕ್ಷೆಯ ಫಲಿತಾಂಶದ ವರದಿ ಹೊಂದಿರಬೇಕು ಎಂದು ಬ್ರಿಟನ್ ಆರೋಗ್ಯ ಸಚಿವಾಲಯ ತಿಳಿಸಿದೆ. ಎಲ್ಲ ದೇಶಗಳ, 12 ವರ್ಷ ಮೇಲ್ಪಟ್ಟ ಎಲ್ಲ ಪ್ರಯಾಣಿಕರಿಗೂ ಈ ನಿಯಮ ಅನ್ವಯವಾಗಲಿದೆ. ಈ ನಿಯಮವು ಪ್ರವಾಸೋದ್ಯಮಕ್ಕೆ ಹೊಡೆತ ನೀಡಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬ್ರಿಟನ್‌ನಲ್ಲಿ ಈವರೆಗೆ 264 ಜನರಲ್ಲಿ ಓಮೈಕ್ರಾನ್ ದೃಢಪಟ್ಟಿದೆ.

ಭಾರತವೂ ಸೇರಿದಂತೆ ಅಮೆರಿಕಕ್ಕೆ ಭೇಟಿ ನೀಡುವ ಎಲ್ಲ ದೇಶಗಳ ಪ್ರಯಾಣಿಕರೂ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಅಥವಾ ಕೋವಿಡ್‌ನಿಂದ ಗುಣಮುಖರಾಗಿರುವ ಪ್ರಮಾಣಪತ್ರವನ್ನು ಒದಗಿಸುವುದನ್ನು ಕಡ್ಡಾಯ ಮಾಡಲಾಗಿದೆ. ಡಿ.6ರಿಂದ ಈ ನಿಯಮ ಜಾರಿಗೆ ಬರಲಿದೆ. ಪ್ರಯಾಣಕ್ಕೆ ಒಂದು ದಿನಕ್ಕೆ ಮೊದಲು ಪಡೆದ ವರದಿಯನ್ನು ಸಲ್ಲಿಸಬೇಕಿದೆ.



**ಓಮೈಕ್ರಾನ್ ಸೋಂಕು ಅತ್ಯಂತ ವೇಗವಾಗಿ ಹರಡುತ್ತದೆ. ಜನವರಿ ಒಳಗಾಗಿ ಎಲ್ಲರಿಗೂ ಎರಡು ಡೋಸ್ ಲಸಿಕೆ ನೀಡಲಾಗುವುದು**
**ಡಾ.ಕೆ. ಸುಧಾಕರ್,** ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

### ಕೋವಿಡ್: ಮತ್ತಷ್ಟು ಹೆಚ್ಚಳ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಭಾನುವಾರ 456 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.98 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.10 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.41 ರಷ್ಟು ದೃಢಪಟ್ಟಿದೆ. ಏಳು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಗದಗ ಸೇರಿದಂತೆ 8 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ ಸೋಂಕಿತರ ಸಂಖ್ಯೆ ಏರಿಕೆ ಕಂಡಿದ್ದು, ಹೊಸದಾಗಿ 256 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಚಿಕ್ಕಮಗಳೂರು (66) ಹಾಗೂ ಧಾರವಾಡದಲ್ಲಿ (20) ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 20ಕ್ಕಿಂತ ಕಡಿಮೆಯಿದೆ.

ಸೋಂಕಿತರಲ್ಲಿ 330 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.52 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,132ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 5,136 ಸೋಂಕಿತರಿದ್ದಾರೆ. ಯಾದಗಿರಿ, ವಿಜಯಪುರ ಸೇರಿದಂತೆ 8 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಮೈಸೂರು, ಧಾರವಾಡ ಸೇರಿದಂತೆ 8 ಜಿಲ್ಲೆಗಳಲ್ಲಿ 100 ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು, ಬೆಂಗಳೂರು ಗ್ರಾಮಾಂತರ, ಮೈಸೂರು, ತುಮಕೂರು ಹಾಗೂ ಉಡುಪಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.31 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,230ಕ್ಕೆ ಏರಿಕೆಯಾಗಿದೆ.

- ಮಹಾರಾಷ್ಟ್ರದಲ್ಲಿ ಮೊದಲ ಓಮೈಕ್ರಾನ್ ಸೋಂಕು ದೃಢಪಟ್ಟಿದ್ದ ವ್ಯಕ್ತಿಯ ಆರೋಗ್ಯ ಸ್ಥಿರವಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ
- ದಕ್ಷಿಣ ಕೊರಿಯಾದಲ್ಲಿ ಮತ್ತೆ 3 ಓಮೈಕ್ರಾನ್ ಪ್ರಕರಣಗಳು ವರದಿಯಾಗಿದ್ದು, ದೇಶದಲ್ಲಿ ರೂಪಾಂತರ ತಳಿ ಹೊಂದಿರುವವರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ
- ಅಮೆರಿಕದ ನ್ಯೂಯಾರ್ಕ್‌ನಲ್ಲಿ ಮತ್ತೆ ಮೂರು ಪ್ರಕರಣ ಪತ್ತೆ; ಕೊಲರಾಡೊ, ಪೆನ್ಸಿಲ್ವೇನಿಯಾ, ಮಿಸ್ಸೌರಿ, ಮೆಸಾಚುಸೆಟ್ಸ್, ವಾಷಿಂಗ್ಟನ್, ಮೇರಿಲ್ಯಾಂಡ್‌ನಲ್ಲೂ ಕಾಣಿಸಿಕೊಂಡ ರೂಪಾಂತರ ತಳಿ
- ಆಸ್ಟ್ರೇಲಿಯಾದಲ್ಲಿ 5–11 ವರ್ಷದೊಳಗಿನ ಮಕ್ಕಳಿಗೆ ಜನವರಿ 10ರಿಂದ ಫೈಝರ್ ಲಸಿಕೆ

## 'ಬ್ಲೂ ಟೂತ್' ಬಳಸಿ ಪರೀಕ್ಷಾ ಅಕ್ರಮ ಸಾಧ್ಯತೆ!

ಒಂದನೇ ಪುಟದಿಂದ

**ಅಕ್ರಮ ಹೇಗೆ:** 'ಪರೀಕ್ಷಾ ಅಕ್ರಮಕ್ಕೆ ಅನುಕೂಲವಾಗುವಂತೆ ಬ್ಲೂ ಟೂತ್ ಸಾಧನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳನ್ನು ಶರ್ಟ್, ಬೆಲ್ಟ್, ಒಳ ಉಡುಪುಗಳು, ಶೂ, ಚಪ್ಪಲಿಗಳಲ್ಲೇ (ಇನ್‌ಬಿಲ್ಟ್) ಅಳವಡಿಸಲಾಗಿರುತ್ತದೆ. ಇವು ಬೆಂಗಳೂರು, ಹೈದರಾಬಾದ್‌ಗಳಿಂದ ಪೂರೈಕೆಯಾಗುತ್ತವೆ. ಈ ಸೂಕ್ಷ್ಮ ಸಾಧನವು ಸಿಮ್ ಡಿವೈಸ್, ಬ್ಯಾಟರಿ, ಮೈಕ್ರೊ ಸ್ಪೀಕರ್, ಮೈಕ್ರೊಫೋನ್ ಅನ್ನು ಒಳಗೊಂಡಿರುತ್ತದೆ. ಅಂಗಿಯ ಕಾಲರ್‌ನಲ್ಲಿ ಮೈಕ್ರೋಫೋನ್, ಕಿವಿಯಲ್ಲಿ ಮೈಕ್ರೊ ಸ್ಪೀಕರ್ ಅಳವಡಿಸಲಾಗುತ್ತದೆ. ಈ ಸಾಧನಕ್ಕೆ ಕರೆಗಳು ಸ್ವಯಂಚಾಲಿತವಾಗಿ ಸಂಪರ್ಕ ಪಡೆದುಕೊಳ್ಳುತ್ತವೆ. ಅನುದಾನಿತ ಶಿಕ್ಷಣ ಕೇಂದ್ರಗಳ ಮುಖ್ಯಸ್ಥರಿಗೆ ಭಾರಿ ಮೊತ್ತದ ಆಮಿಷ ತೋರಿಸಿ, ಅಲ್ಲಿನ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಂದ ಹಣ ವಸೂಲಿ ಮಾಡಿ ಈ ಅಕ್ರಮಕ್ಕೆ ಅನುವು ಮಾಡಿಕೊಡಲಾಗುತ್ತಿದೆ' ಎಂದು ಪತ್ರದಲ್ಲಿ ಅಭ್ಯರ್ಥಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಅಕ್ರಮದಲ್ಲಿ ತೊಡಗಿಸಿಕೊಂಡವರು 'ಬ್ಲೂ ಟೂತ್' ಸಾಧನದ ಮೂಲಕ ಪರೀಕ್ಷಾ ಕೇಂದ್ರದ ಒಳಗಿರುವ ಅಭ್ಯರ್ಥಿಯನ್ನು ಸಂಪರ್ಕಿಸುವ ವಿಧಾನ, ಜಾಮರ್ ಬಳಸಿದರೂ ಫಿಲ್ಟರ್ ಮಾಸ್ಕ್‌ನಲ್ಲಿ ರೇಡಿಯೊ ವಯರ್‌ಲೆಸ್ ಮೂಲಕ ಸಂಪರ್ಕ ಕಲ್ಪಿಸುವ ವ್ಯವಸ್ಥೆ, ಈ ಸಾಧನ ಕೆಲಸ ಮಾಡುವ ವಿಧಾನದ ಬಗ್ಗೆಯೂ ದೂರಿನಲ್ಲಿ ವಿವರಿಸಿದ್ದಾರೆ.

ಪರೀಕ್ಷೆ ಆರಂಭಕ್ಕೂ ಒಂದು ಗಂಟೆ ಮೊದಲು ಖಜಾನೆಯಿಂದ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗುತ್ತದೆ. ಈ ವೇಳೆ, ಪ್ರಶ್ನೆಪತ್ರಿಕೆಗಳ ಕಟ್ಟು ಬಿಚ್ಚಿ ಎಲ್ಲ ಸರಣಿಯ ಪ್ರಶ್ನೆ ಪತ್ರಿಕೆಗಳನ್ನು ವಾಟ್ಸ್‌ಆ್ಯಪ್ ಮೂಲಕ ಸೋರಿಕೆ ಮಾಡುವ ಸಾಧ್ಯತೆ ಇದೆ ಎಂದೂ ಮಾಹಿತಿ ನೀಡಿದ್ದಾರೆ.

ಯಾದಗಿರಿ, ಕಲಬುರಗಿ, ಬೆಳಗಾವಿ, ರಾಯಚೂರು ಸೇರಿದಂತೆ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಕ್ರಮ ನಡೆಸುವ ತಂಡಗಳು ಸಕ್ರಿಯವಾಗಿವೆ. ಪ್ರತಿ ಸಾಧನದ ಬೆಲೆ ₹ 15 ಸಾವಿರದಿಂದ ₹ 20 ಸಾವಿರ ಇದೆ. ಕೆಲವರು ಈ ಸಾಧನಗಳನ್ನು ಖರೀದಿಸಿದ್ದಾರೆ ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಕೆಪಿಎಸ್‌ಸಿಯು ಸಾಂಪ್ರದಾಯಿಕ ಮಾದರಿಯಲ್ಲಿ ಎ, ಬಿ, ಸಿ, ಡಿ ಸರಣಿಯ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ಪದ್ಧತಿ ಕೈಬಿಟ್ಟು, ಬಾರ್‌ಕೋಡ್ ತಂತ್ರಜ್ಞಾನ ಬಳಸಬೇಕು. ಪರೀಕ್ಷೆ ಆರಂಭವಾದ ಬಳಿಕ ಶೌಚಾಲಯಕ್ಕೆ ಹೋಗುವುದನ್ನು ನಿಷೇಧಿಸಬೇಕು. ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಪರೀಕ್ಷಾ ಕೇಂದ್ರವಾಗಿ ಮಾಡ ಬಾರದು. ಜಿಲ್ಲಾ ಖಜಾನೆಯಿಂದ ಪ್ರಶ್ನೆಪತ್ರಿಕೆ ತರುವ ವೇಳೆ 'ಎ' ಶ್ರೇಣಿಯ ಅಧಿಕಾರಿಯೊಬ್ಬರನ್ನು ನಿಯೋಜಿಸಬೇಕು. ಗೈರಾದ ಅಭ್ಯರ್ಥಿಗಳ ಒಎಂಆರ್ ಹಾಳೆಗೆ ಪರೀಕ್ಷಾ ಕೇಂದ್ರದಲ್ಲಿಯೇ ಅಡ್ಡ ಗೆರೆ ಎಳೆಯಬೇಕು. ಅತ್ಯಾಧುನಿಕ ಸಾಧನ ಬಳಸಿ ಪರೀಕ್ಷಾರ್ಥಿಗಳ ಕಿವಿಗಳನ್ನು ಪರಿಶೋಧಿಸಬೇಕು ಎಂದು ಸಲಹೆ ನೀಡಿದ್ದಾರೆ.

## ಶೇ 66ರಷ್ಟು ವಯಸ್ಕರಿಗೆ ಎರಡು ಡೋಸ್ ಲಸಿಕೆ

ಒಂದನೇ ಪುಟದಿಂದ

ದೇಶದಲ್ಲಿ ಕೋವಿಡ್ ರೂಪಾಂತರ ತಳಿ ಓಮೈಕ್ರಾನ್‌ನ ಭೀತಿ ಹೆಚ್ಚುತ್ತಿರುವಂತೆ ಲಸಿಕೆ ಪ್ರಗತಿಯ ಈ ಅಂಕಿ ಅಂಶಗಳು ಹೊರಬಿದ್ದಿವೆ.

'ಈಗ ಲಭ್ಯವಿರುವ ಲಸಿಕೆ ರೋಗ ತಡೆಯುವುದಿಲ್ಲ ಎಂದು ಗಮನದಲ್ಲಿಟ್ಟುಕೊಳ್ಳಬೇಕು. ಅಂದರೆ ಲಸಿಕೆ ಪಡೆದಿದ್ದರೂ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ಕಟ್ಟುನಿಟ್ಟಾಗಿ ಮಾರ್ಗಸೂಚಿಗಳನ್ನು ಪಾಲಿಸಬೇಕು. ಗುಂಪು ಸೇರುವಿಕೆಯನ್ನು ಆದಷ್ಟು ತಪ್ಪಿಸಬೇಕು' ಎಂದು ಜಾರ್ಜ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್‌ನ ಹಿರಿಯ ಸಂಶೋಧಕ ಒಮೆನ್ ಜಾನ್ ಹೇಳಿದರು.

**ಲಸಿಕೆ ಮೈಲುಗಲ್ಲು:** ಈ ಮಧ್ಯೆ, ಭಾರತವು ತನ್ನ ವಯಸ್ಕ ಜನಸಂಖ್ಯೆಯ ಶೇ 50ರಷ್ಟು ಜನರಿಗೆ ಪೂರ್ಣವಾಗಿ ಎರಡೂ ಡೋಸ್ ಲಸಿಕೆ ನೀಡಿದ ಗುರಿಯನ್ನು ಭಾನುವಾರ ಸಾಧಿಸಿತು. ಅಲ್ಲದೆ, ಶೇ 85ರಷ್ಟು ಜನಸಂಖ್ಯೆಗೆ ಒಂದು ಡೋಸ್ ಲಸಿಕೆ ನೀಡಲಾಗಿದೆ.

'ಇದೊಂದು ಹೆಮ್ಮೆಯ ಸಂಗತಿ. ಅರ್ಹ ಜನಸಂಖ್ಯೆಯ ಶೇ 50ರಷ್ಟು ಜನರಿಗೆ ಪೂರ್ಣ ಲಸಿಕೆ ನೀಡಲಾಗಿದೆ. ನಾವು ಎಲ್ಲರೂ ಒಟ್ಟುಗೂಡಿ ಕೋವಿಡ್ ವಿರುದ್ಧ ಜಯಗಳಿಸಬಹುದು' ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದರು.

ವರ್ಷಾಂತ್ಯಕ್ಕೆ ಕೆಲವೇ ವಾರ ಉಳಿದಿದೆ. ಹೀಗಾಗಿ, ದೇಶದ ಎಲ್ಲ 94.47 ಕೋಟಿ ವಯಸ್ಕರಿಗೆ ವರ್ಷಾಂತ್ಯದ ವೇಳೆಗೆ ಲಸಿಕೆ ನೀಡುವುದು ಅಸಾಧ್ಯ. ಆದರೆ, ಶೇ 85ರಷ್ಟು ಜನರಿಗೆ ಸಿಂಗಲ್ ಡೋಸ್ ನೀಡಿರುವ ಕಾರಣ ಇಲ್ಲಿ ಗುರಿ ಸಾಧಿಸಲು ಅವಕಾಶಗಳಿವೆ. ಆದರೆ, ಶೇ 100ಗುರಿ ಸಾಧನೆಗೆ ಲಸಿಕೆ ಅಭಿಯಾನವನ್ನು ಇನ್ನಷ್ಟು ಚುರುಕುಗೊಳಿಸುವುದು ಅಗತ್ಯವಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ಸೆಪ್ಟೆಂಬರ್ ತಿಂಗಳಲ್ಲಿ ನಿತ್ಯ 78.69 ಲಕ್ಷ ಜನರಿಗೆ ಲಸಿಕೆ ನೀಡಿದ್ದರೆ, ಈ ಸಂಖ್ಯೆ ಅಕ್ಟೋಬರ್ ತಿಂಗಳಲ್ಲಿ 55.77 ಲಕ್ಷ ಮತ್ತು ನವೆಂಬರ್ ತಿಂಗಳಲ್ಲಿ 59.32 ಲಕ್ಷಕ್ಕೆ ಕುಸಿದಿದೆ. ಸುದೀರ್ಘ ಅಂತರದ ನಂತರ ಶನಿವಾರವಷ್ಟೇ ಭಾರತದಲ್ಲಿ ಒಂದೇ ದಿನ ಒಂದು ಕೋಟಿಗೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ.

ಜೈಸಲ್ಮೇರ್‌ನಲ್ಲಿ ಬಿಎಸ್‌ಎಫ್ ಸಂಸ್ಥಾಪನಾ ದಿನಾಚರಣೆ: ಶಾ ಹೇಳಿಕೆ

# ಭದ್ರತಾಪಡೆಗಳಿಗೆ ಡ್ರೋನ್ ಪ್ರತಿರೋಧ ವ್ಯವಸ್ಥೆ

**ಜೈಸಲ್ಮೇರ್ (ಪಿಟಿಐ):** 'ಗಡಿಗಳ ಭದ್ರತೆಗೆ ಡ್ರೋನ್‌ಗಳ ಮೂಲಕ ಈಗ ಹೊಸದಾಗಿ ಅಪಾಯ ಎದುರಾಗುತ್ತಿದೆ. ಹಾಗಾಗಿ, ಗಡಿ ಭದ್ರತೆ ಹಾಗೂ ಯೋಧರ ರಕ್ಷಣೆಗಾಗಿ ಜಾಗತಿಕ ಮಟ್ಟದ ಅತ್ಯುತ್ತಮ ತಂತ್ರಜ್ಞಾನ ಒದಗಿಸಲು ಸರ್ಕಾರ ಬದ್ಧವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಇಲ್ಲಿನ ಶಹೀದ್ ಪೂನಮ್ ಸಿಂಗ್ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) 57ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಡ್ರೋನ್ ಪ್ರತಿರೋಧ ವ್ಯವಸ್ಥೆಯನ್ನು ಅಭಿವೃದ್ಧಿಸಲು ಬಿಎಸ್‌ಎಫ್, ಎನ್‌ಎಸ್‌ಜಿ ಹಾಗೂ ಡಿಆರ್‌ಡಿಒ ಜಂಟಿ ಯಾಗಿ ಕಾರ್ಯಪ್ರವೃತ್ತವಾಗಿವೆ. ಈ ತಂತ್ರ ಜ್ಞಾನ ಶೀಘ್ರವೇ ಭದ್ರತಾಪಡೆಗಳಿಗೆ ಲಭ್ಯವಾಗುವಂತೆ ಮಾಡಲಾಗುವುದು' ಎಂದು ಹೇಳಿದರು.

ಭಾರತದ ಗಡಿ ಹಾಗೂ ಯೋಧರನ್ನು ಯಾರೂ ಲಘುವಾಗಿ ಪರಿಗಣಿಸಬಾರದು ಎಂಬುದನ್ನು ಪುಲ್ವಾಮಾ, ಉರಿ ಘಟನೆಗಳ ನಂತರ ದೇಶ ನೀಡಿದ ಪ್ರತ್ಯುತ್ತರದ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತೋರಿಸಿಕೊಟ್ಟಿದೆ ಎಂದರು.

'ಗಡಿ ಬಳಿ ಉತ್ತಮ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ. ಗಡಿಗಳಲ್ಲಿ ರಸ್ತೆ ನಿರ್ಮಾಣಕ್ಕೆ 2008ರಿಂದ 2014ರ ಅವಧಿಯಲ್ಲಿ ಬಜೆಟ್‌ನಲ್ಲಿ ₹ 23,700 ಕೋಟಿ ಹಂಚಿಕೆ ಮಾಡಲಾಗಿತ್ತು. ಮೋದಿ ನೇತೃತ್ವದ ಸರ್ಕಾರ 2014–2020ರ ಅವಧಿಯಲ್ಲಿ ಅನುದಾನವನ್ನು ₹44,600 ಕೋಟಿಗೆ ಹೆಚ್ಚಿಸಿತು' ಎಂದು ವಿವರಿಸಿದರು. ಬಿಎಸ್‌ಎಫ್ ನಿರ್ದೇಶಕ ಪಂಕಜಕುಮಾರ್ ಸಿಂಗ್ ಇದ್ದರು.

ಬಿಎಸ್‌ಎಫ್‌ಅನ್ನು 1965ರ ಡಿಸೆಂಬರ್ 1ರಂದು ಸ್ಥಾಪಿಸಲಾಗಿದೆ. ಇದೇ ಮೊದಲ ಬಾರಿಗೆ ದೆಹಲಿ ಬದಲಾಗಿ, ಪಾಕಿಸ್ತಾನ ಗಡಿಗೆ ಸಮೀಪದ ಜೈಸಲ್ಮೇರ್‌ನಲ್ಲಿ ಸಂಸ್ಥಾಪನಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.



ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಜೈಸಲ್ಮೇರ್‌ನಲ್ಲಿ ಭಾನುವಾರ ನಡೆದ ಗಡಿ ಭದ್ರತಾಪಡೆಯ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿದ್ದರು –ಪಿಟಿಐ ಚಿತ್ರ

### ಗೆಹಲೋತ್‌ಗೆ ಅಮಿತ್ ಶಾ ತಿರುಗೇಟು

**ಜೈಪುರ, ರಾಜಸ್ಥಾನ:** ಬಿಜೆಪಿಯು ತಮ್ಮ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸುತ್ತಿದೆ ಎಂದು ಕಳೆದ ವರ್ಷ ಆರೋಪ ಮಾಡಿದ್ದ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ತರಾಟೆಗೆ ತೆಗೆದುಕೊಂಡಿದ್ದಾರೆ.

ಬಿಜೆಪಿಯು ಎಂದಿಗೂ ರಾಜಸ್ಥಾನ ಸರ್ಕಾರವನ್ನು ಉರುಳಿಸುವು ದಿಲ್ಲ. ಬದಲು 2023ರ ವಿಧಾನಸಭೆ ಚುನಾವಣೆಯಲ್ಲಿ ಮೂರನೇ ಎರಡರಷ್ಟು ಬಹುಮತದೊಂದಿಗೆ ರಾಜ್ಯದಲ್ಲಿ ಸರ್ಕಾರ ರಚಿಸಲಿದೆ ಎಂದು ಹೇಳಿದ್ದಾರೆ.

'ತಮ್ಮ ಸರ್ಕಾರ ಯಾವಾಗ ಅಧಿಕಾರ ಕಳೆದುಕೊಳ್ಳುವುದೋ ಎಂದು ಅವರು ಯಾವಾಗಲೂ ಭೀತಿಯಲ್ಲೇ ಇರುತ್ತಾರೆ. ಅವರ ಸರ್ಕಾರವನ್ನು ಬೀಳಿಸಲು ಯಾರು ಹೊರಟಿದ್ದಾರೆ? ಬಿಜೆಪಿ ಎಂದೂ ಅಂತಹ ಪ್ರಯತ್ನ ನಡೆಸುವುದಿಲ್ಲ. ಪಕ್ಷವು ಜನರ ನಡುವೆ ಹೋಗುತ್ತದೆ. 2023ರ ಚುನಾವಣೆಯಲ್ಲಿ ಬಹುಮತದಿಂದ ಅಧಿಕಾರಕ್ಕೆ ಬರಲಿದೆ' ಎಂದು ಇಲ್ಲಿ ನಡೆದ ಬಿಜೆಪಿ ಸಂಸದರು ಮತ್ತು ಶಾಸಕರ ಸಭೆಯೊಂದರಲ್ಲಿ ಹೇಳಿದ್ದಾರೆ.

## ಎರಡೇ ಸಮುದಾಯದ ಪ್ರಾಬಲ್ಯ!

ಒಂದನೇ ಪುಟದಿಂದ

ಕಾಂಗ್ರೆಸ್ ಮತ್ತು ಬಿಜೆಪಿ ಒಕ್ಕಲಿಗರು ಹಾಗೂ ಲಿಂಗಾಯತರಿಗೆ ಹೆಚ್ಚು ಪ್ರಾಶಸ್ತ್ಯ ನೀಡಿವೆ. ಜೆಡಿಎಸ್ ಆರು ಕ್ಷೇತ್ರಗಳ ಪೈಕಿ ಐದರಲ್ಲಿ ಒಕ್ಕಲಿಗರನ್ನೇ ಕಣಕ್ಕಿಳಿಸಿದೆ.

ಹಾಲಿ ಸದಸ್ಯರ ಪೈಕಿ 22 ಮಂದಿ (ಶೇ 29.72) ಒಕ್ಕಲಿಗರು ಮತ್ತು 18 ಮಂದಿ ಲಿಂಗಾಯತರು (ಶೇ 24.32) ಇದ್ದಾರೆ. ಹಿಂದುಳಿದ ವರ್ಗಗಳನ್ನು ಪ್ರತಿನಿಧಿಸುವ 19 ಮಂದಿ (ಶೇ 25.67) ಇದ್ದು, ಅವರಲ್ಲಿ ಏಳು ಮಂದಿ ಕುರುಬರು. ಈಡಿಗ–ಬಿಲ್ಲವ ಸಮುದಾಯದ ಮೂವರು ಸದಸ್ಯರಿದ್ದರೆ, ಉಳಿದಂತೆ ಸಣ್ಣ ಸಮುದಾಯಗಳ ಒಂಬತ್ತು ಮಂದಿ ಇದ್ದಾರೆ.

ಪರಿಶಿಷ್ಟ ಜಾತಿಯ ನಾಲ್ವರು, ಮೂವರು ಮುಸ್ಲಿಮರು, ಬಂಟ ಮತ್ತು ಕೊಡವ ಸಮುದಾಯಗಳ ತಲಾ ಇಬ್ಬರು, ಪರಿಶಿಷ್ಟ ಪಂಗಡ, ಬ್ರಾಹ್ಮಣ, ಗೌಡ ಸಾರಸ್ವತ ಬ್ರಾಹ್ಮಣ ಮತ್ತು ಜೈನ ಸಮುದಾಯದ ತಲಾ ಒಬ್ಬರು ವಿಧಾನ ಪರಿಷತ್‌ನಲ್ಲಿದ್ದಾರೆ.

**ಎಲ್ಲ ಪಕ್ಷಗಳಲ್ಲೂ ಪ್ರಾಬಲ್ಯ:** ಈ ಚುನಾವಣೆಯಲ್ಲಿ ಮೂರೂ ಪಕ್ಷಗಳಿಂದ 15 ಮಂದಿ ಒಕ್ಕಲಿಗರು (ಶೇ 32.60), 13 ಮಂದಿ ಲಿಂಗಾಯತರು (ಶೇ 28.26) ಸ್ಪರ್ಧೆಯಲ್ಲಿದ್ದಾರೆ. ಹಿಂದುಳಿದ ವರ್ಗಗಳ ಒಂಬತ್ತು ಮಂದಿ, ಪರಿಶಿಷ್ಟ ಪಂಗಡಗಳ ಇಬ್ಬರು ಹಾಗೂ ಇಬ್ಬರು ಮುಸ್ಲಿಮರಿಗೆ ಅವಕಾಶ ದೊರಕಿದೆ. ಉಳಿದಂತೆ ಸಾಮಾನ್ಯ ವರ್ಗದಲ್ಲಿರುವ ರೆಡ್ಡಿ, ಬಂಟ ಮತ್ತು ವೈಶ್ಯ ಸಮುದಾಯಗಳ ತಲಾ ಒಬ್ಬರನ್ನು ಕಣಕ್ಕಿಳಿಸಲಾಗಿದೆ.

ದಕ್ಷಿಣ ಕರ್ನಾಟಕದ ಕೆಲವು ಕ್ಷೇತ್ರಗಳಲ್ಲಿ ಎಲ್ಲ ಪಕ್ಷಗಳಿಂದಲೂ ಒಕ್ಕಲಿಗ ಅಭ್ಯರ್ಥಿಗಳೇ ಕಣದಲ್ಲಿದ್ದಾರೆ. ಅದೇ ರೀತಿ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗದ ಹಲವು ಕ್ಷೇತ್ರಗಳಲ್ಲಿ ಲಿಂಗಾಯತ ಸಮುದಾಯದ ಅಭ್ಯರ್ಥಿಗಳೇ ಚುನಾವಣಾ ಕಣದಲ್ಲಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಮಾತ್ರ ಇತರ ಸಮುದಾಯಗಳ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ.

'ಅನುಭವ ಮತ್ತು ಅರ್ಹತೆಯ ಮೇಲೆ ವಿಧಾನ ಪರಿಷತ್‌ಗೆ ಸದಸ್ಯರನ್ನು ಆಯ್ಕೆ ಮಾಡಬೇಕೆಂಬ ಕಾರಣದಿಂದ ಸಂವಿಧಾನ ರೂಪಿಸುವಾಗ ಮೀಸಲಾತಿ ಕಲ್ಪಿಸಿರಲಿಲ್ಲ. ಈಗ ಪರಿಷತ್ ಸದಸ್ಯರ ಆಯ್ಕೆಯ ಮಾನದಂಡಗಳೇ ಬದಲಾಗಿವೆ. ವಿಧಾನ ಪರಿಷತ್ ಚುನಾವಣೆಯಲ್ಲೂ ಹಣ ಮತ್ತು ಜಾತಿ ಲೆಕ್ಕಾಚಾರವೇ ಮುನ್ನೆಲೆಗೆ ಬಂದಿವೆ. ಚಿಂತಕರ ಬದಲಿಗೆ ವೃತ್ತಿಪರ ರಾಜಕಾರಣಿಗಳೇ ವಿಧಾನ ಪರಿಷತ್ ಸದಸ್ಯರಾಗುತ್ತಿದ್ದಾರೆ. ಇಂತಹ ಸಮಯದಲ್ಲಿ ಕೆಲವೇ ಜಾತಿಗಳ ಪ್ರಾಬಲ್ಯ ತಪ್ಪಿಸಲು ಉಳಿದ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಬೇಕು' ಎನ್ನುತ್ತಾರೆ ಪರಿಷತ್ ಸದಸ್ಯರೂ ಆಗಿದ್ದ ಜೆಡಿಎಸ್ ಮುಖಂಡ ವೈ.ಎಸ್.ವಿ. ದತ್ತ.

### 'ಪಕ್ಷಗಳಿಗೂ ಹೊಣೆಗಾರಿಕೆ ಇದೆ'

'ಎಲ್ಲ ಸಮುದಾಯಗಳಿಗೂ ಸಮಾನ ಅವಕಾಶಗಳನ್ನು ಹಂಚಿಕೆ ಮಾಡುವುದು ರಾಜಕೀಯ ಪಕ್ಷಗಳ ಹೊಣೆಗಾರಿಕೆ. ಆದರೆ, ಅರ್ಹತೆ ಇದ್ದರೂ ಕಡೆಗಣಿಸಲಾಗುತ್ತಿದೆ' ಎಂದು ಪರಿಷತ್‌ನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಹೇಳುತ್ತಾರೆ. ವಿಧಾನ ಪರಿಷತ್‌ನಲ್ಲೂ ಎಲ್ಲ ವರ್ಗಗಳಿಗೆ ಮೀಸಲಾತಿ ಒದಗಿಸಬೇಕಿದೆ. ಅದಕ್ಕೆ ಪೂರಕವಾಗಿ ಸಂವಿಧಾನ ತಿದ್ದುಪಡಿಯೂ ಸೇರಿದಂತೆ ಆಗಬೇಕಿರುವ ಕೆಲಸಗಳ ಕುರಿತು ಚರ್ಚೆ ಆಗಲೇಬೇಕಿದೆ. ವಿಧಾನ ಪರಿಷತ್ ಕ್ಷೇತ್ರಗಳ ಪುನರ್ವಿಂಗಡಣೆ ಪ್ರಕ್ರಿಯೆಯೂ ನಡೆಯಬೇಕು ಎಂದು ಅವರು ಒತ್ತಾಯಿಸಿದರು.

### ಸೀಟು ಕಾಯ್ದಿರಿಸಿದ 2ನೇ ಪಟ್ಟಿ ಕೈಬಿಡಲು ಸಲಹೆ

**ನವದೆಹಲಿ:** 'ರೈಲು ನಿರ್ಗಮಿಸುವ ಮುನ್ನ 30 ಮತ್ತು 5 ನಿಮಿಷದ ನಡುವೆ ಸಿದ್ಧಪಡಿಸುವ ಸೀಟು ಕಾಯ್ದಿರಿಸಿದ ವಿವರಗಳ ಎರಡನೇ ಪಟ್ಟಿ ಯನ್ನು ಕೈಬಿಡಬೇಕು' ಎಂದು ರೈಲ್ವೆ ಸಚಿವಾಲಯದ ಸಂಸದೀಯ ಸ್ಥಾಯಿ ಸಮಿತಿಯು ರೈಲ್ವೆ ಇಲಾಖೆಗೆ ಸಲಹೆ ಮಾಡಿದೆ.


ಸೀಟು ರದ್ಧತಿ ಆಧರಿಸಿ ಕಾಯ್ದಿರಿಸುವಿಕೆ (ಆರ್‌ಎಸಿ) ಮತ್ತು ನಿರೀಕ್ಷಣಾ ಪಟ್ಟಿಯಲ್ಲಿ ಸಾವಿರಾರು ಪ್ರಯಾಣಿಕರು ಇರುವಾಗ, 30–5 ನಿಮಿಷದ ಅವಧಿಯಲ್ಲಿ ಟಿಕೆಟ್ ಬುಕ್ಕಿಂಗ್‌ಗೆ ಯಾವುದೇ ತರ್ಕ ಇಲ್ಲ ಎಂದು ಸಮಿತಿ ಹೇಳಿದೆ. ಈ ಅವಧಿಯಲ್ಲಿ ಟಿಕೆಟ್ ಬುಕ್ಕಿಂಗ್ ಮಾಡಿದರೂ ಸೀಟು ಲಭ್ಯತೆ ಖಾತರಿಯಾಗುವ ಸಂಭವವೂ ಇರುವುದಿಲ್ಲ ಎಂದು ಪ್ರತಿಪಾದಿಸಿದೆ.

'ರೈಲ್ವೆಯಲ್ಲಿ ಟಿಕೆಟ್ ಕಾಯ್ದಿರಿಸಿರುವ ವ್ಯವಸ್ಥೆ' ಕುರಿತ ವರದಿಯಲ್ಲಿ ಸಮಿತಿಯು, ಅಲ್ಪಾವಧಿಯಲ್ಲಿ ಪ್ರಯಾಣ ಕಾರ್ಯಕ್ರಮ ನಿರ್ಧರಿಸುವವರಿಗೆ ಸದ್ಯಕ್ಕೆ ತತ್ಕಾಲ್ ಸೌಲಭ್ಯವಿದೆ. ರೈಲು ನಿರ್ಗಮನದ 4–5 ಗಂಟೆ ಮೊದಲು ಟಿಕೆಟ್ ಕಾಯ್ದಿರಿಸುವಿಕೆ ಕುರಿತಂತೆ ಮೊದಲ ಪಟ್ಟಿ ಸಿದ್ಧವಾದ ಬಳಿಕ ಖಾಲಿ ಉಳಿಯುವ ಎಲ್ಲ ಸೀಟುಗಳನ್ನು ಸ್ವಯಂ ಚಾಲಿತವಾಗಿ ಆರ್‌ಎಸಿ/ನಿರೀಕ್ಷಣಾ ಪಟ್ಟಿಯಲ್ಲಿ ಇರುವ ಪ್ರಯಾಣಿಕರಿಗೆ ಹಂಚಿಕೆ ಮಾಡಬೇಕು' ಎಂದು ಹೇಳಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ



**ಸುಭಾಷಿತ**

ಬೇರಿಗೆ ಆರೈಕೆ ಮಾಡಿ; ಎಲೆಗಳು ಮತ್ತು ಕೊಂಬೆಗಳು ತಮ್ಮ ಬಗ್ಗೆ ತಾವೇ ಕಾಳಜಿ ವಹಿಸುತ್ತವೆ.

–ಕನ್‌ಫ್ಯೂಷಿಯಸ್

## ಪೊಲೀಸ್: ಗೃಹ ಸಚಿವರ ಮಾತು ಆಕ್ರೋಶವೋ ಅಸಹಾಯಕತೆಯೋ?

**ರಾಜ್ಯದ** ಗೃಹ ಸಚಿವರು ತಮ್ಮ ಇಲಾಖೆಯ ಕುರಿತು ಆಡಿದ ಮಾತೊಂದು ಈಗ ಎಲ್ಲೆಡೆ ಪರ- ವಿರೋಧದ ಚರ್ಚೆಗೆ ಕಾರಣವಾಗಿದೆ. ಚಿಕ್ಕಮಗಳೂರಿನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರಿಗೆ ತಮ್ಮ ಬೆಂಬಲಿಗರ ಮುಂದೆಯೇ ದೂರವಾಣಿ ಕರೆ ಮಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, ‘ಲಂಚ ತಗೊಂಡು ನಾಯಿ ಹಂಗೆ ಬಿದ್ದಿರ್ತಾರೆ. ಪೊಲೀಸರಿಗೊಂದು ಆತ್ಮಗೌರವ ಬೇಕಲ್ರೀ. ಕೆಟ್ ಹಾಳಾಗಿ ಹೋಗಿದ್ದಾರೆ ಪೊಲೀಸರು. ಕೈತುಂಬಾ ಸಂಬಳ ಕೊಡ್ತಿದೀವಿ. ಯಾವನಿಗೂ ಸಂಬಳದಲ್ಲಿ ಬದುಕಬೇಕು ಅಂತ ಇಲ್ಲ. ಎಂಜಲು ಕಾಸು ತಿಂದು ಬದುಕ್ತಾರೆ. ಯೋಗ್ಯತೆ ಇದ್ದಿದ್ರೆ ಯೂನಿಫಾರ್ಮ್ ಬಿಚ್ಚಿಟ್ಟು ಸಾಯಲಿ’ ಎಂದು ಹೇಳಿರುವ ವಿಡಿಯೊ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಅವ್ಯಾಹತವಾಗಿ ನಡೆದಿರುವ ದನ ಕಳ್ಳಸಾಗಣೆ ದಂಧೆಯನ್ನು ತಡೆಯುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎನ್ನುವುದು ಸಚಿವರ ಮಾತಿನ ಹಿನ್ನೆಲೆ. ತಮ್ಮದೇ ಇಲಾಖೆಯ ಅಧಿಕಾರಿಗಳ ವಿರುದ್ಧ ಸಚಿವರು ಹೀಗೆ ಕಟು ಮಾತುಗಳಲ್ಲಿ ಆಕ್ರೋಶ ವ್ಯಕ್ತಪಡಿಸಿರುವುದು ಏನನ್ನು ಸೂಚಿಸುತ್ತದೆ? ತಮ್ಮ ಇಲಾಖೆಯಲ್ಲಿ ಅಧಿಕಾರಿಗಳ ಲಂಚಗುಳಿತನವನ್ನು ತಡೆಯಲು ತಮಗೆ ಆಗಿಲ್ಲ ಎಂಬ ಸಚಿವರ ಅಸಹಾಯಕತೆಯೇ ಆಕ್ರೋಶದ ರೂಪದಲ್ಲಿ ಹೊರಬಂದಿದೆಯೇ? ಅಥವಾ ಗೃಹ ಇಲಾಖೆಯನ್ನು ದಕ್ಷತೆಯಿಂದ ನಿರ್ವಹಿಸಲು ಸಚಿವರಿಗೆ ಆಡಳಿತ ಕೌಶಲದ ಕೊರತೆ ಏನಾದರೂ ಕಾಡುತ್ತಿದೆಯೇ? ಒಂದು ಜಿಲ್ಲೆಯ ಕೆಲವು ಪೊಲೀಸ್ ಅಧಿಕಾರಿಗಳು ಲಂಚ ತೆಗೆದುಕೊಂಡು ದನಕಳ್ಳರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ, ಅದನ್ನು ಬಿಡಿ ಪ್ರಕರಣವಾಗಿ ನಿರ್ವಹಿಸಬೇಕಿರುವುದು ಸಚಿವರ ಜವಾಬ್ದಾರಿ. ಅಂತಹ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕೈಗೊಳ್ಳುವ ಕ್ರಮದ ಬಗ್ಗೆ ರಾಜ್ಯದ ಪೊಲೀಸ್ ಮುಖ್ಯಸ್ಥರಿಗೆ ಕಟ್ಟುನಿಟ್ಟಿನ ಸೂಚನೆ ಕೊಟ್ಟು, ಅದು ಜಾರಿಯಾಗುವಂತೆ ಸಚಿವರು ನೋಡಿಕೊಳ್ಳಬೇಕು. ಅದುಬಿಟ್ಟು ಪಕ್ಷದ ಕಾರ್ಯಕರ್ತರ ಮುಂದೆ ಪೊಲೀಸ್ ಅಧಿಕಾರಿಯೊಬ್ಬರಿಗೆ ವಾಚಾಮಗೋಚರ ಬೈದರೆ ಇಲಾಖೆಯಲ್ಲಿನ ಲಂಚಗುಳಿತನ ನಿಲ್ಲುವುದೇ? ಅಥವಾ ಗೃಹ ಇಲಾಖೆಯಲ್ಲಿ ಸಚಿವರ ಸೂಚನೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲವೇ?



**ಕಠಿಣ ನಿರ್ಧಾರಗಳ ಮೂಲಕ ಲಂಚಗುಳಿತನವನ್ನು ಮಟ್ಟ ಹಾಕಿ, ಪೊಲೀಸ್ ಇಲಾಖೆಯು ಹೆಚ್ಚು ದಕ್ಷ ಮತ್ತು ಜನಸ್ನೇಹಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕಾಗಿದೆ**

ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಲ್ಲಿ ತಮ್ಮ ಈ ದೂರವಾಣಿ ಕರೆಯ ವಿಡಿಯೊ ಬಹಿರಂಗವಾದ ಬಳಿಕ ಸಚಿವರು ಸ್ಪಷ್ಟೀಕರಣವೊಂದನ್ನು ನೀಡಿದ್ದಾರೆ. ‘ನಾನು ರಾಜ್ಯದ ಎಲ್ಲ ಪೊಲೀಸರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿಲ್ಲ. ಒಂದು ಅಮಾನವೀಯ ಕೃತ್ಯ ತಡೆಯಲು ವಿಫಲರಾದವರ ಬಗ್ಗೆ ಕೋಪದಿಂದ ಮಾತನಾಡಿರಬಹುದು. ಕರ್ನಾಟಕದ ಪೊಲೀಸ್ ಪಡೆಗೆ ದೇಶದಲ್ಲೇ ಅತ್ಯುತ್ತಮ ಪಡೆ ಎಂಬ ಹೆಗ್ಗಳಿಕೆ ಇದೆ. ಅದಕ್ಕಾಗಿ ಹೆಮ್ಮೆಪಡುತ್ತೇನೆ’ ಎಂದು ಸ್ಪಷ್ಟೀಕರಣದಲ್ಲಿ ಅವರು ವಿವರಿಸಿದ್ದಾರೆ. ಸ್ಪಷ್ಟೀಕರಣ ಏನೇ ನೀಡಿದರೂ ಸಚಿವರ ಹೇಳಿಕೆಯ ಅಡ್ಡಪರಿಣಾಮ ಪೊಲೀಸ್ ಪಡೆಯ ಮೇಲೆ ಆಗಿಯೇ ಆಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಹೇಗೆ ಭ್ರಷ್ಟ ಅಧಿಕಾರಿಗಳು ಇದ್ದಾರೋ, ಅದೇ ರೀತಿ ಯಾವ ಮುಲಾಜೂ ಇಲ್ಲದೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ದಕ್ಷ ಅಧಿಕಾರಿಗಳೂ ಇದ್ದಾರೆ. ಸಚಿವ ಸ್ಥಾನದಂತಹ ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಇಲಾಖೆಯ ಬಗ್ಗೆ ಮನಸ್ಸಿಗೆ ಬಂದಂತೆ ಪಕ್ಷದ ಕಾರ್ಯಕರ್ತರ ಎದುರು ಹೀಗೆ ನಾಲಗೆ ಹರಿಬಿಡುವುದು ಎಳ್ಳಷ್ಟೂ ಸರಿಯಲ್ಲ. ಸಾರ್ವಜನಿಕರ ಕಣ್ಣಿಗೆ ಇದು ಸಚಿವರ ಅಸಹಾಯಕತೆಯ ಪ್ರದರ್ಶನದಂತೆಯೇ ಕಂಡಿರುವ ಸಾಧ್ಯತೆ ಹೆಚ್ಚು. ಗೃಹ ಸಚಿವರ ಮಾತನ್ನೇ ಪೊಲೀಸರು ಗಂಭೀರವಾಗಿ ಪರಿಗಣಿಸುತ್ತಿಲ್ಲ, ವ್ಯಾಪಕ ಲಂಚಗುಳಿತನದಲ್ಲಿ ತೊಡಗಿದ್ದಾರೆ ಎಂದು ಸಾರ್ವಜನಿಕರ ಮನಸ್ಸಿನಲ್ಲಿ ಗಟ್ಟಿಯಾಗಿ ನಾಟಿದರೆ ಆಡಳಿತ ಇನ್ನಷ್ಟು ಹದಗೆಡುತ್ತದೆ ಎನ್ನುವುದನ್ನು ಸಚಿವರು ಅರ್ಥ ಮಾಡಿಕೊಳ್ಳಬೇಕಿತ್ತು.

ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಸಚಿವರು ಮನಬಂದಂತೆ ನಾಲಗೆ ಹರಿಯಬಿಡುವುದು ಇದು ಮೊದಲೇನಲ್ಲ. ಹಲವು ಸಚಿವರು ಈ ರೀತಿ ಜವಾಬ್ದಾರಿಯಿಲ್ಲದೆ ಲಘುಧಾಟಿಯಲ್ಲಿ ಮಾತನಾಡಿರುವುದು ಇದೆ. ಗೃಹ ಸಚಿವ ಜ್ಞಾನೇಂದ್ರ ಅವರಿಗೂ ಇದು ಹೊಸತಲ್ಲ. ಈ ಹಿಂದೆ ಮೈಸೂರಿನಲ್ಲಿ ಕಾಲೇಜು ವಿದ್ಯಾರ್ಥಿಯೊಬ್ಬನನ್ನು ಥಳಿಸಿ ಆತನ ಜೊತೆಗಿದ್ದ ವಿದ್ಯಾರ್ಥಿನಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣದಲ್ಲೂ ಗೃಹ ಸಚಿವರು ‘ಆ ಹೊತ್ತಿನಲ್ಲಿ ಅವರಿಬ್ಬರೂ ಅಲ್ಲಿಗೆ ಏಕೆ ಹೋಗಬೇಕಿತ್ತು?’ ಎಂದು ಹೇಳಿದ್ದರು. ಸಚಿವರ ಈ ಹೇಳಿಕೆ ಬೇಜವಾಬ್ದಾರಿತನದ್ದು ಎಂದು ವಿರೋಧ ಪಕ್ಷಗಳ ಮುಖಂಡರು ಮತ್ತು ಸಾರ್ವಜನಿಕರು ತೀವ್ರವಾಗಿ ಟೀಕಿಸಿದ್ದರು. ದೆಹಲಿಯಲ್ಲಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ಷಮೆ ಕೇಳುವಂತೆ ಸಚಿವರಿಗೆ ಸೂಚಿಸಿದ್ದಲ್ಲದೆ, ಪ್ರಕರಣದ ತನಿಖೆಯ ವಿವರಗಳನ್ನು ತಮಗೆ ನೇರವಾಗಿ ಸಲ್ಲಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿದ್ದರು. ಮುಖ್ಯಮಂತ್ರಿ ಸೂಚನೆಯಂತೆ ತಮ್ಮ ಲಘುಮಾತಿಗೆ ಸಚಿವರು ವಿಷಾದ ವ್ಯಕ್ತಪಡಿಸಿದ ಬಳಿಕ ಆ ವಿವಾದ ತಣ್ಣಗಾಗಿತ್ತು. ಈಗ ಸಚಿವರು ಮತ್ತೆ ಬೇಜವಾಬ್ದಾರಿಯಿಂದ ತಮ್ಮದೇ ಇಲಾಖೆಯ ಬಗ್ಗೆ ಮಾತನಾಡಿರುವುದು ಪಕ್ಷ ಮತ್ತು ಸರ್ಕಾರಕ್ಕೆ ಇರಿಸುಮುರಿಸು ಉಂಟುಮಾಡುವಂತಹುದು. ಆಡಳಿತದ ಅನುಭವ ಹೊಂದಿರದ ಜ್ಞಾನೇಂದ್ರ ಅವರಿಗೆ ಗೃಹ ಖಾತೆಯಂತಹ ಮಹತ್ವದ ಜವಾಬ್ದಾರಿಯನ್ನು ಹೊರಿಸಿದಾಗಲೇ ನಾಡಿನ ಹಲವರ ಹುಬ್ಬೇರಿತ್ತು. ಈಗ ಅವರ ನಡೆ–ನುಡಿಗಳಲ್ಲಿ ಆಡಳಿತದ ಅನುಭವ ಕೊರತೆ ಸ್ಪಷ್ಟವಾಗಿ ಗೋಚರವಾಗುತ್ತಿದೆ. ರಾಜ್ಯ ಪೊಲೀಸ್ ಇಲಾಖೆಯಲ್ಲಿ ಲಂಚಗುಳಿತನ ಇದೆ ಎಂಬ ಮಾತನ್ನು ಸಚಿವರೇ ಹೇಳಬೇಕಾಗಿಲ್ಲ. ಅದು, ಸಾರ್ವಜನಿಕರ ಅನುಭವಕ್ಕೆ ಬಂದು ದಶಕಗಳೇ ಆಗಿದೆ. ವರ್ಗಾವಣೆಯಲ್ಲಿ ಹಣದ ಪ್ರಭಾವ ಮತ್ತು ರಾಜಕೀಯ ಹಸ್ತಕ್ಷೇಪ ವಿಪರೀತಕ್ಕೆ ಹೋಗಿದೆ ಎಂಬುದು ಬರೀ ಟೀಕೆಯಲ್ಲ ಕಹಿಸತ್ಯ. ವರ್ಗಾವಣೆ ಎಂಬುದು ದಂಧೆಯ ಸ್ವರೂಪ ಪಡೆಯಲು ಕಾರಣ ಯಾರು? ಇದನ್ನು ಮೊದಲು ಕೊನೆಗೊಳಿಸಬೇಕು. ನೇಮಕಾತಿಯು ಹೆಚ್ಚು ಪಾರದರ್ಶಕವಾಗಿ ಇರುವಂತೆ ನೋಡಿ ಕೊಳ್ಳಬೇಕು. ಇಂತಹ ಉಪಕ್ರಮ ಮತ್ತು ಕಠಿಣ ನಿರ್ಧಾರಗಳ ಮೂಲಕ ಲಂಚಗುಳಿತನವನ್ನು ಮಟ್ಟ ಹಾಕಿ ಇಲಾಖೆಯು ಹೆಚ್ಚು ದಕ್ಷವಾಗಿ ಮತ್ತು ಜನಸ್ನೇಹಿಯಾಗಿ ಕೆಲಸ ಮಾಡುವಂತೆ ಮಾಡಬೇಕು.

### ದಿನದ ಟ್ವೀಟ್



**ಇರಲಿ ಎಚ್ಚರ**

**ಪ್ರಜಾಪ್ರಭುತ್ವದಲ್ಲಿ ಎಲ್ಲ ಮತದಾರರಿಗೂ ಆಯ್ಕೆಯ ಮತ್ತು ಸ್ಪರ್ಧೆಯ ಸ್ವಾತಂತ್ರ್ಯವಿದೆ. ವೈಯಕ್ತಿಕ ಹಾಗೂ ವ್ಯಾವಹಾರಿಕ ಹಿತಾಸಕ್ತಿಯ ಸಂಘರ್ಷವಿರುವವರು ಚುನಾವಣಾ ಕಣದಲ್ಲಿದ್ದಾಗ ಮತದಾರ ಎಚ್ಚರ ವಹಿಸಬೇಕು. ವಿಧಾನ ಪರಿಷತ್ ಚುನಾವಣೆಗೆ ಜಾತಿ, ಧರ್ಮ, ಹಣ, ಹುದ್ದೆ ವಗೈರೆ ಆಮಿಷವೊಡ್ಡಿ ಮತ ಸೆಳೆಯಲು ನಡೆಯುತ್ತಿರುವ ಪೈಪೋಟಿ ವಾಕರಿಕೆ ತರುವಂತಿದೆ!**

**ಕೆ.ಬಿ.ಕೆ.ಸ್ವಾಮಿ,** ವಕೀಲ

### ಕಿಡಿನುಡಿ

**ಬಿಜೆಪಿ, ಕಾಂಗ್ರೆಸ್, ಟಿಎಂಸಿ ಅಥವಾ ಜೆಡಿಯು ಹೀಗೆ ಪಕ್ಷ ಯಾವುದೇ ಇರಲಿ, ಪ್ರಶಾಂತ್ ಕಿಶೋರ್ ಹಣಕ್ಕಾಗಿ ಚುನಾವಣಾ ಪ್ರಚಾರಕ್ಕೆ ನೆರವು ನೀಡುವವರು. ಅವರೊಬ್ಬ ವೃತ್ತಿಪರ. ಅವರು ಈಗ ಯಾರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಅವರೇ ಹೇಳಬೇಕು.**



**ಭೂಪೇಶ್ ಬಘೆಲ್,** ಛತ್ತೀಸಗಡ ಮುಖ್ಯಮಂತ್ರಿ

### 25 ವರ್ಷಗಳ ಹಿಂದೆ

ಶುಕ್ರವಾರ, 6-12-1996

• **ಗಾತ್ರ ಕುಗ್ಗಿಸಿ ಸಂಪುಟ ಪುನರ್‌ರಚನೆಗೆ ಪಟೇಲ್ ಸಿದ್ಧ**

**ಬೆಂಗಳೂರು, ಡಿ. 5**– ರಾಜ್ಯದ, ಪಕ್ಷದ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ಮಂತ್ರಿ ಮಂಡಲದ ಗಾತ್ರವನ್ನು ಕುಗ್ಗಿಸಿ ಸಂಪುಟ ಪುನರ್‌ರಚನೆಗೂ ತಾವು ಸಿದ್ಧರಿರುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ಮುಖ್ಯಮಂತ್ರಿ ಅವರು ಪಕ್ಷದ ಭಿನ್ನ ಮತೀಯ ಶಾಸಕರೊಂದಿಗೆ ಇಂದು ಸುಮಾರು ಎರಡೂ ಮುಕ್ಕಾಲು ಗಂಟೆ ಮಾತುಕತೆ ನಡೆಸಿ, ಮಂತ್ರಿಮಂಡಲ ಪುನರ್‌ರಚನೆ ತಕ್ಷಣದಲ್ಲಿ ಇಲ್ಲ, ಹಿರಿಯ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ‘ನಮ್ಮಲ್ಲಿ ಭಿನ್ನಮತ ಇಲ್ಲ. ಇದು ನಮ್ಮ ಮನೆ ವಿಚಾರ. ನನ್ನ ಈ ಆಲೋಚನೆಗೆ ಅವರೂ (ಭಿನ್ನಮತೀಯರು) ಒಪ್ಪಿದ್ದಾರೆ. ಇದೇನಿದ್ದರೂ ರಾಜ್ಯದಲ್ಲಿ ಆಡಳಿತವನ್ನು ಚುರುಕುಗೊಳಿಸಿ, ಜನತೆಯ ಹಿತ ಕಾಪಾಡುವುದೇ ಆಗಿದೆ’ ಎಂದು ಭಿನ್ನಮತೀಯರೊಂದಿಗೆ ಚರ್ಚಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

### 50 ವರ್ಷಗಳ ಹಿಂದೆ

ಸೋಮವಾರ, 6-12-1971

• **ಕರಾಚಿ ಬಳಿ 4 ಪಾಕ್ ಸಮರ ನೌಕೆಗಳ ಮುಳುಗಡೆ: ಸಬ್‌ಮರೀನ್ ನಾಶ**

**ನವದೆಹಲಿ, ಡಿ. 5**– ಅಮೃತಸರ ವಿಮಾನ ನಿಲ್ದಾಣದ ಮೇಲೆ ಮೂರು ಪಾಕಿಸ್ತಾನೀ ಸ್ಟಾರ್ ಫೈಟರ್ ವಿಮಾನಗಳ ಪತನ, ಕರಾಚಿ ನೌಕಾ ನೆಲೆಯಲ್ಲಿ ನಾಲ್ಕು ಖೈಬರ್, ಷಹಜಹಾನ್ ಹಾಗೂ ಇನ್ನೆರಡು ನೌಕೆಗಳ ಮುಳುಗಡೆ, ರಾಜಸ್ಥಾನ ವಿಭಾಗದಲ್ಲಿ ಸೈನಿಕರ ಮುನ್ನಡೆ, ಇವಿಷ್ಟು ಪಶ್ಚಿಮ ವಲಯದಲ್ಲಿ ಭಾರತೀಯ ಪಡೆಗಳ ಸಾಧನೆ.

ಅಖೌರ ಮತ್ತು ಚರ್ಖಿಗಳ ವಶ, ಸಬ್‌ಮರೀನ್ ಒಂದರ ಮುಳುಗಡೆ, ಚಿತ್ತಗಾಂಗ್ ಮತ್ತು ಕಾಕ್ಸ್ ಬಜಾರ್‌ಗಳ ಮೇಲೆ ಭಾರಿ ದಾಳಿ– ಪೂರ್ವ ವಲಯದಲ್ಲಿ ನಮ್ಮವರು ಇಂದು ಗಳಿಸಿದ ಯಶ.

ಅಖೌರವನ್ನು ಬೆಳಿಗ್ಗೆ ಏಳು ಗಂಟೆಯಲ್ಲಿ ವಶಪಡಿಸಿಕೊಳ್ಳಲಾಯಿತು.

## ಸಹಕಾರ, ಸಮನ್ವಯದ ಕ್ರಮಗಳಿಂದಷ್ಟೇ ಶಾಶ್ವತ ಪರಿಹಾರ ಸಾಧ್ಯ
# ದೆಹಲಿ ವಾಯುಮಾಲಿನ್ಯ ಮತ್ತೆ ಗಂಭೀರ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

‘**ದೆಹಲಿಯ** ಪರಿಸ್ಥಿತಿ ನರಕಕ್ಕಿಂತಲೂ ಕೆಟ್ಟದಾಗಿದೆ’. ಇದು, 2019ರ ನವೆಂಬರ್ 25ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರುಣ್ ಮಿಶ್ರಾ ಅವರು ದೆಹಲಿಯ ವಾಯುಮಾಲಿನ್ಯದ ಬಗ್ಗೆ ಮಾಡಿದ ಕಟು ಟೀಕೆ. ಎರಡು ವರ್ಷಗಳ ನಂತರ, ವಾಯುಮಾಲಿನ್ಯವನ್ನು ನಿಯಂತ್ರಿಸಲು ವಿಫಲವಾಗಿರುವ ದೆಹಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್ ಮತ್ತೊಮ್ಮೆ ತೀವ್ರ ಅಸಂತೋಷವನ್ನು ವ್ಯಕ್ತಪಡಿಸಿದೆ.

ಎಚ್ಚೆತ್ತ ವಾಯು ಗುಣಮಟ್ಟ ನಿರ್ವಹಣಾ ಪ್ರಾಧಿಕಾರವು ಕಟ್ಟುನಿಟ್ಟಾದ ಕ್ರಮಗಳಿಗಾಗಿ 17 ಫ್ಲೈಯಿಂಗ್ ಸ್ಕ್ವಾಡ್‌ಗಳನ್ನು ರಚಿಸಿದೆ. ದೆಹಲಿಯ ಸುತ್ತ 300 ಕಿ.ಮೀ. ವ್ಯಾಪ್ತಿಯ 11 ಶಾಖವಿದ್ಯುತ್ ಸ್ಥಾವರಗಳಲ್ಲಿ ಆರು ಸ್ಥಾವರಗಳನ್ನು ಡಿಸೆಂಬರ್ 15ರವರೆಗೆ ಸ್ಥಗಿತಗೊಳಿಸಿದೆ. ಹರಿಯಾಣದಲ್ಲಿ 14 ಜಿಲ್ಲೆಗಳಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದೆ. ಈ ತುರ್ತು ಕ್ರಮಗಳು ದೆಹಲಿಯ ವಾಯುಮಾಲಿನ್ಯ ಸಮಸ್ಯೆಯನ್ನು ಪರಿಹರಿಸಬಲ್ಲವೇ?

ಕಳೆದ ಎರಡು ದಶಕಗಳ ಅವಧಿಯಲ್ಲಿ ದೆಹಲಿಯ ವಾಯುಮಾಲಿನ್ಯವನ್ನು ನಿಯಂತ್ರಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಾಯುಮಾಲಿನ್ಯಕ್ಕೆ ಅಧಿಕ ಪ್ರಮಾಣದಲ್ಲಿ ಕಾರಣವಾಗುವ ಕಾರ್ಖಾನೆಗಳನ್ನು ಮುಚ್ಚುವುದು, ವಾಹನಗಳಲ್ಲಿ ಸಿಎನ್‌ಜಿ ಇಂಧನದ ಬಳಕೆ, ಉಷ್ಣವಿದ್ಯುತ್ ಸ್ಥಾವರಗಳನ್ನು ಸ್ಥಗಿತಗೊಳಿಸುವುದು, ವಾಹನಗಳ ಉತ್ಸರ್ಜನೆಗೆ ಕಟ್ಟುನಿಟ್ಟಾದ ಮಾನಕಗಳು (ಸ್ಟ್ಯಾಂಡರ್ಡ್ಸ್), ಭಾರವಾಹನಗಳು ದೆಹಲಿಯೊಳಗೆ ಪ್ರವೇಶಿಸದಂತೆ ಕ್ರಮ, ನೋಂದಣಿ ಸಂಖ್ಯೆಯಲ್ಲಿನ ಸರಿ-ಬೆಸಗಳನ್ನು ಆಧರಿಸಿ ವಾಹನಗಳನ್ನು ರಸ್ತೆಗಿಳಿಸುವ ನಿಯಮ, ಡೀಸೆಲ್ ಜನರೇಟರ್‌ಗಳ ಮೇಲೆ ನಿರ್ಬಂಧ, ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ, ಮೆಟ್ರೊ ರೈಲು ವ್ಯವಸ್ಥೆ ಮುಂತಾದ ಕ್ರಮಗಳು ಜಾರಿಯಾಗಿದ್ದರೂ ವಾಯುಮಾಲಿನ್ಯದ ಸಮಸ್ಯೆ ಕಡಿಮೆಯಾಗಿಲ್ಲ. ಅದರ ಬದಲಿಗೆ ಜಗತ್ತಿನ ಅತಿ ಹೆಚ್ಚು ಪ್ರಮಾಣದ ಮಾಲಿನ್ಯ ನಗರಗಳಲ್ಲಿ ದೆಹಲಿಯ ಹೆಸರು ಎದ್ದು ಕಾಣುತ್ತದೆ. ಈ ಪರಿಸ್ಥಿತಿಗೆ ಕಾರಣಗಳು ಹಲವಾರು.

ನಾವು ಬಳಸುವ ಇಂಧನ, ದಹಿಸುವ ವಿವಿಧ ವಸ್ತುಗಳು ಮತ್ತು ಅವುಗಳ ಪ್ರಮಾಣಕ್ಕೂ ವಾಯುಮಾಲಿನ್ಯಕ್ಕೂ ನೇರ ಸಂಬಂಧವಿದೆ. ಗರಿಷ್ಠ ಪ್ರಮಾಣದಲ್ಲಿ ವಾಯುಮಾಲಿನ್ಯವನ್ನು ಉಂಟುಮಾಡುವ ಸಾಮರ್ಥ್ಯ ಇರುವ ಪದಾರ್ಥಗಳೆಂದರೆ ಮನೆಗಳಲ್ಲಿ ಉರುವಲಾಗಿ ಬಳಸುವ ಸಸ್ಯ ಮತ್ತು ಪ್ರಾಣಿಜನ್ಯವಾದ ಎಲ್ಲ ಆರ್ಗ್ಯಾನಿಕ್ ಪದಾರ್ಥಗಳು (ಬಯೋಮಾಸ್) ಕೃಷಿ ಉಳಿಕೆಯ ಪದಾರ್ಥಗಳು ಮತ್ತು ನಗರ, ಪಟ್ಟಣಗಳ ಸಾವಯವ ತ್ಯಾಜ್ಯ ವಸ್ತುಗಳು ಎಂಬುದು ಇತ್ತೀಚೆಗೆ ಬೆಳಕಿಗೆ ಬರುತ್ತಿರುವ ವಿಷಯ.

ಪೆಟ್ರೋಲ್ ಮತ್ತು ಡೀಸೆಲ್‌ಗಳಿಂದಾಗುವ ವಾಯುಮಾಲಿನ್ಯವು ಕಲ್ಲಿದ್ದಲಿಗಿಂತ ಕಡಿಮೆ. ನೈಸರ್ಗಿಕ ಅನಿಲವು ಅತಿ ಕಡಿಮೆ ಪ್ರಮಾಣದ ಮಾಲಿನ್ಯವನ್ನು ಉಂಟುಮಾಡುವ ಇಂಧನ. ದೆಹಲಿಯಲ್ಲಿ ವಾಯುಮಾಲಿನ್ಯವನ್ನು ಯಶಸ್ವಿಯಾಗಿ ನಿಯಂತ್ರಿಸಬೇಕಾದರೆ ನಮ್ಮ ಗರಿಷ್ಠ ಗಮನವಿರಬೇಕಾದುದು ದೇಶದ ಶೇ 85ರಷ್ಟು ಮಾಲಿನ್ಯಕ್ಕೆ ಕಾರಣವಾಗುವ ಕಲ್ಲಿದ್ದಲು, ಲಿಗ್ನೈಟ್ ಮತ್ತು ಬಯೋಮಾಸ್ ಇಂಧನದ ಮೇಲೆ. ವಿಪರ್ಯಾಸವೆಂದರೆ ಸರ್ಕಾರಗಳ ಬಹುಪಾಲು ಗಮನವಿರುವುದು ಶೇ 15ರಷ್ಟು ಮಾಲಿನ್ಯಕ್ಕೆ ಕಾರಣವಾಗುವ ಪೆಟ್ರೋಲಿಯಂ ಪದಾರ್ಥಗಳ ಮೇಲೆ, ಅವುಗಳನ್ನು ಬಳಸುವ ವಾಹನಗಳ ಮೇಲೆ ಎನ್ನುವುದು ತಜ್ಞರ ಅಭಿಪ್ರಾಯ. ದೆಹಲಿಯ ವಾಯುಮಾಲಿನ್ಯದ ಮೂಲದಲ್ಲಿರುವುದು ಈ ಪ್ರಶ್ನಾರ್ಹವಾದ ಆದ್ಯತೆ.

ದೆಹಲಿ ಸರ್ಕಾರ ಕಲ್ಲಿದ್ದಲಿನಿಂದಾಗುವ ಮಾಲಿನ್ಯವನ್ನು ನಿಯಂತ್ರಿಸಲು ಬಹಳಷ್ಟು ಕ್ರಮಗಳನ್ನು ಕೈಗೊಂಡಿದೆ. ದೆಹಲಿಯ ವ್ಯಾಪ್ತಿಯಲ್ಲಿರುವ ಉಷ್ಣವಿದ್ಯುತ್ ಸ್ಥಾವರಗಳನ್ನು ಮುಚ್ಚಲಾಗಿದೆ. ಕಾರ್ಖಾನೆಗಳನ್ನು ನಿಷೇಧಿಸಲಾಗಿದೆ. ಆದರೆ ದೆಹಲಿಯ ಕೈಗಾರಿಕಾ ವಲಯಗಳಲ್ಲಿ ಕಲ್ಲಿದ್ದಲನ್ನು ಬಳಸುವ ಸಾವಿರಾರು ಸಣ್ಣ ಸಣ್ಣ ಕೈಗಾರಿಕೆಗಳಿವೆ, ಬಾಯ್ಲರುಗಳಿವೆ. ಲಕ್ಷಾಂತರ ಮನೆಗಳಿಗೆ ಎಲ್‌ಪಿಜಿ ಸಿಲಿಂಡರ್ ದೊರೆತಿಲ್ಲ. ಇವುಗಳಿಗಿಂತ ಮುಖ್ಯವಾಗಿ ಉತ್ತರಪ್ರದೇಶ, ಪಂಜಾಬ್ ಮತ್ತು ಹರಿಯಾಣದಲ್ಲಿರುವ, ಕಲ್ಲಿದ್ದಲನ್ನು ಬಳಸುವ ಹನ್ನೊಂದು ಶಾಖವಿದ್ಯುತ್ ಸ್ಥಾವರಗಳಿಂದ ಹೊರಬಂದು ದೆಹಲಿಯನ್ನಾವರಿಸುವ ಮಾಲಿನ್ಯಕಾರಕ ಅನಿಲಗಳು ಮತ್ತು ಹಾರುಬೂದಿಯನ್ನು ನಿಯಂತ್ರಿಸಲಾಗಿಲ್ಲ.

ಪ್ರತಿವರ್ಷ ಸೆಪ್ಟೆಂಬರ್- ಅಕ್ಟೋಬರ್ ತಿಂಗಳಿನಲ್ಲಿ ರಾಜಸ್ಥಾನ, ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶದ ರೈತರು ಕಟಾವಿನ ನಂತರ, ಮುಂದಿನ ಬೆಳೆಗೆ ಸಿದ್ಧತೆಯಾಗಿ, ತಮ್ಮ ಭೂಮಿಯಲ್ಲಿ ಉಳಿದಿರುವ ಕೂಳೆಗಳಿಗೆ ಬೆಂಕಿ ಹಚ್ಚಿ ಸುಡುತ್ತಾರೆ. ಈ ಅವಧಿಯಲ್ಲಿ ನಾಲ್ಕು ರಾಜ್ಯಗಳಿಂದ ಸುಮಾರು ಮೂರೂವರೆ ಕೋಟಿ ಟನ್‌ಗಳಷ್ಟು ಕೂಳೆಯನ್ನು ಸುಡಲಾಗುತ್ತದೆ. ಇದರಿಂದ ಹೊರಬರುವ ಹೊಗೆ, ದೂಳು, ರಾಸಾಯನಿಕ ವಸ್ತುಗಳು, ವಿಷಕಾರಿ ಅನಿಲಗಳು ದೆಹಲಿಯತ್ತ ಚಲಿಸಿ, ನಗರವನ್ನು ಆವರಿಸಿ, ದಟ್ಟವಾದ ಹೊಂಜಿಗೆ (ಸ್ಮಾಗ್) ಕಾರಣವಾಗಿ ತೀವ್ರ ಸ್ವರೂಪದ ಉಸಿರಾಟದ ತೊಂದರೆಗಳನ್ನು ಉಂಟುಮಾಡುತ್ತವೆ. 2015ರಲ್ಲೇ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಕೂಳೆಗಳಿಗೆ ಬೆಂಕಿ ಹಾಕುವುದನ್ನು ಕಾನೂನುಬಾಹಿರವೆಂದು ನಿಷೇಧಿಸಿದ್ದರೂ ಕಾನೂನನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಸಾಧ್ಯವಾಗಿಲ್ಲ. ಈ ಮಧ್ಯೆ ಕೂಳೆಯನ್ನು ಸುಡದಿರಲು ಅನೇಕ ಪ್ರೋತ್ಸಾಹಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಪ್ರಯತ್ನಗಳು ನಡೆದಿವೆ.



ರಾಸಾಯನಿಕ ದ್ರಾವಣವೊಂದನ್ನು ಸಿಂಪಡಿಸಿ ಕೂಳೆಗಳನ್ನು ಉಪಯುಕ್ತ ಗೊಬ್ಬರವನ್ನಾಗಿ ಮಾರ್ಪಡಿಸುವ ತಂತ್ರಜ್ಞಾನವನ್ನು ದೆಹಲಿ ಐಐಟಿ ವಿಜ್ಞಾನಿಗಳು ರೂಪಿಸಿದ್ದು ಅದರ ಬಳಕೆ ಪ್ರಾರಂಭವಾಗಿದೆ. ಕೂಳೆಗಳನ್ನು ಸುಡದಿರಲು ಎಕರೆಯೊಂದಕ್ಕೆ ₹ 1,000 ಸಬ್ಸಿಡಿ ನೀಡುವ ಯೋಜನೆಯಿದೆ. ಕೂಳೆಗಳನ್ನು ತೆಗೆಯಲು ಯಂತ್ರೋಪಕರಣಗಳನ್ನು ಉಚಿತವಾಗಿ ವಿತರಿಸಲಾಗಿದೆ. ಕೂಳೆಗಳಿಂದ ಎಥೆನಾಲನ್ನು ಉತ್ಪಾದಿಸುವ ತಂತ್ರಜ್ಞಾನ ಲಭ್ಯವಿದ್ದು, ಕಾರ್ಖಾನೆಗಳು ರೈತರಿಂದ ಕೂಳೆಗಳನ್ನು ಖರೀದಿಸುವ ಪ್ರಕ್ರಿಯೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಆದರೆ ಈ ಎಲ್ಲವೂ ಒಂದು ಬೆಳೆಯ ಕಟಾವು ಮುಗಿದು ಇನ್ನೊಂದು ಬೆಳೆಯ ಪ್ರಾರಂಭದ ಸುಮಾರು 15 ದಿನಗಳ ಅಂತರದಲ್ಲಿ ನಡೆದು ಮುಗಿದು ಹೋಗಬೇಕು. ಇದು ಸಾಧ್ಯವಾದಾಗ ಮಾತ್ರ ಈ ವಿವಿಧ ಕ್ರಮಗಳು ಆರ್ಥಿಕವಾಗಿ ತಮಗೆ ಲಾಭದಾಯಕವಾಗುತ್ತವೆ ಎಂಬುದು ರೈತರ ಅಭಿಪ್ರಾಯ. ಸದ್ಯದಲ್ಲಿ ಇದು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿಯೇ, ಕಾನೂನು ಜಾರಿಯಲ್ಲಿದ್ದರೂ ಕಳೆದ ವರ್ಷ 15 ದಿನಗಳ ಅವಧಿಯಲ್ಲಿ ಕೂಳೆಗಳಿಗೆ ಬೆಂಕಿ ಹಚ್ಚಿದ 73,000 ಪ್ರಕರಣಗಳು ದಾಖಲಾಗಿವೆ.

ದೆಹಲಿಯ ವಾಯುಮಾಲಿನ್ಯಕ್ಕೆ ಮತ್ತೊಂದು ಮುಖ್ಯ ಕಾರಣವೆಂದರೆ ದೂಳು, 0.01ನಿಂದ 100 ಮೈಕ್ರಾನ್ ಗಾತ್ರದ, ಕೂದಲೆಳೆಗಿಂತ 100 ಪಾಲಿನಷ್ಟು ಸೂಕ್ಷ್ಮವಾಗಿರುವ ಘನ ಕಣಗಳು. ದೂಳು, ಇಂಗಾಲ ಮತ್ತು ಗಂಧಕದಂಥ ಅಜೈವಿಕ ಪದಾರ್ಥ ಅಥವಾ ಬ್ಯಾಕ್ಟೀರಿಯಾದಂಥ ಜೈವಿಕ ಪದಾರ್ಥಗಳನ್ನು ಒಳಗೊಂಡಿರಬಹುದು. ಉಸಿರಾಟದ ಮೂಲಕ ಶ್ವಾಸಕೋಶವನ್ನು ಪ್ರವೇಶಿಸಿ, ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಬಲ್ಲ ದೂಳಿನ ಶೇ 30ರಷ್ಟು ಭಾಗ ದೆಹಲಿಯಲ್ಲಿ ನೇರವಾಗಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಂದ ಬರುತ್ತದೆ. ದೆಹಲಿಯ ಸುತ್ತಮುತ್ತಲಿನ ರಾಜ್ಯಗಳಲ್ಲಿ ಅವನತಿಗೊಳ್ಳುತ್ತಿರುವ ಭೂಮಿ ಮತ್ತು ಹೆಚ್ಚುತ್ತಿರುವ ಮರುಭೂಮೀಕರಣಗಳೂ ದೆಹಲಿಯ ಕಣಮಾಲಿನ್ಯಕ್ಕೆ ಮತ್ತೊಂದು ಮುಖ್ಯ ಕಾರಣ. ಆದರೆ ಮಾಲಿನ್ಯದ ಈ ಮೂಲದತ್ತ ಹರಿದಿರುವ ಗಮನ ಅತಿ ಕಡಿಮೆ ಎಂಬುದು ತಜ್ಞರ ಅಭಿಪ್ರಾಯ.

ದೆಹಲಿಯ ವಾಯುಮಾಲಿನ್ಯಕ್ಕೆ ದೆಹಲಿಯೊಂದೇ ಕಾರಣವಲ್ಲ. ರಾಜಸ್ಥಾನ, ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶದ ಕೊಡುಗೆಯೂ ಧಾರಾಳವಾಗಿದೆ. ಹೀಗಾಗಿ ಈ ಎಲ್ಲ ರಾಜ್ಯ ಸರ್ಕಾರಗಳೂ ರಾಜಕಾರಣ ಮಾಡುವುದನ್ನು ನಿಲ್ಲಿಸಿ, ದೋಷಾರೋಪಗಳನ್ನು ಕೈಬಿಟ್ಟು ಪರಸ್ಪರ ಸಹಕರಿಸಿ ಶ್ರಮಿಸಿದರೆ ಮಾತ್ರ ದೆಹಲಿಯ ವಾಯುಮಾಲಿನ್ಯ ಸಮಸ್ಯೆಯನ್ನು ತಹಬಂದಿಗೆ ತರಬಹುದು. ಈ ಹಾದಿಯಲ್ಲಿ ರಾಜ್ಯಗಳ ಒಳಿತೂ ಸಾಧ್ಯವಾಗುತ್ತದೆ. ಇಂತಹ ಸಹಕಾರ, ಸಮನ್ವಯ ಸಾಧ್ಯವಾಗದಿದ್ದರೆ, ತುರ್ತು ಕ್ರಮಗಳು ನೀಡುವ ಪರಿಹಾರ ಕೇವಲ ತಾತ್ಕಾಲಿಕವಾಗಿ, ಪ್ರತೀ ವರ್ಷಾಂತ್ಯದಲ್ಲಿಯೂ ದೆಹಲಿ ನರಕಸದೃಶವಾಗುವುದು ಅನಿವಾರ್ಯವಾಗುತ್ತದೆ.

### ಸಂಗತ

# ನೀಟ್ ನೆಟ್ಟಗಾಗದಿದ್ದರೆ?

**ಈ ಪರೀಕ್ಷೆಯು ಪರೀಕ್ಷಿಸುವುದು ಕೇವಲ ವಿಜ್ಞಾನವನ್ನಲ್ಲ, ಜೀವನಕೌಶಲವನ್ನೂ!**

• ಡಾ. ಕೆ.ಎಸ್.ಪವಿತ್ರ

‘**ನೀಟ್**’ ಮುಗಿದು, ಫಲಿತಾಂಶ ಹೊರಬಿದ್ದು, ಸೀಟುಗಳು ಹಂಚಿಕೆಯಾಗುವ ಪ್ರಕ್ರಿಯೆ ಮೊದಲಾಗುತ್ತಿದೆ. ಪಿಯು ನಂತರ ಮುಂದೇನು ಎಂದು ಯೋಚಿಸುವ ಮಕ್ಕಳು, ಅವರ ತಂದೆ-ತಾಯಿಗಳು ನೀಟ್ ಬಗ್ಗೆ ಹೇಗೆ ಓದಬೇಕು, ಎಲ್ಲಿ ಓದಬೇಕು, ಎಷ್ಟು ಬಾರಿ ತೆಗೆದುಕೊಳ್ಳಬೇಕು ಎಂಬ ಆತಂಕ-ಗೊಂದಲಗಳಲ್ಲಿ ಮುಳುಗಿರುವುದು ಅಸಹಜವೇನಲ್ಲ.

‘ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ’ ಎಂಬ ಏಕರೂಪಿ ಪರೀಕ್ಷಾ ವ್ಯವಸ್ಥೆಯ ಮೂಲಕ ಯಾವುದೇ ವೈದ್ಯಕೀಯ ಪದ್ಧತಿಗೆ, ಭಾರತದಲ್ಲಿರುವ ಸುಮಾರು 66,000 ಎಂಬಿಬಿಎಸ್ ಮತ್ತು ಬಿಡಿಎಸ್ ಸೀಟುಗಳಿಗೆ ಪ್ರವೇಶ ನೀಡಲಾಗುತ್ತದೆ. ಏಕರೂಪವಾಗಿ ದೇಶದೆಲ್ಲೆಡೆ ಈ ಪರೀಕ್ಷೆ ನಡೆಯುತ್ತದೆ ಎನ್ನುವುದು ಅದರ ವಿಶೇಷವನ್ನೂ ಕ್ಲಿಷ್ಟ ಎನ್ನುವ ಗ್ರಹಿಕೆಯನ್ನೂ ಹೆಚ್ಚಿಸಿದೆ ಎನ್ನಬಹುದು. ಪಕ್ಕದ ತಮಿಳುನಾಡಿನಲ್ಲಿ ‘ಏಕರೂಪತೆ’ಯ ಬಗೆಗೆ ಈಗಾಗಲೇ ಹಲವು ಗಲಾಟೆಗಳು ನಡೆದಿವೆ. ಆದರೆ ಸದ್ಯಕ್ಕಂತೂ ನೀಟ್ ಈ ಹೊತ್ತಿನ ವಾಸ್ತವ ಎಂಬುದನ್ನು ಒಪ್ಪಿಕೊಂಡು ನಮ್ಮ ಮುಂದಿರುವ ಸಮಸ್ಯೆಗಳಿಗೆ ಪರಿಹಾರಗಳ ಬಗ್ಗೆ ನೋಡುವುದೊಳಿತು.

ನೀಟ್‌ನಲ್ಲಿ ಅರ್ಹತೆ ದೊರಕದ ವಿದ್ಯಾರ್ಥಿಗಳು, ಇತರ ದಾರಿಗಳನ್ನು ಒಪ್ಪಿಕೊಳ್ಳದ ಯುವಜನರು, ಬಡಪೆಟ್ಟಿಗೆ ತಮ್ಮ ಮಕ್ಕಳ ‘ಸೋಲು’ ಒಪ್ಪದ ಅಪ್ಪ ಅಮ್ಮಂದಿರು ಮನೋವೈದ್ಯಕೀಯ ಸಲಹೆಗೆ ಬರುತ್ತಾರೆ. ಅದರಲ್ಲಿಯೂ ನೀಟ್ ಫಲಿತಾಂಶ ಬಂದ ನಂತರದಲ್ಲಿ ಪ್ರತಿದಿನಕ್ಕೆ ಇಬ್ಬರು ಮೂವರಂತೆ ಬರುವ ವಿದ್ಯಾರ್ಥಿಗಳನ್ನು ನೋಡಿದರೆ ಮನಸ್ಸು ಆತಂಕಗೊಳ್ಳುತ್ತದೆ. ನೀಟ್‌ಗೆ ಸಂಬಂಧಿಸಿದಂತೆ ಹದಿಹರೆಯದವರಲ್ಲಿ ಕೆಲವು ಮುಖ್ಯ ಸಮಸ್ಯೆಗಳನ್ನು ನಾವು ಗಮನಿಸಬೇಕಾಗುತ್ತದೆ.

ಮೊದಲನೆಯದು, ಎಲ್ಲಿ- ಹೇಗೆ- ಯಾವಾಗ ಓದಬೇಕೆನ್ನುವ ಸಮಸ್ಯೆ. ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ತ್ವರಿತವಾಗಿ ಗ್ರಹಿಸಿ, ಉತ್ತರಿಸುವ ವಿದ್ಯಾರ್ಥಿಯ ಸಾಮರ್ಥ್ಯವನ್ನು ಪರೀಕ್ಷಿಸುವುದರಿಂದ, ಸಹಜವಾಗಿ ಹಾಗೆ ಮಾಡಲು ವಿಶೇಷ ತರಬೇತಿಯ ಅಗತ್ಯವಿದೆ. ಈ ಅಗತ್ಯವನ್ನು ಅವಲಂಬಿಸಿ ಹಲವು ತರಬೇತಿ ಕೇಂದ್ರಗಳು ಹುಟ್ಟಿಕೊಂಡಿವೆ. ಹೆಚ್ಚಿನ ಕೇಂದ್ರಗಳ ನೆಲೆ ದೊಡ್ಡ ನಗರಗಳು. ಜೊತೆಗೇ ಕೋವಿಡ್ ಸಮಯದಲ್ಲಿ ಆನ್‌ಲೈನ್ ತಾಣಗಳೂ ಆರಂಭವಾಗಿವೆ. ಚಿಕ್ಕ ನಗರಗಳಿಂದ, ಹಳ್ಳಿಗಳಿಂದ, ಕೆಲವೊಮ್ಮೆ ಬೇರೆ ರಾಜ್ಯಗಳಿಂದ ಮಕ್ಕಳು ನೀಟ್ ಅನ್ನು ಗೆಲ್ಲುವ ಆಸೆಯಿಂದ ಈ ಕೇಂದ್ರಗಳಿಗೆ ಸೇರುತ್ತಾರೆ. ಕೆಲವರು ‘ಜಯಶಾಲಿ’ಗಳಾಗುತ್ತಾರೆ. ಒಂದಿಷ್ಟು ಜನ ಒತ್ತಡ ತಾಳಲಾರದೆ ಮನೆಗೆ ಹಿಂದಿರುಗುತ್ತಾರೆ. ನೀಟ್ ಆಕಾಂಕ್ಷಿಗಳಲ್ಲಿ ಕಂಡುಬರುವ ಮತ್ತೊಂದು ಮುಖ್ಯ ಪ್ರವೃತ್ತಿಯೆಂದರೆ, ನೀಟ್‌ನಲ್ಲಿ ಮೊದಲನೆಯ ಬಾರಿ ಜಯ ಸಿಗಲಿಲ್ಲವೆಂದು ಎರಡು- ಮೂರು ಕೊನೆಗೆ ನಾಲ್ಕು ಬಾರಿ ನೀಟ್ ಅರ್ಹತೆ ಗಳಿಸಲು ಕಷ್ಟಪಡುವುದು. ‘ನೀವು ಕೋಚಿಂಗ್‌ಗೆ ಕಳಿಸಿದ್ದರೆ ನನಗೆ ಸೀಟು ಸಿಕ್ಕೇ ಸಿಕ್ಕುತ್ತಿತ್ತು’ ಎಂಬ ಮಕ್ಕಳ ಆರೋಪಕ್ಕೆ ಹೆದರಿ ಅಪ್ಪ ಅಮ್ಮ ಹೇಗಾದರೂ ಕೋಚಿಂಗ್‌ಗೆ ಕಳಿಸುವುದು.

ಹತ್ತನೇ ತರಗತಿಯಿಂದ ಆರಂಭವಾಗುವ ‘ಓದಿನ ಸಂಕಷ್ಟ’ ಇಂದಿನ ವಾಸ್ತವ. 15 ವರ್ಷದ ಮಕ್ಕಳು 17 ವರ್ಷದವರೆಗೆ ಯಾವ ಆಟ-ವ್ಯಾಯಾಮಗಳೂ ಇರದೆ, ಬೇರೆಲ್ಲಾ ಚಟುವಟಿಕೆಗಳನ್ನೂ ಬದಿಗಿರಿಸಿ ಓದಿನಲ್ಲಿ ಮುಳುಗುತ್ತಾರೆ. ಸುಮಾರು 20 ಶೇಕಡ ನೀಟ್ ಆಕಾಂಕ್ಷಿಗಳು ‘ವೈದ್ಯಕೀಯ ಪದವಿಯೇ ತಮ್ಮ ಜೀವನ’ ಎಂದು ನಂಬಿರುವುದನ್ನು ಇತ್ತೀಚಿನ ಅಧ್ಯಯನವೊಂದು ತೋರಿಸಿದೆ. ‘ವೈದ್ಯಕೀಯ’ ಪದವಿಗೆ ಬದಲಿಯಾದ ಇನ್ನೊಂದು ಅಧ್ಯಯನದ ದಾರಿಯೇ ಅವರ ಯೋಚನೆಗಳಲ್ಲಿ ಇರುವುದಿಲ್ಲ. ಈ ಮೊದಲು ನಾವು ಬಹುವಾಗಿ ಮಾತನಾಡುತ್ತಿದ್ದ ‘ಅಪ್ಪ-ಅಮ್ಮಂದಿರಿಂದ ಮಕ್ಕಳ ಮೇಲೆ ಒತ್ತಡ’, ಈಗ ಕೊಂಚ ಬದಲಾಗಿ ‘ಮಕ್ಕಳು ಸ್ವತಃ ಹಾಕಿಕೊಳ್ಳುವ ಒತ್ತಡವಾಗಿದೆ!’




ನೀಟ್ ಸಮಯದ ಮತ್ತೊಂದು ಆತಂಕಕಾರಿ ಬೆಳವಣಿಗೆಯಾದ ಆತ್ಮಹತ್ಯೆ ಪ್ರಕರಣಗಳು ದೇಶದ ಹಲವೆಡೆಯಿಂದ ವರದಿಯಾಗಿವೆ. ತಮಿಳುನಾಡು ಇಂತಹ ಪ್ರಕರಣಗಳನ್ನು ತಡೆಯಲು ಆಪ್ತ ಸಲಹೆ-ಸಹಾಯವಾಣಿಯನ್ನೇ ಆರಂಭಿಸಿದೆ. ಮರು ನೀಟ್ ಪರೀಕ್ಷೆಯ ವಿದ್ಯಾರ್ಥಿಗಳಲ್ಲಿ ಶೇಕಡ 70ರಷ್ಟು ಜನ ಅತಿ ಆತಂಕದಿಂದ ಬಳಲುತ್ತಿರುತ್ತಾರೆ ಎಂಬುದನ್ನು ತಮಿಳುನಾಡಿನಲ್ಲಿ ನಡೆದ ಅಧ್ಯಯನ ನಿರೂಪಿಸಿದೆ.

ಇದರ ಮಧ್ಯೆ ಎಂಬಿಬಿಎಸ್ ಆಕಾಂಕ್ಷಿಗಳಿಗೆ ದ್ವಿತೀಯ ಪಿಯು ಅಥವಾ ಹನ್ನೆರಡನೇ ತರಗತಿ ಎಂಬುದು ‘ಬೇಡದಿರುವ– ಹೇಗೋ ಪಾಸಾಗಬೇಕಾದ’ ಒಂದು ಪರೀಕ್ಷೆ ಎಂಬ ಧೋರಣೆ ತಲೆದೋರಿದೆ! ದ್ವಿತೀಯ ಪಿಯು ಪರೀಕ್ಷೆಗಳು ನಿರೀಕ್ಷಿಸುವ ಬರೆಯುವ ಕೌಶಲವು ನೀಟ್‌ಗೇನೂ ಬೇಕಾಗಿಲ್ಲ ಎಂಬುದು ವಿದ್ಯಾರ್ಥಿಗಳ ಗ್ರಹಿಕೆಯಾಗಿಬಿಟ್ಟಿದೆ.

ಮನೋವೈದ್ಯೆಯಾದ ನನಗೆ ಅನ್ನಿಸುವ ಹಾಗೆ, ನೀಟ್ ಅನ್ನೂ ಒಳಗೊಂಡಂತೆ ಸ್ಪರ್ಧಾತ್ಮಕ ಪರೀಕ್ಷೆಗಳು ಪರೀಕ್ಷಿಸುವುದು ಕೇವಲ ವಿಜ್ಞಾನವನ್ನಲ್ಲ, ಜೀವನಕೌಶಲವನ್ನೂ!

ನಾವು ಪರೀಕ್ಷೆಗಾಗಿ ಎಷ್ಟು ನಮ್ಮ ಮನಸ್ಸಿನಲ್ಲಿ ಕಷ್ಟಪಡುತ್ತೇವೆ, ಪ್ರೀತಿಯಿಂದ ಓದುತ್ತೇವೆ, ಫಲಿತಾಂಶವನ್ನು ಹೇಗೆ ಸ್ವೀಕರಿಸುತ್ತೇವೆ, ಇವುಗಳೂ ಇಲ್ಲಿ ಮೌಲ್ಯಮಾಪನಕ್ಕೆ ಒಳಗಾಗುತ್ತವೆ. ನೀಟ್‌ನಲ್ಲಿ ‘ಜಯಶಾಲಿ’ಗಳಾದವರ ನಂತರದ ಮಾನಸಿಕ, ದೈಹಿಕ ಆರೋಗ್ಯವನ್ನೂ ಅಧ್ಯಯನ ಮಾಡಬೇಕಾದ ಅಗತ್ಯವಿದೆ. ನೀಟ್‌ನಲ್ಲಿ ವೈಫಲ್ಯ ಉಂಟಾದರೆ ಬದಲಿ ಮಾರ್ಗವನ್ನು ಆರಿಸಿಕೊಂಡು, ಅದರಲ್ಲಿ ಯಶಸ್ಸು ಗಳಿಸುವ ಧೈರ್ಯ, ಪ್ರಾಮಾಣಿಕತೆ ಎರಡೂ ಮಕ್ಕಳು-ಅಪ್ಪ ಅಮ್ಮ ಇಬ್ಬರಿಗೂ ಬೇಕು.

### ಚುರುಮುರಿ



## ವಿಕಾಸಪಥ ಉದ್ಘಾಟನೆ

• ಸುಮಂಗಲಾ

‘**ಮೂವತ್ತೆಂಟು** ಸಾವಿರ ಕೋಟಿ ಅಂದರೆ 38ರ ಮುಂದೆ ಎಷ್ಟ್ ಸೊನ್ನೆ ಅಂತ ಗೊತ್ತೈತೇನ್ ನಿನಗ?’ ಬೆಕ್ಕಣ್ಣ ಕೇಳಿದಾಗ ಪೆಂಗಳಂತೆ ತಲೆ ಅಲ್ಲಾಡಿಸಿದೆ. ನನ್ನ ಅಜ್ಞಾನಕ್ಕೆ ಮರುಗಿದ ಬೆಕ್ಕಣ್ಣ ಮುಂದುವರಿಸಿತು.

‘ಮೋದಿಮಾಮಾ ಪ್ರಧಾನಿಯಾದ ಏಳೇ ವರ್ಸದಾಗೆ ನಾವು 38 ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ರಕ್ಷಣಾ ಸಾಮಗ್ರಿ ಬ್ಯಾರೆ ದೇಶಕ್ಕೆ ರಫ್ತು ಮಾಡೀವಂತ ರಕ್ಷಣಾ ಸಚಿವರು ಹೇಳ್ಯಾರ. ಮೊದ್ಲೆಲ್ಲ ಉಗ್ರರು ಖುಲ್ಲಂಖುಲ್ಲ ಬಂದು ನಮ್ಮೋರಿನ್ನ ಹೊಡದು ಹೋಗ್ತಿದ್ದರು, ಆದರೆ ಮೋದಿಮಾಮಾ ಸರ್ಜಿಕಲ್ ಸ್ಟ್ರೈಕ್ ಮಾಡಿದ ಮ್ಯಾಗೆ ಉಗ್ರರೆಲ್ಲ ನಡುಗಾಕ ಹತ್ಯಾರಂತ ಶಾಣ್ಯಾ ಅಂಕಲ್ ಹೇಳ್ಯಾರ. ಅಮೇಠಿವಳಗ ಮೂರು ದಶಕ ಕೈಪಕ್ಷದವರೇ ಸಂಸದರಾಗಿದ್ರೂ ಏನೂ ಮಾಡಿರಲಿಲ್ಲ. ಸ್ಮೃತಿ ಅಕ್ಕ ಅಲ್ಲಿ ಕಮಲದ ಹೂ ಅರಳಿಸಿದ್ದೇ ಎಷ್ಟೊಂದು ಅಭಿವೃದ್ಧಿ ಮಾಡ್ಯಾಳ. ಐದು ಲಕ್ಷ ಎ.ಕೆ. ರೈಫಲ್ ಉತ್ಪಾದನೆ ಮಾಡೂ ಕಾರ್ಖಾನೆ ಶುರು ಮಾಡ್ಯಾರೆ ಅಲ್ಲಿ. ಈ ಏಳು ವರ್ಸದಾಗೆ ಎಷ್ಟ್ ವಿಕಾಸ ಆಗೈತಿ, ಎಲ್ಲಾರಿಗಿ ಅಗದಿ ಭಯಂಕರ ರಕ್ಷಣೆ ದೊರೆಯಾಕೆ ಹತ್ಯೆತಿ’ ಎಂದು ಹಾಡಿ ಹೊಗಳಿತು.

‘ಹೌದೌದು... ಎಲ್ಲಾರಿಗೂ ರಕ್ಷಣೆ ಸಿಗತೈತಿ. ಅತ್ ಕಡಿಗಿ ನಿನ್ನ ಮಲ್ಯಮಾಮಾ, ನೀರವ್ ಮೋದಿ ಅಂಕಲ್ಲು ಬ್ಯಾರೆ ದೇಶದಾಗೆ ತೆಲಿಮರೆಸಿಕಂಡು ಮಜಾ ಮಾಡಾಕೆ ಹತ್ಯಾರ. ಇತ್ ಕಡಿಗಿ ನುಂಗಣ್ಣಗಳು ಎಲ್ಲಾದ್ರಾಗೆ ನುಂಗತಾನೆ ಅದಾರ. ಕರುನಾಡೊಳಗೆ ಕಾಂಟ್ರಾಕ್ಟ್ ಮಾಡೂದೆ ಕಷ್ಟ ಅಂತ ಗುತ್ತಿಗೆದಾರರು ಮೋದಿಮಾಮಂಗೆ ನೇರ ಪತ್ರಾ ಬರದಾರೆ. ಉತ್ತರಪ್ರದೇಶದ ಬಿಜನೋರ್‌ನಾಗೆ ಒಂದು ಕೋಟಿ ವೆಚ್ಚದ ರಸ್ತೆ ಉದ್ಘಾಟನೆ ಮಾಡೂಮುಂದ ತೆಂಗಿನಕಾಯಿ ರಸ್ತೆಗೆ ಕುಟ್ಟದರಂತ. ತೆಂಗಿನಕಾಯಿ ಒಡೀಲಿಲ್ಲಂತ, ಆದರೆ ಹೊಸಾ ರಸ್ತೆನೇ ಬಿರುಕು ಬಿಟ್ಟೈತಂತ’ ನಾನು ರೇಗಿದೆ.

‘ರಸ್ತೆ ಇರದು ಅಡ್ಡಾಡಕೆ, ತೆಂಗಿನಕಾಯಿ ಒಡಿಯಾಕೆ ಅಲ್ಲ. ಇನ್ಮ್ಯಾಗೆ ವಿಕಾಸಪಥಗಳ ಉದ್ಘಾಟನೆಗೆ ಬರೀ ನಿಂಬಿಕಾಯಿ ಇಡ್ರಿ ಅಂತ ನಿಯಮ ಮಾಡಬೇಕು’ ಎಂದು ಬೆಕ್ಕಣ್ಣ ಉಡಾಫೆಯಿಂದ ಹೇಳಿತು!

### ವಾಚಕರ ವಾಣಿ

## ಹೀಗಿವೆ ಈ ಬಾಗಿಲುಗಳು...

ಇತ್ತೀಚೆಗೆ ಪಕ್ಷ ಬಿಟ್ಟು ಹೋದವರು, ಇತರ ಪಕ್ಷಗಳೊಂದಿಗೆ ಗುರುತಿಸಿಕೊಂಡವರಿಗೆ ಆಯಾ ಪಕ್ಷದ ನಾಯಕರು ‘ಇನ್ನು ಅವರಿಗೆ ಪಕ್ಷದ ಬಾಗಿಲು ಬಂದ್. ಯಾವುದೇ ಕಾರಣಕ್ಕೂ ತೆರೆಯುವುದಿಲ್ಲ’ ಎನ್ನುವ ಹೇಳಿಕೆ ಪತ್ರಿಕೆಗಳಲ್ಲಿ ರಾರಾಜಿಸುತ್ತಿರುತ್ತದೆ. ಹೌದು, ಈ ರಾಜಕೀಯ ಪಕ್ಷಗಳ ಬಾಗಿಲುಗಳಿಗೆ ಯಾವತ್ತೂ ಒಳಗಿನಿಂದ ಚಿಲಕ, ಹೊರಗಿನಿಂದ ಬೀಗ ಖಂಡಿತ ಇರುವುದಿಲ್ಲ. ಯಾರು ಬೇಕಾದರೂ ಯಾವಾಗ ಬೇಕಾದರೂ ತಳ್ಳಿದರೆ ತೆರೆಯುತ್ತವೆ. ಅಂತಹ ವಿಶೇಷ ಬಾಗಿಲುಗಳು ಇವು!

**ನಗರ ಗುರುದೇವ್ ಭಂಡಾರ್ಕರ್,** ಹೊಸನಗರ

## ಈಡುಗಾಯಿಗೇ ಈಡಾಯಿತು ರಸ್ತೆ!

ಉತ್ತರಪ್ರದೇಶದ ಬಿಜನೋರ್‌ನಲ್ಲಿ ಸುಮಾರು ₹ 1.16 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ರಸ್ತೆಯೊಂದು ಉದ್ಘಾಟನಾ ಸಮಯದಲ್ಲಿ ತೆಂಗಿನಕಾಯಿ ಒಡೆದಾಗ ಬಿರುಕುಬಿಟ್ಟಿರುವ ಸಂಗತಿ ವರದಿಯಾಗಿದೆ. ಈಡುಗಾಯಿಗೆ ರಸ್ತೆಯೇ ಈಡಾಯಿತು ಎಂದರೆ ಅದೆಷ್ಟು ಕಳಪೆ ಕಾಮಗಾರಿ ಎಂದು ಊಹಿಸಿಕೊಳ್ಳಬಹುದು.

ಗುತ್ತಿಗೆದಾರನಿಂದ ಹಿಡಿದು ಮೇಲಿನ ಹಂತದವರೆಗಿನ ಎಲ್ಲರೂ ಕಾಮಗಾರಿಯ ಹಣವನ್ನು ನೆಕ್ಕಿ ಸವಿದವರೇ ಆಗಿರುತ್ತಾರೆ. ಈ ರೀತಿ ತಿಂದು ಬದುಕಲು ಅಸಹ್ಯವೆನಿಸದೇ? ಇಂತಹವರಿಂದ ಯಾವ ರೀತಿ ಜನಸೇವೆಯನ್ನು ನಿರೀಕ್ಷಿಸಲು ಸಾಧ್ಯ?

**ಪತ್ತಂಗಿ ಎಸ್. ಮುರಳಿ,** ಬೆಂಗಳೂರು

## ಕೃಷಿ ಕಾಯ್ದೆ: ಚರ್ಚೆ ನಡೆದಿದ್ದರೆ...

ಸಂಸತ್ತಿನಲ್ಲಿ ವಿಸ್ತೃತ ಚರ್ಚೆ ಇಲ್ಲದೆ ಕೃಷಿ ಕಾಯ್ದೆಗಳನ್ನು ಹಿಂಪಡೆದದ್ದು ಒಂದರ್ಥದಲ್ಲಿ ಮತ್ತೆ ಎಡವಿದಂತೆ! ಬಹುಶಃ ಪ್ರಸ್ತುತ ಕಾಯ್ದೆಗಳ ಪಾರ್ಶ್ವಪರಿಣಾಮಗಳನ್ನು ಸದಾ ಮಣ್ಣಿನ ನಂಟಿನಲ್ಲಿರುವ ರೈತ ಅರಿತಂತೆ, ಕಾಯ್ದೆಯ ನಿರ್ಮಾತೃಗಳು ಅರಿಯದಿರಬಹುದು. ಚರ್ಚೆ ನಡೆದಿದ್ದರೆ ಅದರ ನಿಖರ ಅರಿವು ಸರ್ಕಾರಕ್ಕೆ ಬರುತ್ತಿತ್ತೇನೋ. ಅದೂ ಅಲ್ಲದೆ, ಕೃಷಿಗೆ ಸಂಬಂಧಪಟ್ಟ ಇನ್ನೂ ಹೆಚ್ಚಿನ ಆಂತರಿಕ ಸುಧಾರಣೆಯ ಹೊಳಹು ಫಲಿಸಬಹುದಿತ್ತು.

ಕನಿಷ್ಠ ಬೆಂಬಲ ಬೆಲೆ ಒಳಗೊಂಡು ಆಗಲೇ ಇರುವ ಎಪಿಎಂಸಿ ವ್ಯವಸ್ಥೆಯ ಕುಂದುಕೊರತೆಗಳನ್ನು ತಿದ್ದುವ ಕಡೆ ಯೋಚಿಸಬಹುದಾಗಿತ್ತು. ತನ್ಮೂಲಕ ರೈತರ ವಿಶ್ವಾಸಾರ್ಹತೆ ತಿಲಮಾತ್ರದಷ್ಟಾದರೂ ದಕ್ಕುತ್ತಿತ್ತೇನೊ. ಕುತ್ತಿಗೆಗೆ ಬಂದಿದ್ದ ಕಂಟಕವನ್ನು ಸದ್ಯಕ್ಕೆ ನಿವಾರಿಸಿಕೊಂಡ ರೈತ ಮಾತ್ರ ಇನ್ನೂ ಇದ್ದಲ್ಲೇ ಇದ್ದಾನೆ. ‘ಕಾಯ್ದೆ ಒಳ್ಳೆಯವು, ಅರ್ಥೈಸಲು ಅಸಮರ್ಥರಾದೆವು’ ಎಂದೆನ್ನುವ ಸರ್ಕಾರಕ್ಕೆ, ಈ ಸಮರ್ಥನೆ ರೈತರ ಕಿರುನೆಮ್ಮದಿಯನ್ನೇ ಸಣ್ಣಗೆ ಅಲುಗಿಸುತ್ತದೆ ಎಂಬ ಅರಿವು ಬಾರದ್ದು ವಿಷಾದಕರ.

**ರಾಮಚಂದ್ರ ಎಸ್. ಕುಲಕರ್ಣಿ,** ಧಾರವಾಡ

## ಬುದ್ಧಿವಂತರೇ ಕೈ ಚಾಚಿದರೆ...

ಮೈಸೂರಿನ ಪತ್ರಕರ್ತರು ಏರ್ಪಡಿಸಿದ್ದ ಸಂವಾದದಲ್ಲಿ ‘ವಿಧಾನಪರಿಷತ್ ಚುನಾವಣೆಯಲ್ಲಿ ಮತದಾರರಿಗೆ ಹಣ ಹಂಚುವುದಿಲ್ಲ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುವಿರಾ?’ ಎಂಬ ಮಾಧ್ಯಮದವರ ಪ್ರಶ್ನೆಗೆ, ವಾಟಾಳ್ ನಾಗರಾಜ್ ಹೊರತುಪಡಿಸಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಅಭ್ಯರ್ಥಿಗಳು ಸರಿಯಾಗಿ ಉತ್ತರಿಸಲು ಹಿಂದೇಟು ಹಾಕಿದ್ದಾರೆ. ಅಂದರೆ ಮತದಾರರಿಗೆ ಹಣ ಹಂಚುತ್ತೇವೆ ಎಂದು ಪರೋಕ್ಷವಾಗಿ ಇವರೆಲ್ಲ ಒಪ್ಪಿಕೊಂಡಂತಾಗಿದೆ. ಮತದಾರರಿಗೆ ಹಣ ಹಂಚದೆ ಯಾವ ಚುನಾವಣೆಯೂ ನಡೆಯುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ನಗ್ನಸತ್ಯ. ಹಣ ನೀಡಿ ಮತ ಪಡೆಯುವುದನ್ನು ತಡೆಗಟ್ಟುವುದು ಅಸಾಧ್ಯದ ಮಾತು. ತನ್ನ ಮತ ಎಷ್ಟು ಅಮೂಲ್ಯ ಎಂದು ಜನರಿಗೆ ಹೇಳಬೇಕಾದ ಬುದ್ಧಿವಂತರೇ ಹಣಕ್ಕೆ ಕೈ ಚಾಚಿ ಮುಗಿಬೀಳುತ್ತಿದ್ದಾರೆ. ಹಿಂದೆ ಶಿಕ್ಷಕರ ಕ್ಷೇತ್ರಗಳಲ್ಲಿ ನಡೆದ ಚುನಾವಣೆಗಳಲ್ಲಿ ಬಹುತೇಕ ಶಿಕ್ಷಕ ಮತದಾರರು ಹಣ ಮತ್ತು ಉಡುಗೊರೆ ಪಡೆದು ಮತ ಹಾಕಿದ್ದ ಬಗ್ಗೆ ಗುಸುಗುಸು ಇದೆ. ಬೇಲಿಯೇ ಎದ್ದು ಹೊಲ ಮೇಯ್ದರೆ ದಾರಿ ತೋರುವವರು ಯಾರು?!

**ವಿ.ತಿಪ್ಪೇಸ್ವಾಮಿ,** ಹಿರಿಯೂರು

## ಪ್ರೀತಿಗೇಕೆ ವಯಸ್ಸಿನ ಹಂಗು?

ಮೇಲುಕೋಟೆಯ ಚೆಲುವರಾಯಸ್ವಾಮಿ ದೇವಸ್ಥಾನದಲ್ಲಿ ಇತ್ತೀಚೆಗೆ ಮೈಸೂರಿನ 65 ವರ್ಷದ ಚಿಕ್ಕಣ್ಣ ಮತ್ತು ಅದೇ ವಯಸ್ಸಿನ ಜಯಮ್ಮ ಎಂಬುವರು ವಿವಾಹವಾದ ಬಗ್ಗೆ ವರದಿಯಾಗಿದೆ. ಸುಮಾರು 35 ವರ್ಷಗಳ ಕಾಲ ಪರಸ್ಪರ ಪ್ರೀತಿಸುತ್ತಿದ್ದ ಈ ಜೋಡಿ, ಕಡೆಗೂ ಹಸೆಮಣೆ ಏರುವ ಮೂಲಕ ಧನ್ಯತೆ ಪಡೆದುಕೊಂಡಿದೆ. ಜಯಮ್ಮ ಅವರಿಗೆ ಈಗಾಗಲೇ ವಿವಾಹವಾಗಿದ್ದು ಗಂಡನಿಂದ ಪರಿತ್ಯಕ್ತರಾಗಿದ್ದರೂ ಚಿಕ್ಕಣ್ಣ ಅವರ ಮೇಲಿನ ಪ್ರೀತಿಯನ್ನು ಬಿಟ್ಟುಕೊಟ್ಟರಲಿಲ್ಲ. ಅಂತೂ ಇಂತೂ ಈ ವೃದ್ಧ ಜೋಡಿಯ ಬಹುವರ್ಷಗಳ ಆಸೆ ಈಡೇರಿದಂತಾಗಿದೆ. ಅಂದಹಾಗೆ, ಪ್ರೀತಿಗೆ ವಯಸ್ಸು, ಜಾತಿ, ಕುಲದಂಥ ಯಾವ ಅಡ್ಡಗೋಡೆಯೂ ಇಲ್ಲ. ಪ್ರೀತಿ ನಿಜವಾಗಿದ್ದರೆ, ಒಂದಲ್ಲಾ ಒಂದು ದಿನ ಅದು ಹಣ್ಣಾಗಲೇಬೇಕು ಎಂಬುದಕ್ಕೆ ಈ ಮದುವೆ ನಿದರ್ಶನ.

**ಕೆ.ವಿ.ವಾಸು,** ಮೈಸೂರು

## ದಿಟ್ಟ ಹೆಜ್ಜೆ ಇಲ್ಲೂ ಇಡಿ

2014ರಿಂದ ಈಚೆಗೆ ದೇಶದಲ್ಲಿ ನಾಗರಿಕ ಪ್ರಶಸ್ತಿ ನೀಡುವುದರಲ್ಲಿ ಮಹತ್ತರವಾದ ಬದಲಾವಣೆ ಕಂಡುಬರುತ್ತಿದೆ. ಸಮಾಜದ ಅತ್ಯಂತ ಕೆಳಸ್ತರದಲ್ಲಿನ ಸಮಾಜಸೇವಕರು, ಪರಿಸರವಾದಿಗಳು, ದೇಶಸೇವೆಯಲ್ಲಿ ತೊಡಗಿಸಿಕೊಂಡವರು, ಶಿಕ್ಷಣಪ್ರೇಮಿಗಳು, ಸೇವೆಯನ್ನೇ ಮುಖ್ಯವಾಗಿರಿಸಿಕೊಂಡು ಎಲೆಮರೆಯ ಕಾಯಿಗಳಂತಿದ್ದ ಅನೇಕರನ್ನು ಹೆಕ್ಕಿ ತೆಗೆದು ಪ್ರತಿಷ್ಠಿತ ‘ಪದ್ಮ’ ಪ್ರಶಸ್ತಿಯಿಂದ ಸನ್ಮಾನಿಸಿರುವುದು ಕೇಂದ್ರ ಸರ್ಕಾರದ ಶ್ಲಾಘನೀಯ ಹೆಜ್ಜೆ.

ಇದೇ ರೀತಿ ವಿಧಾನಪರಿಷತ್ ಚುನಾವಣೆಗೆ ಹಾಗೂ ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆರಿಸುವಾಗಲೂ ಹೊಸ ಮಾನದಂಡವನ್ನೇಕೆ ಪ್ರಯೋಗಿಸಬಾರದು? ಏಕೆಂದರೆ ವಿಧಾನಪರಿಷತ್ ಮತ್ತು ರಾಜ್ಯಸಭೆಯು ಕೆಳಮನೆಯಲ್ಲಿ ಅಂಗೀಕರಿಸಿದ ಮಸೂದೆಗಳನ್ನು ಪುನರ್‌ವಿಮರ್ಶೆಗೆ ಒಳಪಡಿಸಿ, ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಮಾರ್ಪಾಡು ಮಾಡಲು ಸಲಹೆ ನೀಡುತ್ತವೆ. ಅದಕ್ಕಾಗಿಯೇ ಇವು ಬುದ್ಧಿವಂತರು, ತಜ್ಞರು, ವಿಜ್ಞಾನಿಗಳು, ವಿಮರ್ಶಕರನ್ನು ಒಳಗೊಂಡಿರಬೇಕೆಂದು ಸಂವಿಧಾನ ಹೇಳುತ್ತದೆ. ಆದರೆ ಇಲ್ಲಿ ನಡೆಯುತ್ತಿರುವುದೇ ಬೇರೆ. ಇಲ್ಲಿಯ ಅಭ್ಯರ್ಥಿಗಳ ಆಯ್ಕೆ ಕೂಡ ಹೀನ ರಾಜಕೀಯದ ಕೂಸಾಗಿದೆ. ಇಂತಹ ಸ್ಥಿತಿ ನಿವಾರಿಸಲು ಸರ್ಕಾರ ಪದ್ಮ ಪ್ರಶಸ್ತಿ ನೀಡುವಲ್ಲಿ ಇಟ್ಟ ದಿಟ್ಟ ಹೆಜ್ಜೆಯನ್ನು ಇಲ್ಲೂ ಇಡಬಹುದಲ್ಲವೇ?

**ಗಂಗಾಧರ ಅಂಕೋಲೇಕರ,** ಧಾರವಾಡ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಬೆಟ್ಟ ಕುಸಿತ ಸ್ವಯಂಕೃತ ಅನಾಹುತ

● ಕೆ.ನರಸಿಂಹಮೂರ್ತಿ



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ರಸ್ತೆ ಕುಸಿತ

ಪ್ರಜಾವಾಣಿ ಚಿತ್ರ– ಬಿ.ಆರ್‌.ಸವಿತಾ

ಕರ್ನಾಟಕದ ಚಾಮುಂಡಿ ಬೆಟ್ಟ, ನಂದಿ ಬೆಟ್ಟ ಮತ್ತು ಆಂಧ್ರದ ತಿರುಪತಿ ಬೆಟ್ಟದ ಪ್ರಕೃತಿ ಸೌಂದರ್ಯಕ್ಕೆ ಮನಸೋಲದವರು ಯಾರೂ ಇಲ್ಲ. ಚಾಮುಂಡಿ ಮತ್ತು ತಿರುಪತಿ ಬೆಟ್ಟಗಳು ವಿಶೇಷವಾಗಿ ಲಕ್ಷಾಂತರ ಭಕ್ತರ ಅಚ್ಚುಮೆಚ್ಚಿನ ತಾಣಗಳು. ನಂದಿಬೆಟ್ಟ ಪರಿಸರ ಪ್ರಿಯರ ಸ್ವರ್ಗ. ಮೂರೂ ಬೆಟ್ಟಗಳು ಸಾಹಸಿ ಚಾರಣಿಗರಿಗೂ ಹೇಳಿ ಮಾಡಿಸಿದಂತಿವೆ. ಆದರೆ ಈ ವರ್ಷ ವಿಪರೀತ ಮಳೆಯಿಂದಾಗಿ ಈ ಬೆಟ್ಟಗಳಲ್ಲಿ ಸಂಭವಿಸಿದ ಭೂ ಕುಸಿತವು ಅವುಗಳ 'ಮೋಹಕ', 'ಧಾರ್ಮಿಕ' ಮುಖವನ್ನು ಪಕ್ಕಕ್ಕೆ ಸರಿಸಿ, 'ಅನಾಹುತಕಾರಿ' ಮುಖವನ್ನು ಅನಾವರಣ ಮಾಡಿದೆ.

ಆಗಸ್ಟ್ ಕೊನೇ ವಾರದಲ್ಲಿ ಭಾರಿ ಮಳೆಯಿಂದ, ನಂದಿಬೆಟ್ಟದ ಬ್ರಹ್ಮಗಿರಿಯಲ್ಲಿ ಭೂ ಕುಸಿತವಾಗಿ, ಮುಖ್ಯ ರಸ್ತೆ ಹತ್ತು ಅಡಿ ಆಳಕ್ಕೆ ಕುಸಿದಿತ್ತು. ಬೆಟ್ಟದ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡು, ರಸ್ತೆಗೆ ಅಡ್ಡಲಾಗಿ ಮಣ್ಣು, ಬೃಹತ್ ಬಂಡೆಗಳು, ಮರ ಗಿಡಗಳು ಉರುಳಿದ್ದವು. ರಸ್ತೆ ಬಂದ್ ಆಗಿದ್ದರಿಂದ, ಬೆಟ್ಟಕ್ಕೆ ಬಂದಿದ್ದ ಪ್ರವಾಸಿಗರನ್ನು ವಾಪಸ್ ಕಳುಹಿಸುವುದೂ ಸವಾಲಾಗಿತ್ತು. ವಿದ್ಯುತ್ ಕಂಬಗಳೂ ಬಿದ್ದು ನಂದಿ ಗಿರಿಧಾಮದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ದುರಸ್ತಿ ಮಾಡಿ ಡಿಸೆಂಬರ್ 1ರಿಂದ ಮತ್ತೆ ಸಂಚಾರಕ್ಕೆ ಅನುವು ಮಾಡಲಾಗಿದೆ.

ಚಾಮುಂಡಿ ಬೆಟ್ಟದಲ್ಲಿ ಅಕ್ಟೋಬರ್ ಕೊನೆ ವಾರದಲ್ಲಿ ಸುರಿದ ಭಾರಿ ಮಳೆಯಿಂದ, ಬೃಹತ್ ನಂದಿ ವಿಗ್ರಹಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಭೂಕುಸಿತವಾಗಿತ್ತು. ನಂತರದ ಒಂದು ವಾರದೊಳಗೆ ಅದೇ ಸ್ಥಳದ ಸಮೀಪ ಮೂರು ಕಡೆ ಮತ್ತೆ ಕುಸಿದಿತ್ತು. ರಸ್ತೆಗಳು ಬಿರುಕು ಬಿಟ್ಟಿದ್ದವು. ಮಳೆ ಮುಂದುವರಿದರೆ ಮತ್ತಷ್ಟು ಕುಸಿಯುವ ಸಾಧ್ಯತೆಯೂ ಇರುವುದರಿಂದ ಸದ್ಯ ಅಲ್ಲಿ ದುರಸ್ತಿ ಕಾರ್ಯವೂ ನಡೆಯುವಂತಿಲ್ಲ. ವಾಹನ ಸಂಚಾರ ಸಂಪೂರ್ಣ ಬಂದ್ ಆಗಿದೆ.

2005ರಲ್ಲಿ ಬೆಟ್ಟದ ಜ್ವಾಲಾಮುಖಿ ಗುಡಿಗೆ ತೆರಳುವ ಎರಡು ರಸ್ತೆಗಳ ಮೇಲೆ ಬಂಡೆಗಳು ಕುಸಿದಿದ್ದವು. ಅದಾದ ಬಳಿಕ 2017, 2019ರಲ್ಲೂ ಕುಸಿತವಾಗಿತ್ತು. ಹೆಚ್ಚು ಕಡಿಮೆ ದಸರಾ ಉತ್ಸವದ ಆಸುಪಾಸಿನಲ್ಲೇ ಕುಸಿತಗಳಾಗಿರುವುದು ಗಮನಿಸಬೇಕಾದ ಅಂಶ. ಈ ನಡುವೆ, ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ಬೆಟ್ಟಕ್ಕೆ ಭೇಟಿ ನೀಡಿ ಹೋಗಿದ್ದಾರೆ. ಮೈಸೂರಿನ ಎಂಜಿನಿಯರುಗಳ ಸಂಸ್ಥೆಯ ಎಂಜಿನಿಯರುಗಳು ಜಿಲ್ಲಾಧಿಕಾರಿಗೆ ವರದಿಯನ್ನೂ ಸಲ್ಲಿಸಿದ್ದಾರೆ.

'ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ'

ಪ್ರಜಾವಾಣಿ ನೋಡಿಯೊ

ಕೇಂದ್ರ ಸರ್ಕಾರದ, ತೀರ್ಥಕ್ಷೇತ್ರಗಳ ಪುನಶ್ಚೇತನ, ಆಧ್ಯಾತ್ಮ, ಪಾರಂಪರಿಕ ವರ್ಧನೆ (ಪ್ರಸಾದ) ಯೋಜನೆ ಅಡಿ ಬೆಟ್ಟವನ್ನು ಅಭಿವೃದ್ಧಿಪಡಿಸಿದ್ದೂ ಅದಕ್ಕೆ ಕಾರಣವೇ ಎಂಬುದೂ ಈಗ ಚರ್ಚೆಯ ಕೇಂದ್ರ. ಇಂಥ ಸನ್ನಿವೇಶದಲ್ಲೇ, ಅದೇ ಯೋಜನೆ ಅಡಿ, ಬೆಟ್ಟವನ್ನು ಪ್ರವಾಸೋದ್ಯಮದ ದೃಷ್ಟಿಯಿಂದ ಇನ್ನಷ್ಟು ಅಭಿವೃದ್ಧಿಪಡಿಸಲು ಎರಡನೇ ಪ್ರಸ್ತಾವವನ್ನೂ ರಾಜ್ಯ ಸರ್ಕಾರವು ಕೇಂದ್ರಕ್ಕೆ ಸಲ್ಲಿಸಿದೆ.

ಇದು ಕೂಡ ಪರಿಸರಪ್ರಿಯರಲ್ಲಿ ತೀವ್ರ ಅಸಮಾಧಾನವನ್ನು ಮೂಡಿಸಿದೆ. ಆದರೆ, ಹಂಪಿ ಮಾದರಿಯಲ್ಲಿ ಬೆಟ್ಟವನ್ನು ಅಭಿವೃದ್ಧಿಗೊಳಿಸುವುದಾಗಿ ಪ್ರವಾಸೋದ್ಯಮ ಸಚಿವ ಆನಂದಸಿಂಗ್ ಹೇಳಿಕೆ ನೀಡಿದ್ದಾರೆ. ಆದರೆ ಹಂಪಿಯಲ್ಲಿ ಯಾವ ಅಭಿವೃದ್ಧಿ ಮಾದರಿಯೂ ಇಲ್ಲ!

ಏಳು ಸುತ್ತಿನ ಬೆಟ್ಟ ತಿರುಮಲ ತಿರುಪತಿಯದ್ದೂ ಅಭಿವೃದ್ಧಿ ವಾಯುವೇಗದ ಕಥನವೇ. ಮೆಟ್ಟಿಲುಗಳ ಮೂಲಕ ಹತ್ತಿ ದರ್ಶನ ಪಡೆಯುವವರ ಸಂಖ್ಯೆ ಕಡಿಮೆಯಾಗಿ, ವಾಹನಗಳಲ್ಲಿ ತೆರಳುವವರ ಅನುಕೂಲ ಕೇಂದ್ರಿತ ಅಭಿವೃದ್ಧಿ ಮಾದರಿಯಿಂದ ತಿರುಪತಿಯ ಮೇಲೂ ಭಾರ ಹೆಚ್ಚಾಗಿಯೇ ಕುಸಿತ ಉಂಟಾಗಿದೆ.

ವೆಂಕಟೇಶ್ವರ ದೇಗುಲಕ್ಕೆ ಹೋಗುವ ಎರಡನೇ ಘಾಟ್ ರಸ್ತೆಯಲ್ಲೂ ಡಿ.1ರಂದು ಮಳೆಯಿಂದ ಭೂಕುಸಿತವಾಗಿದೆ. ರಸ್ತೆಯ ಒಂದು ಬದಿ ಕುಸಿದು, ಇನ್ನೊಂದು ಬದಿಯಲ್ಲಿ ಬೃಹತ್ ಬಂಡೆ ಕಲ್ಲುಗಳು ಬಿದ್ದಿವೆ. ಅಲ್ಲಿ ಅನಿರ್ದಿಷ್ಟಾವಧಿವರೆಗೂ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.

ಕುಸಿತವಾದ ಸಂದರ್ಭದಲ್ಲಿ 20 ಭಕ್ತರಿದ್ದ ಬಸ್ ಬೆಟ್ಟವೇರುತ್ತಿತ್ತು. ರಸ್ತೆಯಲ್ಲಿ ಭಾರಿ ಗಾತ್ರದ ಬಂಡೆಗಳು ಉರುಳುವುದನ್ನು ಕಂಡ ಕೂಡಲೇ ಬಸ್ ಚಾಲಕ ಸಮಯ ಪ್ರಜ್ಞೆ ಮೆರೆದು ಬಸ್ ನಿಲ್ಲಿಸಿದ್ದರಿಂದ ಭಕ್ತರು ಬದುಕುಳಿದಿದ್ದಾರೆ. ಸುಮಾರು 20 ಕಿ.ಮೀ ಉದ್ದದ ಸುರುಳಿಯಾಕಾರ ರಸ್ತೆಯಲ್ಲಿ 1000 ಅಡಿ ಮತ್ತು 800 ಅಡಿ ಎತ್ತರದಲ್ಲಿ ತಡೆಗೋಡೆಗಳಿಗೂ ಹಾನಿಯಾಗಿದೆ. ದೆಹಲಿಯ ಐಐಟಿ ತಜ್ಞರ ತಂಡವು ಶೀಘ್ರದಲ್ಲೇ ಕುಸಿತದ ಸ್ಥಳಕ್ಕೆ ಭೇಟಿ ನೀಡಲಿದೆ.

## ಕಾರಣವೇನು?

ಈ ಬೆಟ್ಟಗಳಲ್ಲಿ ಕುಸಿತ ಉಂಟಾಗಲು ಕಾರಣವೇನು ಎಂಬುದಕ್ಕೆ ಉತ್ತರ ಸರಳ ಮತ್ತು ಸುಲಭ: ಇಲ್ಲಿ ಅಭಿವೃದ್ಧಿಯ ಭಾರ ಹೆಚ್ಚಾಗಿದೆ!

ಕನಿಷ್ಠ ಒಂದು ದಶಕದ ಹಿಂದೆ ಈ ಬೆಟ್ಟಗಳಿಗೆ ಭೇಟಿ ನೀಡುವ ಭಕ್ತರ ಸಂಖ್ಯೆ ಮತ್ತು ಈಗ ಭೇಟಿ ನೀಡುತ್ತಿರುವ ಭಕ್ತರ ಸಂಖ್ಯೆ, ವಾಹನಗಳ ಓಡಾಟ, ಕಟ್ಟಡಗಳ ನಿರ್ಮಾಣವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಇದು ಸ್ಪಷ್ಟವಾಗುತ್ತದೆ. ಜನರಲ್ಲಿ ಭಕ್ತಿ ಹೆಚ್ಚಾಗಿದೆ. ಸರ್ಕಾರಗಳ ಮೇಲೆ ಪ್ರವಾಸಿ ಕೇಂದ್ರಿತ ಅಭಿವೃದ್ಧಿ ಒತ್ತಡವೂ ಹೆಚ್ಚಾಗಿದೆ! ಪರಿಸರ ಕೇಂದ್ರಿತ ಚಿಂತನೆಗೆ ಜಾಗ ಇಲ್ಲವೇ ಇಲ್ಲ.

'ಜಲಮಟ್ಟ'ವನ್ನು ಕಾಪಾಡುವಲ್ಲಿ, ಜಲಾನಯನ ವ್ಯವಸ್ಥೆಗೆ ಬಲ ತುಂಬುವಲ್ಲಿ ಈ ಬೆಟ್ಟಗಳಿಗಿದ್ದ ಸಹಜ ನಿಲುವು ಈಗ ಇಲ್ಲ. ಬೆಟ್ಟದಲ್ಲಿದ್ದ ಕಾಡು ಕ್ಷೀಣಿಸಿದೆ. ಕಾಡು ಪ್ರಾಣಿಗಳನ್ನು, ಜಾನುವಾರುಗಳನ್ನು ಓಡಿಸಲಾಗಿದೆ. ರೈತರಿಗೆ ಸಹಜವಾಗಿ ಕಾಡಿನ ಉತ್ಪನ್ನಗಳೂ ಇಲ್ಲವಾಗಿವೆ.

90ರ ದಶಕದಲ್ಲಿ ನಾರ್ವೆ ದೇಶದ ನೆರವಿನೊಂದಿಗೆ ಅರಣ್ಯ ಇಲಾಖೆಯು ಚಾಮುಂಡಿ ಬೆಟ್ಟವನ್ನು ಜೀವವೈವಿಧ್ಯ ತಾಣವನ್ನಾಗಿಸುವ ಉದ್ದೇಶದಿಂದ ಸ್ಥಳೀಯರನ್ನು ಹೊರಗಿಟ್ಟು ಬೇಲಿ ಹಾಕಿತು. ಆದರೆ ಎರಡು ದಶಕಗಳ ಬಳಿಕ ಕಾಣುತ್ತಿರುವುದು ಬೇರೆಯೇ ದೃಶ್ಯ. ಅತಿಯಾದ ಕಾಂಕ್ರೀಟೀಕರಣ. ಅಭಿವೃದ್ಧಿಗೆ ಬೇಕೆಂದವರಿಗೆಲ್ಲರಿಗೂ ಅರಣ್ಯ ಭೂಮಿಯನ್ನು ಬಿಟ್ಟುಕೊಡುವ ಔದಾರ್ಯ. ಪರಿಣಾಮ ಸ್ಪಷ್ಟ: ಅಮೂಲ್ಯ ಜೀವವೈವಿಧ್ಯ ನಾಶ. ಬೆಟ್ಟದ ಮೂಲ ನಿವಾಸಿಯಾದ ಚಿರತೆ, ಜಿಂಕೆ, ಅಪರೂಪದ ಪಕ್ಷಿ, ಸಸ್ಯ ಸಂತತಿ, ಝರಿಗಳು ನೆಲೆ ಕಳೆದುಕೊಂಡಿವೆ. ಜನವಸತಿ ಹೆಚ್ಚಾಗಿದೆ.

'ಭಕ್ತರು ಮತ್ತು ಪ್ರವಾಸಿಗರ ಅನುಕೂಲ'ದ ದೃಷ್ಟಿಯಿಂದ ಬೆಟ್ಟಗಳ ಸಹಜ ಸ್ವರೂಪಕ್ಕೆ ಧಕ್ಕೆ ತಂದು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ್ದೇ ಕುಸಿತಗಳಿಗೆ ಕಾರಣ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಅದಕ್ಕೆ ಪರ್ಯಾಯವೇನು ಎಂದರೆ ಮೌನವಾಗುತ್ತಾರೆ.

## ಮುಂದೇನು?

ಸ್ವರೂಪದ ದೃಷ್ಟಿಯಿಂದ ವಿಶ್ವವಿಖ್ಯಾತವಾದ ಈ ಬೆಟ್ಟಗಳನ್ನು ಉಳಿಸಿಕೊಳ್ಳಬೇಕೆ ಅಥವಾ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ಕೊಡಬೇಕೆ ಎಂಬ ಗಂಭೀರ ಪ್ರಶ್ನೆಗಳನ್ನೂ ಪರಿಸರಪ್ರಿಯರು ಈಗ ಮುಂದಿಟ್ಟಿದ್ದಾರೆ. ಬೆಟ್ಟದ ಮೇಲಿನ ಅಭಿವೃದ್ಧಿ ಮಾದರಿಗಳನ್ನೂ ಕಟು ಮಾತುಗಳಲ್ಲಿ ಪ್ರಶ್ನಿಸುತ್ತಿದ್ದಾರೆ.

ಕುಸಿತವಾದ ಸ್ಥಳವನ್ನು ಮತ್ತೆ ಮೊದಲಿನ ಸ್ಥಿತಿಗೆ ತರುವುದು ಹೇಗೆ ಎಂಬುದು ಸದ್ಯ ದೊಡ್ಡ ಸವಾಲಿನಂತೆ ಸರ್ಕಾರಗಳಿಗೆ ಕಾಣಿಸುತ್ತಿದೆಯೇ ಹೊರತು, ಬೆಟ್ಟಗಳ ಮೇಲೆ ಹೊರಿಸಿದ ಅಭಿವೃದ್ಧಿಯ ಭಾರವನ್ನು ಕಡಿಮೆ ಮಾಡುವುದು ಹೇಗೆ ಎಂಬುದರತ್ತ ಯಾರೂ ಗಮನ ಹರಿಸಿಲ್ಲ.

ಕುಸಿದ ರಸ್ತೆಗಳನ್ನು ದುರಸ್ತಿ ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡುವುದು ಸದ್ಯ ಸರ್ಕಾರಗಳ ಆದ್ಯತೆ. ಆದರೆ ಪರಿಸರಪ್ರಿಯರು ಮತ್ತು ತಜ್ಞರ ಪ್ರಕಾರ, ಇದು ಭೂಕುಸಿತವನ್ನು ಸಂಪೂರ್ಣವಾಗಿ ನಿಯಂತ್ರಿಸುವುದಿಲ್ಲ. ಚಾಮುಂಡಿಬೆಟ್ಟದ ರಸ್ತೆ ಮರುನಿರ್ಮಾಣಕ್ಕೆ ಕೆಳ ಭಾಗದಿಂದ 800 ಮೀಟರ್ ಉದ್ದ ರಸ್ತೆಯ ಭಾರವನ್ನು ಹೊರಬಲ್ಲ ಗೋಡೆಯನ್ನು ನಿರ್ಮಿಸಬೇಕು. ಆದರೆ ಗೋಡೆ ನಿರ್ಮಿಸಿದ ಮಾತ್ರಕ್ಕೆ ಮತ್ತೆ ಕುಸಿಯುವುದಿಲ್ಲ ಎಂಬ ಖಾತರಿಯೂ ಇಲ್ಲ. ಈ ನಡುವೆ ದುರಸ್ತಿಗೆಂದೇ ₹9.5 ಕೋಟಿ ವೆಚ್ಚದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

**ಹೋರಾಟದ ದಾರಿ:** ಸದ್ಯ ಮೈಸೂರಿನಲ್ಲಿ ಚಾಮುಂಡಿ ಬೆಟ್ಟದ ಅಭಿವೃದ್ಧಿ ವಿರುದ್ಧ ಜನಚಳವಳಿ ನಡೆಸಲು ಸಿದ್ಧತೆಗಳು ಭರದಿಂದ ನಡೆದಿವೆ. ಸಹಿ ಸಂಗ್ರಹವೂ ನಡೆದಿದೆ. ಪರಿಸರ ಪ್ರಿಯ ಸಂಘಟನೆಗಳು ಹಲವು ಸುತ್ತಿನ ಸಭೆ ನಡೆಸಿವೆ. ಬೃಹತ್ ಹೋರಾಟಕ್ಕೆ ವೇದಿಕೆ ರೂಪುಗೊಳ್ಳುತ್ತಿದೆ.

ವಿಜ್ಞಾನ ಸಂಸ್ಥೆಗಳು ಶಿಫಾರಸು ಮಾಡುವ ದುರಸ್ತಿ ಮತ್ತು ಅಭಿವೃದ್ಧಿ ಮಾದರಿಗಳು ಹಾಗೂ ಪರಿಸರ ತಜ್ಞರು, ಪರಿಸರ ಕಾರ್ಯಕರ್ತರ ಅನುಭವ ಆಧಾರಿತ ಪ್ರತಿಪಾದನೆಗಳು ಮೇಳೈಸಿದರೆ ಮಾತ್ರ 'ಬೆಟ್ಟದ ಜೀವ' ಉಳಿಯಬಲ್ಲದು.


### ಅಭಿವೃದ್ಧಿ ನಿಯಂತ್ರಣ ಮುಖ್ಯ



ಅಭಿವೃದ್ಧಿ ಹೆಸರಲ್ಲಿ ರಸ್ತೆಗಳನ್ನು ನಿರ್ಮಿಸುತ್ತಾ, ಬೆಟ್ಟಗಳ ಮೇಲೆ ಮೂಲಸೌಕರ್ಯಗಳನ್ನು ಹೆಚ್ಚಿಸುತ್ತಾ ಹೋದರೆ ಅವು ಶಾಶ್ವತವಾಗಿ ರಿಯಲ್ ಎಸ್ಟೇಟ್ ತಾಣಗಳಾಗುವುದರಲ್ಲಿ ಅನುಮಾನವೇ ಇಲ್ಲ. ಹಸಿರಿನ ನಡುವೆ ಮನೆ ಕಟ್ಟುವವರಿಗೆ ಬೆಟ್ಟಗಳು ನಿವೇಶನಗಳಾಗಿಬಿಡಬಹುದು. ಹೀಗಾಗಿ ಬೆಟ್ಟಗಳಲ್ಲಿ ಅರಣ್ಯ ಇಲಾಖೆಯ ಚೆಕ್ಕುಬಂದಿಗಳನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಇತರೆ ಎಲ್ಲ ಅರಣ್ಯಗಳಿಗೂ ಅನ್ವಯಿಸುವ ಸಂರಕ್ಷಣಾ ನಿಯಮಗಳನ್ನು ಇಲ್ಲಿಯೂ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಬೆಟ್ಟಗಳಲ್ಲಿ ಸಂಚರಿಸುವ ಚಾರಣಿಗರನ್ನು ನಿಯಂತ್ರಿಸುವುದಕ್ಕಿಂತಲೂ, ನಿಜವಾದ ರಿಯಲ್ ಎಸ್ಟೇಟ್ ತಿಮಿಂಗಿಲಗಳನ್ನು ಹಿಡಿಯುವುದೇ ಮುಖ್ಯ. ಅಭಿವೃದ್ಧಿಗಿಂತಲೂ ಅದನ್ನು ನಿಯಂತ್ರಿಸುವುದೇ ಸದ್ಯ ಬೆಟ್ಟದ ಪರಿಸರವನ್ನು ಉಳಿಸುವ ಸಹಜ ದಾರಿ.

ಕೆ.ಮನು, ಪಕ್ಷಿ ತಜ್ಞ, ಮೈಸೂರು

### ಬೆಟ್ಟದ ಧಾರಣ ಸಾಮರ್ಥ್ಯ ಅರಿಯಬೇಕು



ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಮುನ್ನ, ಬೆಟ್ಟಗಳ ಧಾರಣ ಸಾಮರ್ಥ್ಯವನ್ನು ಪರಿಗಣಿಸುವುದು ಬಹಳ ಮುಖ್ಯ. ಆದರೆ ಈ ಅಂಶವನ್ನೇ ಎಲ್ಲೆಡೆ ಕಡೆಗಣಿಸಲಾಗಿದೆ. ಬೆಂಗಳೂರಿಗೆ ಹತ್ತಿರವೆಂಬ ಕಾರಣಕ್ಕೆ ಬಹಳ ಮಂದಿ ನಂದಿ ಬೆಟ್ಟಕ್ಕೆ ಬರುತ್ತಾರೆಂದು ಅಭಿವೃದ್ಧಿ ಪಡಿಸುವುದು ಸರಿಯಲ್ಲ. ಆದರೆ ಹೀಗೆ ಮಾಡಿರುವುದರಿಂದಲೇ ಬೆಟ್ಟದ ಜೀವವೈವಿಧ್ಯ ನಾಶವಾಗಿದೆ. ಅಕ್ರಮ ಒತ್ತುವರಿ, ಕಟ್ಟಡ ನಿರ್ಮಾಣಗಳಿಂದ ತಪ್ಪಲಿನ ಗಟ್ಟಿತನವೂ ಕಡಿಮೆಯಾಗಿ, ಭಾರ ಹೊರುವ ಸಾಮರ್ಥ್ಯವೂ ಕುಗ್ಗುತ್ತದೆ. ಹೀಗಾಗಿ ಬೆಟ್ಟಗಳ ವಿಷಯದಲ್ಲಿ ಸುಸ್ಥಿರ ಪ್ರವಾಸೋದ್ಯಮದ ಮಾದರಿಗಳನ್ನೇ ಗಂಭೀರವಾಗಿ ಅನುಸರಿಸಬೇಕು.

**ಲೋಹಿತ್**, ವೈ.ಟಿ. ಹಿರಿಯ ಯೋಜನಾಧಿಕಾರಿ, ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ ಸಂಸ್ಥೆ, ಬೆಂಗಳೂರು

---

ಪ್ರಜಾ ಮತ

ಜನತಂತ್ರದ ಹಬ್ಬ 2021

# ಚುನಾವಣಾ ಪ್ರಚಾರದಲ್ಲಿ ಹಗೆತನದ ಮಾತು

● ಸಂಜಯ್ ಪಾಂಡೆ

ಲಖನೌ: ಮುಂದಿನ ವರ್ಷ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗಾಗಿ ಪ್ರಚಾರ ಆರಂಭವಾಗಿದ್ದು, ಬಿಜೆಪಿ ನಾಯಕರು ಹೊಸ ಹೊಸ ಪದಗಳನ್ನು ಅದರಲ್ಲೂ ವಿಶೇಷವಾಗಿ ಮುಸ್ಲಿಮರಿಗೆ ಸಂಬಂಧಿಸಿದ ಪದಗಳನ್ನು ಪ್ರಯೋಗಿಸುತ್ತಿದ್ದಾರೆ.

ಬಿಜೆಪಿ ಮುಖಂಡರು ನಡೆಸುತ್ತಿರುವ ಚುನಾವಣಾ ರ‍್ಯಾಲಿಗಳಲ್ಲಿ, 'ಮತಾಂತರ, ಗೋ ಹತ್ಯೆ, ಹಿಂದೂ ಕುಟುಂಬಗಳ ವಲಸೆ' ವಿಷಯಗಳನ್ನೂ ಕೆದಕುತ್ತಿದ್ದಾರೆ. ಹಿಂದೂಗಳಿಗೆ ಆಗಿದೆ ಎಂದು ಆರೋಪಿಸಲಾದ 'ಅವಮಾನ' ಹಾಗೂ ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಇತರರ ಅಧಿಕಾರಾವಧಿಯಲ್ಲಿ ಹಿಂದೂಗಳ ಸಂಸ್ಕೃತಿ ಮೇಲಾಗಿದೆ ಎನ್ನಲಾದ ದಾಳಿ ಎಲ್ಲವನ್ನೂ ನೆನಪು ಮಾಡಿಕೊಡುತ್ತಿದ್ದಾರೆ.

'ಇದು, ಧಾರ್ಮಿಕ ಧ್ರುವೀಕರಣ ಹಾಗೂ ಬಿಜೆಪಿಯು ತನ್ನನ್ನು ತಾನು ಹಿಂದೂಗಳ ಉದ್ಧಾರಕ ಎಂದು ಬಿಂಬಿಸಿಕೊಳ್ಳುವ ಪ್ರಯತ್ನ' ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಉತ್ತರಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು, ಮಥುರಾದಲ್ಲಿ ಶ್ರೀಕೃಷ್ಣ ಜನ್ಮಭೂಮಿಗೆ ಸಿದ್ಧವಾಗುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. 'ಈ ಹಿಂದೆ, ಸಮಾಜವಾದಿ ಪಕ್ಷದ ಆಡಳಿತಾವಧಿಯಲ್ಲಿ 'ಲುಂಗಿಟೋಪಿ' (ಮುಸ್ಲಿಮರಿಗೆ ಅನ್ವಯಿಸಿ) ಗೂಂಡಾಗಳು, ಆಯುಧ ಗಳನ್ನು ಹಿಡಿದು–ಬೆದರಿಸಿ ನಿಮ್ಮ ನೆಲವನ್ನು ಕಬಳಿಸಿದ್ದಾರೆ. ಇದಾವುದನ್ನೂ ನೀವು ಮರೆಯಬಾರದು' ಎಂದು ಹೇಳಿದ್ದಾರೆ. ಇನ್ನು ಮುಂದೆ ತಾವು ಸಮಾಜವಾದಿ ಪಕ್ಷದ ಅಧ್ಯಕ್ಷರನ್ನು 'ಅಖಿಲೇಶ್ ಅಲಿ ಜಿನ್ನಾ' ಎಂದು ಕರೆಯುವುದಾಗಿಯೂ ಮೌರ್ಯ ಹೇಳಿದ್ದಾರೆ.

ಬಿಜೆಪಿ ಮುಖಂಡರ ಈ ಹೇಳಿಕೆಗಳಿಗೆ ಪ್ರತಿಕ್ರಿಯಿಸಿರುವ ಸಮಾಜವಾದಿ ಪಕ್ಷದ ಹಿರಿಯ ನಾಯಕ ಅನುರಾಗ್ ಭಾದುರಿಯಾ, 'ಈ ಹೇಳಿಕೆಗಳು, ಬರಲಿರುವ ಚುನಾವಣೆಯಲ್ಲಿ ಸೋಲು ಖಚಿತ ಎಂಬುದನ್ನು ಬಿಜೆಪಿ ಒಪ್ಪಿಕೊಂಡಿದೆ ಎಂಬುದನ್ನು ಸಾಬೀತುಪಡಿಸುತ್ತವೆ' ಎಂದಿದ್ದಾರೆ.

### 'ಬಿಜೆಪಿ ಸೇರಲು ಆಮಿಷ'



ಮಾನ್

ಚಂಡೀಗಡ (ಪಿಟಿಐ): ಬಿಜೆಪಿ ಸೇರುವಂತೆ, ಆ ಪಕ್ಷದ ಹಿರಿಯ ನಾಯಕರೊಬ್ಬರು ತಮಗೆ ಹಣ ಹಾಗೂ ಕೇಂದ್ರ ಸಚಿವ ಸ್ಥಾನದ ಆಮಿಷ ಒಡ್ಡಿದ್ದಾಗಿ ಆಮ್ ಆದ್ಮಿ ಪಕ್ಷದ ಪಂಜಾಬ್ ಘಟಕದ ಅಧ್ಯಕ್ಷ, ಸಂಸದ ಭಗವಂತ್ ಮಾನ್ ಆರೋಪಿಸಿದ್ದಾರೆ.

ಸಮಯ ಬಂದಾಗ ಆ ನಾಯಕರ ಹೆಸರನ್ನು ಬಹಿರಂಗಪಡಿಸುವುದಾಗಿ ಹೇಳಿರುವ ಮಾನ್, ತಮ್ಮನ್ನು ಹಣ ಅಥವಾ ಬೇರಾವುದರಿಂದಲೂ ಕೊಂಡುಕೊಳ್ಳಲಾಗದು ಎಂದು ಸುದ್ದಿಗೋಷ್ಠಿಯಲ್ಲಿ ಭಾನುವಾರ ಹೇಳಿದರು.

ಬಿಜೆಪಿಯ ಹಿರಿಯ ನಾಯಕರೊಬ್ಬರು ನಾಲ್ಕು ದಿನಗಳ ಹಿಂದೆ ತಮ್ಮನ್ನು ಸಂಪರ್ಕಿಸಿ, 'ಮಾನ್ ಸಾಹೇಬ್, ಬಿಜೆಪಿ ಸೇರಲು ನೀವು ಏನು ತೆಗೆದುಕೊಳ್ಳುತ್ತೀರಿ? ನಿಮಗೆ ಹಣವೇನಾದರೂ ಬೇಕೇ' ಎಂದು ಕೇಳಿದ್ದಾಗಿ ಮಾನ್ ಆರೋಪಿಸಿದರು. 'ಬಿಜೆಪಿ ಸೇರ್ಪಡೆಯಾದಲ್ಲಿ, ಕೇಂದ್ರ ಸಂಪುಟದಲ್ಲಿ ಸಚಿವ ಸ್ಥಾನ ನೀಡುವುದಾಗಿಯೂ ಬಿಜೆಪಿಯ ಆ ನಾಯಕರು ಆಮಿಷ ಒಡ್ಡಿದರು' ಎಂದು ಮಾನ್ ಹೇಳಿದ್ದಾರೆ.

### ವಾರಾಣಸಿಗೆ ಮಮತಾ



ಮಮತಾ

ಲಖನೌ (ಪಿಟಿಐ): ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸಮಾಜವಾದಿ ಪಕ್ಷಕ್ಕೆ ಬೆಂಬಲ ನೀಡುವ ಸಾಧ್ಯತೆ ಇದೆ. ಅದರ ಮಧ್ಯೆಯೇ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ವಾರಾಣಸಿಗೆ ಭೇಟಿ ನೀಡಲಿದ್ದಾರೆ ಎನ್ನಲಾಗಿದೆ.

'ಅಖಿಲೇಶ್ ಬಯಸಿದರೆ ನಾವು ಎಸ್‌ಪಿಗೆ ಬೆಂಬಲ ನೀಡಲು ತಯಾರಿದ್ದೇವೆ ಎಂದು ಮಮತಾ ದೆಹಲಿಯಲ್ಲಿ ಈಗಾಗಲೇ ಹೇಳಿದ್ದಾರೆ. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ವೇಳೆ ಎಸ್‌ಪಿ ನಾಯಕಿ ಜಯಾ ಬಚ್ಚನ್ ಪಶ್ಚಿಮ ಬಂಗಾಳಕ್ಕೆ ಬಂದು ಟಿಎಂಸಿ ಪರ ಮತ ಯಾಚಿಸಿದ್ದರು. ಅದೇ ಮಾದರಿಯಲ್ಲಿ ನಾವು ಎಸ್‌ಪಿಗೆ ಸಹಕಾರ ನೀಡುತ್ತೇವೆ. ಜನವರಿ ಎರಡನೇ ವಾರದಲ್ಲಿ ಮಮತಾ ವಾರಾಣಸಿಗೆ ಭೇಟಿ ನೀಡುವ ಸಾಧ್ಯತೆ ಇದೆ' ಎಂದು ಟಿಎಂಸಿ ಮುಖಂಡ ಲಲಿತೇಶ್‌ಪತಿ ತ್ರಿಪಾಠಿ ಹೇಳಿದ್ದಾರೆ.

---

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256


ಪ್ರಯಾಣಿಕರು ರನ್‌ವೇಯಲ್ಲಿ ವಿಮಾನವನ್ನು ತಳ್ಳುತ್ತಿರುವ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಘಟನೆ ನಡೆದಿರುವುದು ಭಾರತದ ಒಂದು ವಿಮಾನ ನಿಲ್ದಾಣದಲ್ಲಿ ಎಂದು ಹೇಳಲಾಗಿದೆ. ಈ ಚಿತ್ರವನ್ನು ಇರಿಸಿಕೊಂಡು ಕೇಂದ್ರ ಸರ್ಕಾರವನ್ನು ಟೀಕಿಸಲಾಗುತ್ತಿದೆ.'ನಿಮಗೆ ಇನ್ನೂ ಎಷ್ಟು ಉತ್ತಮ ದಿನಗಳು ಬೇಕು. ಇನ್ನೂ ಎಷ್ಟು ಅಭಿವೃದ್ಧಿ ನಿರೀಕ್ಷಿಸುತ್ತೀರಿ. ವಿಮಾನವನ್ನು ಕೂಡ ಜನರೇ ತಳ್ಳಬೇಕಾದ ಸ್ಥಿತಿ ಬಂದಿದೆ' ಎಂದು ವ್ಯಂಗ್ಯ ಮಾಡಲಾಗಿದೆ.




ವೈರಲ್ ಆಗಿರುವ ಈ ಚಿತ್ರ ಭಾರತದ್ದಲ್ಲ, ಇದು ನೇಪಾಳದ್ದು ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. ನೇಪಾಳದ ಕೋಲ್ತಿ ವಿಮಾನ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ಈ ವಿಮಾನ ತಾರಾ ಏರ್‌ಲೈನ್ಸ್‌ಗೆ ಸೇರಿದೆ. ವಿಮಾನ ನಿಲ್ದಾಣದಲ್ಲಿ ತಪ್ಪು ಜಾಗದಲ್ಲಿ ಈ ವಿಮಾನವನ್ನು ನಿಲುಗಡೆ ಮಾಡಿದ್ದರು. ಬೇರೆ ವಿಮಾನಗಳಿಗೆ ಸ್ಥಳಾವಕಾಶ ಮಾಡಿಕೊಡುವ ಕಾರಣ ಅದನ್ನು ಪ್ರಯಾಣಿಕರೇ ರನ್‌ವೇ ಆಚೆ ತಳ್ಳಿದ್ದರು. ಈ ಕುರಿತು ಎನ್‌ಡಿ ಟಿವಿ ಮತ್ತು ನವಭಾರತ ಟೈಮ್ಸ್ ಡಿ.2ರಂದು ವರದಿ ಮಾಡಿದ್ದವು.

---

## ಗುಂಡಣ್ಣ




---

## ಬೆರಗಿನ ಬೆಳಕು

ಗುರುರಾಜ ಕರಜಗಿ



### ದೈವೇಚ್ಛೆ

**ಆವ ಋಣಗೋಸುಗವೊ, ಆರ ಹಿತಕೋಸುಗವೊ**
**ಆವಾವ ಕಾರಣಕೊ, ಆವ ಯೋಜನೆಗೊ ||**
**ನೋವ ನೀಂ ಪಡುವುದೇ ದೈವೇಚ್ಛೆಯಾಗಿರದೆ?**
**ದೈವಕುರುಡೆನ್ನದಿರು – ಮಂಕುತಿಮ್ಮ || 512 ||**

**ಪದ-ಅರ್ಥ:** ಋಣಗೋಸುಗವೊ = ಋಣಕ್ಕಾಗಿಯೋ, ಕುರುಡೆನ್ನದಿರು = ಕುರುಡು + ಎನ್ನದಿರು

**ವಾಚ್ಯಾರ್ಥ:** ಯಾವ ಋಣಸಂದಾಯಕ್ಕೊ, ಯಾರ ಹಿತಕಾಗಿಯೊ, ಯಾವುದೋ ಕಾರಣಕ್ಕೊ, ಯಾವುದೋ ಯೋಜನೆಗೊ, ನೀನು ನೋವು ಪಡುವುದು ದೈವೇಚ್ಛೆಯಾಗಿರಬಹುದೆ? ದೈವವನ್ನು ಕುರುಡು ಎನ್ನಬೇಡ.

**ವಿವರಣೆ:** ಹದಿನಾರರ ಹುಡುಗಿ ಕಿಟಕಿಯಿಂದಾಚೆ ನೋಡುತ್ತಿದ್ದಳು. ಹೊರಗಡೆ ತುಂಬ ಗಲಾಟೆಯಾಗುತ್ತಿದೆ. ಜನ ಅಲ್ಲಲ್ಲಿ ಬೆಂಕಿ ಹಚ್ಚುತ್ತಿದ್ದಾರೆ. ಪೊಲೀಸರ ದಂಡೇ ನೆರೆದಿದೆ. ಆಗ ಆಕೆಗೆ ಒಬ್ಬ ಮುದುಕಿ ರಸ್ತೆ ದಾಟಿ ಹೋಗಲು ಒದ್ದಾಡುತ್ತಿರುವುದು ಕಂಡಿತು. ಆಕೆಗೆ ಸಹಾಯಮಾಡಲು ಮನೆಯಿಂದ ಹೊರಗೆ ಬಂದು, ಅಜ್ಜಿಯ ಕೈಹಿಡಿದು ರಸ್ತೆಯಾಚೆಗೆ ಬಿಟ್ಟು ಮರಳಿ ಬರುವಾಗ ಪೋಲೀಸರು ಹಾರಿಸಿದ ಗುಂಡು ಆಕೆಗೆ ತಗುಲಿ ತಕ್ಷಣವೇ ಸತ್ತು ಹೋದಳು.

ಮೂವತ್ತೈದರ ತರುಣ ಅಂತರರಾಷ್ಟ್ರೀಯ ಮಟ್ಟದಲ್ಲಿ ತುಂಬ ದೊಡ್ಡ ಹೆಸರು ಮಾಡಿದ್ದ. ಹಳ್ಳಿಯಲ್ಲಿ ಕಲಿತು ಮುಂದೆ ಬಂದ ಇವನ ಬಗ್ಗೆ ಹಳ್ಳಿಯಲ್ಲಿ ಎಲ್ಲರಿಗೂ ಹೆಮ್ಮೆ. ಒಂದು ದಿನ ಹಳ್ಳಿಯ ಅನಾಥಾಶ್ರಮದ ಮಕ್ಕಳಿಗೆ ಒಂದು ಪ್ರೇರಣಾದಾಯಿ ಉಪನ್ಯಾಸ ಕೊಡುವಂತೆ ಒಪ್ಪಿಸಿ, ಊರವರು ಕರೆದುಕೊಂಡು ಹೋದರು. ತರುಣ ಸಂತೋಷದಿಂದ ಅವರೊಡನೆ ಬೆರೆತ. ಅಲ್ಲಿ ಯಾವುದೋ ಹುಡುಗನಿಗೋ, ಮೇಲ್ವಿಚಾರಕರಿಗೋ ಕೋವಿಡ್ ಬಂದಿರಬೇಕು. ಅದು ಇವನನ್ನು ಅಮರಿಕೊಂಡಿತು. ಈತ ಅದನ್ನು ಮೊದಲು ಅಲಕ್ಷಿಸಿ, ನಂತರ ಉಲ್ಬಣವಾದಾಗ ಆಸ್ಪತ್ರೆ ಸೇರಿದ. ಮೂವತ್ತು ದಿನಗಳ ಕಾಲ ತೀವ್ರನಿಗಾ ಘಟಕದಲ್ಲಿ ಹೋರಾಡಿ ಕೊನೆಗೆ ಸಾವಿಗೆ ಶರಣಾದ. ಒಬ್ಬ ಕಷ್ಟಪಟ್ಟು ಬದುಕಿನುದ್ದಕ್ಕೂ ಕೂಡಿಟ್ಟಿದ್ದ ಹಣದಿಂದ ಪುಟ್ಟಮನೆಯೊಂದನ್ನು ಕಟ್ಟಿಕೊಂಡು ಬದುಕಿದ್ದ. ಹತ್ತು ವರ್ಷಗಳ ಮೇಲೆ ಹತ್ತಿರದಲ್ಲಿ ನದಿಗೆ ಆಣೆಕಟ್ಟು ಮಂಜೂರಾಗಿ, ಅದು ಸಿದ್ಧವಾದಾಗ ಈತನ ಮನೆ ನೀರಲ್ಲಿ ಮುಳುಗಿ ಹೋಯಿತು. ಪಾದಾಚಾರಿಯೊಬ್ಬ ರಸ್ತೆಯ ಬದಿಯ ಪಾದಚಾರಿ ಮಾರ್ಗದಲ್ಲೇ ಹೋಗುತ್ತಿದ್ದಾನೆ. ರಸ್ತೆಯಲ್ಲಿ ವೇಗವಾಗಿ ಹೋಗುವ ಕಾರೊಂದು ಹಿಡಿತ ತಪ್ಪಿ ಈ ಪಾದಚಾರಿಗೆ ಅಪ್ಪಳಿಸುತ್ತದೆ. ಇಂಥ ಸಾವಿರಾರು ಘಟನೆಗಳನ್ನು ಕೇಳಿದ್ದೇವೆ, ಓದಿದ್ದೇವೆ. ಇಂಥವುಗಳಲ್ಲಿ ಯಾರ ತಪ್ಪು, ಯಾಕೆ ಹೀಗಾಯಿತು ಎಂದು ತೀರ್ಮಾನಿಸುವುದು ಕಷ್ಟ. ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ. ಯಾಕೆ ಹೀಗಾಗುತ್ತದೆ? ನಾನೊಂದು ಹನಿಗವನವನ್ನು ಎಲ್ಲಿಯೋ ಓದಿದ ನೆನಪು.

**ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ;**
**ಓದದೆ ತಿರುಗಾಡಿದ ಮಗ ಪಾಸಾಗಲೆಂದು**
**ಮಾರೆಮ್ಮನಿಗೆ ಕೋಳಿಯ ಹರಕೆ !**
**ಓದದ ಮಗನ ಒಳಿತಿಗೆ ಕೋಳಿಯ ತಲೆದಂಡ!**

ಇದು ಸರಿಯೆ?

ಕಗ್ಗ ಒಂದು ಸಮಜಾಯಿಷಿಯನ್ನು ನೀಡುತ್ತದೆ. ಯಾರ ಹಿತಕ್ಕೊ, ಆವ ಕಾರಣಕ್ಕೋ, ಯಾವುದೋ ಯೋಜನೆಗೊ, ಮನುಷ್ಯ ನೋವು ಪಡುವುದು ದೈವೇಚ್ಛೆ. ಇದನ್ನೇ ನಮ್ಮ ಪರಂಪರೆ ಪ್ರಾರಬ್ಧಕರ್ಮ ಎನ್ನುತ್ತದೆ. ಅದನ್ನು ದೂಷಿಸಿ ಫಲವಿಲ್ಲ. ಯಾಕೆಂದರೆ ಹಿಂದೆ ಜನ್ಮಾಂತರಗಳಲ್ಲಿ ನಾವು ಮಾಡಿದ ಕರ್ಮಗಳ ಸ್ಮರಣೆ ನಮಗಿಲ್ಲ. ಆದ್ದರಿಂದ ದೈವವನ್ನು ಕುರುಡೆನ್ನದೆ ಬಂದದ್ದನ್ನು ದೈವೇಚ್ಛೆಯೆಂದು ಸ್ವೀಕರಿಸುವುದೊಂದೆ ನಮಗುಳಿದ ದಾರಿ. ❖

---

## ದಿನ ಭವಿಷ್ಯ

ಸೋಮವಾರ ಡಿಸೆಂಬರ್ 6, 2021

**ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ದ್ವಿತೀಯ ಗಂ. 5-54 (ಬೆ. 8-59) ಸೋಮವಾರ ನಿತ್ಯ ನಕ್ಷತ್ರ ಮೂಲ ಗಂ. 4-33 (ಬೆ. 8-24) ಗಂಡ ನಾಮ ಯೋಗ ಗಂ. 45-19 ಕೌಲವ ಕರಣ ಗಂ. 5-54 ವಿಷ ಗಂ. 0-48 ಪುರ‍್ವಿಷ ಗಂ. 27-2 ಅಮೃತ ಗಂ 49-31 :** ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-31 ಸೂರ್ಯಾಸ್ತ: 5-48 ಅದೃಷ್ಟ ಸಂಖ್ಯೆ 7

**ಮೇಷ:** ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ನೆರೆಹೊರೆಯವರೊಂದಿಗೆ ಕಲಹ ಸಂಭವ. ಸಮಾಧಾನದ ನಡವಳಿಕೆ ಅಗತ್ಯ. ಮಕ್ಕಳಿಂದ ನೆಮ್ಮದಿ. ವಿವಾಹ ಯೋಗ. ಗೃಹ ನಿರ್ಮಾಣ ಕೆಲಸಗಳಲ್ಲಿ ಪ್ರಗತಿ.

**ವೃಷಭ:** ಮನೆಯಲ್ಲಿ ನೆಮ್ಮದಿಯ ವಾತಾವರಣ. ನಿಷ್ಠೆ, ಪ್ರಾಮಾಣಿಕತೆಯಿಂದಾಗಿ ಯಶಸ್ಸು. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ಮೇಲಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಿಗಳಿಗೆ ಉದ್ಯಮದಲ್ಲಿ ಪ್ರಗತಿ.

**ಮಿಥುನ:** ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಸೋದರರಿಂದ ಸಲಹೆ–ಸಹಕಾರ ದೊರಕಿ ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣುವಿರಿ. ದೂರದ ಊರಿಂದ ಪ್ರಮುಖ ಸುದ್ದಿಯೊಂದನ್ನು ಕೇಳಲಿದ್ದೀರಿ.

**ಕರ್ಕಾಟಕ:** ಭೂ ವ್ಯವಹಾರಗಳಿಂದ ಲಾಭ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ಹೊಸ ಅತಿಥಿ ಆಗಮನ ಸಾಧ್ಯತೆ. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ನೆಮ್ಮದಿಯ ಜೀವನಕ್ಕೆ ನಾಂದಿ. ಶಿವ ಅಷ್ಟೋತ್ತರ ಪಠಿಸಿ.

**ಸಿಂಹ:** ಮಿತ್ರರೊಂದಿಗಿನ ವ್ಯವಹಾರಗಳಲ್ಲಿ ಜಾಗರೂಕರಾಗಿರಿ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಮಕ್ಕಳಿಂದ ನೆಮ್ಮದಿ. ಯಂತ್ರೋಪಕರಣಗಳ ಖರೀದಿಗಾಗಿ ಖರ್ಚು. ಶುಭ ಸುದ್ದಿ.

**ಕನ್ಯಾ:** ದೀರ್ಘಕಾಲಿಕ ಸಮಸ್ಯೆಗಳಿಂದ ಮುಕ್ತರಾಗುವಿರಿ. ಪ್ರಾಪ್ತವಯಸ್ಕರಿಗೆ ಉತ್ತಮ ಸಂಬಂಧಗಳು ದೊರಕುವ ಸಾಧ್ಯತೆ. ಕೃಷಿ ಒಕ್ಕಲುತನ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ತೊಡಕು. ಮಕ್ಕಳಿಂದ ಶುಭ ವಾರ್ತೆ.

**ತುಲಾ:** ಕಳೆದುಹೋದ ದಿನಗಳ ಬಗ್ಗೆ ಚಿಂತಿಸುವುದರಿಂದ ಪ್ರಯೋಜನವಿಲ್ಲ. ಹಿರಿಯರ ಸಲಹೆ ಸೂಚನೆಗಳನ್ನು ನಿರ್ಲಕ್ಷಿಸದಿರಿ. ಯಾವುದೇ ಕೆಲಸ ಕಾರ್ಯಗಳಲ್ಲಿ ಆತುರತೆ ತೋರಿ ಗಂಡಾಂತರಕ್ಕೆ ಸಿಲುಕದಿರಿ.

**ವೃಶ್ಚಿಕ:** ದೂರದ ಪ್ರಯಾಣ ಯೋಗ. ವಾಹನ ಖರೀದಿ ಸಾಧ್ಯತೆ. ನ್ಯಾಯಾಲಯದಲ್ಲಿ ಜಯ. ಹಳದಿ ಲೋಹ ವ್ಯಾಪಾರಿಗಳಿಗೆ ಉತ್ತಮ ಲಾಭ. ಕುಟುಂಬ ಸದಸ್ಯರಿಂದ ಹೊಸ ಕೆಲಸ–ಕಾರ್ಯಗಳಿಗೆ ಸಹಕಾರ ದೊರಕಿ ನಿರಾಳತೆ.

**ಧನು:** ದೈನಂದಿನ ಚಟುವಟಿಕೆಯಲ್ಲಿ ಉತ್ಸಾಹ. ಕುಲದೇವತಾ ದರ್ಶನ ಲಭ್ಯ. ಋಣ ಪರಿಹಾರದಿಂದ ಸಂತೃಪ್ತಿ. ಚಿನ್ನಾಭರಣ ಖರೀದಿ ಸಾಧ್ಯತೆ. ವೃತ್ತಿಯಲ್ಲಿನ ಸಮಸ್ಯೆಗಳು ನಿವಾರಣೆ. ಸಾಮಾಜಿಕ ಗೌರವಕ್ಕೆ ಪಾತ್ರರಾಗುವಿರಿ.

**ಮಕರ:** ನಿರೀಕ್ಷಿತ ಮೂಲಗಳಿಂದ ಧನಾಗಮನ. ವೃತ್ತಿ ಸಮಸ್ಯೆಗಳಿಂದ ಪರಿಹಾರ. ಮಹಿಳೆಯರು, ಕಲಾವಿದರುಗಳಿಗೆ ಉತ್ತಮ ಅವಕಾಶ ದೊರೆತು ಗೌರವಾದರ. ವಿವಾದಾತ್ಮಕ ಸಮಸ್ಯೆಗಳಿಂದ ಮುಕ್ತರಾಗುವಿರಿ.

**ಕುಂಭ:** ಮಾತೃವರ್ಗದವರಿಂದ ಸಹಕಾರ ದೊರೆಯುವುದು. ಆರೋಗ್ಯದಲ್ಲಿ ಏರುಪೇರಾಗುವ ಸಂಭವ ಇರುವುದರಿಂದ ವೈದ್ಯರ ಸಲಹೆ ಅಗತ್ಯ. ಅನಾವಶ್ಯಕ ವ್ಯವಹಾರಕ್ಕೆ ತಲೆಹಾಕದಿರಿ. ಬಂಧುಗಳ ಆಗಮನದಿಂದಾಗಿ ಸಂತಸ.

**ಮೀನ:** ಗೃಹಿಣಿಯರು ಆಯುಧಗಳ ವಿಷಯದಲ್ಲಿ ಜಾಗರೂಕರಾಗಿರಿ. ಆಧ್ಯಾತ್ಮಿಕ ಜೀವನದಲ್ಲಿ ಸಂತೃಪ್ತಿ ಕಾಣುವಿರಿ. ವಿಶೇಷ ವ್ಯವಹಾರಗಳಲ್ಲಿ ಅಗತ್ಯ ಪ್ರೋತ್ಸಾಹಗಳು ದೊರಕುವುದು. ಸಹೋದರರಿಂದ ಸಹಕಾರ.

**ನಿಮ್ಮ ಜನ್ಮದಿನ 6-ಡಿಸೆಂಬರ್** ಇಂದು ಅತ್ಯಂತ ಶುಭದಾಯಕ. ದಿನದ ಕೆಲಸ–ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಅನುಕೂಲ. ಬಹುಮುಖ ಪ್ರತಿಭೆ ಇದ್ದರೂ ಸಮಚಿತ್ತದ ಅಭಾವದಿಂದಾಗಿ ಕಾರ್ಯಗಳಲ್ಲಿ ಎಡರುತೊಡರುಗಳನ್ನು ಎದುರಿಸಬೇಕಾದೀತು.

---


## ಪದಬಂಧ 4799 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಯಜ್ಞ ಪುರೋಹಿತನಿವನು (3)
4.ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6.ವಂಚನೆಯ ಯುಕ್ತಿಯಿದು (5)
7.ಭವನದ ಮೇಲಿಂದ ಕಾಣಿಸಿದ ಆಕಾಶ (2)
9.ಮಾನವನಲ್ಲಿ ಹೊಸತು ಕಾಣುತಿದೆಯೇ? (2)
10.ಮಾರ್ಗಶಿರ ನಂತರದ ಮಾಸ (2)
11.ಸುಪ್ರಭಾತ ಕೇಳುತ್ತಿರುವ ಮಗ (2)
13.ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16.ಬಂಗಾರ ಇಲ್ಲಿದೆ (3)
17.ಪುನಃ ಪುನಃ ಬಂದಿರುವ ಸ್ಮರಣೆ (3)

**ಮೇಲಿಂದ ಕೆಳಕ್ಕೆ**

1.ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2.ಒತ್ತಾಸೆಯು ಇಲ್ಲಿ ತಿರುವುಮುರುವಾಗಿದೆ (3)
3.ಉಲ್ಟಾ ಕಾಣುತ್ತಿರುವ ಕಣ್ಣು (3)
4.ಶಯನದ ವೇಳೆಯಲ್ಲಿ ಈ ಅನುಮಾನವೇ? (3)
5.ಅರವತ್ತು ವರ್ಷದ ಹುಟ್ಟು ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆ (3)
10.ಪ್ರಗತಿಶೀಲ ಸ್ವಭಾವದವನು (4)
12.ಕನ್ನಡಿಗನು ಧರಿಸಿದ ಹೆಲ್ಮೆಟ್ (4)
13.ಯಮನ ಸೂತ್ರವಿಲ್ಲಿ ಉಲ್ಟಾ ಆಗಿದೆಯಲ್ಲಾ? (3)
14.ಚೆನ್ನಾಗಿ ಮಾತನಾಡುವವನು (3)
15.ಮೂಲೆಮನೆಯ ಮಾದರಿ! (3)



### 4798ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ವಿದ್ರೋಹ 3.ತಕಲೀಪು 5.ರಸನ 7.ಚದುರಂಗ 9.ಸದಾಚಾರ 11.ಎರಕ 14.ಪ್ರತೀಹಾರ 15.ರುಮಾಲು

**ಮೇಲಿಂದ ಕೆಳಕ್ಕೆ:** 1.ವಿಧುರ 2.ಹವನ 3.ತರದೂದು 4.ಪುಷ್ಟಿ 6.ಸಮಂಜಸ 7.ಚಮ್ಮಾರ 8.ಗತ್ಯಂತರ 10.ಚಾಡಿಕೋರ 11.ಎಡರು 12.ಕಡಲು 13.ವಿಪ್ರ

---

## ಸುಡೊಕು 5185

| | | | | | | | | |
|---|---|---|---|---|---|---|---|---|
| | 6 | | 8 | | | | 1 | |
| 2 | | | | | | | 7 | |
| | | 4 | 9 | | 2 | 8 | | 6 |
| 3 | | 6 | | | | 5 | | 9 |
| | 7 | | 3 | 2 | 4 | | 8 | |
| | | 1 | | | | 3 | | 7 |
| 4 | | | 6 | | 1 | | 9 | |
| | 3 | | | | 5 | | | 8 |
| 6 | | 8 | 2 | | | | 5 | 4 |

### ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5184 ಸುಡೊಕು

| | | | | | | | | |
|---|---|---|---|---|---|---|---|---|
| 3 | 9 | 8 | 2 | 7 | 5 | 4 | 6 | 1 |
| 2 | 7 | 6 | 4 | 3 | 1 | 8 | 9 | 5 |
| 1 | 4 | 5 | 6 | 8 | 9 | 7 | 3 | 2 |
| 4 | 6 | 3 | 9 | 1 | 7 | 5 | 2 | 8 |
| 9 | 5 | 2 | 3 | 4 | 8 | 1 | 7 | 6 |
| 8 | 1 | 7 | 5 | 2 | 6 | 3 | 4 | 9 |
| 5 | 3 | 4 | 8 | 6 | 2 | 9 | 1 | 7 |
| 7 | 2 | 9 | 1 | 5 | 4 | 6 | 8 | 3 |
| 6 | 8 | 1 | 7 | 9 | 3 | 2 | 5 | 4 |

### ಸೋಮವಾರದಿಂದ ಆರ್‌ಬಿಐನ ಎಂಪಿಸಿ ಸಭೆ

# ಬಡ್ಡಿದರ ಯಥಾಸ್ಥಿತಿ ಸಾಧ್ಯತೆ




ಮುಂಬೈ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರಿ ತಳಿ ಓಮೈಕ್ರಾನ್ ಜಾಗತಿಕ ಮಾರುಕಟ್ಟೆಯಲ್ಲಿ ಆತಂಕ ಸೃಷ್ಟಿಸಿರುವ ಕಾರಣ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿದರಗಳನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ. ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ಸೋಮವಾರದಿಂದ ಶುರುವಾಗಲಿದೆ.

ಆರ್‌ಬಿಐ ಗವರ್ನರ್ ನೇತೃತ್ವದ ಎಂಪಿಸಿ ಸಭೆ ಮೂರು ದಿನ ನಡೆಯಲಿದ್ದು, ಸಭೆಯ ನಿರ್ಧಾರಗಳು ಬುಧವಾರ ಪ್ರಕಟವಾಗಲಿವೆ. ಅಕ್ಟೋಬರ್‌ನಲ್ಲಿ ನಡೆಸಿದ್ದ ಸಭೆಯಲ್ಲಿ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ. ಈ ಬಾರಿಯೂ ಆರ್‌ಬಿಐ ಬಡ್ಡಿ ದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಂಡರೆ ಒಟ್ಟಾರೆ ಒಂಭತ್ತು ಬಾರಿ ಯಥಾಸ್ಥಿತಿ ಕಾಯ್ದುಕೊಂಡಂತೆ ಆಗಲಿದೆ. 2020ರ ಮೇ 22ರಲ್ಲಿ ಆರ್‌ಬಿಐ ಬಡ್ಡಿದರಗಳಲ್ಲಿ ಬದಲಾವಣೆ ಮಾಡಿತ್ತು.

ಕೊರೊನಾದ ಹೊಸ ತಳಿಯಿಂದಾಗಿ ಅನಿಶ್ಚಿತ ವಾತಾವರಣ ನಿರ್ಮಾಣ ಆಗಿದ್ದು, ಆ ಕುರಿತು ಸ್ಪಷ್ಟತೆ ಸಿಗುವವರೆಗೂ ಬಡ್ಡಿದರಗಳ ನಿರ್ಧಾರದಲ್ಲಿ ಆರ್‌ಬಿಐ ಕಾದು ನೋಡುವ ಸಾಧ್ಯತೆ ಇದೆ ಎಂದು ಕೋಟಕ್‌ನ ಆರ್ಥಿಕ ಸಂಶೋಧನಾ ವರದಿ ತಿಳಿಸಿದೆ.

**ಯಥಾಸ್ಥಿತಿ ಅತ್ಯಗತ್ಯ:** ರಿವರ್ಸ್ ರೆಪೊ ದರ ಹೆಚ್ಚಳದ ಮೂಲಕ ನಗದು ಲಭ್ಯತೆಯನ್ನು ಸಹಜ ಸ್ಥಿತಿಗೆ ತರುವ ನಿರ್ಧಾರವನ್ನು ಮುಂದೂಡಬೇಕು ಎಂದು ಎಸ್‌ಬಿಐನ ಆರ್ಥಿಕ ತಜ್ಞರು ಆರ್‌ಬಿಐಗೆ ಮನವಿ ಮಾಡಿದ್ದಾರೆ.

ಆರ್‌ಬಿಐ, ಹಣಕಾಸು ನೀತಿ ಸಮಿತಿಯ ಸಭೆಯಲ್ಲಿ ರಿವರ್ಸ್ ರೆಪೊ ದರದಲ್ಲಿ ಅಲ್ಪ ಏರಿಕೆ ಮಾಡುವ ನಿರೀಕ್ಷೆ ಇದೆ.

ಆದಾಗ್ಯೂ ಆರ್ಥಿಕ ಚೇತರಿಕೆಗೆ ಓಮೈಕ್ರಾನ್ ತಳಿಯು ಅಡ್ಡಿಯಾಗಬಹುದು ಎನ್ನುವ ಕಾರಣಕ್ಕಾಗಿ ಸದ್ಯದ ಮಟ್ಟಿಗೆ ಆ ನಿರ್ಧಾರ ತಡೆಹಿಡಿಯುವ ಸಾಧ್ಯತೆಯೂ ಇದೆ. ಹೀಗಾಗಿ ಗೃಹ ಸಾಲ ಪಡೆಯುವವರು ಇನ್ನೂ ಕೆಲವು ಸಮಯದವರೆಗೆ ಕಡಿಮೆ ಬಡ್ಡಿ ದರದ ಪ್ರಯೋಜನ ಪಡೆದುಕೊಳ್ಳುವಂತೆ ಆಗಲಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್‌ನ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.











## ಟಾಟಾ, ಹೋಂಡಾ, ರೆನೊ ವಾಹನಗಳ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ಟಾಟಾ ಮೋಟರ್ಸ್, ಹೋಂಡಾ ಮತ್ತು ರೆನೊ ಕಂಪನಿಗಳು ಜನವರಿಯಿಂದ ತಮ್ಮ ವಾಹನಗಳ ಬೆಲೆ ಏರಿಕೆಗೆ ಮುಂದಾಗಿವೆ.

ತಯಾರಿಕಾ ವೆಚ್ಚದಲ್ಲಿ ಏರಿಕೆ ಆಗಿರುವುದರಿಂದ ವಾಹನಗಳ ಬೆಲೆ ಏರಿಕೆಯು ಅನಿವಾರ್ಯವಾಗಿದೆ ಎಂದು ಕಂಪನಿಗಳು ತಿಳಿಸಿವೆ.

ಕಚ್ಚಾ ಸಾಮಗ್ರಿಗಳು ಮತ್ತು ಸಾಗಣೆ ವೆಚ್ಚದಲ್ಲಿ ನಿರಂತರ ಏರಿಕೆ ಆಗುತ್ತಿದೆ. ಇದರ ಭಾಗಶಃ ಹೊರೆಯನ್ನಾದರೂ ಬೆಲೆ ಏರಿಕೆಯ ಮೂಲಕ ವರ್ಗಾಯಿಸದೇ ಬೇರೆ ಮಾರ್ಗ ಇಲ್ಲ ಎಂದು ಕಂಪನಿಗಳು ಹೇಳಿವೆ. ಜನವರಿಯಿಂದ ಬೆಲೆ ಹೆಚ್ಚಿಸುವುದಾಗಿ ಮಾರುತಿ, ಔಡಿ ಮತ್ತು ಮರ್ಸಿಡಿಸ್ ಬೆಂಜ್ ಕಂಪನಿಗಳು ಈಗಾಗಲೇ ಘೋಷಿಸಿವೆ.

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹495 |
| 12 ಮೊಟ್ಟೆಗೆ | ₹65 |
| ಮೈಸೂರು | |
| 100 ಮೊಟ್ಟೆಗೆ | ₹497 |

### ರಾಮನಗರ ರೇಷ್ಮೆ



| | |
|---|---|
| ಮಿಶ್ರತಳಿ | ₹330-581 |
| ದ್ವಿತಳಿ | ₹336-765 |

# ಮಿಡ್ ಕ್ಯಾಪ್: ಯಾವ ಫಂಡ್ ಸೂಕ್ತ?



**ಬಂಡವಾಳ ಮಾರುಕಟ್ಟೆ**

**ಅವಿನಾಶ್ ಕೆ.ಟಿ.**

'ಷೇರು ಮಾರುಕಟ್ಟೆ ಬಗ್ಗೆ ನನಗೆ ಹೆಚ್ಚು ತಿಳಿದಿಲ್ಲ. ಆದರೆ, ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಆರಂಭಿಸುವ ಉದ್ದೇಶ ಇದೆ. ಯಾವ ಮ್ಯೂಚುವಲ್ ಫಂಡ್ ಉತ್ತಮ? ಯಾವುದರಲ್ಲಿ ಹೂಡಿಕೆ ಮಾಡಲಿ' ಎಂದು ಅನೇಕರು ಕೇಳುತ್ತಾರೆ. ಉತ್ತಮ ಮ್ಯೂಚುವಲ್ ಫಂಡ್ ಯಾವುದು ಎಂಬುದನ್ನು ತೀರ್ಮಾನಿಸುವುದು ಹೇಗೆ?

ಈ ತಪ್ಪು ಮಾಡಬೇಡಿ: ಬಹುತೇಕರು ಮ್ಯೂಚುವಲ್ ಫಂಡ್ ಆಯ್ಕೆ ಮಾಡುವಾಗ ಗೂಗಲ್ ಸರ್ಚ್ ಎಂಜಿನ್‌ಗೆ ಹೋಗಿ, 2021-22ರಲ್ಲಿ ಹೂಡಿಕೆ ಮಾಡಬಹುದಾದ ಉತ್ತಮ ಮ್ಯೂಚುವಲ್ ಫಂಡ್‌ಗಳು ಯಾವುವು ಎಂಬುದನ್ನು ಹುಡುಕುತ್ತಾರೆ. ಆಗ ಒಂದು ದೊಡ್ಡ ಪಟ್ಟಿ ಬರುತ್ತದೆ. ಅದನ್ನೇ ಆಧಾರವಾಗಿ ಇಟ್ಟುಕೊಂಡು, ಕಳೆದ ನಾಲ್ಕೈದು ವರ್ಷಗಳಲ್ಲಿ ಯಾವ ಮ್ಯೂಚುವಲ್ ಫಂಡ್ ಉತ್ತಮ ಲಾಭಾಂಶ ಕೊಟ್ಟಿದೆ ಎನ್ನುವುದನ್ನು ಪರಿಗಣಿಸಿ ಹೂಡಿಕೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆದರೆ ಈ ರೀತಿಯಲ್ಲಿ ನಿರ್ಧಾರ ಕೈಗೊಳ್ಳುವುದು ಸರಿ ಅಲ್ಲ.

ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹಣ ತೊಡಗಿಸುವಾಗ ಆ ಮ್ಯೂಚುವಲ್ ಫಂಡ್‌ನ ವೆಚ್ಚ ಅನುಪಾತ (Expense Ratio) ಎಷ್ಟಿದೆ, ಆ ಮ್ಯೂಚುವಲ್ ಫಂಡ್ ಯಾವ ಕಂಪನಿಗಳಲ್ಲಿ ಮತ್ತು ಯಾವ ವಲಯಗಳಲ್ಲಿ ಹೆಚ್ಚು ಹೂಡಿಕೆ ಮಾಡಿದೆ ಎನ್ನುವ ಮಾಹಿತಿ ಬಹಳ ಮುಖ್ಯ.

**ಮ್ಯೂಚುವಲ್ ಫಂಡ್ ಆಯ್ಕೆ ಹೀಗಿರಲಿ:** ಮ್ಯೂಚುವಲ್ ಫಂಡ್‌ಗಳಲ್ಲಿ ಪ್ರಮುಖವಾಗಿ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಎಂಬ ಮೂರು ವಿಧಗಳಿವೆ. ಲಾರ್ಜ್ ಕ್ಯಾಪ್ ಎಂದರೆ ದೊಡ್ಡ ಮಟ್ಟದಲ್ಲಿ ವ್ಯವಹಾರ ನಡೆಸುವ ಕಂಪನಿಗಳು. ಅದೇ ರೀತಿ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಅಂದರೆ ಕ್ರಮವಾಗಿ ಮಧ್ಯಮ ಮತ್ತು ಸಣ್ಣ ಗಾತ್ರದ ಕಂಪನಿಗಳು. ನಾವೀಗ ಉತ್ತಮವಾದ ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡುವುದು ಹೇಗೆ ಎಂದು ತಿಳಿಯೋಣ.

ಪಟ್ಟಿಯಲ್ಲಿ ತಿಳಿಸಿರುವ ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳನ್ನು ಪರಿಗಣಿಸಿದಾಗ, ಪಿಜಿಐಎಂ ಇಂಡಿಯಾ ಮಿಡ್ ಕ್ಯಾಪ್ ಆಪರ್ಚ್ಯೂನಿಟೀಸ್ ಫಂಡ್‌ನಲ್ಲಿ ವೆಚ್ಚ ಅನುಪಾತ ಅತ್ಯಂತ ಕಡಿಮೆ, ಅಂದರೆ ಶೇ 0.32ರಷ್ಟು, ಇದೆ. ಶೇ 32.74ರಷ್ಟು ವಾರ್ಷಿಕ ಲಾಭಾಂಶ ನೀಡಿರುವ ಈ ಫಂಡ್ ಪ್ರಮುಖವಾಗಿ ಎಂಫಸಿಸ್, ಮೈಂಡ್ ಟ್ರೀ ಮತ್ತು ಎಬಿಬಿ ಕಂಪನಿಗಳಲ್ಲಿ ಹೂಡಿಕೆ ಮಾಡಿದೆ. ಎಂಜಿನಿಯರಿಂಗ್, ಹಣಕಾಸು ಮತ್ತು ಕಟ್ಟಡ ನಿರ್ಮಾಣ ಇಲ್ಲಿ ಆದ್ಯತೆಯ ವಲಯಗಳಾಗಿವೆ.

ಎಕ್ಸಿಸ್ ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ನಲ್ಲಿ ವೆಚ್ಚ ಅನುಪಾತ ಶೇ 0.46ರಷ್ಟಿದೆ. ಪಿಜಿಐಎಂ ಇಂಡಿಯಾ ಮಿಡ್ ಕ್ಯಾಪ್ ಫಂಡ್‌ನ ವೆಚ್ಚ ಅನುಪಾತಕ್ಕಿಂತ ಇದು ಸ್ವಲ್ಪ ಹೆಚ್ಚು. ಆದರೆ ಲಾಭಾಂಶವು ಪಿಜಿಐಎಂಗಿಂತ ಕಡಿಮೆ, ಅಂದರೆ ಶೇ 27.74ರಷ್ಟು, ಇದೆ. ಚೋಳಮಂಡಲಂ ಇನ್ವೆಸ್ಟ್‌ಮೆಂಟ್ಸ್, ಐಸಿಐಸಿಐ ಬ್ಯಾಂಕ್, ಎನ್‌ಐಐಟಿ ಟೆಕ್ನಾಲಜೀಸ್ ಲಿ. ಕಂಪನಿಗಳಲ್ಲಿ ಎಕ್ಸಿಸ್ ಮಿಡ್ ಕ್ಯಾಪ್ ಫಂಡ್ ಹೂಡಿಕೆ ಮಾಡಿದ್ದು ಹಣಕಾಸು, ತಂತ್ರಜ್ಞಾನ ಮತ್ತು ಕೆಮಿಕಲ್ಸ್ ವಲಯಗಳಲ್ಲಿ ಹೆಚ್ಚಿನ ಹಣ ತೊಡಗಿಸಿದೆ.

ಎಸ್‌ಬಿಐ ಮ್ಯಾಗ್ನಂ ಮಿಡ್ ಕ್ಯಾಪ್ ಫಂಡ್‌ನಲ್ಲಿ ವೆಚ್ಚ ಅನುಪಾತ ಶೇ 1.08ರಷ್ಟಿದೆ. ಲಾಭಾಂಶ ಶೇ 24.7ರಷ್ಟಿದೆ. ಈ ಫಂಡ್‌ನಲ್ಲಿ ಸಿಕ್ಕಿರುವ ಲಾಭಾಂಶಕ್ಕೆ ಹೋಲಿಕೆ ಮಾಡಿ ನೋಡಿದರೆ ವೆಚ್ಚ ಅನುಪಾತ ಜಾಸ್ತಿ ಇದೆ ಅನಿಸುತ್ತದೆ. ಇನ್ನು ಯುಟಿಐ ಮಿಡ್ ಕ್ಯಾಪ್ ಫಂಡ್‌ನಲ್ಲೂ ವೆಚ್ಚ ಅನುಪಾತ ಶೇ 1.04ರಷ್ಟಿದ್ದು ಲಾಭಾಂಶ ಶೇ 23.76ರಷ್ಟಿದೆ. ಫಂಡ್‌ನ ವೆಚ್ಚ ಅನುಪಾತ ಹೆಚ್ಚಿಗೆ ಇದ್ದರೆ ನಿಮಗೆ ಸಿಗುವ ಲಾಭಾಂಶ ಕಡಿಮೆಯಾಗುತ್ತದೆ. ಹಾಗಾಗಿ, ವೆಚ್ಚ ಅನುಪಾತ ಹೆಚ್ಚಿಗೆ ಇರುವ ಫಂಡ್‌ಗಳ ಬಗ್ಗೆ ಎಚ್ಚರಿಕೆ ವಹಿಸಬೇಕು.

ಒಟ್ಟಾರೆಯಾಗಿ ಕಡಿಮೆ ವೆಚ್ಚ ಅನುಪಾತ ಇರುವ ಮತ್ತು ಹೆಚ್ಚು ಲಾಭಾಂಶ ಕೊಟ್ಟಿರುವ, ನೀವು ನಂಬಿಕೆ ಇಟ್ಟಿರುವ ಕಂಪನಿಗಳು ಮತ್ತು ವಲಯಗಳಲ್ಲಿ ಹೂಡಿಕೆ ಮಾಡಿರುವ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಉತ್ತಮ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

### ಮಿಡ್ ಕ್ಯಾಪ್ ಫಂಡ್ ಆಯ್ಕೆ ಲೆಕ್ಕಾಚಾರ

| ಮಿಡ್ ಕ್ಯಾಪ್ ಮ್ಯೂಚುಯಲ್ ಫಂಡ್ | ವೆಚ್ಚ ಅನುಪಾತ (Expense Ratio) | ವಾರ್ಷಿಕ ಲಾಭಾಂಶ | ಹೂಡಿಕೆ ಮಾಡಿರುವ ಟಾಪ್ ಮೂರು ಕಂಪನಿಗಳು | ಹೂಡಿಕೆ ಮಾಡಿರುವ ಟಾಪ್ 3 ವಲಯಗಳು |
|---|---|---|---|---|
| ಪಿಜಿಐಎಂ ಇಂಡಿಯಾ ಮಿಡ್ ಕ್ಯಾಪ್ ಆಪರ್ಚ್ಯೂನಿಟೀಸ್ ಫಂಡ್ | ಶೇ 0.32 | ಶೇ 32.74 | ಎಂಫಸಿಸ್, ಮೈಂಡ್ ಟ್ರೀ ಲಿ., ಎಬಿಬಿ ಲಿ. | ಎಂಜಿನಿಯರಿಂಗ್, ಹಣಕಾಸು ಮತ್ತು ಕಟ್ಟಡ ನಿರ್ಮಾಣ ವಲಯ |
| ಎಕ್ಸಿಸ್ ಮಿಡ್ ಕ್ಯಾಪ್ ಫಂಡ್ | ಶೇ 0.46 | ಶೇ 27.34 | ಚೋಳಮಂಡಲಂ ಇನ್ವೆಸ್ಟ್‌ಮೆಂಟ್ಸ್, ಐಸಿಐಸಿಐ ಬ್ಯಾಂಕ್, ಎನ್‌ಐಐಟಿ ಟೆಕ್ನಾಲಜೀಸ್ ಲಿ. | ಹಣಕಾಸು, ತಂತ್ರಜ್ಞಾನ ಮತ್ತು ಕೆಮಿಕಲ್ಸ್ |
| ಕೋಟಕ್ ಎಮರ್ಜಿಂಗ್ ಈಕ್ವಿಟಿ ಫಂಡ್ | ಶೇ 0.52 | ಶೇ 25.15 | ಸುಪ್ರೀಂ ಇಂಡಸ್ಟ್ರೀಸ್, ಪರ್ಸಿಸ್ಟೆಂಟ್ ಸಿಸ್ಟಮ್ಸ್ ಲಿ, ಎಫ್‌ಎಜಿ ಬೇರಿಂಗ್ಸ್ ಲಿ, | ಕೆಮಿಕಲ್ಸ್, ಎಂಜಿನಿಯರಿಂಗ್ ಮತ್ತು ಹಣಕಾಸು |
| ಎಸ್‌ಬಿಐ ಮ್ಯಾಗ್ನಮ್ ಮಿಡ್ ಕ್ಯಾಪ್ ಫಂಡ್ | ಶೇ 1.08 | ಶೇ 24.7 | ಶೀಲಾ ಫೋಮ್ ಲಿ, ಪೇಜ್ ಇಂಡಸ್ಟ್ರೀಸ್, ಕಾರ್ ಬೋರ್ಡ್ ಯುನಿವರ್ಸಲ್ ಲಿ, | ಕಟ್ಟಡ ನಿರ್ಮಾಣ, ವಾಹನ ತಯಾರಿಕೆ ಮತ್ತು ಹಣಕಾಸು |
| ಯುಟಿಐ ಮಿಡ್ ಕ್ಯಾಪ್ ಫಂಡ್ | ಶೇ 1.04 | ಶೇ 23.76 | ಎಂಫಸಿಸ್, ಎಸ್‌ಆರ್‌ಎಫ್ ಲಿ, ಚೋಳಮಂಡಲಂ ಇನ್ವೆಸ್ಟ್‌ಮೆಂಟ್ಸ್ | ಹಣಕಾಸು, ಆರೋಗ್ಯ ಮತ್ತು ವಾಹನ ತಯಾರಿಕೆ |

(ಗಮನಿಸಿ: ಹಣಕಾಸು ಶಿಕ್ಷಣದ ಉದ್ದೇಶಕ್ಕಾಗಿ ಮಾತ್ರ ಇಲ್ಲಿ ಫಂಡ್‌ಗಳ ಹಾಗೂ ಕೆಲವು ಕಂಪನಿಗಳ ಹೆಸರು ಉಲ್ಲೇಖ ಮಾಡಲಾಗಿದೆ. ಇದನ್ನು ಹೂಡಿಕೆ ಶಿಫಾರಸು ಎಂದು ಭಾವಿಸಬಾರದು)

### ಶೇ 1ರಷ್ಟು ಗಳಿಕೆ ಕಂಡ ಸೂಚ್ಯಂಕಗಳು




ಎರಡು ವಾರಗಳಿಂದ ಇಳಿಕೆಯ ಹಾದಿ ತುಳಿದಿದ್ದ ಷೇರುಪೇಟೆ ಸೂಚ್ಯಂಕಗಳು ಮತ್ತೆ ಗಳಿಕೆಯ ಲಯಕ್ಕೆ ಮರಳಿವೆ. ಡಿಸೆಂಬರ್ 3ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ 57,696 ಅಂಶಗಳಲ್ಲಿ ವಹಿವಾಟು ಮುಗಿಸಿ ಶೇ 1ರಷ್ಟು ಗಳಿಕೆ ಕಂಡಿದ್ದರೆ 17,196 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.99ರಷ್ಟು ಜಿಗಿದಿದೆ. ಜಿಡಿಪಿ ಸುಧಾರಣೆ ಕಂಡಿರುವುದು, ಉತ್ಪಾದನಾ ಸೂಚ್ಯಂಕದಲ್ಲಿ ಚೇತರಿಕೆ ಸೇರಿ ಹಲವು ಅಂಶಗಳು ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 4ರಷ್ಟು ಹೆಚ್ಚಳ ಕಂಡಿದೆ. ಮಾಧ್ಯಮ ಮತ್ತು ಲೋಹ ವಲಯ ಕೂಡ ಉತ್ತಮ ಪ್ರಗತಿ ಕಂಡಿವೆ. ಆದರೆ ಫಾರ್ಮಾ ವಲಯ ಶೇ 2.5ರಷ್ಟು ಕುಸಿತ ಕಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 15,809.18 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 16,450.10 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

**ಏರಿಕೆ-ಇಳಿಕೆ:** ನಿಫ್ಟಿಯಲ್ಲಿ ಎಚ್‌ಸಿಎಲ್ ಶೇ 6ರಷ್ಟು, ಟಿಸಿಎಸ್ ಶೇ 6ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 5ರಷ್ಟು, ಬಜಾಜ್ ಫಿನ್‌ಸರ್ವ್ ಶೇ 5ರಷ್ಟು ಮತ್ತು ಟಾಟಾ ಮೋಟರ್ಸ್ ಶೇ 4ರಷ್ಟು ಏರಿಕೆಯಾಗಿವೆ. ಸಿಪ್ಲಾ ಶೇ 6ರಷ್ಟು, ಡಿವೀಸ್ ಲ್ಯಾಬ್ ಶೇ 4ರಷ್ಟು, ಡಿಆರ್‌ಎಲ್ ಶೇ 3ರಷ್ಟು, ಏರ್‌ಟೆಲ್ ಶೇ 3 ಮತ್ತು ಹೀರೊ ಶೇ 3ರಷ್ಟು ಇಳಿಕೆಯಾಗಿವೆ.

**ಮುನ್ನೋಟ:** ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿ ದರ ಕುರಿತಾಗಿ ಈ ವಾರ ಕೈಗೊಳ್ಳಲಿರುವ ಹಣಕಾಸು ನೀತಿ ತೀರ್ಮಾನವು ಷೇರು ಮಾರುಕಟ್ಟೆಗಳ ಮೇಲೆ ನೇರ ಪರಿಣಾಮ ಬೀರಲಿದೆ. ಬಡ್ಡಿ ದರ ಹೆಚ್ಚಳವಾದರೆ ಹೂಡಿಕೆದಾರರ ಪಾಲಿಗೆ ಅದು ಕಹಿ ಸುದ್ದಿ. ಕೋವಿಡ್ ಓಮೈಕ್ರಾನ್ ತಳಿಯು ಜಾಗತಿಕವಾಗಿ ಎಷ್ಟರ ಮಟ್ಟಿಗೆ ತೊಂದರೆ ಉಂಟುಮಾಡಲಿದೆ ಎನ್ನುವುದು ಕೂಡ ಸೂಚ್ಯಂಕಗಳ ಗತಿ ನಿರ್ಧರಿಸಲಿದೆ.

### ಆರ್ಥಿಕತೆ ಈಗಲೂ 2019ರ ಮಟ್ಟಕ್ಕಿಂತ ಕೆಳಗಿದೆ: ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ

# ಭಾರತಕ್ಕೆ ತೀವ್ರ ಸಂಕಷ್ಟದ ಸಮಯವಿದು

ಅಹಮದಾಬಾದ್ (ಪಿಟಿಐ): ಭಾರತೀಯರು ತೀವ್ರ ಸಂಕಷ್ಟದಲ್ಲಿದ್ದಾರೆ ಮತ್ತು ಆರ್ಥಿಕತೆ ಈಗಲೂ 2019ರ ಮಟ್ಟಕ್ಕಿಂತ ಕೆಳಗಿದೆ. ಸಣ್ಣ ವ್ಯಾಪಾರಿಗಳು ಮತ್ತಷ್ಟು ಕುಸಿದಿದ್ದಾರೆ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಹೇಳಿದ್ದಾರೆ.

ಗುಜರಾತ್ ಅಹಮದಾಬಾದ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಶನಿವಾರ ರಾತ್ರಿ ನಡೆಸಿದ ಆನ್‌ಲೈನ್ ಸಂವಾದದಲ್ಲಿ ಅಭಿಜಿತ್ ಬ್ಯಾನರ್ಜಿ ಮಾತನಾಡಿದರು. ವಿವಿಯ 11ನೇ ವಾರ್ಷಿಕ ಪದವಿ ಪ್ರದಾನ ಸಮಾರಂಭದಲ್ಲಿ ಅಮೆರಿಕದಿಂದಲೇ ಭಾಗವಹಿಸಿದ್ದರು.

ಇತ್ತೀಚೆಗೆ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿದ್ದ ಸಂದರ್ಭ ಗಮನಿಸಿದ ಅಂಶಗಳನ್ನು ಅವರು ವಿದ್ಯಾರ್ಥಿಗಳ ಜೊತೆಗೆ ಹಂಚಿಕೊಂಡರು. 'ಸಮಾಜಕ್ಕೆ ವಿದ್ಯಾರ್ಥಿಗಳ ಕೊಡುಗೆ ಬೇಕಿದೆ. ಭಾರತದಲ್ಲೀಗ ತೀವ್ರ ಸಂಕಷ್ಟದ ಸ್ಥಿತಿಯಿದೆ. ನಾನು ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶದಲ್ಲಿ ಕೆಲವು ಸಮಯ ಕಳೆದಿದ್ದೆ. ಅಭಿವೃದ್ಧಿಯ ಕನಸು ಕಟ್ಟಿಕೊಂಡವರು ಸಂಕಷ್ಟದಲ್ಲಿದ್ದಾರೆ. ಸಣ್ಣ ವ್ಯಾಪಾರಿಗಳು ಮತ್ತಷ್ಟು ನೊಂದಿದ್ದಾರೆ' ಎಂದರು.

'ನಾವೀಗ ತೀವ್ರ ಸಂಕಷ್ಟದಲ್ಲಿದ್ದೇವೆ ಎಂದೆನಿಸುತ್ತಿದೆ. 2019ರಲ್ಲಿದ್ದ ಆರ್ಥಿಕ ಪರಿಸ್ಥಿತಿಗೆ ಹೋಲಿಸಿದರೆ ಅದಕ್ಕಿಂತ ಕೆಳಮಟ್ಟದಲ್ಲಿದ್ದೇವೆ. ಎಷ್ಟು ಕೆಳ ಮಟ್ಟಕ್ಕೆ ಇಳಿದಿದ್ದೇವೆ ಎಂಬುದು ನಮಗೆ ಗೊತ್ತಿಲ್ಲ. ಆದರೆ ತೀವ್ರ ಕುಸಿತ ಕಂಡಿದ್ದೇವೆ. ಇದಕ್ಕೆ ನಾನು ಯಾರನ್ನೂ ದೂಷಿಸುವುದಿಲ್ಲ. ನಾನು ವಿಚಾರವನ್ನು ಹೇಳುತ್ತಿದ್ದೇನೆ ಅಷ್ಟೇ' ಎಂದು ಬ್ಯಾನರ್ಜಿ ಹೇಳಿದ್ದಾರೆ.



ಅಭಿಜಿತ್

**'ಜೆಎನ್‌ಯು ನಲ್ಲಿದ್ದಾಗ 10 ದಿನ ತಿಹಾರ್ ಜೈಲಿನಲ್ಲಿದ್ದೆ':** ಅಭಿಜಿತ್ ಬ್ಯಾನರ್ಜಿ ಅವರು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ(ಜೆಎನ್‌ಯು)ದಲ್ಲಿ ವಿದ್ಯಾರ್ಥಿಯಾಗಿದ್ದಾಗ ತಿಹಾರ್ ಜೈಲಿನಲ್ಲಿ 10 ದಿನ ಕಳೆದಿದ್ದನ್ನು ಕೂಡ ವಿದ್ಯಾರ್ಥಿಗಳ ಜೊತೆ ಹಂಚಿಕೊಂಡಿದ್ದಾರೆ.

'ಜೆಎನ್‌ಯು ಕಾಲೇಜಿನ ಕೊನೆಯ ದಿನಗಳು. ಹಾರ್ವರ್ಡ್‌ಗೆ ಹೋಗುವ ಯೋಚನೆಯಲ್ಲಿದ್ದೆ. ಆಗ ವಿದ್ಯಾರ್ಥಿ ಚಳವಳಿಯಲ್ಲಿ ಪಾಲ್ಗೊಂಡಿದ್ದೆ. ನನ್ನನ್ನು ತಿಹಾರ್ ಜೈಲಿಗೆ ಕರೆದೊಯ್ಯಲಾಯಿತು. ಅಲ್ಲಿ 10 ದಿನಗಳ ವರೆಗೆ ಇರಿಸಿದ್ದರು. ನಾನು ಜೈಲಿನಿಂದ ಹೊರಗೆ ಬಂದಾಗ ಭವಿಷ್ಯವನ್ನು ಹಾಳು ಮಾಡಿಕೊಂಡಿದ್ದಾಗಿ ಹಲವಾರು ಹಿರಿಯರು ಹೇಳಿದರು. ಹಾರ್ವರ್ಡ್ ಅಥವಾ ಅಮೆರಿಕದಲ್ಲಿ ಪ್ರವೇಶಕ್ಕೆ ಅವಕಾಶ ದೊರೆಯದು ಎಂದಿದ್ದರು. ಅವರ ಪ್ರಕಾರ ನಾನು ಜೈಲು ಸೇರಿದ್ದಕ್ಕೆ ಪಶ್ಚಾತ್ತಾಪ ಪಡಬೇಕಿತ್ತು' ಎಂದು ಅಭಿಜಿತ್ ಬ್ಯಾನರ್ಜಿ ತಮ್ಮ ಹಳೆಯ ನೆನಪುಗಳನ್ನು ಸ್ಮರಿಸಿದರು.

ಭಾರತದ ಇಬ್ಬರು ಸಿನಿಮಾ ನಿರ್ಮಾಪಕರಾದ ಸತ್ಯಜಿತ್ ರೇ ಮತ್ತು ಶ್ಯಾಮ್ ಬೆನೆಗಲ್ ಬಗ್ಗೆ ಬ್ಯಾನರ್ಜಿ ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು. ಇವರಿಬ್ಬರು ಅರ್ಥಶಾಸ್ತ್ರದ ಪದವೀಧರರು. ಆದರೆ ಅವರು ವಿಭಿನ್ನ ಹಾದಿ ತುಳಿದರು. ಹಾಗಿದ್ದೂ ಅವರು ಜೀವನದಲ್ಲಿ ಸಾಧನೆಯ ಉತ್ತುಂಗಕ್ಕೆ ಏರಿದರು. ಹಾಗಾಗಿ ಯಾವುದೋ ಒಂದು ನಿರ್ದಿಷ್ಟ ತರಬೇತಿ ಪಡೆಯುವುದಕ್ಕಿಂತ ಮುಖ್ಯವಾಗಿ ವಿಚಾರಶೀಲರಾಗಿರುವುದು ಮತ್ತು ಮಾನವೀಯ ಗುಣ ಅಳವಡಿಸಿಕೊಳ್ಳುವುದು ಪ್ರಮುಖವಾಗಿದೆ. ಅದೇ ಜೀವನದ ಪ್ರಮುಖ ಭಾಗ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

## 'ಲಂಕಾ ಪ್ರಜೆಯ ಶೇ 99ರಷ್ಟು ಮೂಳೆ ಮುರಿದಿದ್ದ ಉದ್ರಿಕ್ತರು'

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಶುಕ್ರವಾರ ನಡೆದ ಶ್ರೀಲಂಕಾ ಪ್ರಜೆ ಪ್ರಿಯಾಂತ ಕುಮಾರ್ ದಿಯಾವಾದಾನ ಮೇಲಿನ ಹಲ್ಲೆಯಿಂದ ಅವರ ದೇಹದ ಬಹುತೇಕ ಮೂಳೆಗಳು ಮುರಿದು ಹೋಗಿತ್ತು, ಬಳಿಕ ಬೆಂಕಿ ಹಚ್ಚಿದ್ದರಿಂದ ಮೃತದೇಹ ಶೇ 99ರಷ್ಟು ಸುಟ್ಟುಹೋಗಿದೆ ಎಂದು ಮರಣೋತ್ತರ ಪರೀಕ್ಷೆಯ ವರದಿಯನ್ನು ಉಲ್ಲೇಖಿಸಿ ಮಾಧ್ಯಮವೊಂದು ಭಾನುವಾರ ವರದಿ ಮಾಡಿದೆ.

ತೆಹ್ರೀಕ್-ಇ-ಲಬ್ಬೈಕ್ ಪಾಕಿಸ್ತಾನ (ಟಿಎಲ್‌ಪಿ) ಸಂಘಟನೆಯ ಉದ್ರಿಕ್ತರ ಗುಂಪು ಶುಕ್ರವಾರ ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಮೇಲೆ ದಾಳಿ ಮಾಡಿದ್ದರು. ಧರ್ಮನಿಂದೆಯ ಆರೋಪದ ಮೇಲೆ ಅಲ್ಲಿಯ 40 ವರ್ಷದ ವ್ಯವಸ್ಥಾಪಕ ದಿಯಾವಾದಾನ ಅವರನ್ನು ಹೊಡೆದು ಕೊಂದಿದ್ದರು ಹಾಗೂ ಬೆಂಕಿ ಹಚ್ಚಿದ್ದರು.

ಘಟನೆಯ ಆರೋಪಿಗಳಿಗೆ ಶಿಕ್ಷೆಯಾಗಬೇಕು ಎಂದು ಪಾಕಿಸ್ತಾನ ಸರ್ಕಾರದ ಮೇಲೆ ಒತ್ತಡ ಹೆಚ್ಚಾದ ಹಿನ್ನೆಲೆ ಭಯೋತ್ಪಾದನೆಯ ನಂಟು ಹೊಂದಿರುವ 800 ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಹತ್ಯೆ ನಡೆಸಿದ ಆರೋಪ ಹೊತ್ತಿರುವ 118 ಮಂದಿಯ ಪೈಕಿ ಪ್ರಮುಖ 13 ಮಂದಿ ಶಂಕಿತರನ್ನು ಬಂಧಿಸಲಾಗಿದೆ.

## ಸಂಸದ್ ಟಿವಿ ಕಾರ್ಯಕ್ರಮ ತೊರೆದ ಶಿವಸೇನಾ ಸಂಸದೆ

ಮುಂಬೈ (ಪಿಟಿಐ): ರಾಜ್ಯಸಭೆಯಿಂದ ತಮ್ಮನ್ನು ಅಮಾನತು ಮಾಡಿರುವ ಕಾರಣಕ್ಕೆ ಸಂಸದ್ ಟಿವಿಯಲ್ಲಿ ಪ್ರಸಾರವಾಗುವ 'ಮೇರಿ ಕಹಾನಿ' ಕಾರ್ಯಕ್ರಮ ತೊರೆದಿರುವುದಾಗಿ ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಭಾನುವಾರ ಹೇಳಿದ್ದಾರೆ.



ಪ್ರಿಯಾಂಕಾ

'ಸಂವಿಧಾನ ನೀಡಿರುವ ಅಧಿಕಾರವನ್ನೇ ನನಗೆ ನಿರಾಕರಿಸಿರುವ ಕಾರಣ, ಸಂಸದ್ ಟಿವಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಚ್ಛಿಸುವುದಿಲ್ಲ' ಎಂದು ರಾಜ್ಯಸಭೆ ಸಭಾಪತಿ ವೆಂಕಯ್ಯ ನಾಯ್ಡು ಅವರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

### ಸಂಕ್ಷಿಪ್ತ ಸುದ್ದಿ

## ಇಂಡೊನೇಷ್ಯಾ: ಜ್ವಾಲಾಮುಖಿ ಸ್ಫೋಟಕ್ಕೆ 14 ಸಾವು

ಜಕಾರ್ತ: ಇಂಡೊನೇಷ್ಯಾದ ಪೂರ್ವ ಜಾವಾ ಪ್ರಾಂತ್ಯದ ಮೌಂಟ್ ಸಿಮೇರುವಿನಲ್ಲಿ ಶನಿವಾರ ಜ್ವಾಲಾಮುಖಿ ಸ್ಫೋಟಗೊಂಡು 14 ಮಂದಿ ಮೃತಪಟ್ಟಿದ್ದಾರೆ. 56ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ.

ಸಿಮೇರು ಸಮೀಪದ ಲುಮಾಜಾಂಗ್‌ನ ಕೆರೊಬೊಕನ್ ಗ್ರಾಮದಲ್ಲಿ 300ಕ್ಕೂ ಹೆಚ್ಚು ಕುಟುಂಬಗಳು ವಾಸವಿದ್ದವು. ಈ ಪ್ರದೇಶದ ಮನೆಗಳು ಜ್ವಾಲಾಮುಖಿ ಸ್ಫೋಟಗೊಂಡು ಲಾವಾ ಹರಿದ ಪರಿಣಾಮ ಬಹುತೇಕ ನಾಶವಾಗಿವೆ.

ಸಮೀಪದ ಗ್ರಾಮಗಳ ನಿವಾಸಿಗಳೂ ಭೀತಿಯಿಂದ ಮನೆಬಿಟ್ಟು ಇತರೆಡೆಗಳಿಗೆ ತೆರಳಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮಂಗಳವಾರ ಬೈಡನ್-ಪುಟಿನ್ ಮಾತುಕತೆ

ಮಾಸ್ಕೊ (ಎಪಿ): ಉಕ್ರೇನ್ ನ್ಯಾಟೊ ಪಡೆ ಸೇರಿಕೊಳ್ಳುವುದರ ವಿರುದ್ಧ ದೇಶದ ಗಡಿ ಭಾಗದಲ್ಲಿ ರಷ್ಯಾವು ದೊಡ್ಡಸಂಖ್ಯೆಯಲ್ಲಿ ಸೇನಾಪಡೆ ಜಮಾಯಿಸಿರುವಂತೆಯೇ ಅಮೆರಿಕ ಮತ್ತು ರಷ್ಯಾ ನಡುವಿನ ಉದ್ವಿಗ್ನ ಪರಿಸ್ಥಿತಿಯು ಉಲ್ಬಣಿಸಿದ್ದು, ಇದನ್ನು ಶಮನಗೊಳಿಸುವ ಯತ್ನವಾಗಿ ಮಂಗಳವಾರ ಜೋ ಬೈಡನ್ ಮತ್ತು ವ್ಲಾಡಿಮಿರ್ ಪುಟಿನ್ ಅವರು ವಿಡಿಯೊ ಮೂಲಕ ಮಾತುಕತೆ ನಡೆಸಲಿದ್ದಾರೆ.



## 'ರಾಜ್ಯದಲ್ಲಿ ಮಾದರಿ ಬಿಲ್ಡರ್, ಏಜೆಂಟ್ ಖರೀದಿ ಒಪ್ಪಂದ'

ನವದೆಹಲಿ: 'ಕರ್ನಾಟಕದಲ್ಲಿ ಈಗಾಗಲೇ ಮಾದರಿ ಬಿಲ್ಡರ್ ಮತ್ತು ಏಜೆಂಟ್ ಖರೀದಿ ಒಪ್ಪಂದವನ್ನು ಅಂಗೀಕರಿಸಲಾಗಿದೆ' ಎಂದು ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಒಪ್ಪಂದ ನಿಯಮಗಳ ಬಗ್ಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದೆ.

ರೆರಾ ಅನ್ವಯ ನೀಡಲಾದ ಆದೇಶವನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲು ಜಿಲ್ಲಾಧಿಕಾರಿಗಳಿಗೆ ಆದೇಶಿಸಿ 2021ರ ಅಕ್ಟೋಬರ್ 30, ಮತ್ತು



2021ರ ನವೆಂಬರ್ 12 ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ತಿಳಿಸಿದೆ.

ಅಶ್ವಿನಿ ಕುಮಾರ್ ಉಪಾಧ್ಯಾಯ ಎಂಬವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ನೀಡಿದ್ದ ನೋಟಿಸ್‌ಗೆ ಪ್ರತಿಕ್ರಿಯಿಸಿರುವ ಕರ್ನಾಟಕ, ವಸ್ತುಸ್ಥಿತಿಗೆ ವಿರುದ್ಧವಾಗಿರುವ ಕಾರಣ ಈ ಅರ್ಜಿಯನ್ನು ವಜಾಮಾಡಬೇಕು ಎಂದು ತಿಳಿಸಿದೆ.

ಬೃಹತ್ ಗುರಿ ಬೆನ್ನಟ್ಟಿರುವ ಕಿವೀಸ್‌ಗೆ ಸರಣಿ ಸೋಲಿನ ಭೀತಿ; ವಿರಾಟ್ ಪಡೆ ಗೆಲುವಿಗೆ ಬೇಕು ಇನ್ನೈದು ವಿಕೆಟ್

# ಅಶ್ವಿನ್ ಕೈಚಳಕ; ಜಯದ ಸನಿಹ ಭಾರತ



ಆರ್. ಅಶ್ವಿನ್

ಪ್ರಜಾವಾಣಿ ವಾರ್ತೆ

**ಮುಂಬೈ:** ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ನ್ಯೂಜಿಲೆಂಡ್ ತಂಡದ ಗಾಯದ ಮೇಲೆ ಬರೆ ಎಳೆದರು.

ಇಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್‌ನಲ್ಲಿ ಗೆಲುವಿಗಾಗಿ 540 ರನ್‌ಗಳ ಬೃಹತ್ ಗುರಿ ಬೆನ್ನತ್ತಿರುವ ಪ್ರವಾಸಿ ಬಳಗವು ಅಶ್ವಿನ್ (27ಕ್ಕೆ3) ಸ್ಪಿನ್ ದಾಳಿಯಿಂದಾಗಿ 140 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು. ಪಂದ್ಯದಲ್ಲಿ ಇನ್ನೂ ಎರಡು ದಿನದಾಟ ಬಾಕಿಯಿದ್ದು, ಕಿವೀಸ್ ತಂಡವು ಗೆಲ್ಲಬೇಕಾದರೆ 400 ರನ್‌ಗಳನ್ನು ಗಳಿಸಬೇಕಿದೆ. ಇದು ಕಠಿಣ ಸವಾಲಾಗಲಿದೆ. ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುತ್ತಿರುವ ಪಿಚ್‌ನಲ್ಲಿ ಬ್ಯಾಟಿಂಗ್ ಮಾಡುವುದು ಸುಲಭವಲ್ಲ. ಆದ್ದರಿಂದ ಆತಿಥೇಯರಿಗೇ ಜಯದ ಅವಕಾಶ ಹೆಚ್ಚಿದೆ.

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 325 ರನ್‌ಗಳಿಸಿತ್ತು.ಅದೇಇನಿಂಗ್ಸ್‌ನಲ್ಲಿ ನ್ಯೂಜಿಲೆಂಡ್‌ನ ಸ್ಪಿನ್ನರ್ ಎಜಾಜ್ ಪಟೇಲ್ ಹತ್ತು ವಿಕೆಟ್ ಗಳಿಸಿದ ಐತಿಹಾಸಿಕ ಸಾಧನೆ ಮಾಡಿದ್ದರು. ಆದರೆ ಕಿವೀಸ್ ಬ್ಯಾಟರ್‌ಗಳ ಕಳಪೆ ಆಟದಿಂದಾಗಿ ಪಟೇಲ್ ಸಾಧನೆ ಕಳೆಗುಂದಿತು. ಕೇವಲ 62 ರನ್ ಗಳಿಸಿದ್ದ ತಂಡವು ಆಲೌಟ್ ಆಗಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಭಾರತ ತಂಡವು ಮಯಂಕ್ ಅಗರವಾಲ್ (62; 108ಎ) ಮತ್ತು ಪೂಜಾರ (47) ನೀಡಿದ ಉತ್ತಮ ಆರಂಭದಿಂದಾಗಿ 70 ಓವರ್‌ಗಳಲ್ಲಿ 7ವಿಕೆಟ್‌ಗಳಿಗೆ 276 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ನ್ಯೂಜಿಲೆಂಡ್ ತಂಡಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ಅಶ್ವಿನ್ ಕೈಚಳಕದಿಂದಾಗಿ ಕೇವಲ 55 ರನ್‌ಗಳಿಗೆ ಮೂರು ವಿಕೆಟ್‌ಗಳು ಪತನವಾದವು. ಆದರೆ ಡೆರಿಲ್ ಮಿಚೆಲ್ (60; 92ಎಸೆತ) ಮತ್ತು ಹೆನ್ರಿ ನಿಕೋಲ್ಸ್ (ಬ್ಯಾಟಿಂಗ್ 36) ಅವರು ದಿಟ್ಟ ಹೋರಾಟ ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿದರು. 35ನೇ ಓವರ್‌ನಲ್ಲಿ ಅಕ್ಷರ್ ಪಟೇಲ್ ಡೆರಿಲ್ ವಿಕೆಟ್ ಗಳಿಸಿ, ಜೊತೆಯಾಟವನ್ನು ಮುರಿದರು. ಟಾಮ್ ಬ್ಲಂಡೆಲ್ ಖಾತೆ ತೆರೆಯುವ ಮುನ್ನವೇ ರನ್‌ಔಟ್ ಆದರು. ಇದರಿಂದಾಗಿ ಕಿವೀಸ್ ಗೆಲುವಿನ ಹಾದಿ ಮತ್ತಷ್ಟು ಕಠಿಣವಾದಂತಾಗಿದೆ.

**ಮಯಂಕ್ ಅರ್ಧಶತಕ:** ಪ್ರಥಮ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ಮಯಂಕ್ ಎರಡನೇ ಇನಿಂಗ್ಸ್‌ನಲ್ಲಿಯೂ ಅರ್ಧಶತಕ ಗಳಿಸಿದರು. ಕಲಾತ್ಮಕ ಹೊಡೆತಗಳ ಮೂಲಕ ಎದುರಾಳಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದರು. ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಪೂಜಾರ ಅವರೊಂದಿಗೆ 107 ರನ್‌ಗಳನ್ನು ಸೇರಿಸಿದರು.

ಕಳೆದ ಹಲವು ಪಂದ್ಯಗಳಿಂದ ಲಯ ಕಂಡುಕೊಳ್ಳಲು ಪರದಾಡುತ್ತಿರುವ ಪೂಜಾರ ಮೂರು ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಶುಭಮನ್ ಗಿಲ್ (47 ರನ್) ಕೂಡ ಅರ್ಧಶತಕದಂಚಿನಲ್ಲಿ ಎಡವಿದರು.

ಏಕಾಗ್ರತೆ ಗಳಿಸಿಕೊಳ್ಳಲು ಹರಸಾಹಸ ಮಾಡಿದ ಕೊಹ್ಲಿ (36; 84ಎ) ರಚಿನ್ ರವೀಂದ್ರ ಅವರ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಆದರೆ, ಆಲ್‌ರೌಂಡರ್ ಅಕ್ಷರ್ ಪಟೇಲ್ ನಿರಾಶೆಗೊಳಿಸಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದ ಅವರು ಭಾನುವಾರ ಟಿ20 ಮಾದರಿಯಲ್ಲಿ ಬ್ಯಾಟ್ ಬೀಸಿದರು. 26 ಎಸೆತಗಳಲ್ಲಿ ಅಜೇಯ 41 ರನ್ ಗಳಿಸಿದರು. ಮೂರು ಬೌಂಡರಿ, ನಾಲ್ಕು ಸಿಕ್ಸರ್ ಸಿಡಿಸಿದರು. ತಂಡವು ಚಹಾ ವಿರಾಮಕ್ಕೂ ಸ್ವಲ್ಪ ಮುನ್ನ ಭಾರತವು ಡಿಕ್ಲೇರ್ ಮಾಡಿಕೊಂಡಿತು.



ಮಯಂಕ್ ಅಗರವಾಲ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

### ಮುಖ್ಯಾಂಶಗಳು

- ಅರ್ಧಶತಕ ಗಳಿಸಿದ ಮಯಂಕ್
- ಪಂದ್ಯದಲ್ಲಿ ಎರಡು ದಿನಗಳ ಆಟ ಬಾಕಿ
- ಮಿಂಚಿನ ಬ್ಯಾಟಿಂಗ್ ಮಾಡಿದ ಅಕ್ಷರ್ ಪಟೇಲ್

**ನನ್ನ ಬ್ಯಾಟಿಂಗ್‌ನಿಂದ ತಂಡಕ್ಕೆ ನೆರವಾಗುತ್ತಿದೆ. ರವೀಂದ್ರ ಜಡೇಜ ಮತ್ತು ಆರ್ ಅಶ್ವಿನ್ ಕೂಡ ಆಲ್‌ರೌಂಡರ್‌ಗಳಾಗಿದ್ದಾರೆ. ಅವರು ಇರುವುದರಿಂದಾಗಿ ಮೇಲಿನ ಕ್ರಮಾಂಕದ ಬ್ಯಾಟರ್‌ಗಳಿಗೆ ಒತ್ತಡ ಕಡಿಮೆ ಯಾಗುತ್ತದೆ. ಅದೇ ನಿಟ್ಟಿನಲ್ಲಿ ನನ್ನ ಪ್ರಯತ್ನವೂ ಇದೆ**

**ಅಕ್ಷರ್ ಪಟೇಲ್,** ಭಾರತ ತಂಡದ ಆಟಗಾರ

**ಮೊದಲ ಇನಿಂಗ್ಸ್‌ನಲ್ಲಿ ಅಲ್ಪಮೊತ್ತಕ್ಕೆ ಆಲೌಟ್ ಆದ ತಂಡವು ನಂತರದಲ್ಲಿ ಪುಟಿದೇಳುವುದು ಬಹಳ ಕಷ್ಟ. ಎದುರಾಳಿ ತಂಡದ ಆತ್ಮವಿಶ್ವಾಸವನ್ನು ಮೀರಿ ನಿಲ್ಲುವುದು ಕಠಿಣ ಸವಾಲು**

**ರಚಿನ್ ರವೀಂದ್ರ,** ನ್ಯೂಜಿಲೆಂಡ್ ಆಟಗಾರ

### ಸ್ಪಿನ್ನರ್‌ಗಳ ಸ್ವರ್ಗವಾದ ವಾಂಖೆಡೆ

ವಾಂಖೆಡೆ ಅಂಗಣವು ಈ ಪಂದ್ಯದಲ್ಲಿ ಸ್ಪಿನ್ನರ್‌ಗಳ ಪಾಲಿಗೆ ಸ್ವರ್ಗವಾಗಿ ಪರಿಣಮಿಸಿದೆ. ಮೂರು ದಿನಗಳ ಆಟದಲ್ಲಿ ಪತನವಾಗಿರುವ ಒಟ್ಟು 32 ವಿಕೆಟ್‌ಗಳ ಪೈಕಿ 28 ಸ್ಪಿನ್ನರ್‌ಗಳ ಪಾಲಾಗಿವೆ.

ಮಧ್ಯಮವೇಗಿ ಮೊಹಮ್ಮದ್ ಸಿರಾಜ್ ಅವರು ಮೊದಲ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಗಳಿಸಿದ್ದಾರೆ. ಇದೇ ಇನಿಂಗ್ಸ್ ಹತ್ತು ವಿಕೆಟ್ ಸಾಧನೆ ಮಾಡಿದ್ದ ಪಟೇಲ್, ಎರಡನೇ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಗಳಿಸಿದರು.

ಪಿಚ್‌ನಲ್ಲಿ ನಿಧಾನವಾಗಿ ಸಾಗಿ ತಿರುವು ಪಡೆಯುತ್ತಿರುವ ಎಸೆತಗಳನ್ನು ಅಪಾರ ತಾಳ್ಮೆ ಮತ್ತು ಏಕಾಗ್ರತೆಯಿಂದ ಎದುರಿಸಬೇಕಾದ ಸವಾಲು ಬ್ಯಾಟರ್‌ಗಳ ಮುಂದಿದೆ.

### ಸ್ಕೋರ್ ಕಾರ್ಡ್

**ಭಾರತ ಮೊದಲ ಇನಿಂಗ್ಸ್ 325 (109.5 ಓವರ್‌ಗಳಲ್ಲಿ)**

**ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 62 (28.1 ಓವರ್)**

**ಭಾರತ ಎರಡನೇ ಇನಿಂಗ್ಸ್ 7ಕ್ಕೆ 276 ಡಿಕ್ಲೇರ್ಡ್ (70 ಓವರ್)**

**(ಶನಿವಾರ 21 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 69)**

ಮಯಂಕ್ ಸಿ ಯಂಗ್ ಬಿ ಎಜಾಜ್ 62 (108ಎ, 4X9, 6X1), ಪೂಜಾರ ಸಿ ಟೇಲರ್ ಬಿ ಎಜಾಜ್ 47 (97ಎ, 4X6, 6X1), ಗಿಲ್ ಸಿ ಲಥಾಮ್ ಬಿ ರವೀಂದ್ರ 47 (75ಎ, 4X6, 6X1), ಕೊಹ್ಲಿ ಬಿ ರವೀಂದ್ರ 36 (84ಎ, 4X1, 6X1), ಶ್ರೇಯಸ್ ಸ್ಟಂಪ್ಡ್ ಬ್ಲಂಡೆಲ್ ಬಿ ಎಜಾಜ್ 14 (8ಎ, 6X2), ಸಹಾ ಸಿ ಜೆಮಿಸನ್ ಬಿ ರವೀಂದ್ರ 13 (12ಎ, 4X2), ಅಕ್ಷರ್ ಔಟಾಗದೆ 41 (26ಎ, 4X3, 6X4), ಜಯಂತ್ ಸಿ ಮತ್ತು ಬಿ ಎಜಾಜ್ 6 (11ಎ, 6X1)

**ಇತರೆ** (ಬೈ 6, ಲೆಗ್‌ಬೈ 3, ನೋಬಾಲ್ 1) 10

**ವಿಕೆಟ್ ಪತನ:** 1-107 (ಮಯಂಕ್ ಅಗರವಾಲ್, 31.2), 2-115 (ಚೇತೇಶ್ವರ ಪೂಜಾರ, 35.5), 3-197 (ಶುಭಮನ್ ಗಿಲ್, 59.4), 4-211 (ಶ್ರೇಯಸ್ ಅಯ್ಯರ್, 61.2), 5-217 (ವಿರಾಟ್ ಕೊಹ್ಲಿ, 62.1), 6-238 (ವೃದ್ಧಿಮಾನ್ ಸಹಾ, 66.2), 7-276 (ಜಯಂತ್ ಯಾದವ್, 69.6)

**ಬೌಲಿಂಗ್:** ಟಿಮ್ ಸೌಥಿ 13-1-31-0, ಎಜಾಜ್ ಪಟೇಲ್ 26-3-106-4, ಕೈಲ್ ಜೆಮಿಸನ್ 8-2-15-0, ವಿಲಿಯಮ್ ಸೋಮರ್‌ವಿಲ್ 10-0-59-0, ರಚಿನ್ ರವೀಂದ್ರ 13-2-56-3

**ನ್ಯೂಜಿಲೆಂಡ್ ಎರಡನೇ ಇನಿಂಗ್ಸ್ 5ಕ್ಕೆ 140 (45 ಓವರ್)**

ಲಥಾಮ್ ಎಲ್‌ಬಿಡಬ್ಲ್ಯು ಅಶ್ವಿನ್ 6 (15ಎ, 4X1), ಯಂಗ್ ಸಿ ಸೂರ್ಯಕುಮಾರ್ (ಬದಲಿ) ಬಿ ಅಶ್ವಿನ್ 20 (41ಎ, 4X4), ಡೆರಿಲ್ ಸಿ ಜಯಂತ್ ಬಿ ಅಕ್ಷರ್ 60 (92ಎ, 4X7, 6X2), ಟೇಲರ್ ಸಿ ಪೂಜಾರ ಬಿ ಅಶ್ವಿನ್ 6 (8ಎ, 4X1), ನಿಕೋಲ್ಸ್ ಬ್ಯಾಟಿಂಗ್ 36 (86ಎ, 4X7), ಬ್ಲಂಡೆಲ್ ರನೌಟ್ ಭರತ್ (ಬದಲಿ)/ಸಹಾ 0 (6ಎ), ರವೀಂದ್ರ ಬ್ಯಾಟಿಂಗ್ 2 (23ಎ)

**ಇತರೆ** (ಬೈ 8, ಲೆಗ್‌ಬೈ 1, ನೋಬಾಲ್ 1) 10

**ವಿಕೆಟ್ ಪತನ:** 1-13 (ಟಾಮ್ ಲಥಾಮ್, 3.6), 2-45 (ವಿಲ್ ಯಂಗ್, 14.3), 3-55 (ರಾಸ್ ಟೇಲರ್, 16.1), 4-128 (ಡೆರಿಲ್ ಮಿಚೆಲ್, 34.3 ), 5-129 (ಟಾಮ್ ಬ್ಲಂಡೆಲ್, 36.5)

**ಬೌಲಿಂಗ್:** ಮೊಹಮ್ಮದ್ ಸಿರಾಜ್ 5-2-13-0, ರವಿಚಂದ್ರನ್ ಅಶ್ವಿನ್ 17-7-23-3, ಅಕ್ಷರ್ ಪಟೇಲ್ 10-2-42-1, ಜಯಂತ್ ಯಾದವ್ 8-2-30-0, ಉಮೇಶ್ ಯಾದವ್ 5-1-19-0


ಮುಂಬೈನಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೂರನೇ ದಿನವಾದ ಭಾನುವಾರ ವಿರಾಟ್ ಕೊಹ್ಲಿ ಅವರು ತಾಂತ್ರಿಕ ದೋಷದಿಂದ ಕಾರ್ಯ ಸ್ಥಗಿತಗೊಂಡಿದ್ದ ಸ್ಪೈಡರ್ ಕ್ಯಾಮ್ ವೀಕ್ಷಿಸುತ್ತಿರುವುದು –ಎಎಫ್‌ಪಿ ಚಿತ್ರ

## ದಕ್ಷಿಣ ಆಫ್ರಿಕಾ ಪ್ರವಾಸ: ಏಕದಿನ ತಂಡದ ನಾಯಕತ್ವ ಯಾರಿಗೆ?

**ಮುಂಬೈ (ಪಿಟಿಐ):** ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಲಿರುವ ಭಾರತ ತಂಡದ ಆಯ್ಕೆಯು ಇದೇ ವಾರ ನಡೆಯಲಿದೆ.

ಈ ಸಂದರ್ಭದಲ್ಲಿ ಏಕದಿನ ಕ್ರಿಕೆಟ್ ತಂಡಕ್ಕೆ ವಿರಾಟ್ ಕೊಹ್ಲಿ ಅವರನ್ನು ನಾಯಕರನ್ನಾಗಿ, ಟೆಸ್ಟ್ ತಂಡದಲ್ಲಿ ಅಜಿಂಕ್ಯ ರಹಾನೆ ಅವರನ್ನು ಉಪನಾಯಕರನ್ನಾಗಿ ಮತ್ತು ವೇಗಿ ಇಶಾಂತ್ ಶರ್ಮಾ ಅವರಿಗೆ ಸ್ಥಾನ ನೀಡುವ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥ ಚೇತನ್ ಶರ್ಮಾ, ಅಬೆ ಕುರುವಿಲಾ ಮತ್ತು ಸುನೀಲ್ ಜೋಶಿ ಅವರು ಮುಂಬೈ ಟೆಸ್ಟ್ ಪಂದ್ಯದಲ್ಲಿ ಆಟಗಾರರ ಪ್ರದರ್ಶನವನ್ನು ವೀಕ್ಷಿಸುತ್ತಿದ್ದಾರೆ. ಈ ಪಂದ್ಯ ಮುಗಿದ ನಂತರ ತಂಡದ ಆಯ್ಕೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಆಫ್ರಿಕಾದಲ್ಲಿ ಭಾರತ ತಂಡವು ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಈಚೆಗಷ್ಟೇ ವಿರಾಟ್ ಟಿ20 ತಂಡದ ನಾಯಕತ್ವ ಬಿಟ್ಟುಕೊಟ್ಟಿದ್ದರು. ರೋಹಿತ್ ಶರ್ಮಾ ನಾಯಕರಾಗಿ ನೇಮಕವಾಗಿದ್ದರು. ಆದ್ದರಿಂದ ಶ್ವೇತ ಚೆಂಡಿನ ಮಾದರಿಗಳ ತಂಡಕ್ಕೆ ಒಬ್ಬರನ್ನೇ ನಾಯಕರನ್ನಾಗಿ ನೇಮಕ ಮಾಡುವ ಯೋಚನೆ ಬಿಸಿಸಿಐಗೆ ಇದೆ. ಆದ್ದರಿಂದ ವಿರಾಟ್ ಅವರನ್ನು ಟೆಸ್ಟ್ ತಂಡಕ್ಕೆ ಮಾತ್ರ ನಾಯಕರನ್ನಾಗಿ ಉಳಿಸಿಕೊಳ್ಳುವ ಚಿಂತನೆ ನಡೆದಿದೆ ಎನ್ನಲಾಗಿದೆ.ಕಳೆದ ಹಲವು ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರಿಗೆ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಅವಕಾಶ ಸಿಗುವ ಸಾಧ್ಯತೆ ಇದೆ. ಆದರೆ, ರಹಾನೆ ಅವರನ್ನು ಉಪನಾಯಕ ಸ್ಥಾನದಿಂದ ಕೆಳಗಿಳಿಸಿ, ರೋಹಿತ್‌ಗೆ ಹೊಣೆ ನೀಡುವ ಕುರಿತು ಮಾತುಗಳು ಕೇಳಿಬಂದಿವೆ.

100ಕ್ಕೂ ಹೆಚ್ಚು ಟೆಸ್ಟ್‌ಗಳನ್ನು ಆಡಿರುವ ಅನುಭವಿ ಇಶಾಂತ್ ಶರ್ಮಾ ಕೂಡ ಕೆಲವು ಪಂದ್ಯಗಳಿಂದ ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಆದ್ದರಿಂದ ಅವರ ಆಯ್ಕೆಯೂ ಅನುಮಾನವಾಗಿದೆ. ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ, ಬ್ಯಾಟರ್ ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್ ಸ್ಥಾನ ಉಳಿಸಿಕೊಳ್ಳುವುದು ಬಹುತೇಕ ಖಚಿತವಾಗಿದೆ.

### ವಿರಾಟ್, ದ್ರಾವಿಡ್ ಬಗ್ಗೆ ಮೆಚ್ಚುಗೆ

ಟೆಸ್ಟ್‌ನ ಒಂದೇ ಇನಿಂಗ್ಸ್‌ನಲ್ಲಿ ಹತ್ತು ವಿಕೆಟ್ ಗಳಿಸಿದ ಐತಿಹಾಸಿಕ ಸಾಧನೆ ಮಾಡಿದ ಸ್ಪಿನ್ನರ್ ಎಜಾಜ್ ಪಟೇಲ್ ಅವರನ್ನು ನ್ಯೂಜಿಲೆಂಡ್ ತಂಡದ ಡ್ರೆಸ್ಸಿಂಗ್ ಕೋಣೆಗೆ ಹೋಗಿ ಅಭಿನಂದಿಸಿದ ಭಾರತದ ಆಟಗಾರರ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಶನಿವಾರ ದಿನದಾಟದ ಮುಕ್ತಾಯವಾದ ನಂತರ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ, ಮುಖ್ಯ ಕೋಚ್ ರಾಹುಲ್ ದ್ರಾವಿಡ್, ಮಧ್ಯಮವೇಗಿ ಮೊಹಮ್ಮದ್ ಸಿರಾಜ್ ಅವರು ಕಿವೀಸ್ ಡ್ರೆಸ್ಸಿಂಗ್ ಕೋಣೆಗೆ ತೆರಳಿದರು. ಪಟೇಲ್ ಅವರನ್ನು ಅಭಿನಂದಿಸಿ ಮರಳಿದರು. ಈ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಅಭಿಮಾನಿಗಳಿಂದ ಮೆಚ್ಚುಗೆ ಗಳಿಸುತ್ತಿದೆ. ಕೊಹ್ಲಿ, ದ್ರಾವಿಡ್ ಮತ್ತು ಸಿರಾಜ್ ಕ್ರೀಡಾಮನೋಭಾವವನ್ನು ಶ್ಲಾಘಿಸಿದ್ದಾರೆ.

# ಪ್ರಾಂಜಲ ಯಡ್ಲಪಲ್ಲಿಗೆ ಪ್ರಶಸ್ತಿ ಗರಿ

## ಐಟಿಎಫ್ ವಿಶ್ವ ಮಹಿಳಾ ಟೆನಿಸ್ ಟೂರ್: ಸೌಜನ್ಯಗೆ ಒಲಿಯದ ಜಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೈದರಾಬಾದ್‌ನ ಪ್ರಾಂಜಲ ಯಡ್ಲಪಲ್ಲಿ ಅವರು ಐಟಿಎಫ್ ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ಭಾನುವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಮಹಿಳಾ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಅವರು ತಮ್ಮದೇ ರಾಜ್ಯದ ಸೌಜನ್ಯ ಬಾವಿಸೆಟ್ಟಿ ಸವಾಲು ಮೀರಿದರು. ಪ್ರಾಂಜಲ 7-5, 6-2ರಿಂದ ಜಯಿಸಿ ವೃತ್ತಿಜೀವನದ ನಾಲ್ಕನೇ ಐಟಿಎಫ್ ಕಿರೀಟ ಧರಿಸಿದರು.

ಮೊದಲ ಸೆಟ್‌ನಲ್ಲಿ 3-5ರಿಂದ ಹಿನ್ನಡೆ ಅನುಭವಿಸಿದ್ದ ಪ್ರಾಂಜಲ ಬಳಿಕ ಪುಟಿದೆದ್ದು 7-5ರಿಂದ ಸೆಟ್ ತಮ್ಮದಾಗಿಸಿಕೊಂಡರು. ಅದೇ ಲಯದೊಂದಿಗೆ ಮುಂದುವರಿದು ಎರಡನೇ ಸೆಟ್ ಗೆದ್ದು ಪ್ರಶಸ್ತಿ ಒಲಿಸಿಕೊಂಡರು.

ಭುಜದ ನೋವಿನಿಂದ ಬಳಲಿದ್ದ 22 ವರ್ಷದ ಪ್ರಾಂಜಲ, ಸುಮಾರು ಎರಡು ವರ್ಷಗಳ ಕಾಲ ಟೆನಿಸ್‌ನಿಂದ ದೂರ ಉಳಿದಿದ್ದರು. ಇಲ್ಲಿ ಪ್ರಶಸ್ತಿಯೊಂದಿಗೆ ಅವರು ₹ 1 ಲಕ್ಷ 70 ಸಾವಿರ ನಗದು ತಮ್ಮದಾಗಿಸಿಕೊಂಡರು. ಅಲ್ಲದೆ 10 ವಿಶ್ವ ರ‍್ಯಾಂಕಿಂಗ್ ಪಾಯಿಂಟ್ಸ್ ಕೂಡ ಗಳಿಸಿದರು.

ಸೌಜನ್ಯ ಆರು ಪಾಯಿಂಟ್ಸ್ ಮತ್ತು ₹ 1 ಲಕ್ಷ 10 ಸಾವಿರ ಜೇಬಿಗಿಳಿಸಿದರು.

ತೀವ್ರ ಪೈಪೋಟಿಯಿಂದ ಕೂಡಿದ್ದ ಫೈನಲ್‌ನಲ್ಲಿ, ಸೌಜನ್ಯ ಆಕ್ರಮಣದ ಆಟಕ್ಕೆ ಹೆಚ್ಚು ಮಹತ್ವ ನೀಡಿದರು. ಆದರೆ ಅದೇ ಅವರಿಗೆ ಮುಳುವಾಯಿತು. ಶಾಂತಚಿತ್ತ ಆಟದ ಮೂಲಕ ಪ್ರಾಂಜಲ ಪಾಯಿಂಟ್ಸ್ ಹೆಚ್ಚಿಸಿಕೊಂಡರು. ಬ್ಯಾಕ್‌ಹ್ಯಾಂಡ್ ಹೊಡೆತಗಳಿಗೆ ಒತ್ತು ನೀಡಿದರು.



ಪ್ರಶಸ್ತಿಗೆ ಮುತ್ತಿಟ್ಟ ಪ್ರಾಂಜಲ ಯಡ್ಲಪಲ್ಲಿ– ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

**ಮತ್ತೆ ಆಡಲು ಸಾಧ್ಯವಾಗಿರುವುದಕ್ಕೆ ಸಂತಸವಾಗುತ್ತಿದೆ. ಪ್ರಶಸ್ತಿ ಗೆಲುವಿನೊಂದಿಗೆ ಟೆನಿಸ್‌ಗೆ ಮರಳಿದ್ದು ಖುಷಿ ಹೆಚ್ಚಿಸಿದೆ**

**ಪ್ರಾಂಜಲ ಯಡ್ಲಪಲ್ಲಿ**
ಪ್ರಶಸ್ತಿ ವಿಜೇತ ಆಟಗಾರ್ತಿ

**ನಾನು ಈ ಯಶಸ್ಸನ್ನು ಇತ್ತೀಚೆಗೆ ಕೋವಿಡ್‌ನಿಂದ ಸಾವನ್ನಪ್ಪಿದ ನನ್ನ ತಾತ ಹಾಗೂ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಅರ್ಪಿಸುತ್ತೇನೆ**

**ಸೌಜನ್ಯ ಬಾವಿಸೆಟ್ಟಿ,**
ರನ್ನರ್ಸ್‌ಅಪ್ ಆಟಗಾರ್ತಿ



ಪ್ರಶಸ್ತಿ ಗೆದ್ದ ಅರ್ಜೆಂಟೀನಾ ಆಟಗಾರರ ಸಂಭ್ರಮ– ಪಿಟಿಐ ಚಿತ್ರ

## ಜೂನಿಯರ್ ವಿಶ್ವಕಪ್ ಹಾಕಿ: ಫ್ರಾನ್ಸ್‌ಗೆ ಕಂಚಿನ ಪದಕ

# ಅರ್ಜೆಂಟೀನಾ ಚಾಂಪಿಯನ್

**ಭುವನೇಶ್ವರ್ (ಪಿಟಿಐ):** ಲಾವುಟಾರೊ ಡೊಮಿನಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಅರ್ಜೆಂಟೀನಾ ತಂಡವು ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿತು.

ಭಾನುವಾರ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅರ್ಜೆಂಟೀನಾ 4-2ರಿಂದ ಆರು ಬಾರಿಯ ಚಾಂಪಿಯನ್ ಜರ್ಮನಿಗೆ ಆಘಾತ ನೀಡಿತು. ಡೊಮಿನಿ 10, 25 ಮತ್ತು 50ನೇ ನಿಮಿಷಗಳಲ್ಲಿ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಿನಲ್ಲಿ ಪರಿವರ್ತಿಸಿದರು. ವಿಜೇತ ತಂಡದ ಫ್ರಾಂಕೊ ಅಗಸ್ಟಿನಿ ಪಂದ್ಯದ ಕೊನೆಯ ನಿಮಿಷದಲ್ಲಿ ಫೀಲ್ಡ್ ಗೋಲು ಗಳಿಸಿ ಅರ್ಜೆಂಟೀನಾ ಜಯ ಖಚಿತಪಡಿಸಿದರು.

ಜರ್ಮನಿ ಪರ ಜೂಲಿಯಸ್ ಹೇನರ್ (36ನೇ ನಿಮಿಷ) ಮತ್ತು ಮ್ಯಾಸ್ ಪಿಫಾಂಡ್ (47ನೇ ನಿಮಿಷ) ಕಾಲ್ಚಳಕ ತೋರಿದರು.

2005ರಲ್ಲಿ ರೊಟರ್‌ಡ್ಯಾಮ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಪ್ರಶಸ್ತಿ ಜಯಿಸಿತ್ತು. ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು 2-1ರಿಂದ ಸೋಲಿಸಿತ್ತು.

**ಫ್ರಾನ್ಸ್‌ಗೆ ಕಂಚು;ಭಾರತಕ್ಕೆ ನಿರಾಸೆ:** ಹೋದ ಸಲದ ಚಾಂಪಿಯನ್ ಭಾರತ ತಂಡಕ್ಕೆ ಈ ಬಾರಿ ಕಂಚಿನ ಪದಕವೂ ಒಲಿಯಲಿಲ್ಲ.ಭಾನುವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 1-3ರಿಂದ ಫ್ರಾನ್ಸ್ ಎದುರು ಸೋತಿತು. ಇದರಿಂದಾಗಿ ಆತಿಥೇಯ ಬಳಗವು ನಾಲ್ಕನೇ ಸ್ಥಾನ ಪಡೆಯಿತು. ಗುಂಪು ಹಂತದ ಪಂದ್ಯದಲ್ಲಿಯೂ ಭಾರತ ತಂಡವು ಫ್ರಾನ್ಸ್ ಎದುರು ಪರಾಭವಗೊಂಡಿತ್ತು.

ಕಂಚಿನ ಪದಕದ ಸುತ್ತಿನ ಪಂದ್ಯದಲ್ಲಿ ನಾಯಕ ತಿಮೊತಿ ಕ್ಲೆಮೆಂಟ್ ಹ್ಯಾಟ್ರಿಕ್ ಸಾಧನೆಯಿಂದಾಗಿ ಫ್ರಾನ್ಸ್ ಜಯಗಳಿಸಿತು.

ಕ್ಲೆಮೆಂಟ್ ಮೂರು ಪೆನಾಲ್ಟಿ ಕಾರ್ನರ್‌ಗಳನ್ನು (26ನಿ, 34ನಿ ಮತ್ತು 47ನಿ) ಗೋಲಿನಲ್ಲಿ ಪರಿವರ್ತಿಸಿದರು. 42ನೇ ನಿಮಿಷದಲ್ಲಿ ಸುದೀಪ್ ಚಿರ್ಮಾಕೊ ಭಾರತಕ್ಕೆ ಒಂದು ಗೋಲಿನ ಕಾಣಿಕೆ ನೀಡಿದರು. ಇದರಿಂದಾಗಿ ಸೋಲಿನ ಅಂತರ ಕಡಿಮೆಯಾಯಿತು.

## ರಾಷ್ಟ್ರೀಯ ರೇಸಿಂಗ್: ಅನೀಶ್ ಮಿಂಚು

**ಕೊಯಮತ್ತೂರು (ಪಿಟಿಐ):** ಹುಬ್ಬಳ್ಳಿಯ ಅನೀಶ್ ಡಿ. ಶೆಟ್ಟಿ, ಬೆಂಗಳೂರಿನ ರುಹಾನ್ ಆಳ್ವ ಹಾಗೂ ಆರ್ಯ ಸಿಂಗ್ ಅವರು ಜೆಕೆ ಟೈರ್ ಎಫ್‌ಎಫ್‌ಎಸ್‌ಸಿಐ ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಿಂಚಿದರು.

ಆರ್ಯ ಹಾಗೂ ರುಹಾನ್ ಕ್ರಮವಾಗಿ ಫಾರ್ಮುಲಾ ಎಲ್‌ಜಿಬಿ ಮತ್ತು ನೋವಿಸ್ ಕಪ್ ವಿಭಾಗಗಳಲ್ಲಿ ಜಯ ಸಾಧಿಸಿದರು. ಜೆಕೆ ಟೈರ್ ರಾಯಲ್ ಎನ್‌ಫೀಲ್ಡ್ ಕಾಂಟಿನೆಂಟಲ್ ಜಿಟಿ ಕಪ್ ಎರಡು ರೇಸ್‌ಗಳಲ್ಲಿ ಅನೀಶ್ ಗೆಲುವು ಸಾಧಿಸಿದರು.

ಎರಡನೇ ರೇಸ್‌ನಲ್ಲಿ ರುಹಾನ್ ಆಳ್ವ (ಎಂ. ಸ್ಪೋರ್ಟ್) 16 ನಿಮಿಷ 12.19 ಸೆಕೆಂಡುಗಳಲ್ಲಿ ಗುರಿ ತಲುಪಿ ಮೊದಲ ಸ್ಥಾನ ಗಳಿಸಿದರು. ಮೂರನೇ ರೇಸ್‌ನಲ್ಲಿ 14 ನಿಮಿಷ 36.9 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಜೆಕೆ ಟೈರ್ ರಾಯಲ್ ಎನ್‌ಫೀಲ್ಡ್ ಕಾಂಟಿನೆಂಟಲ್ ಜಿಟಿ ಕಪ್ ಮೊದಲನೇ ರೇಸ್‌ನಲ್ಲಿ ಅನೀಶ್ 13 ನಿಮಿಷ 30.38 ಸೆಕೆಂಡು ಮತ್ತು ಎರಡನೇ ರೇಸ್‌ಅನ್ನು 13 ನಿ. 51.72 ಸೆಕೆಂಡುಗಳಲ್ಲಿ ಕೊನೆಗೊಳಿಸಿದರು.


ಅನೀಶ್ ಡಿ. ಶೆಟ್ಟಿ,

'ಥ್ರೋಡೌನ್' ಪರಿಣತನ ಮೆಚ್ಚಿಕೊಂಡಿದ್ದ ಕೋಚ್ ರಾಹುಲ್ ದ್ರಾವಿಡ್

# ಮುಂಬೈ ತಂಡದಲ್ಲಿ ಹುಬ್ಬಳ್ಳಿಯ ದರ್ಶನ್

● ಪ್ರಮೋದ

**ಹುಬ್ಬಳ್ಳಿ:** ಒಂಬತ್ತು ವರ್ಷಗಳಿಂದ ಇಲ್ಲಿನ ಹುಬ್ಬಳ್ಳಿ ಕ್ರಿಕೆಟ್ ಅಕಾಡೆಮಿಯಲ್ಲಿ ಆಫ್ ಸ್ಪಿನ್ನರ್ ಆಗಿದ್ದ ದರ್ಶನ್ ನೆಗಳೂರ ಈಗ ದೇಶಿ ಟೂರ್ನಿಗಳ ಬಲಿಷ್ಠ ತಂಡ ಮುಂಬೈನಲ್ಲಿ 'ಥ್ರೋಡೌನ್' ಪರಿಣತರಾಗಿದ್ದಾರೆ.

12 ವರ್ಷದವರಿದ್ದಾಗ ಸ್ಪರ್ಧಾತ್ಮಕ ಕ್ರಿಕೆಟ್ ಆರಂಭಿಸಿದ್ದ ದರ್ಶನ್, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಧಾರವಾಡ ವಲಯದ ವಿವಿಧ ಟೂರ್ನಿಗಳಲ್ಲಿ ಆಡಿದ್ದಾರೆ. ಇವರಿದ್ದ ಎಚ್‌ಸಿಎ ತಂಡ 2019ರಲ್ಲಿ ಎರಡನೇ ಡಿವಿಷನ್‌ನಲ್ಲಿ ಚಾಂಪಿಯನ್ ಆಗಿತ್ತು.

ದರ್ಶನ್‌ಗೆ ಅದೊಮ್ಮೆ ಆಕಸ್ಮಿಕವಾಗಿ ನೆಟ್ಸ್‌ನಲ್ಲಿ ಭಾರತ 'ಎ' ತಂಡದ ಆಟಗಾರರಿಗೆ ತಮ್ಮ ಸಾಮರ್ಥ್ಯ ತೋರಿಸುವ ಅವಕಾಶ ಲಭಿಸಿತ್ತು. ಆಗ ಮಾಡಿದ ಪರಿಣಾಮಕಾರಿ ಬೌಲಿಂಗ್ ಮತ್ತು ಥ್ರೋಡೌನ್ (ಸೈಡ್ ಆರ್ಮ್) ರಾಹುಲ್ ದ್ರಾವಿಡ್ ಅವರ ಗಮನ ಸೆಳೆಯಿತು. ದರ್ಶನ್ ವಿವರ ಪಡೆದ ದ್ರಾವಿಡ್, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಗೆ ಮಾಹಿತಿ ನೀಡಿದ್ದರು. ಇದಾದ ಒಂದು ತಿಂಗಳಲ್ಲೇ ದರ್ಶನ್‌ಗೆ 'ಥ್ರೋಡೌನ್' ಪರಿಣತರನ್ನಾಗಿ ನೇಮಿಸಿದ ಕುರಿತು ಎನ್‌ಸಿಎಯಿಂದ ಪತ್ರ ಬಂತು. ಅಲ್ಲಿ ಮೂರು ತಿಂಗಳು ಕೆಲಸ ಮಾಡಿ ಮುಂಬೈ ತಂಡದಲ್ಲಿ ಅವಕಾಶ ಪಡೆದರು.

ಬಳಿಕ ನಡೆದ ಕಾಮನ್‌ವೆಲ್ತ್ ತಂಡಗಳ ಕ್ಯಾಂಪ್‌ನಲ್ಲಿ ವಿವಿಧ ದೇಶಗಳ ಆಟಗಾರರು ಪಾಲ್ಗೊಂಡಿದ್ದಾಗ ದರ್ಶನ್ ತಮ್ಮ ಸಾಮರ್ಥ್ಯ ತೋರಿದರು. ಇದರಿಂದ 12 ದಿನಗಳ ಕಾಲ ನಡೆದ ಭಾರತ ತಂಡದ ಶಿಬಿರದಲ್ಲಿ ರೋಹಿತ್ ಶರ್ಮಾ, ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಚೇತೇಶ್ವರ ಪೂಜಾರ, ಅಜಿಂಕ್ಯ ರಹಾನೆ, ರವೀಂದ್ರ ಜಡೇಜ, ವೃದ್ಧಿಮಾನ್ ಸಹಾ ಹೀಗೆ ಅನೇಕ ಸ್ಟಾರ್ ಆಟಗಾರರಿಗೆ 'ಥ್ರೋಡೌನ್' ಎಸೆತಗಳನ್ನು ಹಾಕುವ ಅವಕಾಶ ಲಭಿಸಿತು.

ನೆಟ್ಸ್‌ನಲ್ಲಿ 'ಥ್ರೋಡೌನ್' ಎದುರಿಸುವುದರಿಂದ ಬ್ಯಾಟ್ಸ್‌ಮನ್‌ಗಳಿಗೆ ಪಂದ್ಯದಲ್ಲಿ ಉತ್ತಮ ಪ್ರದರ್ಶನ ತೋರಲು ಅನುಕೂಲವಾಗುತ್ತದೆ. ಈ ಕಾರಣಕ್ಕಾಗಿ ದೇಶಿ ಟೂರ್ನಿಗಳಲ್ಲಿ ಮೊದಲು ಆಯಾ ತಂಡಗಳ ಮುಖ್ಯ ಕೋಚ್ ಅಥವಾ ಬೌಲಿಂಗ್ ಕೋಚ್ 'ಥ್ರೋಡೌನ್' ಅಭ್ಯಾಸ ಮಾಡಿಸುತ್ತಿದ್ದರು. ಈಗ ಬ್ಯಾಟ್ಸ್‌ಮನ್‌ಗಳ ಆಟದ ಗುಣಮಟ್ಟ ಹೆಚ್ಚಿಸಲು ದೇಶಿ ತಂಡಗಳು ಕೂಡ ಇತ್ತೀಚಿನ ವರ್ಷಗಳಲ್ಲಿ ಪರಿಣತರನ್ನು ನೇಮಿಸಿಕೊಳ್ಳುತ್ತಿವೆ.

'ಸ್ಟಾರ್ ಆಟಗಾರರು ಆಡುವುದನ್ನು ಟಿವಿಯಲ್ಲಿ ನೋಡಿ ಸಂಭ್ರಮಿಸುತ್ತಿದ್ದೆ. ಈಗ ಅವರಿಗೆ 'ಥ್ರೋಡೌನ್' ಮಾಡುವ, ಅವರ ಬ್ಯಾಟಿಂಗ್ ಅಭ್ಯಾಸ ಕಣ್ತುಂಬಿಕೊಳ್ಳುವ ಅವಕಾಶ ಲಭಿಸಿದೆ. ರಾಹುಲ್ ದ್ರಾವಿಡ್ ಸರ್ ಅವರಿಂದ ಅನೇಕ ವಿಷಯಗಳನ್ನು ಕಲಿತಿದ್ದೇನೆ. ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆ ಮಾಡಬೇಕು ಎಂದು ಮೊದಲಿನಿಂದಲೂ ಆಸೆಯಿತ್ತು. ಈಗ ಆ ಹಾದಿಯಲ್ಲಿ ಸಾಗುತ್ತಿದ್ದೇನೆ. ಭವಿಷ್ಯದಲ್ಲಿ ಭಾರತ ತಂಡದಲ್ಲೂ ಕೆಲಸ ಮಾಡುವ ಆಸೆಯಿದೆ' ಎಂದರು.

### ಮುಖ್ಯಾಂಶಗಳು

- ಹುಬ್ಬಳ್ಳಿ ಕ್ರಿಕೆಟ್ ಅಕಾಡೆಮಿಯ ಆಟಗಾರ
- ವರ್ಷದಿಂದ ಮುಂಬೈ ತಂಡಕ್ಕೆ 'ಥ್ರೋಡೌನ್' ಪರಿಣತ
- ದರ್ಶನ್‌ಗೆ ರಾಹುಲ್ ದ್ರಾವಿಡ್ ಮಾದರಿ

**ನಮ್ಮ ಅಕಾಡೆಮಿಯಲ್ಲಿ ಕಲಿತ ಹುಡುಗ ಮುಂಬೈ ತಂಡಕ್ಕೆ 'ಥ್ರೋಡೌನ್' ಪರಿಣತ ಆಗಿರುವುದು ಹುಬ್ಬಳ್ಳಿಯ ಎಲ್ಲ ಕ್ರಿಕೆಟಿಗರೂ ಹೆಮ್ಮೆ ಪಡುವ ಸಂಗತಿ.**

**ವಿಜಯ ಕಾಮತ್** ಎಚ್‌ಸಿಎ ಕೋಚ್



ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ಮುಂಬೈ ತಂಡದ 'ಥ್ರೋಡೌನ್' ಪರಿಣಿತ ಹುಬ್ಬಳ್ಳಿಯ ದರ್ಶನ ನೆಗಳೂರ

# ಪೊಲೀಸ್ ಹಾಕಿ: ಕರ್ನಾಟಕ ಶುಭಾರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಯಕ ಎನ್. ಬಿ.ಪ್ರದೀಪ್ ಅವರ ಹ್ಯಾಟ್ರಿಕ್ ನೆರವಿನಿಂದ ಆತಿಥೇಯ ಕರ್ನಾಟಕ ತಂಡವು ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಆರಂಭ ಮಾಡಿದೆ.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾಂಗಣದಲ್ಲಿ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡವು ಭಾನುವಾರ 5-3ರಿಂದ ಹರಿಯಾಣ ತಂಡದ ಸವಾಲು ಮೀರಿತು. ಧ್ಯಾನ್‌ಚಂದ್ ಪ್ರಶಸ್ತಿ ಪುರಸ್ಕೃತ ಮ್ಯಾನ್ಯುಯೆಲ್ ಫ್ರೆಡರಿಕ್ ಅವರನ್ನೊಳಗೊಂಡ ರಾಜ್ಯ ತಂಡಕ್ಕೆ 10ನೇ ನಿಮಿಷದಲ್ಲೇ ಮುನ್ನಡೆ ಸಿಕ್ಕಿತು. ನಾಯಕ ಪ್ರದೀಪ್ ಕೈಚಳಕ ತೋರಿದರು. ಆದರೆ 29ನೇ ನಿಮಿಷದಲ್ಲಿ ಹರಿಯಾಣದ ನಾಯಕ ನಿರ್ಮಲ್ ಗೋಲು ಗಳಿಸುವುದರೊಂದಿಗೆ ಸಮಬಲ ಸಾಧಿಸಿದರು.ಪಂದ್ಯದ ಮೂರನೇ ಕ್ವಾರ್ಟರ್‌ನಲ್ಲಿ ಕರ್ನಾಟಕಕ್ಕೆ ರಾಜಶೇಖರ್ ಶಿವನಗುತ್ತಿ (36ನೇ ನಿಮಿಷ) ಮತ್ತು ಪ್ರದೀಪ್ (48ನೇ ನಿಮಿಷ) ಗೋಲಿನ ಕಾಣಿಕೆ ನೀಡಿದರು. ಆದರೆ 54ನೇ ನಿಮಿಷದಲ್ಲಿ ಮುಖೇಶ್ ಕುಮಾರ್ ಅವರ ಗೋಲಿನೊಂದಿಗೆ ಹರಿಯಾಣ ಹಿನ್ನಡೆಯನ್ನು 2-3ಕ್ಕೆ ತಗ್ಗಿಸಿಕೊಂಡಿತು. 57ನೇ ನಿಮಿಷದಲ್ಲಿ ಪ್ರದೀಪ್ ತಮ್ಮ ಮೂರನೇ ಗೋಲು ದಾಖಲಿಸಿದರು. 59ನೇ ನಿಮಿಷದಲ್ಲಿ ಪರಮೇಶ್ ಯಶಸ್ಸು ಸಾಧಿಸುವುದರೊಂದಿಗೆ ಕರ್ನಾಟಕ 5-2ರಿಂದ ಮೇಲುಗೈ ಪಡೆ ಯಿತು. ಇದಾದ ಒಂದು ನಿಮಿಷದ ಬಳಿಕ ಹರಿಯಾಣ ಮತ್ತೊಂದು ಗೋಲು ದಾಖಲಿಸಿತು.



ಕರ್ನಾಟಕ ಪೊಲೀಸ್ ತಂಡದ ರಾಜಶೇಖರ್ ಶಿವನಗುತ್ತಿ (ಬಿಳಿ ಮತ್ತು ಕೆಂಪು ಪೋಷಾಕು) ಗೋಲು ಗಳಿಸಿದರು– ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

## ವಿಕ್ಟರ್ ಅಕ್ಸೆಲ್ಸೆನ್‌ಗೆ ವಿಜಯ

ವಿಶ್ವ ಟೂರ್ ಬ್ಯಾಡ್ಮಿಂಟನ್ ಫೈನಲ್ಸ್‌ನ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯು ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ ಅವರಿಗೆ ಒಲಿಯಿತು. ಒಲಿಂಪಿಕ್ಸ್ ಚಾಂಪಿಯನ್ ಆಗಿರುವ ಅಕ್ಸೆಲ್ಸೆನ್ ಫೈನಲ್ ಪಂದ್ಯದಲ್ಲಿ 21-12, 21-8ರಿಂದ ಥಾಯ್ಲೆಂಡ್‌ನ ಕುನ್ಲಾವತ್ ವಿತಿದ್ಸರ್ನ್ ಅವರನ್ನು ಮಣಿಸಿದರು.

### ವಿಶ್ವ ಟೂರ್ ಬ್ಯಾಡ್ಮಿಂಟನ್ ಫೈನಲ್ಸ್ ಟೂರ್ನಿ: ಕೊರಿಯಾ ಆಟಗಾರ್ತಿಗೆ ಪ್ರಶಸ್ತಿ ಗರಿ

# ಸೆಯಂಗ್‌ಗೆ ಚಿನ್ನದ ಸಂಭ್ರಮ; ಸಿಂಧುಗೆ ಬೆಳ್ಳಿ

ಬಾಲಿ (ಪಿಟಿಐ): ಭಾರತದ ಪಿ.ವಿ. ಸಿಂಧುಗೆ ಪ್ರಶಸ್ತಿ ಅಂಚಿನಲ್ಲಿ ನಿರಾಶೆ ಕಾಡಿತು.

ಭಾನುವಾರ ಇಲ್ಲಿ ನಡೆದ ವಿಶ್ವ ಟೂರ್ ಬ್ಯಾಡ್ಮಿಂಟನ್ ಫೈನಲ್ಸ್‌ನಲ್ಲಿ ಸಿಂಧು, ಕೊರಿಯಾದ ಆ್ಯನ್ ಸೆಯಂಗ್ ಎದುರು ಸೋತು ಬೆಳ್ಳಿ ಪದಕ ಪಡೆದರು. ವಿಶ್ವ ಚಾಂಪಿಯನ್ ಸಿಂಧು, ಮಹಿಳಾ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ 16-21, 12-21ರಿಂದ ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಸೆಯಂಗ್ ಎದುರು ಎಡವಿದರು. 40 ನಿಮಿಷಗಳ ಪಂದ್ಯದಲ್ಲಿ ಕೊರಿಯಾ ಆಟಗಾರ್ತಿಯ ಸವಾಲು ಮೀರಲು ಸಿಂಧುಗೆ ಸಾಧ್ಯವಾಗಲಿಲ್ಲ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತರಾಗಿರುವ ಸಿಂಧು ಅವರಿಗೆ ಸೆಯಂಗ್ ಎದುರು ಇದು ಸತತ ಮೂರನೇ ಸೋಲು. ಈ ಗೆಲುವಿನೊಂದಿಗೆ ಸೆಯಂಗ್, ವಿಶ್ವ ಟೂರ್ ಬ್ಯಾಡ್ಮಿಂಟನ್ ಫೈನಲ್ಸ್ ಗೆದ್ದ ಕೊರಿಯಾದ ಮೊದಲ ಆಟಗಾರ್ತಿ ಎಂಬ ಶ್ರೇಯ ಗಳಿಸಿದರು. ಬಾಲಿಯಲ್ಲಿ ಅವರಿಗೆ ಇದು ಸತತ ಮೂರನೇ ಪ್ರಶಸ್ತಿ. ಇಂಡೊನೇಷ್ಯಾ ಮಾಸ್ಟರ್ಸ್ ಮತ್ತು ಇಂಡೊನೇಷ್ಯಾ ಓಪನ್ ಟೂರ್ನಿಗಳಲ್ಲಿ ಅವರಿಗೆ ಟ್ರೋಫಿ ಒಲಿದಿತ್ತು.26 ವರ್ಷದ ಸಿಂಧು ಕೊರಿಯಾ ಆಟಗಾರ್ತಿಯ ವಿರುದ್ಧ ಸೂಕ್ತ ಯೋಜನೆಗಳನ್ನು ಹೆಣೆಯುವಲ್ಲಿ ವಿಫಲರಾದರು. ಹೆಚ್ಚು ಆಕ್ರಮಣಕಾರಿ ಆಟ ಅವರಿಂದ ಹೊಮ್ಮಲಿಲ್ಲ. ಸಂಪೂರ್ಣ ಅಂಗಣವನ್ನು ಬಳಸಿಕೊಳ್ಳುವಲ್ಲಿಯೂ ಅವರು ಹಿಂದೆ ಬಿದ್ದರು. 19 ವರ್ಷದ ಸೆಯಂಗ್ ನೆಟ್‌ನಲ್ಲಿ ಪರಿಣಾಮಕಾರಿ ಎನಿಸಿದರು. ಗುಣಮಟ್ಟದ ಹೊಡೆತಗಳು, ಚುರುಕಿನ ಪಾದಚಲನೆಯೊಂದಿಗೆ ಸಿಂಧು ಅವರ ಯೋಜನೆಗಳನ್ನು ತಲೆಕೆಳಗಾಗಿಸಿದರು.



ರನ್ನರ್ ಅಪ್ ಪಿ.ವಿ.ಸಿಂಧು ಮತ್ತು ಪ್ರಶಸ್ತಿ ವಿಜೇತ ಸೆಯಂಗ್– ಎಎಫ್‌ಪಿ ಚಿತ್ರ

**ಮುಖ್ಯಾಂಶಗಳು**

- ಬಾಲಿಯಲ್ಲಿ ಸತತ ಮೂರನೇ ಪ್ರಶಸ್ತಿ ಗೆದ್ದ ಕೊರಿಯಾ ಆಟಗಾರ್ತಿ
- ಸೆಯಂಗ್ ಎದುರು ಸಿಂಧುಗೆ ಸತತ ಮೂರನೇ ಸೋಲು

**ಇದು ಸವಾಲಿನ ಪಂದ್ಯವಾಗಿತ್ತು. ಸೆಯಂಗ್ ಉತ್ತಮ ಆಟಗಾರ್ತಿ. ಅವರನ್ನು ಮಣಿಸುವುದು ಸರಳವಲ್ಲವೆಂದು ತಿಳಿದಿತ್ತು. ನಾನೂ ಉತ್ತಮ ತಯಾರಿಯನ್ನೇ ನಡೆಸಿದ್ದೆ**

**ಪಿ.ವಿ.ಸಿಂಧು** ಭಾರತದ ಆಟಗಾರ್ತಿ

ಮೊದಲ ಗೇಮ್‌ನ ಆರಂಭದಲ್ಲಿ 0–4ರಿಂದ ಹಿನ್ನಡೆ ಅನುಭವಿಸಿದ್ದ ಸಿಂಧು, ಬಳಿಕ ತಿರುಗೇಟು ನೀಡುವ ಸಾಹಸ ಮಾಡಿದರು. ಆದರೆ ವೇಗದ ಆಟದ ಮೂಲಕ 16–8ರಿಂದ ಮುನ್ನಡೆದ ಸೆಯಂಗ್ ಅದೇ ಲಯದೊಂದಿಗೆ ಸಾಗಿ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಸಿಂಧು 5–4ರ ಆರಂಭದ ಮುನ್ನಡೆ ಗಳಿಸಿದ್ದರು. ಕೆಲವೇ ನಿಮಿಷಗಳಲ್ಲಿ ಪುಟಿದೆದ್ದ ಸೆಯಂಗ್ 10–6ರ ಮುನ್ನಡೆ ಸಾಧಿಸಿದರು. ರ‍್ಯಾಲಿಗಳಲ್ಲಿ ಪಟ್ಟು ಸಡಿಲಿಸದೆ ಇದ್ದುದು ಅವರ ಮುನ್ನಡೆಗೆ ಕಾರಣವಾಯಿತು. ವಿರಾಮದ ವೇಳೆಗೆ ಕೊರಿಯಾ ಆಟಗಾರ್ತಿ 11–8ರಿಂದ ಮೇಲುಗೈ ಸಾಧಿಸಿದ್ದರು.ವಿರಾಮದ ಬಳಿಕವೂ ಸೆಯಂಗ್ ಪಾರಮ್ಯ ಮುಂದುವರಿಯಿತು. ಮುನ್ನಡೆಯ ನಾಗಾಲೋಟ 15–8ಕ್ಕೆ ತಲುಪಿತು. ಈ ಹಂತದಲ್ಲಿ 10 ಮ್ಯಾಚ್ ಪಾಯಿಂಟ್ಸ್ ಕಲೆಹಾಕಿದ ಸೆಯಂಗ್ ಗೆಲುವಿನ ಸಂಭ್ರಮದಲ್ಲಿ ಮಿಂದೆದ್ದರು.

ಡಿಸೆಂಬರ್ 12ರಿಂದ ಸ್ಪೇನ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್ ನಿಗದಿಯಾಗಿದ್ದು, ಸಿಂಧು ಕಣಕ್ಕಿಳಿಯಲಿದ್ದಾರೆ. ಚಾಂಪಿಯನ್‌ಷಿಪ್‌ನಲ್ಲಿ ಪದಕ ಉಳಿಸಿಕೊಳ್ಳುವ ಸವಾಲು ಅವರ ಮುಂದಿದೆ.

## ಈಜು: ನಿರಂಜನ್‌ಗೆ ಏಳು ಪದಕ; ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್ ಅವರು ಕ್ರೊವೇಷ್ಯಾ ಅಂತರರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಏಳು ಪದಕ ಗೆದ್ದರು. ಇದರೊಂದಿಗೆ 2022ರ ವಿಶ್ವ ಪ್ಯಾರಾ ಈಜು ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದರು.

ಡಿಸೆಂಬರ್ 4ರಿಂದ 5ರವರೆಗೆ ಕ್ರೊವೇಷ್ಯಾದ ಜಾಗ್ರೆಬ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರಿನ ನಿರಂಜನ್ ಅವರಿಗೆ ಆರು ಚಿನ್ನ ಮತ್ತು ಒಂದು ಕಂಚಿನ ಪದಕ ಒಲಿದವು.

ಎಸ್7 ವಿಭಾಗದಲ್ಲಿ ಸ್ಪರ್ಧಿಸುವ ನಿರಂಜನ್ 50 ಮೀಟರ್ಸ್ ಬಟರ್‌ಫ್ಲೈ, 200 ಮೀ. ವೈಯಕ್ತಿಕ ಮೆಡ್ಲೆ, 100 ಮೀ. ಮತ್ತು 400 ಮೀ. ಫ್ರೀಸ್ಟೈಲ್ ವಿಭಾಗಗಳಲ್ಲಿ ಅವರು ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದರು.



ನಿರಂಜನ್ ಮುಕುಂದನ್

## ಹಾಕಿ: ಭಾರತ ಮಹಿಳೆಯರ ಭರ್ಜರಿ ಜಯದಾರಂಭ

ಡಾಂಗೆ, ದಕ್ಷಿಣ ಕೊರಿಯಾ (ಪಿಟಿಐ): ಡ್ರ್ಯಾಗ್‌ಫ್ಲಿಕರ್ ಗುರ್ಜಿತ್ ಕೌರ್ ಅವರು ಗಳಿಸಿದ ಐದು ಗೋಲುಗಳ ಬಲದಿಂದ ಭಾರತ ಹಾಕಿ ತಂಡವು ಭಾನುವಾರ ಆರಂಭವಾದ ಮಹಿಳಾ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿತು.

ಏಕಪಕ್ಷೀಯ ಪ್ರಾಬಲ್ಯದ ಪಂದ್ಯದಲ್ಲಿ ಭಾರತ ತಂಡವು 13–0ಯಿಂದ ಥಾಯ್ಲೆಂಡ್ ವಿರುದ್ಧ ಜಯಭೇರಿ ಬಾರಿಸಿತು.

ಪಂದ್ಯದ ಎರಡನೇ ನಿಮಿಷದಲ್ಲಿಯೇ ಗುರ್ಜಿತ್ ಕೌರ್ ಪೆನಾಲ್ಟಿ ಕಾರ್ನರ್ ಅನ್ನು ಗೋಲಿನಲ್ಲಿ ಪರಿವರ್ತಿಸಿದರು. ಇದರೊಂದಿಗೆ ಭಾರತ ತಂಡದ ಖಾತೆ ತೆರೆದರು. ಇಲ್ಲಿಂದ ಮುಂದೆ ಭಾರತ ತಂಡದ ಗುರ್ಜಿತ್ ಮತ್ತು ಫಾರ್ವರ್ಡ್ ಆಟಗಾರ್ತಿಯರು ಥಾಯ್ಲೆಂಡ್ ತಂಡದ ರಕ್ಷಣಾ ಗೋಡೆಯನ್ನು ನುಚ್ಚುನೂರು ಮಾಡಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕು ಗೋಲು ಗಳಿಸಿದ್ದ ಗುರ್ಜಿತ್ ತಮ್ಮ ಶಾಂತಚಿತ್ತದ ಆಟದ ಮೂಲಕ ಇಲ್ಲಿಯೂ ಮಿಂಚಿದರು. ಅವರಿಗೆ ಉತ್ತಮ ಜೊತೆ ನೀಡಿದ ವಂದನಾ ಕಟಾರಿಯಾ ತಂಡಕ್ಕೆ ಏಳನೇ ನಿಮಿಷದಲ್ಲಿ ಎರಡನೇ ಗೋಲಿನ ಕಾಣಿಕೆ ನೀಡಿದರು.

ಪಂದ್ಯದ ಮೊದಲ ಕ್ವಾರ್ಟರ್‌ನ 14ನೇ ನಿಮಿಷದಲ್ಲಿ ಲಿಲಿಮಾ ಮಿಂಜ್ ಫೀಲ್ಡ್ ಗೋಲು ಹೊಡೆದರು. ಇದಾದ ನಂತರ ಲಭಿಸಿದ ಎರಡು ಪೆನಾಲ್ಟಿ ಕಾರ್ನರ್‌ಗಳಲ್ಲಿ ಕ್ರಮವಾಗಿ ಗುರ್ಜಿತ್ ಮತ್ತು ಜ್ಯೋತಿ ತಲಾ ಒಂದು ಗೋಲು ಹೊಡೆದರು. ಭಾರತ 5–0 ಮುನ್ನಡೆ ಸಾಧಿಸಿತು.

ಎರಡನೇ ಕ್ವಾರ್ಟರ್‌ನಲ್ಲಿಯೂ ಭಾರತದ ಆಟ ಮುಂದುವರಿಯಿತು. ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಹಾಕಿಗೆ ಪದಾರ್ಪಣೆ ಮಾಡಿದ ರಜ್ವಿಂದರ್ ಕೌರ್ ತಮ್ಮ ಕೈಚಳಕ ತೋರಿದರು. 16ನೇ ನಿಮಿಷದಲ್ಲಿ ಗೋಲು ಗಳಿಸಿದರು. 24ನಿಮಿಷದಲ್ಲಿ ಗುರ್ಜಿತ್ ಮತ್ತು ಲಿಲಿಮಾ ತಲಾ ಒಂದು ಗೋಲು ಹೊಡೆದರು.

ಒಂದು ನಿಮಿಷದ ನಂತರ ಗುರ್ಜಿತ್ ತಮ್ಮ ವೈಯಕ್ತಿಕ ನಾಲ್ಕನೇ ಗೋಲು ದಾಖಲಿಸಿದರು. ತಂಡಕ್ಕೆ 9–0 ಮುನ್ನಡೆ ಲಭಿಸಿತು. ಇದರಿಂದಾಗಿ ಸಂಪೂರ್ಣ ಬಸವಳಿದ ಥಾಯ್ಲೆಂಡ್ ತಂಡವು ದ್ವಿತಿಯಾರ್ಧದಲ್ಲಿ ಮಂಕಾಯಿತು. ಭಾರತದ ಆಟಗಾರ್ತಿಯರು ಮತ್ತಷ್ಟು ಪ್ರಬಲರಾದರು.

ಜ್ಯೋತಿ(36ನೇ ನಿ), ಸೋನಿಕಾ(43ನಿ), ಮೋನಿಕಾ(55) ಮತ್ತು ಗುರ್ಜಿತ್ (58ನಿ) ಗೋಲು ಗಳಿಸಿದರು.



ಆ್ಯಷಸ್ ಟ್ರೋಫಿಯೊಂದಿಗೆ ಪ್ಯಾಟ್ ಕಮಿನ್ಸ್ ಮತ್ತು ಜೋ ರೂಟ್ –ಪಿಟಿಐ ಚಿತ್ರ

## ಆ್ಯಷಸ್ ಟ್ರೋಫಿ ಅನಾವರಣ

ಬ್ರಿಸ್ಬೇನ್(ಎಎಫ್‌ಪಿ): ಗಾಬಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಆ್ಯಷಸ್ ಟೆಸ್ಟ್ ಕ್ರಿಕೆಟ್ ಸರಣಿಯ ಟ್ರೋಫಿಯನ್ನು ಅನಾವರಣಗೊಳಿಸಲಾಯಿತು.

ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಣ ನಡೆಯುವ ಈ ಸರಣಿಯ ಮೊದಲ ಪಂದ್ಯವು ಬುಧವಾರ ಇಲ್ಲಿ ಆರಂಭವಾಗಲಿದೆ.

ಈ ವೇಳೆ ಮಾತನಾಡಿದ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್, 'ಹೋದ ವರ್ಷ ಇಲ್ಲಿ ಭಾರತ ತಂಡವು ಟೆಸ್ಟ್ ಗೆದ್ದಿತ್ತು. ಭಾರತದ ಆಟಗಾರರು ಅಮೋಘವಾಗಿ ಆಡಿದ್ದರು. ಆ ಗೆಲುವು ಎಲ್ಲ ಪ್ರವಾಸಿ ತಂಡಗಳಿಗೂ ಸ್ಫೂರ್ತಿದಾಯಕವಾಗಿದೆ' ಎಂದರು.

ಆಸ್ಟ್ರೇಲಿಯಾ ತಂಡದ ನೂತನ ನಾಯಕ ಪ್ಯಾಟ್ ಕಮಿನ್ಸ್ ಮತ್ತು ರೂಟ್ ಆ್ಯಷಸ್ ಟ್ರೋಫಿಯನ್ನು ಪ್ರದರ್ಶಿಸಿದರು.

ಇಂಗ್ಲೆಂಡ್ ತಂಡವು ಆಸ್ಟ್ರೇಲಿಯಾದಲ್ಲಿ 2011ರಲ್ಲಿ ಆ್ಯಷಸ್ ಗೆದ್ದಿತ್ತು.

## ಕೇರಳ ಬ್ಲಾಸ್ಟರ್ಸ್‌ಗೆ ಜಯ

ವಾಸ್ಕೊ, ಗೋವಾ: ಕೇರಳ ಬ್ಲಾಸ್ಟರ್ಸ್ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಮೊದಲ ಜಯ ದಾಖಲಿಸಿತು.

ಭಾನುವಾರ ತಿಲಕ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಕೇರಳ ತಂಡವು 2–1ರಿಂದ ಒಡಿಶಾ ಫುಟ್‌ಬಾಲ್ ಕ್ಲಬ್ ಎದುರು ಜಯಿಸಿತು.

ಅಲ್ವೆರೊ ವಾಕೇಜ್ (62ನೇ ನಿ) ಮತ್ತು ಬದಲೀ ಆಟಗಾರ ಪ್ರಶಾಂತ್ ಕರುತಾಡತಕಣಿ (85ನಿ) ಅವರು ಎರಡನೇ ಅವಧಿಯಲ್ಲಿ ಹೊಡೆದ ಗೋಲುಗಳ ಬಲದಿಂದ ಕೇರಳ ತಂಡವು ಜಯಿಸಿತು. ಒಡಿಶಾ ಎಫ್‌ಸಿ ತಂಡದಲ್ಲಿರುವ ಬೆಂಗಳೂರು ಹುಡುಗ ನಿಖಿಲ್ ರಾಜ್ ಗೋಲು ಹೊಡೆದರು.

ಪಾಯಿಂಟ್ ಪಟ್ಟಿಯಲ್ಲಿ ಕೇರಳ ತಂಡವು ಆರನೇ ಸ್ಥಾನಕ್ಕೇರಿತು. ತಂಡದ ಖಾತೆಯಲ್ಲಿ ಐದು ಅಂಕಗಳಿವೆ. ಒಡಿಶಾ ಆರು ಪಾಯಿಂಟ್ಸ್‌ನೊಂದಿಗೆ ಮೂರನೇ ಸ್ಥಾನದಲ್ಲಿ ಮುಂದುವರಿದಿದೆ.

ಮೊದಲಾರ್ಧದಲ್ಲಿ ಉಭಯ ತಂಡಗಳೂ ಸಮಬಲ ಸಾಧಿಸಿದ್ದವು. ಆದರೆ, ವಿರಾಮದ ನಂತರ ನಡೆದ ತುರುಸಿನ ಪೈಪೋಟಿಯಲ್ಲಿ ಕೇರಳ ಮೇಲುಗೈ ಸಾಧಿಸಿತು.

**ಸೋಮವಾರದ ಪಂದ್ಯ:** ಎಟಿಕೆ ಮೋಹನ್ ಬಾಗನ್–ಜೆಮ್ಶೆಡ್‌ಪುರ್ ಎಫ್‌ಸಿ, ಆರಂಭ: ರಾತ್ರಿ 7.30
**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್



ಕೇರಳ ಬ್ಲಾಸ್ಟರ್ಸ್ (ಹಳದಿ ಪೋಷಾಕು) ಮತ್ತು ಒಡಿಶಾ ಎಫ್‌ಸಿ ತಂಡಗಳ ಆಟಗಾರರ ಪೈಪೋಟಿ –ಪಿಟಿಐ ಚಿತ್ರ